# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

22ನೇ ಜುಲೈ 2024

ಸೋಮವಾರ

## ವಿಷಯಾನುಕ್ರಮಣಿಕೆ (INDEX)

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**643 – ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಹೆಚ್ಚುತ್ತಿರುವ ಬಗ್ಗೆ.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**640 – ರೈತರ ಕೃಷಿಗಾಗಿ ಒದಗಿಸುತ್ತಿರುವ ಸೋಲಾರ್ ಚಾಲಿತ ಪಂಪ್ ಸೆಟ್‌ಗಳ ಸಂಪರ್ಕದ ಕುರಿತು.**

- ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)
- ಶ್ರೀ ಕೆ.ಜೆ.ಜಾರ್ಜ್(ಇಂಧನ ಸಚಿವರು)

**671 – ಆಯುಷ್ ಇಲಾಖೆಯ ಔಷಧಿ ಮತ್ತು ವೈದ್ಯಾಧಿಕಾರಿಗಳ ಕುರಿತು.**

- ಶ್ರೀ ಹೆಚ್. ಎಸ್. ಗೋಪಿನಾಥ್
- ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**701 – ಅರಣ್ಯ ಇಲಾಖೆಯಲ್ಲಿ ನಿವೃತ್ತಿ ಅಧಿಕಾರಿಗಳನ್ನು ವ್ಯವಸ್ಥಾಪನಾಧಿಕಾರಿಯಾಗಿ ನೇಮಿಸಿಕೊಳ್ಳುವ ಬಗ್ಗೆ.**

- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಈಶ್ವರ್ ಖಂಡ್ರೆ(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**757 – ಸಿಂಧನೂರಿಗೆ ಹೊಸ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡುವ ಬಗ್ಗೆ.**

- ಶ್ರೀ ಬಸನಗೌಡ ಬಾದರ್ಲಿ
- ಡಾ॥ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಸಚಿವರು)

**574 – ಕಲಬುರ್ಗಿಯಲ್ಲಿ ನಕಲಿ ವೈದ್ಯರ ಹಾವಳಿ ಕುರಿತು.**

- ಶ್ರೀ ತಿಪ್ಪಣ್ಣ ಕಮಕನೂರ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

649 **– ಅನುದಾನ ರಹಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ವೇತನ ಹೆಚ್ಚಿಸುವ ಬಗ್ಗೆ.**

- ಶ್ರೀ ಎಸ್.ಎಲ್ .ಭೋಜೇಗೌಡ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**707 – ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡದಿರುವ ಕುರಿತು.**

- ಡಾ॥ಚಂದ್ರಶೇಖರ ಬಸವರಾಜ ಪಾಟೀಲ್
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**715 – ಸಹಾಯಕ ಪ್ರಾಧ್ಯಾಪಕರಿಗೆ ನೇಮಕಾತಿ ಆದೇಶ ನೀಡುವ ಕುರಿತು.**

- ಶ್ರೀ ಚಿದಾನಂದ ಎಂ ಗೌಡ
- ಡಾ॥ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

**724 – ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯಕ್ಕೆ ನೀಡಿರುವ ಶೋಕಾಸ್ ನೋಟೀಸ್‌ನ ಬಗ್ಗೆ**

- ಶ್ರೀ ಕೆ.ಎಸ್.ನವೀನ್
- ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)

**571 – ಅಕ್ಷರ ದಾಸೋಹ ಯೋಜನೆ ಅಡಿಯಲ್ಲಿ ಅಭ್ಯರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ಕುರಿತು.**

- ಶ್ರೀ ಶರಣಗೌಡ ಬಯ್ಯಾಪುರ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**ತಡೆ ಹಿಡಿಯಲಾದ ಪ್ರಶ್ನೆ**

**120 – ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿರುವ ಅವ್ಯವಸ್ಥೆಗಳ ಕುರಿತು.**

- ಶ್ರೀಮತಿ ಹೇಮಲತಾ ನಾಯಕ್
- ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಬಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**೦2. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ.**

**ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿಟ್ಟಿದ್ದ ಹಣ ದುರುಪಯೋಗವಾಗಿರುವ ಕುರಿತು.**

- ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು)
- ಶ್ರೀ ಸಿ.ಟಿ.ರವಿ
- ಶ್ರೀ ಎನ್.ರವಿಕುಮಾರ್
- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)
- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಪ್ರಕಾಶ್ ಕೆ. ರಾಥೋಡ್
- ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
- ಶ್ರೀ ಪುಟ್ಟಣ್ಣ
- ಡಾ॥ಹೆಚ್.ಸಿ.ಮಹದೇವಪ್ಪ(ಸಮಾಜ ಕಲ್ಯಾಣ ಸಚಿವರು)
- ಶ್ರೀ ಕೇಶವ ಪ್ರಸಾದ್.ಎಸ್.
- ಶ್ರೀ ಎಸ್.ಎಲ್. ಭೋಜೇಗೌಡ

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.**

**ಅ) ಪಶ್ಚಿಮ ಘಟ್ಟಗಳು ಸೇರಿದಂತೆ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸುತ್ತಿರುವುದರಿಂದ ಭೂಕುಸಿತ, ಪ್ರವಾಹ ಮತ್ತು ನೈಸರ್ಗಿಕ ವಿಕೋಪಗಳು ಹೆಚ್ಚಾಗುತ್ತಿರುವ ಕುರಿತು.**

- ಡಾ॥ ಯತೀಂದ್ರ .ಎಸ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯ ಆರ್ಚಕರಿಗೆ ವೇತನ ನಿಗದಿಪಡಿಸಿ ಪ್ರತಿ ತಿಂಗಳು ಕಾಲಮಿತಿಯೊಳಗೆ ವೇತನ ಪಾವತಿಸುವ ಬಗ್ಗೆ.**

- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ರಾಜ್ಯದಲ್ಲಿ ಡೆಂಘ್ಯೂ ಹೆಚ್ಚಳದ ಹಿನ್ನಲೆಯಲ್ಲಿ 108 ಅಂಬುಲೆನ್ಸ್ ಸೇವೆಗೆ 7 ವರ್ಷವಾದರೂ ಹೊಸ ಟೆಂಡರ್ ಕರೆಯದೇ ಇರುವ ಬಗ್ಗೆ**

- ಶ್ರೀ ಟಿ.ಎ.ಶರವಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ಹೊಸದಾಗಿ ರಚನೆಯಾದ ತಾಲ್ಲೂಕಿನ ಪ್ರೌಢಶಾಲೆಗಳ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ವೇತನ ಪಾವತಿ ಮಾಡದಿರುವ ಬಗ್ಗೆ.**

- ಶ್ರೀ ಶಶಿಲ್ ಜಿ. ನಮೋಶಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಹೆಣ್ಣು ಭ್ರೂಣಹತ್ಯೆ ಪ್ರಕರಣಗಳು ವ್ಯಾಪಕವಾಗಿ ನಡೆಯುತ್ತಿದ್ದು, ಈ ಕೃತ್ಯಗಳಲ್ಲಿ ಭಾಗಿಯಾದ ದುಷ್ಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ.**

– ಶ್ರೀಮತಿ ಉಮಾಶ್ರೀ

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ಬಸವಣ್ಣನವರ ಕಾಯಕಭೂಮಿ ಬಸವಕಲ್ಯಾಣದಲ್ಲಿ ಪ್ರಗತಿಯಲ್ಲಿರುವ ಅನುಭವ ಮಂಟಪ ಕಾಮಗಾರಿ ಅಭಿವೃದ್ಧಿಗೆ ಪೂರಕ ಮೂಲಸೌಕರ್ಯ ಹಾಗೂ ಅಗತ್ಯ ಅನುದಾನ ಒದಗಿಸುವ ಕುರಿತು.**

– ಡಾ॥ ಎಂ.ಜಿ.ಮೂಳೆ

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) 2022-23ನೇ ಸಾಲಿನ ರಾಜ್ಯದ ಸರ್ಕಾರಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳ ಹಾಗೂ ಚಿಕ್ಕಮಗಳೂರು ಶಾರದಾ ಕಾನೂನು ಕಾಲೇಜು ವಿದ್ಯಾರ್ಥಿಗಳ ಫಲಿತಾಂಶವನ್ನು ಕೂಡಲೇ ನೀಡುವ ಬಗ್ಗೆ.**

– ಶ್ರೀ ಎಂ.ಎಲ್.ಅನಿಲ್‌ಕುಮಾರ್

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**೦4. ಸಭಾಪತಿಗಳ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

**ಅ) ರಾಜ್ಯದಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಮಹಿಳಾ ಮತ್ತು ಮಕ್ಕಳಾಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರ ಪರವಾಗಿ)

**ಆ) ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ವರದಿಯನ್ನು ಕೂಡಲೇ ಜಾರಿಗೊಳಿಸಿ ನ್ಯಾಯ ಒದಗಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

ಇ) **ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಪರೀಕ್ಷೆ ನಡೆಸಿ ಭರ್ತಿ ಮಾಡದೇ ಪ್ರಾಧ್ಯಾಪಕರ ಬಡ್ತಿ ಮೂಲಕ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಯನ್ನು ತಂದು ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಉನ್ನತ ಶಿಕ್ಷಣ ಸಚಿವರ ಪರವಾಗಿ)

ಈ) **ಮೀಸಲು ಅರಣ್ಯ ಮಾಡುವ ಪ್ರಸ್ತಾವನೆಯನ್ನು ಹಿಂಪಡೆಯುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)

**ಉ) ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ಉಲ್ಬಣಗೊಳ್ಳದಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಊ) ಕ್ರೈಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿ ದಾಖಲಾತಿಗೆ ಅರ್ಹ ಪ್ರತಿಭಾವಂತ ಮಕ್ಕಳಿಗೆ ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಶಿಕ್ಷಣ ನೀಡುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಸಮಾಜ ಕಲ್ಯಾಣ ಸಚಿವರ ಪರವಾಗಿ)

**ಋ) ನಗರ ಸ್ಥಳೀಯ ಜನಪ್ರತಿನಿಧಿಗಳ ಹಿತದೃಷ್ಟಿಯಿಂದ ಕಾನೂನು ತೊಡಕುಗಳನ್ನು ನಿವಾರಿಸಿ ಮೀಸಲಾತಿ ಪ್ರಕಟಿಸುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಪೌರಾಡಳಿತ ಸಚಿವರ ಪರವಾಗಿ)

**ಎ) ಕೇಂದ್ರ ಸಾರಿಗೆ ಇಲಾಖೆಯ ವಾಣಿಜ್ಯ ಇಲಾಖೆಗಳಲ್ಲಿ ಪ್ಯಾನಿಕ್ ಬಟನ್ ಮತ್ತು ಜಿ.ಪಿ.ಆರ್.ಎಸ್ ಎಂಬ ವೈಜ್ಞಾನಿಕ ಸಾಧನವನ್ನು ಅಳವಡಿಸಿ, ಟ್ಯಾಕ್ಸಿ ಚಾಲಕರು ಹಾಗೂ ಮಾಲೀಕರಿಗೆ ತೊಂದರೆಯನ್ನುಂಟು ಮಾಡುತ್ತಿರುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

**೦5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

**ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸಲ್ ಒಳಗೊಂಡಂತೆ ದೈನಂದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದವರ ಆರ್ಥಿಕ ಸ್ಥಿತಿ ಶೋಚನೀಯವಾಗಿರುವುದರ ಬಗ್ಗೆ.**

**– ಶ್ರೀ ಸಿ.ಟಿ.ರವಿ**

**(ನಿಯಮ 330ಕ್ಕೆ ಪರಿವರ್ತಿಸಲಾಯಿತು.)**

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕದ ಸೌಹಾರ್ದ ಸಹಕಾರಿ(ತಿದ್ದುಪಡಿ) ವಿಧೇಯಕ 2024.**

– ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ(ಸಹಕಾರ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಸಹಕಾರ ಸಂಘಗಳ(ತಿದ್ದುಪಡಿ) ವಿಧೇಯಕ 2024**

– ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ(ಸಹಕಾರ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**೦7. ಗಮನ ಸೆಳೆಯುವ ಸೂಚನೆಗಳು.**

**ಅ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಭಿವೃದ್ಧಿಯ ಉಪ ಯೋಜನೆಗಳಿಗೆ ಮೀಸಲಿಡಲಾಗಿದ್ದ ಹಣವನ್ನು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಕುರಿತು.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ
- ಡಾ॥ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)
- ಶ್ರೀ ಸಿ.ಟಿ.ರವಿ
- ಶ್ರೀ ಕೇಶವ ಪ್ರಸಾದ್ ಎಸ್
- ಶ್ರೀ ಎನ್.ರವಿಕುಮಾರ್
- ಶ್ರೀ ಕೆ.ಎಸ್.ನವೀನ್
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಪ್ರಕಾಶ್ ಕೆ ರಾಥೋಡ್
- ಶ್ರೀ ಹೆಚ್.ಪಿ.ಸುಧಾಮ್ ದಾಸ್
- ಶ್ರೀ ಡಿ.ಎಸ್.ಅರುಣ್
- ಡಾ॥ತಳವಾರ್ ಸಾಬಣ್ಣ
- ಶ್ರೀ ಪ್ರಿಯಾಂಕ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**ಆ) ಈಗಿರುವ ಪಂಚಾಯತ್ ರಾಜ್ ಕಾನೂನನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ ಸಂವಿಧಾನದ ಅಮೃತ ಮಹೋತ್ಸವ ಆಚರಿಸುವ ಈ ಪ್ರಸಂಗದಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಗ್ರಾಮ ಪಂಚಾಯತಿಗಳು ಗ್ರಾಮ ಸರ್ಕಾರಗಳಾಗಿ, ತಾಲ್ಲೂಕು ಪಂಚಾಯತಿಗಳು ತಾಲ್ಲೂಕು ಸರ್ಕಾರಗಳಾಗಿ, ಜಿಲ್ಲಾ ಪಂಚಾಯತಿಗಳು ಜಿಲ್ಲಾ ಸರ್ಕಾರಗಳಾಗಿ, ಜವಾಬ್ದಾರಿ ನಿರ್ವಹಿಸಲು ಎಲ್ಲಾ ಅಧಿಕಾರ, ಹಣಕಾಸು ಮತ್ತು ಅಧಿಕಾರಿಗಳನ್ನು ಹಸ್ತಾಂತರಗೊಳಿಸಿ ಸಂವಿಧಾನದ ಆಶಯಗಳನ್ನು ಈಡೇರಿಸುವ ಬಗ್ಗೆ.**

- ಶ್ರೀ ಪ್ರಕಾಶ್ ಕೆ. ರಾಥೋಡ್
- ಶ್ರೀ ಪ್ರಿಯಾಂಕ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

ಇ) **ಕೋಲಾರ ನಗರದ ಅಂತರಗಂಗೆ ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವು ಸುಮಾರು 60 ವರ್ಷಗಳ ಹಳೆಯದಾಗಿರುವುದರಿಂದ ಸದರಿ ಶಾಲಾ ಕಟ್ಟಡವನ್ನು ಪುನಃಶ್ಚೇತನಗೊಳಿಸಲು ಅನುದಾನ ಮಂಜೂರು ಆಗಿದ್ದರೂ ಅನುದಾನ ಬಿಡುಗಡೆ ಮಾಡದಿರುವ ಕುರಿತು**

- ಶ್ರೀ ಗೋವಿಂದ ರಾಜು
- ಶ್ರೀ ಡಿ. ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)
- ಶ್ರೀ ಎಸ್.ವ್ವಿ.ಸಂಕನೂರ

- ಶ್ರೀ ಕೆ.ಎಸ್.ನವೀನ್
- ಶ್ರೀ ಟಿ.ಎ.ಶರವಣ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎಸ್.ರವಿ

**ಈ) 1987ರಿಂದ 1994 ಮತ್ತು 1995ನೇ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿರುವ 118 ಶಾಲೆಗಳಿಗೆ ಸೀಮಿತವಾಗಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆದೇಶವಾಗಿದ್ದರೂ ಅವುಗಳಲ್ಲಿ 7 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸದೆ ಇರುವ ಕುರಿತು.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
- ಶ್ರೀ ಪುಟ್ಟಣ್ಣ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಶಶಿಲ್ ಜಿ ನಮೋಶಿ

**೦8. ನಿಯಮ 330ರ ಮೇರೆಗೆ ಚರ್ಚೆ**

**ರಾಜ್ಯದ ಇತರೆ ಭಾಗಗಳಿಂದ ಕರಾವಳಿಗೆ ಸಂಪರ್ಕ ಕೊಂಡಿಯಾಗಿರುವ ಘಾಟ್ ಪರಿಸರದಲ್ಲಿ ಬರುವ ಹೆದ್ದಾರಿಯಲ್ಲಿ ಹೆಚ್ಚು ಮಳೆಯಿಂದಾಗಿ ರಸ್ತೆ ಕುಸಿತದಿಂದ ಸಂಚಾರ ವ್ಯತ್ಯಯ ಉಂಟಾಗುತ್ತಿರುವುದನ್ನು ತಪ್ಪಿಸಲು ಶಾಶ್ವತ ಮತ್ತು ದೀರ್ಘಕಾಲಿಕ ಉಪಯೋಗದ ಯೋಜನೆಯನ್ನು ಸರ್ಕಾರ ರೂಪಿಸದಿರುವ ಬಗ್ಗೆ.**

- ಶ್ರೀ ಪ್ರತಾಪ ಸಿಂಹ ನಾಯಕ್.ಕೆ
- ಶ್ರೀ ಸತೀಶ ಜಾರಕಿಹೊಳ(ಲೋಕೋಪಯೋಗಿ ಸಚಿವರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಮಂಜುನಾಥ ಭಂಡಾರಿ

**೦9. ಗಮನ ಸೆಳೆಯುವ ಸೂಚನೆಗಳು.**

ಉ) **ರಾಜ್ಯದಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ರಾಜ್ಯ ಪಠ್ಯ ಕ್ರಮದಲ್ಲಿ ಅನುಮತಿ ಪಡೆದು ಕೇಂದ್ರ ಪಠ್ಯಕ್ರಮದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವ ಶಾಲೆಗಳನ್ನು ಅನಧಿಕೃತ ಶಾಲೆಗಳೆಂದು ಘೋಷಿಸಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವ ಕುರಿತು.**

- ಶ್ರೀ ಪುಟ್ಟಣ್ಣ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

ಊ) **ರಾಜ್ಯದ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿಯಿಂದ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಉಚ್ಚ ನ್ಯಾಯಾಲಯ ತೀರ್ಪು ನೀಡಿದ್ದರೂ ಸಹ ಸರ್ಕಾರ ಅನುಮತಿಸದಿರುವುದರಿಂದ ಉಂಟಾಗಿರುವ ದುಷ್ಪರಿಣಾಮಗಳ ಕುರಿತು.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
- ಶ್ರೀ ಶಶಿಲ್ ಜಿ ನಮೋಶಿ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಪುಟ್ಟಣ್ಣ

<><><>

(574) 22-7-2024 11.00 ಡಿಎಸ್-ಎಂಡಿ

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ 22ನೇ ಜುಲೈ 2024**

**ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 02 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು**

**ಪೀಠದಲ್ಲಿ ಉಪಸ್ಥಿತರಿದ್ದರು**

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 643**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳು ಜಾಸ್ತಿಯಾಗುತ್ತಿದೆ. ಈ ವಿಷಯದ ಬಗ್ಗೆ ನಾನು ಮಾಹಿತಿ ಕೇಳಿದ್ದೆನು. ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಗರ್ಭ ಕಂಠದ ಕ್ಯಾನ್ಸರ್ 87,62,861 ಜನರಿಗೆ ತಪಾಸಣೆ ಮಾಡಿದ್ದಾರೆ. 5,473 ಪ್ರಕರಣಗಳು ದೃಢಪಟ್ಟಿವೆ. ಆದರೆ ಸರ್ಕಾರಿ ಮತ್ತು AB-Ark ಅನುದಾನಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 2,066 ಮಾತ್ರ. ಅದೇ ರೀತಿ ಸ್ತನ ಕ್ಯಾನ್ಸರ್‌ನಲ್ಲಿ 110,78,028 ರಷ್ಟು ಜನರಿಗೆ ತಪಾಸಣೆ ಮಾಡಿದ್ದಾರೆ. 2,213 ಪ್ರಕರಣಗಳು ದೃಢಪಟ್ಟಿವೆ. 828 ಜನರಿಗೆ ಚಿಕಿತ್ಸೆ ಕೊಡಲಾಗುತ್ತಿದೆ. ಅದೇ ರೀತಿ ಬಾಯಿ ಕ್ಯಾನ್ಸರ್ 22530427 ರಷ್ಟು ಜನರಿಗೆ ತಪಾಸಣೆ ಮಾಡಿದ್ದಾರೆ. 5,787 ಪ್ರಕರಣಗಳು ದೃಢಪಟ್ಟಿವೆ. ಆದರೆ 2,818 ಜನರು ಮಾತ್ರ ಚಿಕಿತ್ಸೆ ಪಡೆಯುತ್ತಿದ್ದಾರೆ. ಕ್ಷಯ ರೋಗದಂತೆ ದೃಢಪಟ್ಟ ಪ್ರಕರಣಗಳಲ್ಲಿ ಅವರಿಗೆ further screening ಮಾಡುವುದಕ್ಕಾಗಿ ಸರ್ಕಾರ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಿಕೊಡಬೇಕು. ರಾಜ್ಯದಲ್ಲಿ ಮಹಿಳೆಯರಿಗೆ ಕಡ್ಡಾಯವಾಗಿ ಕ್ಯಾನ್ಸರ್ ತಪಾಸಣೆಯನ್ನು ಕಡ್ಡಾಯಗೊಳಿಸಲಾಗುವುದೇ ಎಂದು ಪ್ರಶ್ನೆ ಕೇಳಿದ್ದೇನೆ. ಅಂತಹ ಪ್ರಸ್ತಾವನೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಕಳೆದ ಸಾಲಿನ 2023-2024ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ವಿತ್ತ ಸಚಿವರು ಹೇಳಿದ್ದಾರೆ, 9 ರಿಂದ 14 ವರ್ಷದ ಯುವತಿಯರಿಗೆ HPV (Human Papillomavirus) vaccine ಕೊಡುವುದಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆಂದು ಪ್ರಕಟ ಮಾಡಿದರು. ಜಿಲ್ಲಾ ಕೇಂದ್ರ ಮತ್ತು ಸಾಮೂಹಿಕ ಕೇಂದ್ರಗಳಲ್ಲಿ, ಕೆಲವೊಂದು ಆರೋಗ್ಯ ಕೇಂದ್ರಗಳಲ್ಲಿ ಕೊಡುತ್ತಿದ್ದಾರೆ. ಇದನ್ನು ಕಡ್ಡಾಯವಾಗಿ ಎಲ್ಲಾ ತಾಲ್ಲೂಕು ಮಟ್ಟದಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ ಎಂದು ಕೇಳಬಯಸುತ್ತಿದ್ದೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಆರೋಗ್ಯ ಕೇಂದ್ರಗಳಲ್ಲಿ, Health and Wellness Centres, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಉಳಿದ ಆಸ್ಪತ್ರೆಗಳಲ್ಲಿ 2016 ರಿಂದ ತಪಾಸಣೆ ಆಗಿರುವಂತಹ ಅಂಕಿ-ಅಂಶಗಳನ್ನು ಕೊಟ್ಟಿದ್ದೇವೆ.

ಧೃಡಪಟ್ಟ ಅನೇಕ ಜನರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವುದು ಇರುತ್ತದೆ. ಇದು ಆಗಾಗ್ಗೆ ಸದಾಕಾಲ ತಪಾಸಣೆಯಾಗುತ್ತಿರುತ್ತದೆ. ನಾವು ಮತ್ತೊಂದು ವಿಶೇಷವಾದ ಕಾರ್ಯಕ್ರಮವನ್ನು ಮುಂದಿನ ದಿವಸಗಳಲ್ಲಿ ಹಮ್ಮಿಕೊಳ್ಳುತ್ತಿದ್ದೇವೆ. ರಾಜ್ಯದ ಎಲ್ಲಾ ಜನರ ತಪಾಸಣೆಯನ್ನು ಅವರ ಮನೆ ಮನೆಗೆ ಹೋಗಿ ಭೇಟಿ ಕೊಟ್ಟು ಮಾಡುವಂತಹ ಕಾರ್ಯಕ್ರಮವನ್ನು ಮಾಡುತಿದ್ದೇವೆ. ಅದರ ಜೊತೆಯಲ್ಲಿ ಅವರಿಗೆ ರಕ್ತದ ಒತ್ತಡ, ಸಕ್ಕರೆ ಕಾಯಿಲೆ, ಇಂತಹವುಗಳೆಲ್ಲಾ ಇದ್ದರೆ ಅಗತ್ಯವಿರುವಂತಹ ಔಷಧಿಗಳನ್ನು ಅವರ ಮನೆಗೆ delivery ಮಾಡುವಂತಹ ವ್ಯವಸ್ಥೆಯನ್ನು ತರಬೇಕೆಂದು ಹೊರಟಿದ್ದೇವೆ. ಅದು ಬೇರೆ ವಿಚಾರ. ಆದರೆ ಈ ಕ್ಷಯ ರೋಗ ಆಗುವಂಥದ್ದು ಬೇರೆ. ಆದರೆ ಇದು ಎಲ್ಲಾ ಕಡೆ ಸಾರ್ವಜನಿಕರಿಗೆ ತಪಾಸಣೆ ಮಾಡಬೇಕೆನ್ನುವ ಉದ್ದೇಶ ಇದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ತಪಾಸಣೆ ಮಾಡಬೇಕಾಗಿದೆ. ಏಕೆಂದರೆ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಮಹಿಳೆಯರಿಗೆ ಬರುವಂಥದ್ದು. ಈಗ ಮಹಿಳೆಯರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತಿದೆ. ಒಂದು age group ನಲ್ಲಿರುವಂಥವರಿಗೆ ತಪಾಸಣೆ ಮಾಡಬೇಕೆಂದು ನಾವು ನಮ್ಮ ಆರೋಗ್ಯಾಧಿಕಾರಿಗಳಿಗೆ ಹೇಳುತ್ತಲೇ ಇರುತ್ತೇವೆ. ಪ್ರತಿ ಹಂತದಲ್ಲೂ ಅದನ್ನು ಮಾಡುತ್ತಿರುತ್ತಾರೆ. ಮಾನ್ಯ ಸದಸ್ಯರು ಕ್ಷಯ ರೋಗದ ಬಗ್ಗೆ ಕೇಳಿದರು. ಅದರೆ ಅದು ಇದರಲ್ಲಿ ಬರುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ದೃಢಪಟ್ಟವರಿಗೆ ಕೆಲವರಿಗೆ ಮಾತ್ರ ಚಿಕಿತ್ಸೆ ದೊರೆಯುತ್ತಿದೆ. ಉಳಿದವರಿಗೆ ಚಿಕಿತ್ಸೆ ದೊರೆಯುತ್ತಿಲ್ಲವೆಂದು ನಾನು ಕೇಳುತ್ತಿದ್ದೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಉಳಿದಿರುವವರು ಎಲ್ಲೋ ಒಂದು ಕಡೆ ಚಿಕಿತ್ಸೆ ತೆಗೆದುಕೊಳ್ಳುತ್ತಿರುತ್ತಾರೆ. ನಮ್ಮಲ್ಲಿ ಅವರು ಬರದೇ ಇರಬಹುದು, ಆದರೆ ಅವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿರುತ್ತಾರೆ. ನಮ್ಮಲ್ಲಿ ಯಾರು ಬರುತ್ತಾರೆ ಅವರಿಗೆ ಚಿಕಿತ್ಸೆ ಕೊಡುವಂತಹ ಕೆಲಸ ಮಾಡುತ್ತೇವೆ. ಅವರಿಗೆ ಒಂದು ಸಲ ಕ್ಯಾನ್ಸರ್ ಬಂದಿದೆ ಎಂದು ಗೊತ್ತಾದ ಮೇಲೆ ಅವರು ಚಿಕಿತ್ಸೆ ತೆಗೆದುಕೊಳ್ಳಲೇಬೇಕು. ಅವರು ಚಿಕಿತ್ಸೆ ತೆಗೆದುಕೊಳ್ಳದೇ ಇರುವುದಕ್ಕಾಗುವುದಿಲ್ಲ. ಅವರು ಚಕಿತ್ಸೆ ತೆಗೆದುಕೊಳ್ಳುತ್ತಾರೆ. HPV (Human Papillomavirus) ಇದರ ಬಗ್ಗೆ vaccine ಕೊಡುವುದಕ್ಕೆ ಘೋಷಣೆಯಾಗಿತ್ತು ಎಂದು ಮಾನ್ಯ ಸದಸ್ಯರು ಹೇಳಿದರು. ನಾವು ಕೂಡ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಕಳೆದ ವರ್ಷವೂ ಕೂಡ ಪತ್ರ ಬರೆದಿದ್ದೆವು. Proposal ಕೂಡ ಕಳುಹಿಸಿದ್ದೇವೆ. ಇನ್ನು ಅದಕ್ಕೆ approval ಬಂದಿಲ್ಲ. ಕೇಂದ್ರ ಸರ್ಕಾರ ಇದನ್ನು ತೆಗೆದುಕೊಂಡರೆ ಒಳ್ಳೆಯದು. HPV vaccine ಕೊಟ್ಟರೆ ಮುಂದಿನ ದಿವಸಗಳಲ್ಲಿ ಗರ್ಭ ಕಂಠ ಕ್ಯಾನ್ಸರ್ ಅನ್ನು ನಿವಾರಣೆ

ಮಾಡುವುದಕ್ಕೆ ವ್ಯವಸ್ಥೆ ತರಬಹುದು. ಆದರೆ ಕೇಂದ್ರ ಸರ್ಕಾರ ಎರಡು ಬಾರಿ ಘೋಷಣೆ ಮಾಡಿದರೂ ಕೂಡ ಇನ್ನು ಅನುಷ್ಠಾನವಾಗಲಿಲ್ಲ. ನಾಳೆ ಸಂಸತ್ತಿನಲ್ಲಿ ಆಯವ್ಯಯವನ್ನು ಮಂಡಿಸುತ್ತಿದ್ದಾರೆ. ಅದರಲ್ಲಾದರೂ ಈ vaccination programme ನ್ನು ತಂದರೆ ಒಳ್ಳೆಯದು. ಇಡೀ ದೇಶದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಈ ಕಾರ್ಯಕ್ರಮವನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಈ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳುತ್ತಿರುತ್ತಾರೆ, ಆದರೆ ಬೇರೆ ಬೇರೆ ಕಾರಣಗಳಿಂದ ಅನುಷ್ಠಾನಕ್ಕೆ ಬಂದಿಲ್ಲ. ಕೇಂದ್ರ ಸರ್ಕಾರದವರು ಈ ಕಾರ್ಯಕ್ರಮವನ್ನು ಮಾಡಿದರೆ ಖಂಡಿತವಾಗಿಯೂ ನಮ್ಮ ರಾಜ್ಯದಲ್ಲೂ ಅನುಷ್ಠಾನವಾಗುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, Cervical cancer ಏನಿದೆ, it spreads from uterus to vagina. HIV disease ರೀತಿ sexual contact ಇದ್ದರೆ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ family history ಇದ್ದರೂ ಸಹ ಬರುತ್ತದೆ. ಕುಟುಂಬದಲ್ಲಿ ತಾಯಿಗೆ ಇದ್ದರೆ ಹೆಣ್ಣುಮಕ್ಕಳಿಗೂ ಬರುತ್ತದೆ. ಇದು ಸಾಕಷ್ಟು ರೀತಿಯಲ್ಲಿದೆ. ಇವುಗಳನ್ನು ಪತ್ತೆ ಹಚ್ಚಬೇಕು. ಇವರುಗಳಿಗೆ HPV vaccine ಅನ್ನು ಕೊಡಬೇಕು. ಅದಕ್ಕೇನಾದರೂ ಸರ್ಕಾರ ಕ್ರಮ ವಹಿಸಿದೆಯೇ? Gardasil ೯ vaccination ಎನ್ನುವುದು ಮಾನ್ಯ ಸಚಿವರಿಗೆ ಗೊತ್ತಿದೆ. ಅದು ಸುಮಾರು 10,800 ರೂಪಾಯಿಗಳಾಗುತ್ತವೆ. ಈಗ ನಮ್ಮ ರಾಜ್ಯ, ದೇಶದಲ್ಲಿ Pune based Serum Institute of India, ದಲ್ಲಿ ತಯಾರು ಮಾಡುತ್ತಿದ್ದಾರೆ. ಒಂದು dose ಗೆ 2,000 ರೂಪಾಯಿಯಂತೆ ಎರಡು ಡೋಸ್ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ 4,000 ರೂಪಾಯಿಗಳಾಗುತ್ತವೆ. ಇದಕ್ಕೇನಾದರೂ concession ಏನಾದರೂ ಕೊಡುತ್ತಾರೆಯೇ ಅಥವಾ ಉಚಿತವಾಗಿ ಕೊಡುತ್ತಾರೆಯೇ ಎಂಬುದನ್ನು ತಿಳಿಸಬೇಕು. ಸರ್ಕಾರ screening test and awareness programme ಅನ್ನು ಮಾಡಿ ಹೆಣ್ಣುಮಕ್ಕಳಿಗೆ 25-30 ವರ್ಷಗಳಾದವರೂ ಯಾವ ರೀತಿ ಶರೀರದಲ್ಲಿ ಚೆಕ್ ಮಾಡಿಕೊಳ್ಳಬೇಕು, ಗೆಡ್ಡೆ ಇದೆಯೋ ಇಲ್ಲವೋ ಎಂದು ಸ್ತನ ಮುಟ್ಟಿ ನೋಡಿಕೊಳ್ಳಬೇಕು ಎನ್ನುವಂಥದ್ದು, ultrasound test ಮಾಡುವಂಥದ್ದು ಇದೆಯಲ್ಲಾ, ಅದಕ್ಕೇನಾದರೂ ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆಯೇ? ನಮ್ಮ ಸರ್ಕಾರ ಈ ಕಾರ್ಯಕ್ರಮವನ್ನು ಮಾಡಿದರೆ, ನಂತರ ಕೇಂದ್ರ ಸರ್ಕಾರದಿಂದ ಈ ಕಾರ್ಯಕ್ರಮವನ್ನು ಮಾಡಬಹುದು. Non-communicable diseases ನಲ್ಲಿ ಕಾರ್ಯಕ್ರಮವನ್ನು cover ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಆ vaccine ಗೆ 4,000 ರೂಪಾಯಿಗಳಾಗುತ್ತವೆ. ಅದನ್ನು subsidized rate ನಲ್ಲಿ ಕೊಡುತ್ತಾರೆಯೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

(575) 22/07/2024 11:10/ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೆ, ಸಾಮಾನ್ಯವಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಲಸಿಕಾ ಕಾರ್ಯಕ್ರಮಗಳು ನಡೆಯುತ್ತವೆ. ಯಾವುದೇ ಲಸಿಕಾ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ, ಅದು ಸದಾಕಾಲ ಶಾಶ್ವತವಾಗಿರಬೇಕು. ಈಗ ನಾವು ಹೆಚ್.ಪಿ. ಲಸಿಕಾ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ, ಅದನ್ನು ಕೇವಲ ಒಂದು ಜಿಲ್ಲೆಗೆ ಮಾತ್ರವೇ ಅದೂ ಕೇವಲ ಎರಡು ವರ್ಷಗಳ ಕಾಲ ಸೀಮಿತಗೊಳಿಸಿದರೆ, ಯಾವುದೇ ಪ್ರಯೋಜನವಾಗುವುದಿಲ್ಲ. ಇದು ನಿರಂತರ ಪ್ರಕ್ರಿಯೆಯಾಗಬೇಕು. ಈಗಿರುವ ಎಲ್ಲಾ ಮಕ್ಕಳಿಗೂ ಸಹ ಅದನ್ನು ಕೊಡುತ್ತಿರಬೇಕು. ಲಸಿಕೆಯನ್ನು ಕೇವಲ ಒಂದು ವರ್ಷ ನೀಡಿ, ಎರಡನೇ ವರ್ಷ ಸ್ಥಗಿತಗೊಳಿಸಲಾಗುವುದಿಲ್ಲ. ಏಕೆಂದರೆ ಇದಕ್ಕೆ ಅನುದಾನ ಮತ್ತು ಕಾರ್ಯವ್ಯಾಪ್ತಿ ಬಹಳ ದೊಡ್ಡದಾಗಿರುತ್ತದೆ. ಇದನ್ನು ಇಡೀ ರಾಜ್ಯಕ್ಕೆ ಅನ್ವಯಿಸಬೇಕಾಗುತ್ತದೆ. ಇದನ್ನು ಕೇವಲ ಒಂದೆರೆಡು ಕಡೆಗಳಲ್ಲಿ ಮಾತ್ರವೇ ಮಾಡಿ, ಲಸಿಕಾ ಕಾರ್ಯಕ್ರಮವನ್ನು ಸ್ಥಗಿತಗೊಳಿಸುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ರಾಷ್ಟ್ರೀಯ ಮಟ್ಟದಲ್ಲಿ ಲಸಿಕಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಮಕ್ಕಳಿಗೆ ನೀಡುವ ಪೋಲೀಯೋ, ಬಿ.ಸಿ.ಜಿ. ಅಥವಾ ಬೇರೆ ಇನ್ಯಾವುದೇ ಲಸಿಕೆಗಳಿರಬಹುದು. ಇವುಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಎಲ್ಲರಿಗೂ ಅನ್ವಯಿಸುವಂತಹ ಕಾರ್ಯಕ್ರಮಗಳನ್ನು ಮಾಡಬೇಕು; ಇವುಗಳು ಶಾಶ್ವತವಾಗಿ ನಡೆಯುತ್ತಿರಬೇಕು. ಕೇಂದ್ರ ಸರ್ಕಾರವು ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಾಗ ಖಂಡಿತವಾಗಿಯೂ ನಾವೂ ಸಹ ಇದನ್ನು ಕೈಗೆತ್ತಿಕೊಳ್ಳುತ್ತೇವೆ. ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ನಾವೂ ಸಹ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಕಳೆದ ಸಂಸತ್ತಿನ ಅಧಿವೇಶನದಲ್ಲಿ ಸಂಸದರಾದ ಶ್ರೀಮತಿ ಜಯಾ ಬಚ್ಚನ್‌ರವರು ಇದೇ ವಿಚಾರವನ್ನು ಪ್ರಸ್ತಾಪಿಸಿ, ಸದರಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ಕೇಂದ್ರದ ಸಚಿವರಿಗೆ ವಿನಂತಿಸಿಕೊಂಡಿದ್ದಾರೆ. ಈ ಬಗ್ಗೆ ಎಲ್ಲಾ ಕಡೆ ಒತ್ತಡವಿದೆ. ಈ ಲಸಿಕಾ ಕಾರ್ಯಕ್ರಮವನ್ನು ಮಾಡಲು ಕೇಂದ್ರ ಸರ್ಕಾರವೂ ಸಹ ಒಪ್ಪಿಕೊಂಡಿದೆ; ಹೀಗಾಗಿ ಇದು ಜಾರಿಗೊಳ್ಳುವ ನಿರೀಕ್ಷೆಯಲ್ಲಿ ನಾವಿದ್ದೇವೆ. ಈ ಯೋಜನೆಯು ಜಾರಿಗೊಂಡರೆ ಬಹಳ ಒಳ್ಳೆಯದಾಗುತ್ತದೆ. ನಾವೇ ಏಕಾಏಕಾಯಾಗಿ ಇದನ್ನು ಜಾರಿಗೊಳಿಸಲು ಹೋದರೆ ಸಮಸ್ಯೆಯಾಗುತ್ತದೆ. ಈ ಹಂತದಲ್ಲಿ ಇದನ್ನು ನಾವು ಜಾರಿಗೊಳಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಕೇಳದ ಸದಸ್ಯರಿಗೆಲ್ಲಾ ನಾನು ಐದು ನಿಮಿಷಗಳ ಕಾಲಾವಕಾಶವನ್ನು ನೀಡುತ್ತೇನೆ. ನಾನು ನಿಲ್ಲಿಸುವಂತೆ ಹೇಳಿದಾಗ ಅವರುಗಳು ಮಾತನಾಡುವುದನ್ನು ನಿಲ್ಲಿಸಬೇಕು.

ಇಲ್ಲವೆಂದಾದರೆ, 12:15 ಗಂಟೆಗೆ ಸರಿಯಾಗಿ ನಾನು ಪ್ರಶ್ನೋತ್ತರ ಕಲಾಪವನ್ನು ಸ್ಥಗಿತಗೊಳಿಸುತ್ತೇನೆ. ಆಗ ಇನ್ನುಳಿದ ಸದಸ್ಯರು ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುವಂತೆ ಕೇಳಿದರೆ, ಅವರ ಮನವಿಯನ್ನು ನಾನು ಪುರಸ್ಕರಿಸುವುದಿಲ್ಲ. ಇದನ್ನು ಬಹಳ ಕಟ್ಟುನಿಟ್ಟಾಗಿ ಹೇಳುತ್ತಿದ್ದೇನೆ. ಸದಸ್ಯರುಗಳು ತಮಗೆ ನೀಡಿದ ಐದು ನಿಮಿಷಗಳ ಕಾಲಾವಕಾಶವನ್ನು ಮೀರಿದರೆ, ಅದಕ್ಕೆ ನಾನು ಜವಾಬ್ದಾರನಾಗುವುದಿಲ್ಲ. ಪ್ರಶ್ನೋತ್ತರ ಕಲಾಪವನ್ನು ನಾನು ಸರಿಯಾಗಿ 12:15 ನಿಮಿಷಕ್ಕೆ ಮುಗಿಸುತ್ತೇನೆ.

**ಪ್ರಶ್ನೆ ಸಂಖ್ಯೆ:- 640**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಕೊಡಗು ಜಿಲ್ಲೆಯ ರೈತರಿಗೆ ಸೋಲಾರ್ ಚಾಲಿತ ಪಂಪ್‌ಸೆಟ್ ಸಂಪರ್ಕದ ಯೋಜನೆಯ ನಿರ್ವಹಣೆಯ ತೊಂದರೆ ಕುರಿತಾಗಿ ಯಾವುದೇ ದೂರು ಸ್ವೀಕೃತಗೊಂಡಿರುವುದಿಲ್ಲ. ಸೋಲಾರ್ ಚಾಲಿತ ಪಂಪ್‌ಸೆಟ್ ಸಂಪರ್ಕದ ಯೋಜನೆಯು ಬಹಳ ಒಳ್ಳೆಯ ಯೋಜನೆಯಾಗಿದೆ. ಆದರೆ, ಕೊಡಗು ಜಿಲ್ಲೆಯಲ್ಲಿ ಆನೆಗಳ ವಿಪರೀತ ಕಾಟದಿಂದಾಗಿ ಸೋಲಾರ ಚಾಲಿತ ಪಂಪ್‌ಸೆಟ್ ಸಂಪರ್ಕವನ್ನು ಒದಗಿಸಿದರೆ, ಅದು ಹಾಳಾಗಿ, ನಷ್ಟವುಂಟಾಗುವ ಪರಿಸ್ಥಿತಿಯಾಗುತ್ತದೆ. ಮನೆ ಹತ್ತಿರದಲ್ಲಿಯೇ ಇದು ಇದ್ದರೆ ಯಾವುದೇ ತೊಂದರೆ ಇಲ್ಲ. ಆದರೆ, ದೂರದಲ್ಲಿರುವ ಕೆರೆಗಳಿಂದ ಸಂಪರ್ಕವನ್ನು ಕೊಟ್ಟಾಗ, ಸೋಲಾರ್ ಪ್ಯಾನೆಲ್‌ಗಳು ಹಾಳಾಗಿ, ಇದರಿಂದ ರೈತರಿಗೆ ನಷ್ಟವುಂಟಾಗುವ ಪರಿಸ್ಥಿತಿಯುಂಟಾಗುತ್ತದೆ. ಲಿಖಿತ ಉತ್ತರದ ಅನುಬಂಧ-1 ರಲ್ಲಿನ ಸರ್ಕಾರಿ ಆದೇಶದಲ್ಲಿ "ಈಗಾಗಲೇ ನೋಂದಣಿಗೊಂಡು ಮೂಲಸೌಕರ್ಯ ರಚನೆಗೆ ಕಾಯುತ್ತಿರುವ ಅಥವಾ ಹೊಸದಾಗಿ ನೋಂದಣಿಗೊಳ್ಳುವ ಪಂಪ್‌ಸೆಟ್‌ಗಳು, ವಿದ್ಯುತ್ ಜಾಲದಿಂದ 500 ಮೀಟರ್‌ಯಿಂದಾಚೆ ಇದ್ದಲ್ಲಿ..." ಎಂಬುದಾಗಿ ತಿಳಿಸಿದ್ದಾರೆ. ಇಂತಹ ಷರತ್ತುಗಳನ್ನು ಸಡಿಲಗೊಳಿಸಬೇಕೆಂದು ನಾನು ತಮ್ಮ ಮೂಲಕ ಸಚಿವರಿಗೆ ಒತ್ತಾಯಿಸುತ್ತೇನೆ. ಐ.ಪಿ. ಸೆಟ್‌ಗಳಿಗೆ ಮೂಲ ಸೌಕರ್ಯ ನೀಡುವ ಬಗ್ಗೆ ಅನುಬಂಧ-2 ರಲ್ಲಿ ಮಾಹಿತಿಯನ್ನು ನೀಡಿದ್ದಾರೆ. ಈ ಹಿಂದೆ ಜಾರಿಯಲ್ಲಿದ್ದ ನಿಯಮಗಳನ್ನೇ ಈಗಲೂ ಮುಂದುವರೆಸಿಕೊಂಡು ಹೋಗಬೇಕೆಂದು ತಮ್ಮ ಮುಖಾಂತರ ಸಚಿವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ಸುಮಾರು 2004 ನೇ ಇಸ್ವಿಯಲ್ಲಿ ಸರ್ಕಾರವು ಒಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಯಾವ ರೈತರು ಅಕ್ರಮವಾಗಿ ಸಂಪರ್ಕವನ್ನು ಹೊಂದಿದ್ದರೋ, ಅವರಿಗೆ ಸಂಪರ್ಕವನ್ನು ನೀಡಲು ಸರ್ಕಾರವು ವಿಫಲಗೊಂಡಿದೆ. ಹೀಗಾಗಿ ತಕ್ಷಣವೇ ಅವರುಗಳಿಂದ ಸುಮಾರು ಹದಿಮೂರು ಸಾವಿರ ರೂಪಾಯಿಗಳಷ್ಟು ಹಣವನ್ನು ಕಟ್ಟಿಸಿಕೊಂಡು, ಅವರಿಗೆ ಸಂಪರ್ಕವನ್ನು ನೀಡಲಾಗಿದೆ. ಅಕ್ರಮ-ಸಕ್ರಮ ಯೋಜನೆಗಾಗಿ ಸರ್ಕಾರವು ಇಲ್ಲಿಯವರೆಗೆ ಸುಮಾರು ಆರು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ವ್ಯಯಿಸಿದೆ. ಹೀಗಾಗಿ ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಇತ್ತೀಚೆಗೆ ನಡೆದ ಸಚಿವ ಸಂಪುಟದಲ್ಲಿ ಈ ಬಗ್ಗೆ ತೀರ್ಮಾನವೊಂದನ್ನು ತೆಗೆದುಕೊಳ್ಳಲಾಗಿದೆ.

ಅದೇನೆಂದರೆ, ಇಲ್ಲಿಯತನಕ ಯಾರು ಅರ್ಜಿಯನ್ನು ಸಲ್ಲಿಸಿದ್ದಾರೆಯೋ, ಅವರು 50 ರೂಪಾಯಿಗಳನ್ನು ಪಾವತಿಸಿರಬಹುದು ಅಥವಾ 25 ಸಾವಿರ ರೂಪಾಯಿಗಳನ್ನು ಪಾವತಿಸಿರಬಹುದು, ಇವರಿಗೆಲ್ಲಾ ಆದ್ಯತೆಯ ಮೇಲೆ, ಸಂಪರ್ಕವನ್ನು ನೀಡಬೇಕೆಂಬ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇನ್ನು ಮುಂದಿನ ದಿನಗಳಲ್ಲಿ ಇದನ್ನು ಇಂಧನ ಇಲಾಖೆಯ ಎಸ್ಕಾಂಗಳ ನಿಯಮಾನುಸಾರ ಮಾಡಬೇಕೆಂದು ಸೂಚಿಸಿದ್ದೇವೆ. ಪ್ರಸ್ತುತ ನಮ್ಮಲ್ಲಿ ಸುಮಾರು ನಾಲ್ಕು ಸಾವಿರದಷ್ಟು ಐ.ಪಿ.ಸೆಟ್‌ಗಳು ಸಕ್ರಮಕ್ಕಾಗಿ ಬಾಕಿ ಇವೆ. ಪ್ರತಿ ವರ್ಷ ಒಂದು ಲಕ್ಷದಷ್ಟು ಅರ್ಜಿಗಳು ಸ್ವೀಕೃತಗೊಳ್ಳುತ್ತಿವೆ. ಬಾಕಿ ಇರುವ ಸುಮಾರು ನಾಲ್ಕು ಸಾವಿರದಷ್ಟು ಅರ್ಜಿಗಳನ್ನು ಸಕ್ರಮ ಮಾಡಬೇಕಾದರೆ, ಸುಮಾರು 8-9 ಸಾವಿರ ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆ ಇದೆ. ಹೀಗಾಗಿ ಇದಕ್ಕೆ ಮೊದಲಿನಿಂದಲೂ ಅಂತಿಮ ದಿನಾಂಕವನ್ನು ನಿಗದಿಗೊಳಿಸಿದ್ದೇವೆ. ಆದರೂ ಸಹ ನಿರಂತರವಾಗಿ ಅರ್ಜಿಗಳು ಸ್ವೀಕೃತಗೊಳ್ಳುತ್ತಲೇ ಇವೆ. ಹೀಗಾಗಿ ಹಾಲಿ ಯಾವ ಅರ್ಜಿದಾರರು ಹಣ ಪಾವತಿಸಿದ್ದಾರೆಯೋ, ಅವರಿಗೆ ಶಾಶ್ವತವಾದ ಪರಿಹಾರವನ್ನು ನೀಡಲು ನಾವು ಏನು ಮಾಡದ್ದೇವೆ ಎಂದರೆ, ನಾವು KUSUM-B (**Kisan Urja Suraksha Evam Utthan Mahabhiyan) and** KUSUM-C (**Kisan Urja Suraksha Evam Utthan Mahabhiyan)** ಎಂಬ ಎರಡೂ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆ. KUSUM-B ಯೋಜನೆಯಲ್ಲಿ 500 ಮೀಟರ್ ವ್ಯಾಪಿಯೊಳಗಡೆ ಇರುವುದಕ್ಕೆ ಗ್ರಿಡ್‌ನಿಂದಲೇ ಅವರಿಗೆ ಸಂಪರ್ಕವನ್ನು ನೀಡಲಾಗುವುದು. ಇದಕ್ಕೆ ಅವಶ್ಯಕವಾದ ಒಂದು ಪಂಪ್‌ಸೆಟ್‌ನ್ನು ಅಳವಡಿಸಲು ಎಸ್ಕಾಂ ಸಂಸ್ಥೆಗೆ ಸುಮಾರು 2-2.5 ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ. ಎರಡ್ಮೂರು ಅರ್ಜಿದಾರರು ಒಟ್ಟಿಗೆ ಸೇರಿದರೆ, ಇದರ ವೆಚ್ಚ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು; ಹೆಚ್ಚಿನ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ, 500 ಮೀಟರ್ ವ್ಯಾಪ್ತಿಯೊಳಗೆ 10 ಕಂಬಗಳನ್ನು ಅಳವಡಿಸಬೇಕಾಗುತ್ತದೆ; ಇದಕ್ಕೆ ನಲವತ್ತು ಸಾವಿರ ರೂಪಾಯಿಗಳಷ್ಟು ವೆಚ್ಚವಾಗುತ್ತದೆ. ಇದರಲ್ಲಿ ಕಂಡಕ್ಟರ್ ಮತ್ತು ಟ್ರಾನ್ಸ್‌ಫಾರ್ಮರ್‌ಗಳೂ ಒಳಗೊಂಡಿರುತ್ತದೆ. ಒಂದು ಟ್ರಾನ್ಸ್‌ಫಾರ್ಮರ್‌ಗೆ ಇಪ್ಪತ್ತೈದು ಸಾವಿರ ರೂಪಾಯಿಗಳು ವೆಚ್ಚವಾದರೆ, ಇಲ್ಲಿ ಒಂದು ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತದೆ. ಇಲ್ಲಿ ಪ್ಯಾನೆಲ್ ಬೋರ್ಡ್ ಮತ್ತಿತರೆಗಳಿಗೆ ಸುಮಾರು 2-2.5 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತದೆ. ಇದನ್ನು ಆದ್ಯತೆಯ ಮೇಲೆ ನೀಡುವಂತೆ ಸರ್ಕಾರ ಈಗಾಗಲೇ ನಿರ್ಧರಿಸಿದೆ. 500 ಮೀಟರ್ ವ್ಯಾಪ್ತಿಯಿಂದ ಹೊರಗಡೆ ಇರುವವರಿಗೆ KUSUM-B ಯೋಜನೆಯಲ್ಲಿ stand alone ಪಂಪ್ ಸೆಟ್ ನೀಡಲು ಸರ್ಕಾರವು ನಿರ್ಧರಿಸಿದೆ. 500 ಮೀಟರ್ ಹೊರಗಡೆ ಇರುವವರಿಗೆ ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದ್ದು; ಇವರೇ ಬಂದು ಎಲ್ಲಾ ಕೆಲಸಗಳನ್ನು ಮಾಡುತ್ತಾರೆ. ರೈತರಿಗೆ ಬೋರ್‌ವೆಲ್ ಒಂದು ಇದ್ದರೆ

ಸಾಕು, ಮೋಟರ್ ಮತ್ತು ಮೀಟರ್‌ಗಳನ್ನು ಗುತ್ತಿಗೆದಾರರೇ ಅಳವಡಿಸಿ, ವೈರಿಂಗ್ ಅನ್ನು ಅವರೇ ಮಾಡುತ್ತಾರೆ. ಈ ಮೊದಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳದ್ದು ತಲಾ ಶೇಕಡಾ ೩೦ ರಷ್ಟು ಇತ್ತು. ಪ್ರಸ್ತುತ ಕೇಂದ್ರ ಸರ್ಕಾರದ್ದು ಶೇಕಡಾ ೩೦ ರಷ್ಟು ಹಾಗೂ ರಾಜ್ಯ ಸರ್ಕಾರದ್ದು ಶೇಕಡಾ ೫೦ ರಷ್ಟು ಇದೆ. ಈ ಸಂಬಂಧ ನಾವು ದೆಹಲಿಗೆ ಹೋಗಿ ಕೇಂದ್ರ ಇಂಧನ ಸಚಿವರನ್ನು ಭೇಟಿ ಮಾಡಿದ್ದೆವು. ಅದೂ ಸಹ ಸಮಯ ಮೀರಿ ಹೋಗಿತ್ತು. ಆಗಿನ ಕೇಂದ್ರದ ಇಂಧನ ಸಚಿವರು ಬಹಳ ಒಳ್ಳೆಯವರಾಗಿದ್ದರು. ಈಗಿನ ಸಚಿವರೂ ಸಹ ಒಳ್ಳೆಯವರಿರಬಹುದು, ಆದರೆ ನಾನು ಇನ್ನೂ ಅವರನ್ನು ಭೇಟಿ ಮಾಡಿಲ್ಲ. ಅವರು ಈಗ ನಮಗೆ ಕಾಲಾವಕಾಶವನ್ನು ನೀಡಿದ್ದಾರೆ. ಇದರಿಂದ ರೈತರಿಗೆ ಆದಷ್ಟು standalone ಪಂಪ್‌ಸೆಟ್‌ಗಳನ್ನು ನೀಡಿದರೆ, ಅವರಿಗೆ ಅನುಕೂಲವಾಗುತ್ತದೆ. ಬಾಕಿ ಇರುವವರಿಗೆ ಗ್ರಿಡ್‌ನಿಂದ ೫೦೦ ಮೀಟರ್ ಒಳಗಡೆ ಇರುವವರಿಗೆ ನಾವೇ ಸಂಪರ್ಕವನ್ನು ಹಾಕಿಕೊಡುವ ಕೆಲಸವನ್ನು ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ):-** ಮಾನ್ಯ ಸಭಾಪತಿಯವರೆ, ವಿದ್ಯುತ್ ಹಾಗೂ ಸೋಲಾರ ಎರಡೂ ಸಂಪರ್ಕಗಳನ್ನು ನೀಡುವಂತೆ ನಾನು ಕೋರುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ತಮಗೆ ತಿಳಿದಿರುವಂತೆ, ಈ ಯೋಜನೆಗಾಗಿ ನಾವು ಈಗಾಗಲೇ ಆರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದಾಗ್ಯೂ ಸಹ ಯಾವುದೇ ಸಮಸ್ಯೆ ಪರಿಹಾರವಾಗುತ್ತಿಲ್ಲ. ಈ ಸಂದರ್ಭದಲ್ಲಿ ಉದಾಹರಣೆಯೊಂದನ್ನು ನಾನು ಉಲ್ಲೇಖಿಸಬಯಸುತ್ತೇನೆ. ನಾನೇ ಖುದ್ದಾಗಿ ಫೀಲ್ಡ್‌ಗೆ ಹೋಗಿದ್ದೆನು. ಸದಸ್ಯರು ಹಾಗೂ ನಾನು ಇಬ್ಬರೂ ಸಹ ಕೊಡಗು ಜಿಲ್ಲೆಗೆ ಸೇರಿದವರಾಗಿದ್ದೇವೆ. ಅವರಿಗೆ ತಿಳಿದಿರುವಂತೆ, ಅಲ್ಲಿನ ದೂರದ ಪ್ರದೇಶಗಳಲ್ಲಿ ಪಂಪ್‌ಸೆಟ್‌ಗಳಿರುತ್ತವೆ. ನಾವು ಅಂದಾಜಿಸಿದಂತೆ, ಇದಕ್ಕೆ ನಾಲ್ಕೂವರೆ-ಐದು ಲಕ್ಷ ರೂಪಾಯಿಗಳಾಗುತ್ತವೆ. ಕೇವಲ ಒಂದು ಬೋರ್‌ವೆಲ್‌ಗೆ ಇಷ್ಟೊಂದು ಹಣ ನೀಡುವುದು ನಮಗೆ ಕಷ್ಟವಾಗುತ್ತದೆ ಹಾಗೂ ಇಷ್ಟೊಂದು ಶಕ್ತಿ ನಮಗೂ ಸಹ ಇಲ್ಲ. ಅಂತಹ ಜಾಗಗಳಲ್ಲಿ ಸೋಲಾರ್ ವ್ಯವಸ್ಥೆಯನ್ನು ಮಾಡುವಂತೆ ನಾವು ತಿಳಿಸಿದ್ದೇವೆ. ಸದಸ್ಯರು ಪ್ರಸ್ತಾಪಿಸಿದ ಆನೆ ಹಾವಳಿ ವಿಚಾರವು ನನಗೆ ತಿಳಿದಿದೆ. ಹೆಚ್ಚಾಗಿ ಕಾಡಿನ ಪಕ್ಕದಲ್ಲಿರುವ ಪ್ರದೇಶಗಳಲ್ಲಿ ಈ ರೀತಿಯ ಪ್ರಕರಣಗಳಾಗುತ್ತವೆ. ಹೀಗಾಗಿ ಆನೆಯನ್ನು ತಡೆಗಟ್ಟಬೇಕಾದರೆ, ಅದಕ್ಕೆ ಸೋಲಾರ ಫೆನ್ಸಿಂಗ್ ಅನ್ನು ಮಾಡಬೇಕಾಗುತ್ತದೆ. ಹೊರತು ಬೇರೆ ಇನ್ನಾವುದರಿಂದ ಪ್ರಯೋಜನವಾಗುವುದಿಲ್ಲ. ಪ್ರಸ್ತುತ ಸರ್ಕಾರದಿಂದ ರೇಲ್ ಬ್ಯಾರಿಕೇಡ್ ಮಾಡಲಾಗುತ್ತಿದೆ. ಕಡಾಂಗವನ್ನು ತೆಗೆಯುವುದಕ್ಕೆ ಆದಷ್ಟು

ಪ್ರಯತ್ನವನ್ನು ಮಾಡುತ್ತಿದ್ದೇವೆ. ಆನೆ ಹಾವಳಿಯುಂಟಾಗುತ್ತದೆ ಎನ್ನುವ ಕಾರಣಕ್ಕಾಗಿ ಸೋಲಾರ ಚಾಲಿತ ಪಂಪ್‌ಸೆಟ್ ಸಂಪರ್ಕವನ್ನು ಸ್ಥಗಿತಗೊಳಿಸುವುದಿಲ್ಲ. ಏಕೆಂದರೆ, ಆನೆಗಳು ಓಡಾಡುವ ಜಾಗದಲ್ಲಿ ಯಾವುದೇ ರೀತಿಯ ಕೃಷಿಯನ್ನು ಮಾಡುವುದಕ್ಕೆ ಆಗುವುದಿಲ್ಲ. ಆನೆ ಹಾವಳಿಯನ್ನು ತಡೆಯಲು ಬೇರೆ ರೀತಿಯ ಕ್ರಮಗಳಿವೆ. ಇದು ಒಳ್ಳೆಯ ಯೋಜನೆಯಾಗಿದೆ. ಆದಷ್ಟು ರೈತರು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂಬುದು ನನ್ನ ವಿನಂತಿಯಾಗಿದೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಕೆ.ಎಸ್.ನವೀನ್ ರವರದ್ದು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಿತ ಸಚಿವರು ಇನ್ನು ಐದು ನಿಮಿಷಗಳಲ್ಲಿ ಸದನಕ್ಕೆ ಬರುತ್ತಾರೆ.

**ಸಭಾಪತಿಯವರು:-** ಸಚಿವರು ಬರಲಿ. ಮುಂದಿನ ಪ್ರಶ್ನೆ ಶ್ರೀ ಎಸ್.ರವಿಯವರದ್ದು. ಇದಕ್ಕೆ ಉತ್ತರಿಸಲು ಸಚಿವರು ಸಮಯಾವಕಾಶವನ್ನು ಕೋರಿದ್ದಾರೆ. ಅದೇ ರೀತಿಯಾಗಿ ಶ್ರೀ ಯು.ಬಿ.ವೆಂಕಟೇಶ್‌ರವರು ಕೇಳಿದ ಪ್ರಶ್ನೆಗೆ ಉತ್ತರಿಸಲು ಸಚಿವರು ಕಾಲಾವಕಾಶವನ್ನು ಕೋರಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಯಾವಾಗ ಉತ್ತರವನ್ನು ಕೊಡಿಸುತ್ತೀರಿ?

**ಸಭಾಪತಿಯವರು:-** ನಿಮ್ಮ ಪ್ರಶ್ನೆಗೆ ಉತ್ತರಿಸಲು ಸಚಿವರು ಐದು ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಅಧಿವೇಶನದ ಕೊನೆಯ ದಿನವಾದರೂ ಉತ್ತರವನ್ನು ಕೊಡಿಸಿ.

**ಸಭಾಪತಿಯವರು:-** ಸಭಾನಾಯಕರೇ, ಈ ಬಗ್ಗೆ ತಿಳಿಸಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ನಾನು ಸಂಬಂಧಿತ ಸಚಿವರೊಂದಿಗೆ ಮಾತನಾಡಿ ತಿಳಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವುದರೊಳಗೆ ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಡಿಸಲಿ.

**ಸಭಾಪತಿಯವರು:-** ಶ್ರೀ ಮಧು ಜಿ.ಮಾದೇಗೌಡರವರ ಪರವಾಗಿ ಶ್ರೀ ದಿನೇಶ್ ಗೂಳಿಗೌಡ.

**(ಈ ಹಂತದಲ್ಲಿ ಶ್ರೀ ದಿನೇಶ್ ಗೂಳಿಗೌಡ ರವರು ಸದನದಲ್ಲಿ ಉಪಸ್ಥಿತರಿರುವುದಿಲ್ಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಹೆಚ್.ಎಸ್.ಗೋಪಿನಾಥ್ ರವರದ್ದು.

(ಮುಂದು)

(576) 22-07-2024/11-20/bkp-ak

**ಪ್ರಶ್ನೆ ಸಂಖ್ಯೆ 671**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಸ್. ಗೋಪಿನಾಥ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಬೆಂಗಳೂರು ನಗರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 23 ಚಿಕಿತ್ಸಾಲಯಗಳಿವೆ ಎಂದು ಹೇಳಿದ್ದಾರೆ. ಇಲ್ಲಿ ಸುಮಾರು 2 ಕೋಟಿ ಜನಸಂಖ್ಯೆ ಇದೆ. ಇದಕ್ಕೆ ಹೇಗೆ 23 ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಒದಗಿಸುತ್ತಾರೆನ್ನುವುದು ಒಂದು ಪ್ರಶ್ನೆಯಾಗಿದೆ. ನನ್ನ ಎರಡನೆಯ ಪ್ರಶ್ನೆ ಏನೆಂದರೆ, ನೀವು ಔಷಧಿಗಳನ್ನು ಅವಶ್ಯಕತೆಗೆ ತಕ್ಕಂತೆ ಖರೀದಿಸುತ್ತಿದ್ದೇವೆಂದು ಹೇಳಿದ್ದೀರಿ. ಇದು ಸಮರ್ಪಕವಾಗಿಲ್ಲ. ಅಲ್ಲಿ ಬರತಕ್ಕಂತಹ ದೂರುಗಳ ಪ್ರಕಾರ ವಾಸ್ತವವಾಗಿ ಬೇಕಾದಷ್ಟು ಔಷಧಿಗಳು ಸಿಗುತ್ತಿಲ್ಲ ಎನ್ನುವುದಾಗಿದೆ. ಅದರ ಬಗ್ಗೆ ನೀವು ಕ್ರಮ ಕೈಗೊಳ್ಳಬೇಕು. ನನ್ನ ಮೂರನೆಯ ಪ್ರಶ್ನೆ ತಾವೇ ಹೇಳಿದ ಹಾಗೆ ಮಂಜೂರಾದ ವೈದ್ಯಾಧಿಕಾರಿಗಳು 903 ಎಂದು ಹೇಳಿದ್ದೀರಿ. ಕಾರ್ಯನಿರ್ವಹಿಸುತ್ತಿರುವವರು ಕೇವಲ 677. ಇನ್ನು ಸುಮಾರು 226 ಹುದ್ದೆಗಳು ಖಾಲಿ ಇವೆ. ಇವುಗಳನ್ನು ಯಾವಾಗ ಮುಂದುವರಿಸುತ್ತೀರಿ? ಮತ್ತೆ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯಾಧಿಕಾರಿಗಳ ಸಂಖ್ಯೆ 158. ಇದು ಸಾಕಾಗುತ್ತಿಲ್ಲ. ತಾಲ್ಲೂಕಿಗೆ ಒಬ್ಬರಂತೆ ಆದರೂ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯಾಧಿಕಾರಿಯನ್ನು ನೇಮಕ ಮಾಡಬೇಕೆನ್ನುವುದು ನನ್ನ ಆಗ್ರಹವಾಗಿದೆ. ಈ ಮೂರು ಪ್ರಶ್ನೆಗಳಿಗೆ ಉತ್ತರ ನೀಡಬೇಕೆಂದು ಕೇಳುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ನಾವು ಉತ್ತರದಲ್ಲಿ ಈ ಬಗ್ಗೆ ಹೇಳಿದ್ದೇವೆ. ಔಷಧಿಗಳು ಯಾವುದೂ ಕೊರತೆಯಿಲ್ಲ. ಎಲ್ಲಾ ಕಡೆ ಸರಬರಾಜು ಆಗಿದೆ. ಎಲ್ಲಾ ಕಡೆ ಲಭ್ಯತೆ ಕೂಡ ಇದೆ. ನಿರ್ದಿಷ್ಟವಾಗಿ ಇಂತಹ ಆಸ್ಪತ್ರೆಯಲ್ಲಿ, ಇಂತಹ ಆರೋಗ್ಯ ಕೇಂದ್ರದಲ್ಲಿ ಬರುತ್ತಿಲ್ಲವೆಂದು ತಾವು ನಿರ್ದಿಷ್ಟವಾಗಿ ಹೇಳಿದರೆ ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ, ನಮ್ಮ ಕಡೆಯಿಂದ ಅಗತ್ಯ ಇರುವಂತಹ ಔಷಧಿಗಳು ಆಯುಷ್ ಇಲಾಖೆಯಿಂದ ಖರೀದಿ ಮಾಡಲಾಗಿದೆ ಮತ್ತು ಅದನ್ನು ಎಲ್ಲಾ ಕಡೆಗೂ ಕಳುಹಿಸಲಾಗಿದೆ. ಎಲ್ಲಿಯಾದರೂ, ಏನಾದರೂ ಸಮಸ್ಯೆ ಇದ್ದರೆ ಹೇಳಿ, ಖಂಡಿತವಾಗಿಯೂ ನಾನು ಅದರ ಬಗ್ಗೆ ಗಮನಿಸುತ್ತೇನೆ. ಇದು ಒಂದು ವಿಚಾರ.

ಎರಡನೆಯದಾಗಿ, ಮಂಜೂರಾಗಿರುವಂತಹ ವೈದ್ಯಾಧಿಕಾರಿಗಳ ಹುದ್ದೆ ಬಗ್ಗೆ ಹೇಳಿದ್ದಾರೆ. ಈಗ ಎಲ್ಲಾ ಇಲಾಖೆಗಳಲ್ಲಿಯೂ ಖಾಲಿ ಇರುವ ಹುದ್ದೆಗಳ ಬಗ್ಗೆಯೂ ತಮಗೆ ಗೊತ್ತಿದೆ. ಆ ಹುದ್ದೆಗಳನ್ನು ಭರ್ತಿ ಮಾಡಬೇಕು. ಅದನ್ನು ಕಾಲ ಕಾಲಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಬಗ್ಗೆಯೂ ನಾವು

ಖಂಡಿತವಾಗಿಯೂ ಮುಂದಿನ ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಆದಷ್ಟುಮಟ್ಟಿಗೆ ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೆ, ಕೊನೆಯದಾಗಿ, ಅನೇಕ ಜನರು ಕಚೇರಿಗೆ ಹಾಜರಾಗುತ್ತಲೇ ಇಲ್ಲ. ನೀವು ಈ ಕೆಲಸವನ್ನು ಮುಂದಕ್ಕೆ ಮಾಡುತ್ತೇವೆಂದು ಹೇಳಿದ್ದೀರಿ. ಈಗ ನೀವು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಿ. ಅಲ್ಲಿ ಇರುವಂತಹವರು ಸಹ ಕಚೇರಿಗೆ ಸರಿಯಾಗಿ ಹಾಜರಾಗುತ್ತಿಲ್ಲ. ಇದರ ಬಗ್ಗೆ ತುಂಬಾ ದೂರುಗಳು ಬರುತ್ತಿವೆ. ದಯವಿಟ್ಟು ಇದನ್ನು ಗಂಭೀರವಾಗಿ ತೆಗೆದುಕೊಂಡು ಇದನ್ನು ಏನಾದರೂ ಮಾಡಿ ಸ್ಟ್ರೀಮ್‌ಲೈನ್ ಮಾಡಬೇಕು. ಅಲ್ಲಿ ಇರುವಂತಹವರಾದರೂ ಹಾಜರಾಗುವಂತೆ ಮಾಡಬೇಕು. ಅವರು ಸಹ ಹಾಜರಾಗುತ್ತಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ನಮಗೆ ಅನೇಕ ದೂರುಗಳು ಬಂದಿವೆ. ಆದ್ದರಿಂದ, ನಾವು ಈಗ ಒಂದು ಹೊಸ ವ್ಯವಸ್ಥೆಯನ್ನು ಜಾರಿ ಮಾಡಿದ್ದೇವೆ. ಉತ್ತರದಲ್ಲಿಯೂ ಕೂಡ ಕೊಟ್ಟಿದ್ದೇವೆ.

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೆ, ಅದನ್ನು ಇನ್ನೂ ಮಾಡಿಲ್ಲ. ಅದನ್ನು ಆಗಸ್ಟ್ 1ನೇ ತಾರೀಖಿನಿಂದ ಜಾರಿ ಮಾಡುತ್ತೇವೆಂದು ಹೇಳಿದ್ದೀರಿ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೆ, ಈಗ ಅದರ ಸಾಫ್ಟ್‌ವೇರ್ ಮತ್ತು log in system ಅನ್ನು ಸಿದ್ಧ ಮಾಡಿ, ಅದು ಈಗಾಗಲೇ ಜಾರಿಯಾಗಿದೆ, ನಿನ್ನೆಯಿಂದ ಅದು ಪ್ರಾರಂಭವಾಗಿದೆ. ಅವರೆಲ್ಲರೂ log in ಆಗಬೇಕು, log in ಆದಾಗ ಅವರ ಒಂದು latitude and longitude ಅಂದರೆ, ಅವರು ಯಾವ ಒಂದು ಸ್ಥಳದಿಂದ log in ಆಗಿದ್ದಾರೆಂದು ನಮಗೆ ಗೊತ್ತಾಗುತ್ತದೆ. ಈಗ ಗ್ರಾಮೀಣ ಭಾಗದಲ್ಲಿ ಯಾವುದೇ ಒಂದು ಸಣ್ಣ ಊರು ಇರಬಹುದು, ಗ್ರಾಮ ಇರಬಹುದು, ನಗರ ಪ್ರದೇಶ ಇರಬಹುದು, ಎಲ್ಲಿಂದ log in ಆಗಿದೆ ಎಂದು ಗೊತ್ತಾಗುತ್ತದೆ. ಅದು ಈಗ ಪ್ರಾರಂಭವಾಗಿದೆ. ಅದನ್ನು ಸ್ಟ್ರೀಮ್‌ಲೈನ್ ಮಾಡಿದ್ದೇವೆ. ಪ್ರಾರಂಭವಾಗಿದೆ. ಅದರ ಮುಖಾಂತರವೇ ಈಗ ನಾವು attendance ತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೆ, ಮತ್ತೆ ಸ್ನಾತಕೋತ್ತರ ಪದವಿ ಪಡೆದವರು 158 ಜನರು ಇದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೆ, 903 ರಲ್ಲಿ...

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೆ, ಅದು ವೈದ್ಯಾಧಿಕಾರಿಗಳ ವಿಚಾರ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೆ, ಕಾರ್ಯನಿರ್ವಹಿಸುತ್ತಿರುವ 677 ರಲ್ಲಿ 158 ಹುದ್ದೆಗಳು ಸಹ ಸೇರಿಕೊಳ್ಳುತ್ತದೆ. ಆದ್ದರಿಂದ, ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ

ಆಗಿಂದಾಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರದ ಮಟ್ಟದಲ್ಲಿ ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿ ಬೇಕಾಗುತ್ತದೆ. ಅಲ್ಲಿಂದ ಬಂದ ಮೇಲೆ ಈ ಕೆಲಸವನ್ನು ನಾವು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 701**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನಿಲ್ ವಲ್ಯಾಪುರ್(ವಿಧಾನಸಭಾ ಕ್ಷೇತ್ರ):-**ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದು ರಾಜ್ಯದಲ್ಲಿ ಅನೇಕ ರೈತಾಪಿವರ್ಗದವರ ಮತ್ತು ಊರಿನ ಜನತೆಯ ಸಮಸ್ಯೆಗಳ ವಿಷಯವಾಗಿದೆ. ಈ ಎಲ್ಲಾ ಕೆಲವು ಅರಣ್ಯ ಭೂಮಿ ಎಂದು ಹೇಳಿ, ಸುಮಾರು ದಶಕಗಳಿಂದ ಅಂದರೆ 30 ವರ್ಷಗಳಿಂದ ಇಲ್ಲಿಯವರೆಗೆ ಯಾವಾಗ ಸುಪ್ರೀಂ ಕೊರ್ಟ್ ಇವರಿಗೆ ಎಚ್ಚರಿಕೆಯ ಗಂಟೆ ಕೊಡುತ್ತದೆ. ಎಚ್ಚರಿಕೆಯ ಗಂಟೆ ಕೊಟ್ಟಾಗ ಸುಪ್ರಿಂ ಕೋರ್ಟ್‌ನ ಆದೇಶದ ಆಧಾರದ ಮೇಲೆ ಇವತ್ತು ತಾತ್ಕಾಲಿಕವಾಗಿ ಈ Forest Settlement Officer ಗಳನ್ನು ನೇಮಕ ಮಾಡಿದ್ದಾರೆ. ಇದು ತಾತ್ಕಾಲಿಕವಾಗಿ Forest Settlement Officer ಗಳನ್ನು ನೇಮಕ ಮಾಡಿದರೆ, ಅವರುಗಳು ಯಾವ ರೀತಿ ನ್ಯಾಯ ಕೊಡಲಿಕ್ಕೆ ಸಾಧ್ಯ ಇದೆ. ಇವತ್ತು ಕಲಂ 1ರಿಂದ 17ರಲ್ಲಿ.... ಇಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ 17 ಬರಲಿಲ್ಲ. ಇನ್ನೂ ಸಹ ಕಲಂ 3 ಮತ್ತು 4 ರಲ್ಲಿಯೇ ಮತ್ತು 5 ರಲ್ಲಿಯೇ ಇದ್ದಾರೆ. ಕಲಂ 17ಕ್ಕೆ ಬರುವುದು ಯಾವಾಗ? ಮಾನ್ಯ ಸಚಿವರು ಸರ್ಕಾರದಿಂದ ಉತ್ತರವನ್ನು ಒದಗಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ ಎಂದು ಹೇಳುತ್ತಾರೆ. ಸುಪ್ರೀಂ ಕೋರ್ಟ್ ಇವರಿಗೆ ಸ್ಪಷ್ಟವಾದ ಆದೇಶವನ್ನು ಯಾವ ರೀತಿ ಕೊಟ್ಟಿದೆ ಎಂದರೆ ಸೆಟ್ಲಮೆಂಟ್‌ಗೋಸ್ಕರ ಹೇಳಿದೆ. ಆದರೆ, ಅಧಿಕಾರಿಗಳನ್ನು ನೇಮಕ ಮಾಡಲಿಕ್ಕೆ ಇವರಿಗೆ ಸುಪ್ರೀಂ ಕೋರ್ಟ್ ಹೇಳಲಿಲ್ಲ. ತಾತ್ಕಾಲಿಕ ಆಧಾರದ ಮೇಲೆ ನಿವೃತ್ತ ಅಧಿಕಾರಿಗಳನ್ನು ತೆಗೆದುಕೊಳ್ಳಲಿಕ್ಕೆ,Karnataka Forest Act ನ Section 1 to 17 ನಲ್ಲಿ ಏನು ಹೇಳಲಾಗುತ್ತದೆ ಎಂದರೆ, Quasi-judicial Sub-Divisional Officer ಅಲ್ಲಿ ಇರಬೇಕು. Assistant Commissioner cadre ನ ಒಬ್ಬ ಅಧಿಕಾರಿ ಇರಬೇಕು. ಅದನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ಕೆಲವು ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಿ ತೆಗೆದುಕೊಂಡರೆ ಅವರ ಕಡೆಯಿಂದ ಏನಾದರೂ ನ್ಯಾಯ ಸಿಕ್ಕುತ್ತದೆಯೇ? ನಿವೃತ್ತ ಅಧಿಕಾರಿಯಾಗಿರುವ ಅವರಿಗೆ ಏನು ಜವಾಬ್ದಾರಿ ಇರುತ್ತದೆ.? ಪ್ರತಿ ತಿಂಗಳು ತಾತ್ಕಾಲಿಕವಾಗಿ ಒಂದು ಸಂಬಳ ಇರುತ್ತದೆ, ತಾತ್ಕಾಲಿಕವಾಗಿ ಏನಾದರೊಂದು ಆದೇಶ ಮಾಡಿ ಹೋಗಿರುತ್ತಾರೆ. ಮಾಡಿ ಹೋದರೂ ಸಹ ಎಲ್ಲಾ ಜಿಲ್ಲೆಗಳಿಗೂ ಅಂದರೆ, ಇದು ರಾಜ್ಯದ ಸಮಸ್ಯೆ ಆಗಿದೆ. ಹೀಗಾಗಿ, ಇವತ್ತಿನ ದಿವಸ ರೈತರು ಅರಣ್ಯ ಭೂಮಿಯನ್ನು ಹಿಂದಿನ ಮೈಸೂರು ಮಹಾರಾಜರ ಕಾಲದಿಂದ ಹಿಡಿದುಕೊಂಡು, ನಿಜಾಮರ ಕಾಲದಿಂದ ಹಿಡಿದುಕೊಂಡು ಸುಮಾರು ದಶಕಗಳಿಂದ ಅವರುಗಳಿಗೆ ಸರ್ಕಾರದಿಂದಲೇ ಗ್ರಾಂಟ್ ಅನ್ನು ಕೊಟ್ಟಿದೆ. ಆದೇಶ ಮಾಡಿದೆ. ಅವುಗಳೆಲ್ಲವೂ ಅರಣ್ಯ ಭೂಮಿ ಎಂದು ಹೇಳಿ ಸೇರಿಸಿಕೊಂಡಿದ್ದಾರೆ. ಅದನ್ನು ಕಲಂ 4 ರಲ್ಲಿ ಹಾಕಿದ್ದಾರೆ, ಹೀಗಾಗಿ, ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಈ ಸಮಸ್ಯೆ ಬಹಳವಾಗಿ ಎದುರಾಗುತ್ತಿದೆ. ಈ ವಿಚಾರವಾಗಿ ನಾನು ಮಾನ್ಯ ಸಭಾಪತಿಯವರ

ಮೂಲಕ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ತಾತ್ಕಾಲಿಕವಾಗಿ ಏನು ಈ ನೇಮಕ ಮಾಡಿದ್ದಾರೆ, ಇದರ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

**ಶ್ರೀ ಈಶ್ವರ್ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೆ, ಇವತ್ತು ಅರಣ್ಯ ಇಲಾಖೆಯಲ್ಲಿ ಸೆಕ್ಷನ್ 4, ಅಧಿಸೂಚನೆ ಹೊರಡಿಸಿದಂತಹ ಪ್ರಕರಣಗಳು ಸುಮಾರು 1038 ಇದೆ. 1038 ರಲ್ಲಿ ಜಿಲ್ಲಾಧಿಕಾರಿಗಳ ಹತ್ತಿರ 286 ಪ್ರಕರಣಗಳಿವೆ. ಇವತ್ತು ನಮ್ಮ ಅರಣ್ಯ ಇಲಾಖೆಯ ಹತ್ತಿರ 44 ಪ್ರಕರಣಗಳಿವೆ. ಸರ್ಕಾರಕ್ಕೆ 28 ಪ್ರಕರಣಗಳನ್ನು ಕೊಟ್ಟಿದೆ. ಸೆಕ್ಷನ್ 17 ಎಂದರೆ ಇದು ಸಂರಕ್ಷಿತ ಅರಣ್ಯ ಪ್ರದೇಶ ಎಂದು ಹೇಳಿ Reserve Forest ಎಂದು ಆಗಿದ್ದು, ಅದಕ್ಕೆ ಸಂಬಂಧಿಸಿದ 47 ಪ್ರಕರಣಗಳಿವೆ. ಇನ್ನು 752 ಪ್ರಕರಣಗಳು ಬಾಕಿ ಇವೆ. ಈ ಪ್ರಕರಣಗಳನ್ನು ನೋಡಿದರೆ 752 ಪ್ರಕರಣಗಳು ಏನಿವೆ, ಸುಮಾರು ದಶಕಗಳಿಂದ ಅಲ್ಲ, ಶತಮಾನದಿಂದಲೂ ಇವೆ. ಇವತ್ತು ಹೇಳಬೇಕೆಂದರೆ 1924ರಿಂದ ಸೇರಿ ಇಲ್ಲಿಯವರೆಗೆ ಹೀಗೆಯೇ ಬಂದಿದೆ.

ಮಾನ್ಯ ಸಭಾಪತಿಯವರೆ, 2018ರಲ್ಲಿ ಸರ್ವೋಚ್ಛ ನ್ಯಾಯಾಲಯದಲ್ಲಿ ಒಂದು ಪ್ರಕರಣ ಬರುತ್ತದೆ, ಅ ಪ್ರಕರಣದಲ್ಲಿ ಎಷ್ಟು ಇವತ್ತು ಮೀಸಲು ಅರಣ್ಯ ಪ್ರದೇಶ ಆಗಿದೆ ಎಂದು ಹೇಳಿ ಸರ್ವೋಚ್ಛ ನ್ಯಾಯಾಲಯ, ಪರಾಮರ್ಶೆ ಮಾಡುವಂತಹ ಸಂದರ್ಭದಲ್ಲಿ ಬಹಳ ವಿಳಂಬ ಆಗುತ್ತಿದೆ ಎಂದು ಹೇಳಿ, ಅಸಮಾಧಾನ ವ್ಯಕ್ತಪಡಿಸಿ, ಇವತ್ತು ನೀವು ತಾತ್ಕಾಲಿಕವಾಗಿದ್ದು, ಈ ಬಗ್ಗೆ ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಸೂಚಿಸಿರುತ್ತದೆ. ನಮ್ಮ ರಾಜ್ಯದ ಕಂದಾಯ ಇಲಾಖೆಯಲ್ಲಿ ಹಿಂದೆ ಎ.ಸಿ.ಗಳಿಗೆ ಅಧಿಕಾರ ಕೊಡಲಾಗಿತ್ತು. ಸೆಕ್ಷನ್-4 ಮಾಡಿದ ನಂತರ ಸೆಕ್ಷನ್-5-6 ಮಾಡಿ ಸೆಕ್ಷನ್ 17ರವರೆಗೆ ಯಾರು ಯಾರು ಅರಣ್ಯವಾಸಿಗಳಿದ್ದಾರೆ, ಅವರಿಗೆ ಏನೇನು ಹಕ್ಕುಗಳಿವೆ, ಆ ಹಕ್ಕುಗಳೆಲ್ಲವನ್ನು ತೀರ್ಮಾನ ಮಾಡಬೇಕೆನ್ನುವುದರ ಬಗ್ಗೆ ಅದನ್ನು ಮಾಡಬೇಕೆಂದರೆ ಸಮಯ ಹಿಡಿಯುತ್ತದೆ. ಹೀಗಾಗಿ, ಅವರು ಯಾರು ಸಹ ಏನು ರೆಗ್ಯುಲರ್ ಎ.ಸಿ.ಗಳಾಗಿ ನೇಮಕ ಹೊಂದಿರುತ್ತಾರೆ, ಆ ಎಲ್ಲಾ ಎ.ಸಿ.ಗಳು ಇವತ್ತು ನಿರ್ಲಕ್ಷ್ಯ ಎನ್ನಬಹುದು ಅಥವಾ ಅವರಿಗೆ ಕೆಲಸದ ಒತ್ತಡದಿಂದ ಈ ಒಂದು ಕಾರ್ಯಕ್ಕೆ ಅವರಿಗೆ ಸಮಯ ಕೊಡದೇ ಇದ್ದ ಕಾರಣದಿಂದ ಇಂತಹ ಪ್ರಕರಣಗಳು ದಶಕದಿಂದ ಬಹಳ ದಿವಸಗಳವರೆಗೆ ನನೆಗುದಿಗೆ ಬಿದ್ದಿದೆ ಎಂದು ತಿಳಿದುಕೊಂಡು 2019 ರಲ್ಲಿ ಸರ್ಕಾರದ ವತಿಯಿಂದ ಒಂದ ಕರ್ನಾಟಕ ಅರಣ್ಯ ಕಾಯಿದೆಯಲ್ಲಿ ಒಂದು ಅಧಿಸೂಚನೆ ಹೊರಡಿಸಿ, ನಮ್ಮಲ್ಲಿ ಇರುವಂತಹ ಎಲ್ಲಾ ಪ್ರಕರಣಗಳು ತ್ವರಿತಗತಿಯಲ್ಲಿ ತೀರ್ಮಾನವಾಗಬೇಕೆಂದು ಹೇಳಿ ಅಧಿಸೂಚನೆ ಹೊರಡಿಸುತ್ತಾರೆ.

**ಸಭಾಪತಿಯವರು:-** ಸಚಿವರೆ, ನಿವೃತ್ತಿಯಾದವರನ್ನು ನೇಮಿಸಿರುವುದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿ, ಅದು ಸರಿಯೋ ತಪ್ಪೋ ಎಂದು ಕೇಳಿದ್ದಾರೆ. ಅದರ ಬಗ್ಗೆ ನೀವು ಹೇಳಿ.

**ಶ್ರೀ ಈಶ್ವರ್ ಬಿ. ಖಂಡ್ರೆ:-** ಸನ್ಮಾನ್ಯ ಸಭಾಪತಿಯವರೆ, ವ್ಯವಸ್ಥಾಪನಾ ಅಧಿಕಾರಿಗಳಗೆ ನಿವೃತ್ತ ಎ.ಸಿ.ಗಳನ್ನು ನಾವು ನೇಮಕ ಮಾಡಿ ಈಗ ಸೆಕ್ಷನ್ 4 ರಿಂದ ಸೆಕ್ಷನ್ 17 ರವರೆಗೆ ಪರಿಶೀಲನೆ ಮಾಡಿ ವರದಿ ಸಲ್ಲಿಸಲಿಕ್ಕೆ ಹೇಳಿದ್ದೇವೆ.

(ಮುಂದು.)

(577) 22.07.2024 11.30 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ ಖಂಡ್ರೆ (ಮುಂದು):-**

ಒಂದು ವರ್ಷದಲ್ಲಿ ಹಿಂದೆ ಆಗದ ರೀತಿಯಲ್ಲಿ 10 ಸಾವಿರ ಎಕರೆ ಈಗಾಗಲೇ ರಿಸರ್ವ್ ಫಾರೆಸ್ಟ್ ಎಂದು ಘೋಷಣೆಯಾಗಿದೆ. 10 ಜನರಲ್ಲಿ 8 ಜನ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದಷ್ಟು ಶೀಘ್ರದಲ್ಲಿ ಇದನ್ನು ಮಾಡಲಿಕ್ಕೆ ಅವರಿಗೆ ಸೂಚನೆ ಕೊಟ್ಟಿದ್ದೇವೆ. ಈಗ ಕಾನೂನುಬದ್ಧವಾಗಿ, ನಿಯಮಬದ್ಧವಾಗಿ ಅವರನ್ನು ಹಂಗಾಮಿ ಎ.ಸಿ. ಆಗಿ ನಿಯುಕ್ತಿಗೊಳಿಸಿದ್ದೇವೆ.

**ಶ್ರೀ ಸುನಿಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ.

**ಸಭಾಪತಿಯವರು:-** ಅದೇ ಹೇಳುತ್ತಿದ್ದೇನೆ. ಮಾನ್ಯ ಸಚಿವರೆ, ಅವರು ನಿವೃತ್ತ ಅಧಿಕಾರಿಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಸುನಿಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೆ, ನಾನು ನಿವೃತ್ತ ಅಧಿಕಾರಿಗಳನ್ನು ನೇಮಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂದು ಕೇಳಿದ್ದು, ಅದಕ್ಕೆ ಇದೆ ಎಂದು ಉತ್ತರಿಸಿದ್ದಾರೆ. ಕಾನೂನಿನಲ್ಲಿ ಇಲ್ಲ. ಯಾವ ಅರಣ್ಯ ಕಾಯಿದೆಯಲ್ಲಿಯೂ ನಿವೃತ್ತ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಉಲ್ಲೇಖ ಇಲ್ಲ. ಎರಡನೆಯದಾಗಿ, ಸುಪ್ರೀಂ ಕೋರ್ಟ್ ಶೀಘ್ರವಾಗಿ ಮಾಡಬೇಕೆಂದು ಹೇಳಿಲ್ಲ. ಇವರು ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಹಾಕಿದ್ದಾರೆ. ನಾವೆಲ್ಲಾ ಇಷ್ಟು ದಿನದಲ್ಲಿ ಈ ಪ್ರಕರಣಗಳನ್ನು ಇತ್ಯರ್ಥ ಮಾಡಬೇಕೆಂದು ತಾತ್ಕಾಲಿಕ ಹುದ್ದೆಗಳನ್ನು ನೇಮಕ ಮಾಡಿಕೊಂಡಿದ್ದಾರೆ. ನಮ್ಮ ಸರ್ಕಾರ ಇರಬಹುದು, ಅವರ ಸರ್ಕಾರ ಇರಬಹುದು. ಇದು ಬಹಳ ದಶಕಗಳಿಂದ ಬಂದಿರತಕ್ಕಂತಹ ಸಮಸ್ಯೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ temporary ಆಗಿರತಕ್ಕಂತಹ ಅಧಿಕಾರಿಯನ್ನು ಅಲ್ಲಿ ನೇಮಕ ಮಾಡಿದರೆ ಮುಂದೊಂದು ದಿನ ಯಾರಾದರೂ ಕೋರ್ಟ್‌ಗೆ ಹೋಗುತ್ತಾರೆ. ಅದು ಕೋರ್ಟ್‌ನಲ್ಲಿ ಇತ್ಯರ್ಥ ಆಗುವುದಿಲ್ಲ. ಮತ್ತೆ ಅದು ಬಾಕಿ ಉಳಿಯುತ್ತದೆ. ಆದಕಾರಣ

ಇದನ್ನು ರದ್ದು ಮಾಡಬೇಕು. ತಾತ್ಕಾಲಿಕವಾಗಿ ಈ ಹುದ್ದೆಗಳಿಗೆ ತೆಗೆದುಕೊಂಡಿರುವುದು ನ್ಯಾಯಯುತವಾದುದಲ್ಲ ಮತ್ತು ಯಾವುದೇ ಕಾನೂನಿನಲ್ಲಿಯೂ ಇಲ್ಲ. ಅರಣ್ಯ ಇಲಾಖೆಯ ಕಾನೂನಿನಲ್ಲಿಯೂ ಇಲ್ಲ. ಎಲ್ಲಿಯೂ ಇಲ್ಲ.

ಇದರ ಜೊತೆಯಲ್ಲಿ ನನ್ನದೊಂದು ಉಪ ಪ್ರಶ್ನೆ ಇದೆ. ಒಂದು ಎಕರೆಯಿಂದ ಮೂರು ಎಕರೆಯವರೆಗೆ ಜಮೀನಿರುವ ರೈತರಿಗೆ ನಾವು ತೊಂದರೆ ಕೊಡುವುದಿಲ್ಲ ಎಂದು ತಾವು ಹೇಳಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅದರ ಬಗ್ಗೆ ಕೂಡ ಮಾನ್ಯ ಸಚಿವರು ಸ್ಪಷ್ಟತೆಯನ್ನು ಕೊಡಬೇಕೆಂದು ನಾನು ಅವರಲ್ಲಿ ಕೇಳುತ್ತೇನೆ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಿಕ್ಕೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲ ಎಂದು ಹೇಳಿದ್ದಾರೆ. ಕರ್ನಾಟಕ ಅರಣ್ಯ ಕಾಯಿದೆ 1963 ಮತ್ತು ನಿಯಮ 69ರಂತೆ ಮುಂದುವರೆದ ಅರಣ್ಯ ವ್ಯವಸ್ಥಾಪನೆ ಕಾರ್ಯ ಮಾಡಲು ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಹುದ್ದೆಗಳನ್ನು ವಿಶೇಷವಾಗಿ ತಾತ್ಕಾಲಿಕವಾಗಿ ಸೃಜಿಸಿ ನೇಮಕ ಮಾಡುವ ಕುರಿತು ಎಂದು 2019ರಲ್ಲಿ ಆದೇಶ ಆಗಿದೆ. ಆದೇಶದ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಅಧಿಕಾರ ಇದೆ ಎಂದೇ ಸರ್ಕಾರ ನಿವೃತ್ತ ಎ.ಸಿ.ಯಾಗಿದ್ದವರನ್ನು ಆ ಹುದ್ದೆಗೆ ನೇಮಕ ಮಾಡಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ನಿವೃತ್ತ ಎ.ಸಿ. ಯಾವ ಊರಿನಲ್ಲಿಯೂ ಇಲ್ಲ. ಸಚಿವರು ಸದನಕ್ಕೆ ಸುಳ್ಳು ಮಾಹಿತಿ ಕೊಡುತ್ತಿದ್ದಾರೆ. ನಿವೃತ್ತ ಆರ್.ಎಫ್.ಓ.ಗಳನ್ನು ನೇಮಕ ಮಾಡಲಾಗಿದೆ. ಸದನದಲ್ಲಿ ಸುಳ್ಳು ಮಾಹಿತಿ ಏಕೆ ಕೊಡುತ್ತೀರಿ?

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೆ, Assistant Commissioner ಗಳಿಗೆ ಮಾತ್ರ ಮಾಡಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೆ, ಸದನದಲ್ಲಿ ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದೀರಿ. ಅಧಿಕಾರಿಗಳು ತಮಗೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನಿವೃತ್ತ ಆರ್.ಎಫ್.ಓಗಳಿದ್ದಾರೆ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೆ, ಅರಣ್ಯ ಇಲಾಖೆ ಅಧಿಕಾರಿಗಳು ನಿವೃತ್ತರಾದ ಮೇಲೆ ಅವರನ್ನು ನೇಮಕ ಮಾಡಲು ಸರ್ಕಾರಕ್ಕೆ ಅಧಿಕಾರವಿದೆ. ಸರ್ಕಾರಕ್ಕೆ ಇರುವ ಅಧಿಕಾರವನ್ನು ಬಳಕೆ ಮಾಡಿಕೊಂಡು...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೆ, ನಿವೃತ್ತ ಎ.ಸಿ.ಗಳನ್ನು ಎಲ್ಲಿಯೂ ನೇಮಕ ಮಾಡಿರುವುದಿಲ್ಲ. ಇದು ಬಹಳ ಗಂಭೀರವಾದಂತಹ ಪ್ರಶ್ನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಅವರು ಹೇಳುತ್ತಿರುವುದಿಷ್ಟೆ. ನಿವೃತ್ತಿಯಾದವರನ್ನು ನೇಮಿಸಿಕೊಂಡಿದ್ದೀರಿ, ಖಾಯಂ ನೇಮಿಸಿಕೊಳ್ಳುತ್ತೀರಾ ಎನ್ನುವುದನ್ನು ಹೇಳಬಿಡಿ. ಚರ್ಚೆಯೇನೂ ಬೇಡ. ನಿವೃತ್ತಿಯಾದವರನ್ನು ತೆಗೆದು ಖಾಯಂ ನೇಮಕಾತಿ ಮಾಡಿಕೊಳ್ಳುತ್ತೀರಾ ಅದನ್ನು ಹೇಳಿ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಮಂಜೂರಾತಿಯಾಗಿರುವ ವ್ಯವಸ್ಥಾಪನಾಧಿಕಾರಿಗಳ ಹುದ್ದೆಗಳು 3. ಆ ಹುದ್ದೆಗಳಿಗೆ ಯಾರೂ ಕಂದಾಯ ಇಲಾಖೆಯ ಅಧಿಕಾರಿಗಳು ಬರಲಿಕ್ಕೆ ತಯಾರಿರಲಿಲ್ಲ. ಎರಡನೆಯದು ಖಾಲಿ ಹುದ್ದೆಗಳಿದ್ದ ಕಾರಣ ಯಾರು ರೆಗ್ಯುಲರ್ ಎ.ಸಿ.ಗಳಿದ್ದಾರೆಯೋ...

**ಶ್ರೀ ಸುನಿಲ್ ವಲ್ಯಾಪುರೆ:-** ಮಾನ್ಯ ಸಚಿವರೆ, ಕಂದಾಯ ಇಲಾಖೆ ಅಧಿಕಾರಿಗಳು ಬರುವುದಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳೂ ಕೆಲಸ ಮಾಡುವುದಿಲ್ಲ ಎಂದರೆ ಏನು? ಇದು ಯಾವ ರೀತಿ ಉತ್ತರ ಕೊಡುತ್ತಿದ್ದೀರಿ.

**ಶ್ರೀ ಈಶ್ವರ ಖಂಡ್ರೆ:-** ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ.

**ಶ್ರೀ ಸುನಿಲ್ ವಲ್ಯಾಪುರೆ:-** ಮಾನ್ಯ ಸಚಿವರೆ, ಕಂದಾಯ ಇಲಾಖೆ ಅಧಿಕಾರಿಗಳು ಬರುವುದಿಲ್ಲ ಎಂದರೆ ಅವರೇನು ನಮ್ಮ ಮನೆಗೆ ಬರುತ್ತಾರೆಯೇ? ನಿಮ್ಮ ಮನೆಗೆ ಬರುತ್ತಾರೆಯೇ? ಅವರು ಸರ್ಕಾರಿ ನೌಕರರು. ಎಲ್ಲಾದರೂ ಬರಲೇಬೇಕು.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೇ, ನಾನು ವಾಸ್ತವಾಂಶವನ್ನು ಸದನದ ಗಮನಕ್ಕೆ ತಂದಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಸೂಕ್ಷ್ಮವಾಗಿ ತಮ್ಮ ಉತ್ತರವನ್ನು ಹೇಳಿ.

**ಶ್ರೀ ಸುನಿಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಇದು ಸರಿಯಾದ ಉತ್ತರ ಅಲ್ಲ.

**ಸಭಾಪತಿಯವರು:-** ನಿಮಗೆ ಸರಿ ಎನಿಸಲಿಲ್ಲ ಎಂದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಬರೆದುಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡಿ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಸಭಾಪತಿಯವರೆ, ನಾನು ಉತ್ತರ ಕೊಟ್ಟಿರುವಂಥದ್ದು ರೈತರ ಹಿತದೃಷ್ಟಿಯಿಂದ ವಿಶೇಷ ಪ್ರಕರಣಗಳು ವಿಲೇವಾರಿಯಾಗಬೇಕು ಎಂದು ಕಾನೂನುಬದ್ಧವಾಗಿಯೇ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡಲಿಕ್ಕೆ ಹೇಳುತ್ತೇನೆ.

**ಪ್ರಶ್ನೆ ಸಂಖ್ಯೆ 757**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿರುವ ಮಸ್ಕಿ, ಲಿಂಗಸಗೂರು, ಕಾರಟಗಿ ತಾಲ್ಲೂಕುಗಳಲ್ಲಿರುವ ಮೂರು ಪಾಲಿಟೆಕ್ನಿಕ್‌ಗಳನ್ನು ಉತ್ತರದಲ್ಲಿ ತೋರಿಸಿದ್ದಾರೆ. 25 ಕಿ.ಮೀ. ಅಂತರದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಿವೆ. ನೀವು ಅಲ್ಲಿಗೆ ಹೋಗಬಹುದು ಎಂದು ತಿಳಿಸಿದ್ದಾರೆ. ಆದರೆ ರಾಜ್ಯದ ಅನೇಕ ಕಡೆಗಳಲ್ಲಿ ಮೂರು ಮೂರು ಪಾಲಿಟೆಕ್ನಿಕ್‌ಗಳನ್ನು ಒಂದೇ ಕಡೆಯಲ್ಲಿ ಕೊಟ್ಟಿದ್ದಾರೆ. ಅದರ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಕೇಳಬಯಸುತ್ತೇನೆ. ನಮ್ಮದು ಹಿಂದುಳಿದ ತಾಲ್ಲೂಕಾ ಪ್ರದೇಶವಾಗಿದೆ. 2017-18ರಲ್ಲಿ ಸಿಂಧನೂರಿಗೆ ಮಂಜೂರಾಗಿದ್ದ ಪಾಲಿಟೆಕ್ನಿಕ್ ಕಾಲೇಜನ್ನು ಪುನಃ ಮಂಜೂರು ಮಾಡಬೇಕು. ನಾವು ಜಾಗವನ್ನು ಒದಗಿಸುತ್ತೇವೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಕೇಳಬಯಸುತ್ತೇನೆ.

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಸುಮಾರು 107 ಸರ್ಕಾರಿ ಪಾಲಿಟೆಕ್ನಿಕ್‌ಗಳಿವೆ. ಅನುದಾನಿತ 43 ಇವೆ. ಖಾಸಗಿ 134 ಇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಸಿಂಧನೂರಿಗೆ ಪಾಲಿಟೆಕ್ನಿಕ್ ಕೊಡುತ್ತೀರೋ ಇಲ್ಲವೋ ಅಷ್ಟು ಹೇಳಿ. ಹಿಂದೆ ಅವೈಜ್ಞಾನಿಕವಾಗಿ ಕೆಲವು ಕ್ಷೇತ್ರಗಳಿಗೆ ಹೆಚ್ಚು ಹೆಚ್ಚು ಪಾಲಿಟೆಕ್ನಿಕ್ ಮಂಜೂರಾಗಿರುವ ಉದಾಹರಣೆಗಳು ನಮ್ಮ ಮುಂದೆ ಇದೆ. ಸರ್ಕಾರ ಈಗಾಗಲೇ ಇದನ್ನು ಗಮನಿಸಿ, ಒಂದು ಅಧಿಕಾರಿಗಳ ಸಮಿತಿಯನ್ನು ಮಾಡಿದೆ. ಎಲ್ಲೆಲ್ಲಿ ಅವಶ್ಯಕತೆ ಇದೆ, ಪಾಲಿಟೆಕ್ನಿಕ್‌ಗಳ ನಡುವೆ ಅಂತರ ಇದೆ, ಬೇರೆ ಅನುದಾನಿತ ಅಥವಾ ಖಾಸಗಿ ಪಾಲಿಟೆಕ್ನಿಕ್ ಇದೆಯೇ ಇವೆಲ್ಲವನ್ನು ಪರಿಶೀಲನೆ ಮಾಡಿ ವರದಿ ಕೊಟ್ಟ ನಂತರ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬುದನ್ನು ಮುಂದೆ ತೀರ್ಮಾನ ಮಾಡುತ್ತೇವೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೆ, ಇದು ಮಂಜೂರಾಗಲಿಕ್ಕೆ ಏನೇನು ಮಾನದಂಡಗಳು ಇರಬೇಕು?

**ಸಭಾಪತಿಯವರು:-** ಈಗ ಸಮಿತಿಯನ್ನು ರಚಿಸಿದ್ದು, ಸಮಿತಿಯ ಮುಂದೆ ಸಿಂಧನೂರಿನ ಹೆಸರು ಬಂದರೆ ಆಗ ಕೊಡುತ್ತಾರೆ. ಅದಕ್ಕೆ ಏನು ಬೇಕೋ ಅದನ್ನು ಮಾಡಿ.

**ಪ್ರಶ್ನೆ ಸಂಖ್ಯೆ 574**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಕಲಬುರಗಿ ನಗರದಲ್ಲಿ 23 ನಕಲಿ ವೈದ್ಯರು, ಚಿಂಚೋಳಿಯಲ್ಲಿ 6, ಚಿತ್ತಾಪುರದಲ್ಲಿ 2, ಜೇವರ್ಗಿಯಲ್ಲಿ 8, ಅಳಂದದಲ್ಲಿ 12, ಸೇಡಂ ತಾಲ್ಲೂಕಿನಲ್ಲಿ 4 ನಕಲಿ ವೈದ್ಯರನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಸದರಿಯವರ ಕ್ಲಿನಿಕ್ ಅನ್ನು ಮುಚ್ಚಿಸಿ ದಂಡ ವಿಧಿಸಲಾಗಿದೆ ಎಂದು ಹೇಳಿದ್ದಾರೆ. ದಿನಾಂಕ 22.05.2024ರಂದು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಸಭೆ ನಡೆಸಿ 58 ನಕಲಿ ವೈದ್ಯರಿಗೆ ಒಟ್ಟು ರೂ.25,60,000/- ಗಳ ದಂಡ ವಿಧಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇದು ಅಷ್ಟೇನೂ ಸಮಂಜಸವಾದ ಉತ್ತರವಲ್ಲ. ಮುಚ್ಚಿಸಿದ್ದೇವೆ ಎಂದು ನೀವು ಹೇಳುತ್ತಿದ್ದೀರಿ. ಆದರೆ ಅವು ಕೆಲಸ ಪ್ರಾರಂಭ ಮಾಡುತ್ತಿವೆ. ಒಂದೇ ಒಂದು ನಕಲಿ ವೈದ್ಯರ ಆಸ್ಪತ್ರೆ ಯಾವುದೂ ಮುಚ್ಚಿಲ್ಲ. ಅಲ್ಲಿ ನೂರಾರು ಮಂದಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಅವರಿಗೆ ಯಾವುದೇ ನಿರ್ಬಂಧವಿಲ್ಲ.

ಮಾನ್ಯ ಸಭಾಪತಿಯವರೆ, ನನಗೆ ಎರಡು ನಿಮಿಷ ಹೆಚ್ಚಿಗೆ ಮಾತನಾಡಲಿಕ್ಕೆ ಸಮಯ ಕೊಡಿ.

**ಸಭಾಪತಿಯವರು:-** ನಕಲಿ ವೈದ್ಯರ ಬಗ್ಗೆ ಮಾತನಾಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರದಲ್ಲಿ ಏನು ಸೌಲಭ್ಯಗಳಿವೆಯೋ, ಆ ಸೌಲಭ್ಯಗಳನ್ನು ನಮ್ಮ ಕಲಬುರಗಿ ನಗರದಲ್ಲಿ ಕೂಡ ಮಾನ್ಯ ಶರಣಪ್ರಕಾಶ ಪಾಟೀಲರು ನೀಡಿದ್ದಾರೆ. ವೈದ್ಯಕೀಯ ಸೇವೆಯಲ್ಲಿ ಏನೂ ತೊಂದರೆ ಇಲ್ಲ. ಆದರೆ ಈ ನಕಲಿ ವೈದ್ಯರ ಹಾವಳಿ ನಿರಂತರವಾಗಿ ನಡೆಯುತ್ತಿದೆ. ಕಡು ಬಡತನವಿರುವ ಜನ ವಾಸಿಸುವ ಕಡೆಗಳಲ್ಲಿ ಇವರು ತಮ್ಮ ಕ್ಲಿನಿಕ್ ಪ್ರಾರಂಭಿಸಿ, ಅವರಿಗೆ ಇಂಜೆಕ್ಷನ್ ಕೊಡುತ್ತಾರೆ. ಅವೈಜ್ಞಾನಿಕವಾಗಿ ಗ್ಲೂಕೋಸ್ ಕೊಡುವುದು, ಭ್ರೂಣಹತ್ಯೆ ಮುಂತಾದವು ನಡೆಯುತ್ತಿದೆ. ನಕಲಿ ವೈದ್ಯರ ಬಳಿ ಹೋಗಿ ಇಂಜೆಕ್ಷನ್ ಪಡೆದ ರೋಗಿಯ ಪರಿಸ್ಥಿತಿ ನಾಲ್ಕೈದು ದಿನಗಳ ನಂತರ ವಿಷಮಗೊಂಡು ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೆ.

(ಮುಂದು)

(578) 22-07-2024 (11.40) ಕೆಜಿ ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ಮುಂದು):-**

ಅಲ್ಲಿ ಅವನು ಸಾವನ್ನು ಅಪ್ಪುತ್ತಾನೆ. ಇದೇರೀತಿ ನಕಲಿ ವೈದ್ಯರ ಬಳಿ injection ಅನ್ನು ಪಡೆದುಕೊಂಡು ಮನೆಗೆ ಬಂದ 4-5 ದಿವಸಗಳಲ್ಲಿ ಹೃದಯಾಘಾತದಿಂದ ಸಾವನ್ನು ಅಪ್ಪುತ್ತಿದ್ದಾರೆ. ಈ ನಕಲಿ ವೈದ್ಯರಿಂದ ಹೃದಯಾಘಾತಗಳು ಹೆಚ್ಚಿಗೆ ಆಗುತ್ತಿವೆ. ಇದಕ್ಕೆ ಅಲ್ಲಿನ DHO ರವರು ಮುಖ್ಯ ಕಾರಣ. DHO ರವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. DHO ರವರು ಅವರಿಗೆಲ್ಲರಿಗೂ support ಮಾಡುತ್ತಾರೆ. ಅದಕ್ಕೆ ಮಾನ್ಯ ಸಚಿವರು ಈ ನಕಲಿ ವೈದ್ಯರ ಸಲುವಾಗಿ ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯಿಂದ ಅಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿಸಿ ಅವರಿಂದ ವರದಿ ತರಿಸಿಕೊಂಡು ನಿರ್ದಾಕ್ಷಿಣ್ಯವಾದಂತಹ ಕ್ರಮಗಳನ್ನು ಕೈಗೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ಸಾಕು ಬಿಡಿ. ಮಾನ್ಯ ಸಚಿವರು ಉತ್ತರ ಹೇಳಲಿ. ನಂತರ ತಾವು ಕೇಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಎರಡು ನಿಮಿಷ. ಮಾನ್ಯ ಸಚಿವರು ನಕಲಿ ವೈದ್ಯರಿಗೆ ಒಂದು ಲಕ್ಷ ರೂಪಾಯಿಗಳ ದಂಡ ಹಾಕಿದ್ದೇವೆಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ಸಾಕು ಬಿಡಿ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ, ತಾವು ಕೇಳಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ಒಂದು ಮುಖ್ಯವಾದ ವಿಷಯದ ಮೇಲೆ ಪ್ರಸ್ತಾಪ ಮಾಡಿದ್ದಾರೆ. ಆದರೆ. ಮಾನ್ಯ ಸದಸ್ಯರು ಬಹುಶಃ ಸ್ವಲ್ಪ ಆಧಾರಗಳನ್ನು ಇಟ್ಟುಕೊಂಡು ಹೇಳಿದರೆ, ಬಹಳ ಒಳ್ಳೆಯದು ಎಂದು ಅನಿಸುತ್ತದೆ. ಏಕೆಂದರೆ, ಅವರು ನೂರಾರು ಜನರು ಅಲ್ಲಿ ತೀರಿಕೊಂಡಿದ್ದಾರೆಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಸದಸ್ಯರು ಸ್ಪಷ್ಟವಾದ ಆಧಾರಗಳನ್ನು ಇಟ್ಟುಕೊಂಡು ಹೇಳಿದರೆ ಒಳ್ಳೆಯದು. ಏಕೆಂದರೆ, ನೂರಾರು ಜನರು ಅಲ್ಲಿ ತೀರಿಕೊಂಡಿದ್ದಾರೆಂದರೆ, ಇದು ಗಾಬರಿ ಪಡಿಸುವಂತಹ ವಿಚಾರವಾಗಿಬಿಡುತ್ತದೆ. ನಮ್ಮ ಇಡೀ ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ಇವೆ. ಇದನ್ನು ನಿಯಂತ್ರಣ ಮಾಡುವಂಥದ್ದು ನಮ್ಮ ಜವಾಬ್ದಾರಿಯಾಗಿದೆ. ಈಗಾಗಲೇ ಇದರ ಬಗ್ಗೆ ತೆಗೆದುಕೊಂಡಿರುವಂತಹ ಕ್ರಮಗಳ ಬಗ್ಗೆ ಹೇಳಿದ್ದೇನೆ. ಇದುವರೆಗೂ ಸುಮಾರು ರೂ.25,60,000/- ದಂಡವನ್ನು ವಿಧಿಸಲಾಗಿದೆ. ಎಲ್ಲೆಲ್ಲಿ ನಕಲಿ ವೈದ್ಯರು ಕ್ಲಿನಿಕ್‌ಗಳನ್ನು ನಡೆಸುತ್ತಿದ್ದರು, ಅವುಗಳನ್ನು ಮುಚ್ಚಿಸಿದ್ದೇವೆ. ಈ ರೀತಿ ಕಲಬುರಗಿ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ. ಇದರ ಬಗ್ಗೆ ಮುಂದಿನ ದಿವಸಗಳಲ್ಲಿ ಖಂಡಿತವಾಗಿ ಇನ್ನೂ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾರು Allopathy practice ಮಾಡುತ್ತಾರೆ,

ಅವರು ಹಾಕುವ ಅದರ ಫಲಕ blue colour board ನಲ್ಲಿ ಇರಬೇಕೆಂದು ಹೇಳಿದ್ದೇವೆ. ಅದೇರೀತಿ Ayush ಇಲಾಖೆಯಲ್ಲಿ ಯಾರು ಯಾರು ಕೆಲಸ ಮಾಡುತ್ತಾರೆ, ಅವರ ಒಂದು Nursing Home ಇರಬಹುದು, ಆಸ್ಪತ್ರೆ ಇರಬಹುದು ಅದರ ಫಲಕ green colour board ನಲ್ಲಿ ಇರಬೇಕೆಂದು ಹೇಳಿದ್ದೇವೆ. ಒಂದು blue ಮತ್ತು ಇನ್ನೊಂದು green ಬಣ್ಣದಲ್ಲಿ ಇರಬೇಕೆಂದು ಹೇಳಿದ್ದೇವೆ. ಆ ವೈದ್ಯರು ಯಾವ ರೀತಿಯ ವೈದ್ಯಕೀಯ practice ಅನ್ನು ಮಾಡುತ್ತಿದ್ದಾರೆಂದು ಸ್ಪಷ್ಟವಾಗಿ ಇದರಿಂದ ಗೊತ್ತಾಗಬೇಕೆಂದು ಮಾಡಿದ್ದೇವೆ. ಇದರಿಂದ ನಮಗೆ ನಕಲಿ ವೈದ್ಯರನ್ನು ಪತ್ತೆಹಚ್ಚಲು ಸುಲಭವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನಕಲಿ ವೈದ್ಯರಿಗೆ ಕೆಂಪು ಬಣ್ಣದ ಫಲಕದ board ಹಾಕಬೇಕೆಂದು ಮಾಡಿ. Blue colour board ಹಾಕಿದರೆ, ಯಾರೂ ನೋಡುವುದಿಲ್ಲ. ಕೆಂಪು ಬಣ್ಣದ board ಅನ್ನು ಹಾಕಿದರೆ ಎಲ್ಲರಿಗೂ ಗೊತ್ತಾಗುತ್ತದೆ. ನಾನು ಖರೆ ಹೇಳುತ್ತಿದ್ದೇನೆ. ಕೆಂಪು ಬಣ್ಣದ board ಅನ್ನು ಹಾಕಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ತಮ್ಮ ಸಲಹೆಯನ್ನು ಅಧಿಕೃತವಾಗಿ ಸ್ವೀಕಾರ ಮಾಡುತ್ತೇವೆ. ಅದರ ಜೊತೆಗೆ ಅವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇನ್ನು ತೀವ್ರ ಕ್ರಮ ಎಂದರೆ, ಅಂತಹವರ ವಿರುದ್ಧ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ jail ಶಿಕ್ಷೆ ಆಗುವಂತಹದ್ದು ಸಹ ಇದೆ. ನಕಲಿ ವೈದ್ಯರ ವಿರುದ್ಧ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಶಿಕ್ಷೆಯಾಗುವಂತಹದ್ದನ್ನು ಸಹ ಇಲಾಖೆಗೆ ತಿಳಿಸಲಾಗಿದೆ. ಎಲ್ಲೆಲ್ಲಿ ಇಂತಹ ಪ್ರಕರಣಗಳು ಕಂಡುಬರುತ್ತವೆ, ಅವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿ ಅವರಿಗೆ ನ್ಯಾಯಾಲಯದ ಅನುಸಾರ ಏನು ಶಿಕ್ಷೆಯಾಗಬೇಕು ಅದನ್ನು ಕೂಡ ಮಾಡುವುದಕ್ಕೆ ಇಲಾಖೆಯವರಿಗೆ ತಿಳಿಸಿದ್ದೇನೆ. ಇಷ್ಟು ವಿಷಯಗಳನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ತಮ್ಮ ಕಡೆ specific ಆಗಿ ಯಾವುದಾದರೂ ಇದ್ದರೆ ಹೇಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ನಾನು ಜವಾಬ್ದಾರಿ ಮನುಷ್ಯನಾಗಿರುವುದರಿಂದ, ನಾನು authentic ಆಗಿ ಮಾತನಾಡುತ್ತೇನೆ. Authentic ಆಗಿ ಇಲ್ಲದೇ, ನಾನು ರಾಜಕೀಯವಾಗಿ ಮಾತನಾಡುವುದಿಲ್ಲ. ಅದು ನನ್ನ ಜಾಯಮಾನ ಅಲ್ಲ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೇ, ತಾವು ಪ್ರಶ್ನೆ ಕೇಳಿ. ಮಾನ್ಯ ಸಚಿವರು ಅದರ ಬಗ್ಗೆ ಕ್ರಮತೆಗೆದುಕೊಳ್ಳುತ್ತಾರೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ಸುಮಾರು 4-5 patient ಗಳಿಗೆ injection ಮಾಡಿದ್ದರಿಂದ, ಅವರಿಗೆ ಕಿಡ್ನಿ ತೊಂದರೆಯಾಗಿದ್ದು, ಅವರ ಶರೀರ ಉಬ್ಬಿಕೊಂಡಿತ್ತು. ನಂತರ ಅವರನ್ನು ಶ್ರೀ ಬಸವೇಶ್ವರ ಆಸ್ಪತ್ರೆಗೆ ಸೇರಿಸಿದ್ದರು. ಆ ರೋಗಿಗಳು ಬಹಳ serious ಆಗಿಬಿಟ್ಟಿದ್ದರು. ಅದರಲ್ಲಿ 2-3

ಜನರು ಸತ್ತುಹೋದರು. ನಮ್ಮದೇ ಸರ್ಕಾರ ಇರುವುದರಿಂದ ನಾನು ಇದರ ಬಗ್ಗೆ ಪತ್ರಿಕೆಗಳ ಮುಖಾಂತರ ಹೇಳುವುದಕ್ಕೆ ಹೋಗಲಿಲ್ಲ. ಮಾನ್ಯ ಸಚಿವರು ಪ್ರಮಾಣಿಕವಾಗಿರುವುದರಿಂದ, ಅವರಿಂದ ಇದು ಸಾಧ್ಯವಾಗುತ್ತದೆ. ಇಲ್ಲವೆಂದರೆ, ಮತ್ತೊಮ್ಮೆ ಅಷ್ಟು ಮಂದಿಗೆ renewal ಮಾಡಿಬಿಡಲಿ. ಯಾವುದೇ ನಕಲಿ ಕ್ಲಿನಿಕ್‌ಗಳನ್ನು ಮುಚ್ಚಿಲ್ಲ. ನಾನು ಮಾನ್ಯ ಸಚಿವರಿಗೆ ಇದನ್ನು ಸಾಬೀತು ಮಾಡಿ ತೋರಿಸುತ್ತೇನೆ. ಈಗ ಮಾನ್ಯ ಸಚಿವರು ನಕಲಿ ವೈದ್ಯರ ಕ್ಲಿನಿಕ್‌ಗಳನ್ನು ಮುಚ್ಚಿಸಿದ್ದೇವೆಂದು ಹೇಳಿದ್ದಾರೆ. ಆದರೆ, ಅವರೆಲ್ಲರೂ ನಿರಂತರವಾಗಿ ರಾಜಾರೋಷವಾಗಿ ಕ್ಲಿನಿಕ್‌ಗಳನ್ನು ತೆರೆಯುತ್ತಿದ್ದಾರೆ. ಅವರೆಲ್ಲರೂ ಸಾಮಾನ್ಯವಾಗಿ ಸರ್ಕಾರಿ ಆಸ್ಪತ್ರೆಯ ಮಗ್ಗುಲಲ್ಲಿಯೇ ಇರುತ್ತಾರೆ. ಅವರಿಗೆಲ್ಲಾ ಸರ್ಕಾರಿ ಆಸ್ಪತ್ರೆಯಿಂದ tablets ಗಳು ಸರಬರಾಜು ಆಗುತ್ತವೆ. ಇವೆಲ್ಲಾ ನಡೆದಿವೆ. ಅದಕ್ಕೆ ನಾನು ಜನರ ಜೀವ ಉಳಿಸಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರು ನಕಲಿ ವೈದ್ಯರ ವಿರುದ್ಧ ಎಫ್‌ಐಆರ್ ಹಾಕುತ್ತೇವೆ, ದಂಡ ವಿಧಿಸಿದ್ದೇವೆಂದು ಹೇಳಿದ್ದಾರೆ. ಆದರೆ, ಅವರ ವಿರುದ್ಧ ಎಫ್‌ಐಆರ್ ಮಾಡಿದ್ದರೂ ಸಹ, ನಕಲಿ ವೈದ್ಯರು ಇಲ್ಲಿಯವರೆಗೆ ಯಾರೂ ಸಹ ಜೈಲಿಗೆ ಹೋಗಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಿ ಗುಲ್ಬರ್ಗಾಕ್ಕೆ ನುರಿತ ವೈದ್ಯರ ತಂಡವನ್ನು ಕಳುಹಿಸಿಕೊಟ್ಟು, ಅಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಪರಿಶೀಲನೆ ಮಾಡಿ ಅವರಿಂದ ವರದಿಯನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು. ಸಾಕು ಬಿಡಿ. ತಾವು ಭಾಷಣ ಮಾಡಬೇಡಿ. ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವರದಿಯನ್ನು ತೆಗೆದುಕೊಂಡು ನಕಲಿ ವೈದ್ಯರ ಹಾವಳಿಯನ್ನು ತಡೆಗಟ್ಟುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ತಪ್ಪು ಚಿಕಿತ್ಸೆಯಿಂದ ಯಾರಿಗಾದರೂ ತೊಂದರೆಯಾಗುವಂತಹದ್ದು ಬಹಳ ಗಂಭೀರವಾದಂತಹ ವಿಷಯ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ನಾಟಿ ವೈದ್ಯರು ಇದ್ದಾರೆ. ಅಲ್ಲದೇ, ಪಾರಂಪರಿಕ ವೈದ್ಯ ಪದ್ಧತಿಗಳ practice ಮಾಡುವವರೂ ಇದ್ದಾರೆ. ಅವರು Ayush ವ್ಯಾಪ್ತಿಗೂ ಬರುವುದಿಲ್ಲ ಹಾಗೂ Medical Council ವ್ಯಾಪ್ತಿಗೂ ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನಕಲಿ ವೈದ್ಯರ ಬಗ್ಗೆ ಹೇಳಿ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಕಲಿ ವೈದ್ಯರ ಪರವಾಗಿ ಕೆಲವರು ವಕಲಾತ್ತು ವಹಿಸುವವರು ಇದ್ದಾರೆ. ನಾವು ಯಾರನ್ನಾದರೂ ಅರೆಸ್ಟ್ ಮಾಡಿ ಪ್ರಕರಣ ದಾಖಲಿಸಿದಂತಹ ಸಂದರ್ಭದಲ್ಲಿ ಅನೇಕ ಜನಪ್ರತಿನಿಧಿಗಳು ಬಂದು ಅವರು ನಾಟಿ ವೈದ್ಯ ಪದ್ಧತಿಯನ್ನು ಮಾಡುತ್ತಿದ್ದಾರೆ, ಅವರಿಂದ ತೊಂದರೆಯಾಗುತ್ತಿಲ್ಲ. ಅವರನ್ನು ಬಿಟ್ಟುಬಿಡಿ ಎಂದು ಹೇಳುತ್ತಾರೆ. ಕೆಲವು ನಿಜವಾದಂತಹ ನಾಟಿ ವೈದ್ಯ ಪದ್ಧತಿಗಳನ್ನು ತಿಳಿದುಕೊಂಡು

ಮಾಡುವವರು ಇದ್ದಾರೆ. ನಾವು ಎಲ್ಲೋ ಒಂದು ಕಡೆ ಅದನ್ನು ಒಂದು ಕಾರ್ಯವ್ಯಾಪ್ತಿಗೆ ತರಬೇಕಾಗುತ್ತದೆ. ಆದರೆ, ಖಂಡಿತವಾಗಿ ನಕಲಿ ವೈದ್ಯರಿಂದ ಜನರಿಗೆ ಹಾನಿಯಾಗುತ್ತಿದೆ. ಅದರ ಬಗ್ಗೆ ಇನ್ನು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಅಲ್ಲದೇ, ಮಾನ್ಯ ಸದಸ್ಯರು ಅಲ್ಲಿನ DHO ರವರ ಬಗ್ಗೆ ಹೇಳಿದ್ದಾರೆ. ಅಲ್ಲಿನ DHO ರವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಗಮನ ಹರಿಸುತ್ತೇನೆ. ಒಂದು ವೇಳೆ ಅವರು ಏನಾದರೂ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದರೆ, ಖಂಡಿತವಾಗಿಯೂ ಅವರ ವಿರುದ್ಧವೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ನಾನು ಮಾನ್ಯ ಸದಸ್ಯರ ಜೊತೆಗೆ ಚರ್ಚೆ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರ ಬಳಿ ಏನಾದರೂ ಮಾಹಿತಿ ಇದ್ದರೆ, ಅದನ್ನು ತೆಗೆದುಕೊಂಡು ಮತ್ತೆ ನಕಲಿ ವೈದ್ಯರುಗಳು ಏನಾದರೂ ಕ್ಲಿನಿಕ್‌ಗಳನ್ನು ಓಪನ್ ಮಾಡಿದ್ದರೆ, ಅವುಗಳನ್ನು ಬಂದ್ ಮಾಡಿಸಿ ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ **ಡಾ॥ ಯತೀಂದ್ರರವರ ಪ್ರಶ್ನೆ ಸಂಖ್ಯೆ 70 (657)** ಅನ್ನು ಕೃಷಿ ಇಲಾಖೆಗೆ ವರ್ಗಾಯಿಸಲಾಗಿದೆ.

**ಪ್ರಶ್ನೆ ಸಂಖ್ಯೆ 649**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಅನುದಾನರಹಿತ ಉಪನ್ಯಾಸಕರ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೇನೆ. ನಾನು ಕೇಳಿರುವಂತಹ ಮೂರು ಪ್ರಶ್ನೆಗಳಲ್ಲಿಯೂ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡುವಂತಹ ಶಿಕ್ಷಕರಿಗೆ ಆರೋಗ್ಯ ಸಂಜೀವಿನಿ ಯೋಜನೆಯನ್ನು ಸಂಪೂರ್ಣವಾಗಿ ಹಾಗೂ ಅವರ ಕುಟುಂಬಕ್ಕೂ ಸಹ ಕೊಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು. ಜೊತೆಗೆ ಇದನ್ನು ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರಿಗೂ ವಿಸ್ತರಿಸುತ್ತೇವೆಂದು ಅವರ ಚುನಾವಣಾ ಪ್ರಾಣಾಳಿಯಲ್ಲಿ ಹೇಳಿದ್ದರು. ಮಾನ್ಯ ಸಿದ್ದರಾಮಯ್ಯನವರು ಕಳೆದ ಬಾರಿ ಮುಖ್ಯಮಂತ್ರಿಗಳಾಗಿದ್ದಾಗಲೂ ಸಹ ಹೇಳಿದ್ದರು, ಈಗಲೂ ಹೇಳಿದ್ದಾರೆ. ಅದು ಒಳ್ಳೆಯ ಬೆಳವಣಿಗೆ. ಸರ್ಕಾರಿ/ಅನುದಾನಿತ ಎನ್ನುವಂತಹದ್ದನ್ನು ಪ್ರತಿಯೊಂದು ಆದೇಶಗಳು ಅದೇರೀತಿ ಆಗಬೇಕೆಂದು ಸರ್ಕಾರ ಆದೇಶ ಮಾಡಿದೆ. In spite of this order also ನಮ್ಮ ಮಕ್ಕಳಲ್ಲಿ, ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ shoes ಕೊಡುತ್ತಾರೆ, uniform ಕೊಡುತ್ತಾರೆ. ಅದೇರೀತಿ ಅನುದಾನಿತ ಶಾಲೆಯಲ್ಲಿ ಓದುವ ಮಕ್ಕಳಿಗೂ ಕೊಡಬೇಕೆಂದು ಕೇಳಿದರೆ, ಅವರಿಗೆ ಇವತ್ತಿನವರೆಗೂ uniform and shoes ಯಾವುದು ಕೊಡುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಅನುದಾನರಹಿತ ಶಿಕ್ಷಕರಿಗೆ ವೇತನದ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅದನ್ನು add ಮಾಡಿದೆ ಅಷ್ಟೇ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದರ ಬಗ್ಗೆ ಬೇಡ. ತಾವು ನೇರವಾಗಿ ಇಷ್ಟೇ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ ತಾವು ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದೀರಿ. ತಮಗೆ ಇದರ ಬಗ್ಗೆ ಅಗಾಧ ಅನುಭವ ಇದೆ. ಹಾಗಾಗಿ, ಇದರ ಬಗ್ಗೆ ಸ್ವಲ್ಪ ಚಾಟಿ ಬೀಸಿ ನನ್ನ ಸಹಾಯಕ್ಕೆ ಬರುತ್ತೀರೇನೋ ಎಂದು ಇದನ್ನು ಜ್ಞಾಪಕ ಮಾಡಿದೆ ಅಷ್ಟೇ. ಬೇರೆ ಏನಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಅವರಿಗೆ ವೇತನ ಕೊಡಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅನುದಾನರಹಿತ ಶಾಲೆಗಳಲ್ಲಿ ಕೆಲಸ ಮಾಡುವಂತಹವರನ್ನು ಕೋವಿಡ್ ಸಂದರ್ಭದಲ್ಲಿ ಇರಬಹುದು, ಚುನಾವಣೆಯ ಕರ್ತವ್ಯಗಳಲ್ಲಿ ಇರಬಹುದು, ಮೌಲ್ಯಮಾಪನದ ಕರ್ತವ್ಯಗಳಲ್ಲಿ ಇರಬಹುದು ಹಾಗೂ examination duty ಇರಬಹುದು, ಈ ರೀತಿಯ ಕರ್ತವ್ಯಗಳಿಗೆ ಇವರನ್ನು ಬಳಸಿದ್ದೇವೆ. ಆದರೆ, ಆ ಶಿಕ್ಷಕರು ಬೇರೆ ಅಲ್ಲ. ಈ ಶಿಕ್ಷಕರು ಬೇರೆ ಅಲ್ಲ. It is a constitutional right. ಶಿಕ್ಷಣ ಮತ್ತು ಆರೋಗ್ಯ ಎರಡು Constitution ನಲ್ಲಿ ಇದೆ. ಈ ನಾಡಿನ ಪ್ರತಿಯೊಬ್ಬ

ಕಟ್ಟಕಡೆಯ ಮನುಷ್ಯನಿಗೂ ಕೂಡ ಉಚಿತವಾದ ಶಿಕ್ಷಣ ಮತ್ತು ಆರೋಗ್ಯ ಕೊಡಬೇಕೆಂದು ನಮ್ಮ ಸಂವಿಧಾನದಲ್ಲಿ ಇದೆ.

(ಮುಂದು)

(579) 22-07-2024 (11.50) ಎಂವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಹಾಗಾಗಿ, ಮಾನ್ಯ ಸಚಿವರಿಗೆ ನಾನು ಕೇಳುತ್ತಿರುವುದು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಇರುವಂತಹವರಿಗೂ ಕೂಡ ಇದನ್ನು ದಯಮಾಡಿ ವಿಸ್ತರಿಸಬೇಕು. ಇದು ಏನು ದೊಡ್ಡ ವಿಚಾರವಲ್ಲ. ನಾವು ಆರೋಗ್ಯ ಯೋಜನೆ ಕೊಡಿ ಎಂದು ಕೇಳುತ್ತಿದ್ದೇವೆ. ಉಚಿತ ಆರೋಗ್ಯ ಯೋಜನೆಯನ್ನು ಅನುದಾನರಹಿತ, ಅನುದಾನಿತ ಮತ್ತು ಸರ್ಕಾರಿ ಶಿಕ್ಷಕರಿಗೆ ಕೊಡುವಂತಹ ವಿಚಾರದಲ್ಲಿ it is a constitutional right. ನಾವು ಆ right ಅನ್ನು ಕೊಡಿ ಎಂದು ಕೇಳುತ್ತಿದ್ದೇನೆ. ಈಗ ಕೋವಿಡ್-19 ಸಮಯದಲ್ಲಿ hundreds of teachers ತೀರಿ ಹೋದರು. ನಾನು ಆ ಸರ್ಕಾರ ಈ ಸರ್ಕಾರವೆಂದು ಹೇಳುವುದಿಲ್ಲ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, as of now, ನಮ್ಮ ಇಲಾಖೆಯಲ್ಲಿ ಅನುದಾನರಹಿತ ಶಿಕ್ಷಣ ಸಂಸ್ಥೆಯವರಿಗೆ ಕೊಡತಕ್ಕಂತಹ ಯಾವುದೇ ರೀತಿಯ ವ್ಯವಸ್ಥೆ ಇಲ್ಲ. ಆದರೆ, ಈಗ ಮಾನ್ಯ ಸದಸ್ಯರು ತಿಳಿಸಿದ್ದಾರೆ. ನಾನು ಅದನ್ನು ಗಮನಕ್ಕೆ ತೆಗೆದುಕೊಂಡು, ಅದು ಯಾವ ರೀತಿ ಆಗುತ್ತೋ ಇಲ್ಲವೋ ಎಂದು ನೋಡಿಕೊಂಡು ಚರ್ಚೆ ಮಾಡಿ, ಅದನ್ನು ಮಾಡಬೇಕು. ಏಕೆಂದರೆ, ಅದಕ್ಕೆ ಆರ್ಥಿಕ ಹೊಣೆ ಎಷ್ಟು ಬರುತ್ತದೆಂದು ನೋಡಿಕೊಂಡು ಮಾಡಬೇಕು. ಇದು ಒಂದು ಒಳ್ಳೆಯ suggestion. ಅದಕ್ಕೆ ನಾನು ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ, ಅದನ್ನು ಮುಂದುವರೆಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕೆ ಸ್ವಾಗತಾರ್ಹ. ಮಾನ್ಯ ಸಚಿವರು ದಯಮಾಡಿ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಲಿ.

**ಸಭಾಪತಿಯವರು:-** ಸರಿ, ಮಾನ್ಯ ಸಚಿವರು ಅದನ್ನು ಒಪ್ಪಿದ್ದಾರೆ.

**ಪ್ರಶ್ನೆ ಸಂಖ್ಯೆ: 707**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ಚಂದ್ರಶೇಖರ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, 2012 ರಿಂದ ಇಲ್ಲಿಯವರೆಗೆ ಸುಮಾರು 12 ವರ್ಷಗಳ ಕಾಲದಿಂದ ಪ್ರೌಢಶಾಲಾ ಸಹ ಶಿಕ್ಷಕರಿಗೆ ಮತ್ತೆ ಕಾಲೇಜ್‌ನ ಶಿಕ್ಷಕರಿಗೆ ಯಾರಿಗೂ ಸಹ ಬಡ್ತಿ ಕೊಟ್ಟಿಲ್ಲ. ಹಾಗಾಗಿ, ಮೊನ್ನೆ ನಡೆದಂತಹ ಚುನಾವಣೆಯಲ್ಲಿ ನಾನು ಬಹಳಷ್ಟು ಶಾಲೆಗಳಿಗೆ ಹೋದಂತಹ ಸಂದರ್ಭದಲ್ಲಿ ಪ್ರೌಢಶಾಲೆಯ ಎಲ್ಲಾ ಸಹ ಶಿಕ್ಷಕರುಗಳು ಹೇಳಿದ್ದು ಏನೆಂದರೆ, ಸರ್ ಈಗಾಗಲೇ ಸುಮಾರು ಜನರು ನಿವೃತ್ತಿ ಹೊಂದಿದ್ದಾರೆ. ಮತ್ತೆ 2024ರಲ್ಲಿ ಸಾಕಷ್ಟು ಜನರು ನಿವೃತ್ತಿ ಹೊಂದುತ್ತಿದ್ದಾರೆ. ಅದಕ್ಕೆ ತಾವು ದಯವಿಟ್ಟು, ಈಗ ತಮ್ಮದೇ ಆದಂತಹ ಸರ್ಕಾರ ಮತ್ತು ಸಚಿವರು ಇದ್ದಾರೆ. ಅದಕ್ಕೆ ತಾವು ಈ ಪ್ರಶ್ನೆಯನ್ನು ಎತ್ತಿ ಎಂದು ತಿಳಿಸಿದರು. ಏಕೆಂದರೆ, ನಾನು ಮಾನ್ಯ ಸಚಿವರಿಗೆ ಕೇಳಿದಾಗ, ಅದಕ್ಕೆ ಮಾನ್ಯ ಸಚಿವರು ಡಿ.ಪಿ.ಎ.ಆರ್.ನಿಂದ ಮಾಹಿತಿ ತೆಗೆದುಕೊಂಡು ಮಾಡುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಹಿಂದೆ ಇದ್ದಂತಹ ಸರ್ಕಾರ ಕೂಡ ಇದೇ ರೀತಿಯ ಉತ್ತರವನ್ನು ಒದಗಿಸಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಕಳಕಳಿಯ ಮನವಿ ಮಾಡುತ್ತೇನೆ. ಆದಷ್ಟು ಬೇಗ ಡಿ.ಪಿ.ಎ.ಆರ್. ಕಡೆಯಿಂದ ಶಿಕ್ಷಕರ ಮಾಹಿತಿಯನ್ನು ತೆಗೆದುಕೊಂಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ಈ ವಿಷಯದ ಬಗ್ಗೆ ಕಳೆದ ಬಾರಿ ಡಿ.ಪಿ.ಎ.ಆರ್. ಕಡೆಯಿಂದ ಚರ್ಚೆಯಾಗಿತ್ತು. ಈಗ ಶಾಲೆಗಳಲ್ಲಿ ಏನಾಗುತ್ತದೆಂದರೆ, division wise ಇರುವುದರಿಂದ, ಅದನ್ನು ಒಂದೇ ರೀತಿಯ seniority ಯನ್ನು ಕೊಡುವುದಕ್ಕೆ ಆಗುವುದಿಲ್ಲ. ಈಗ ಡಿ.ಪಿ.ಎ.ಆರ್. ಕಡೆಯಿಂದ ಆದಷ್ಟು ಬೇಗ ಮಾಡಿ ಎಂದು ನಾನೂ ಕೂಡ ಒತ್ತಡವನ್ನು ನೀಡುತ್ತಿದ್ದೇನೆ. ಅದಾದ ಮೇಲೆ ನಾವು ಆದಷ್ಟು ಬೇಗ ಅದನ್ನು ಮಾಡುತ್ತೇವೆ.

**ಡಾ: ಚಂದ್ರಶೇಖರ ಬಸವರಾಜ ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದು ಸುಮಾರು 12 ವರ್ಷಗಳಿಂದ ಇದೆ. ಆದುದರಿಂದ, ಅದನ್ನು ಆದಷ್ಟು ಬೇಗ ತರಿಸಿಕೊಳ್ಳಲಿ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಆಯಿತು, ನಾನು ಅದನ್ನು ತುಂಬಾ speed ಆಗಿ ಮಾಡುತ್ತೇನೆ. ಅದರ ಅವಶ್ಯಕತೆ ಕೂಡ ಇದೆ.

**ಡಾ: ಚಂದ್ರಶೇಖರ ಬಸವರಾಜ ಪಾಟೀಲ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಎಷ್ಟೋ ಜನರು ನಿವೃತ್ತಿ ಹೊಂದಿದ್ದಾರೆ. ಮತ್ತೆ ಈಗಲೂ ಸಹ ನಿವೃತ್ತಿ ಹೊಂದುತ್ತಿದ್ದಾರೆ. ಆದುದರಿಂದ, ದಯವಿಟ್ಟು ಅದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಇದನ್ನು ಆದಷ್ಟು ಬೇಗ ಮಾಡುತ್ತೇವೆ. ಇದರ ಬಗ್ಗೆ ಮಾನ್ಯ ಸದಸ್ಯರು ಸಹ ನನ್ನ ಜೊತೆ ವೈಯಕ್ತಿಕವಾಗಿ ಚರ್ಚೆ ಮಾಡಿದ್ದಾರೆ.

**ಪ್ರಶ್ನೆ ಸಂಖ್ಯೆ: 715**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕಳೆದ ಮೂರು ಅಧಿವೇಶನಗಳಿಂದ ಈ ಪ್ರಶ್ನೆಯನ್ನು ಸರ್ಕಾರಕ್ಕೆ ಮತ್ತೆ ಸಚಿವರಿಗೆ ಕೇಳುತ್ತಾ ಬಂದಿದ್ದೇನೆ. 2020-21ರ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ; ಆಯ್ಕೆಪಟ್ಟಿ ಪ್ರಕಟಣೆಯಾಗಿ, ದಾಖಲೆಗಳ ಪರಿಶೀಲನೆಯು ಬಹುತೇಕ ಪೂರ್ಣಗೊಂಡಿದ್ದರೂ ಸಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಕೊಡದೇ ಇರುವುದಕ್ಕೆ ಕಾರಣವೇನು? ಹೈದ್ರಾಬಾದ್-ಕರ್ನಾಟಕ ವಿಭಾಗದ ಮೀಸಲಾತಿಯ ವಿಷಯವಾಗಿ ಬಂದಂತಹ ಕರ್ನಾಟಕ ಸರ್ಕಾರದ ಸುತ್ತೋಲೆಯನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಎತ್ತಿ ಹಿಡಿದಿದ್ದು, ಇದೇ ವಿಷಯವಾಗಿ ಉಚ್ಛ ನ್ಯಾಯಾಲಯವು ಸಹ ಮಧ್ಯಂತರ ತೀರ್ಪು ನೀಡಿ ನೇಮಕಾತಿ ಆದೇಶ ನೀಡಿದ್ದರೂ ಕೂಡ ನೇಮಕಾತಿ ವಿಳಂಬವಾಗುತ್ತಿದೆ ಹಾಗೆಯೇ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/03/ಹೈಕಕೋ/2019, ದಿನಾಂಕ: 01.02.2023ರ ಆಧಾರದ ಮೇಲೆ ಈಗಾಗಲೇ ಇತರೆ ಇಲಾಖೆಗಳು ಷರತ್ತುಬದ್ಧ ನೇಮಕಾತಿ ಆದೇಶ ಮತ್ತು ತಾತ್ಕಾಲಿಕ ಸ್ಥಳ ನಿಯುಕ್ತಿ ಮಾಡಿ ಆದೇಶ ಮಾಡಿದ್ದರೂ ಸಹಾಯಕ ಪ್ರಾಧ್ಯಾಪಕರಿಗೆ ನೇಮಕಾತಿ ಆದೇಶ ನೀಡುತ್ತಿಲ್ಲದಿರುವುದಕ್ಕೆ ಕಾರಣಗಳೇನು? ಈ ಪ್ರಶ್ನೆಗಳಿಗೆ ಮಾನ್ಯ ಸಚಿವರಿಂದ ಸ್ಪಷ್ಟವಾದಂತಹ ಉತ್ತರ ಬಯಸುತ್ತೇನೆ. ಇದಾದ ನಂತರ ಎರಡು-ಮೂರು ಉಪ ಪ್ರಶ್ನೆಗಳಿವೆ.

**ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಈಗಾಗಲೇ ಹಲವಾರು ಸಂದರ್ಭಗಳಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಈ ಹಿಂದೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದಂತಹ ಸಂದರ್ಭದಲ್ಲಿ ಅಂದಿನ ಸರ್ಕಾರದ ದಿನಾಂಕ: 15.06.2022ರ ಸುತ್ತೋಲೆಯಿಂದ ಈ ಎಲ್ಲಾ ಗೊಂದಲಗಳಿಗೆ ಕಾರಣವಾಗಿದೆ. ಅನಂತರ ಹೈದ್ರಾಬಾದ್-ಕರ್ನಾಟಕದ ಮೀಸಲಾತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ದಿನಾಂಕ: 01.02.2023ರಲ್ಲಿ ಬದಲಾಯಿಸಿಕೊಟ್ಟಂತಹ ಸುತ್ತೋಲೆಗೆ ಸಂಬಂಧಿಸಿದಂತೆ ಕೆ.ಎ.ಟಿ.ಯಲ್ಲಿ ಅದರ ಬಗ್ಗೆ ದಾವೆ ಇತ್ತು. ಈಗ ನಾವು ಅದಕ್ಕೆ ಸರ್ಕಾರದ ಪರವಾಗಿ ಆದೇಶಗಳನ್ನು ಪಡೆದುಕೊಂಡಿದ್ದೇವೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಈ ದಾವೆಯ ಬಗ್ಗೆ ಬಾಕಿ ಇದೆ. ಮಾನ್ಯ ಸದಸ್ಯರು ಇದನ್ನು ಇನ್ನು ಏಕೆ ಪೂರ್ಣ ಮಾಡಿಲ್ಲವೆಂದು ಪ್ರಶ್ನೆಯನ್ನು ಎತ್ತಿದ್ದಾರೆ. ಈಗ ನಮ್ಮ ಮುಂದೆ ಇರತಕ್ಕಂಥದ್ದು ಏನೆಂದರೆ, ಈಗ ಬೇರೆ ಬೇರೆ ಇಲಾಖೆಗಳಲ್ಲಿ ಷರತ್ತುಬದ್ಧವಾದಂತಹ ನೇಮಕಾತಿಯನ್ನು ನೀಡಿದ್ದಾರೆ. ಆದರೆ, ನಾವು ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ rest of Karnataka ದಿಂದ ಏನು ಇವತ್ತು ಆ ಸುತ್ತೋಲೆಯಿಂದ ಹೊರಗೆ ಬಿದ್ದರು, ಅವರು ಇವತ್ತು ಕೋರ್ಟ್‌ನಲ್ಲಿ ಪ್ರಶ್ನೆಯನ್ನು ಮಾಡಿದ್ದಾರೆ. ಆ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ Advocate General

ರವರ opinion ಅನ್ನು ಕೇಳಿದಾಗ, ಅದಕ್ಕೆ ಅವರು ಬಹಳ ಸ್ಪಷ್ಟವಾಗಿ ಏನು ಹೇಳಿದ್ದಾರೆಂದರೆ, ಇದರ ಬಗ್ಗೆ ಏನು ಆದೇಶ ಬರುತ್ತದೆ. ಅದರ ಆಧಾರದ ಮೇಲೆ ಮುಂದೆ ಹೋಗಬೇಕೇ ವಿನಃ, ನೀವು ಬೇರೆ ಇಲಾಖೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡುವುದಕ್ಕೆ ಸಾಧ್ಯವಿಲ್ಲ. ಬೇರೆ ಇಲಾಖೆಗಳಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾಗಿ ಇದೇ ವಿಷಯದ ಮೇಲೆ ಸಮಸ್ಯೆ ಇರಲಿಲ್ಲ. ಈಗಾಗಲೇ ನಾವು ದಾಖಲೆಗಳ ಪರಿಶೀಲನೆ ಮತ್ತೆ ಎಲ್ಲಾ ಪ್ರಕ್ರಿಯೆಗಳನ್ನು ಸಹ ಪೂರ್ಣಗೊಳಿಸಿ ನಾವು ಸಿದ್ಧರಾಗಿದ್ದೇವೆ. ಮತ್ತೊಂದು ಸಮಸ್ಯೆ ಏನೆಂದರೆ, ಈಗ transfer guidelines ಮತ್ತೆ ಕೌನ್ಸಿಲಿಂಗ್ ಪ್ರಕ್ರಿಯೆ ಏನಿದೆ, ಅದರಲ್ಲೂ ಸಹ ಕೆಲವು ಬದಲಾವಣೆಗಳನ್ನು ತರುವಂಥದ್ದನ್ನು ಸಹ ಮಾಡುತ್ತಿದ್ದೇವೆ. ಅಂದರೆ, ಇವತ್ತಿನ ದಿವಸ ಏನು ಸುಮಾರು 1,208 ಸಹ ಪ್ರಾಧ್ಯಾಪಕರ ಹುದ್ದೆಗೆ ಅಭ್ಯರ್ಥಿಗಳು eligible ಇದ್ದಾರೆ, ಅವರಿಗೆ ಕೊಡುವಂಥದ್ದಕ್ಕೆ ಅದರಲ್ಲಿ ಬದಲಾವಣೆ ತರುವಂಥದ್ದಕ್ಕೆ Advocate General ರವರ ಅಭಿಪ್ರಾಯ ಕೇಳಿದ್ದೇವೆ. ಅವರು ತಮ್ಮ ಅಭಿಪ್ರಾಯವನ್ನು ಕೊಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಮೊನ್ನೆಯ ದಿವಸ ಹೈಕೋರ್ಟ್‌ನಲ್ಲಿ ಪ್ರಕರಣವಿತ್ತು. ಎಲ್ಲಾ ಪ್ರಕರಣಗಳನ್ನು ಒಟ್ಟು ಮಾಡಿ, ಮುಂದಿನ ತಿಂಗಳಿನ ಮೂರನೇ ತಾರೀಖಿಗೆ ಪ್ರಕರಣ ಮುಂದಕ್ಕೆ ಹೋಗಿದೆ. ಆದುದರಿಂದ, ಇದು ಒಟ್ಟಾರೆಯಾಗಿ ಇತ್ಯರ್ಥವಾಗದ ಹೊರತು, ನಾವು ಏನಾದರೂ ಇದಕ್ಕೆ ನೇಮಕಾತಿ ನೀಡಿದರೆ, ಇದರ ಬಗ್ಗೆ ಮತ್ತಷ್ಟು legal complications ಅನ್ನು ನಾವೇ ಹುಟ್ಟಿ ಹಾಕಿದಂತೆ ಆಗುತ್ತದೆ. ಇದರಿಂದ ಬಹಳಷ್ಟು ಗೊಂದಲಗಳಿಗೆ ಅವಕಾಶವಿದೆ ಎಂದು ಹೇಳಿ. ಸರ್ಕಾರ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. ಮತ್ತೆ ಸರ್ಕಾರದಿಂದ ಬಹಳ ಎಚ್ಚರಿಕೆಯ ನಡೆಯನ್ನು ಇಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಅದರ ನೇಮಕಾತಿ ಆಗಿದೆಯೋ ಇಲ್ಲವೋ?

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೆ, ನಾವು ನೇಮಕಾತಿಯ ಆದೇಶವನ್ನು ಕೊಟ್ಟಿಲ್ಲ. ಮತ್ತೆ ನೇಮಕಾತಿಯ ಪ್ರಕ್ರಿಯೆ ಪೂರ್ಣಗೊಂಡಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೆ, ಆಗಿದೆ ಎಂದು ತಾವೇ ಹೇಳುತ್ತಿದ್ದೀರಿ. ಮತ್ತೆ ಇಲ್ಲವೆಂದು ಹೇಳುತ್ತಿದ್ದೀರಿ.

**ಡಾ: ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೆ, ಅದರ ಪ್ರಕ್ರಿಯೆಗಳು ಪೂರ್ಣವಾಗಿಲ್ಲ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೆ, ಈ ಹಿಂದೆ ಬೆಳಗಾವಿಯಲ್ಲಿ ನಡೆದಂತಹ ಅಧಿವೇಶನದಲ್ಲೂ ಸಹ ಇದೇ ಉತ್ತರವನ್ನು ನೀಡಿದ್ದರು. ಹಿಂದಿನ ಸರ್ಕಾರ ಎಲ್ಲೋ ಸುತ್ತೋಲೆಯಲ್ಲಿ ತಪ್ಪು ಮಾಡಿದೆ, ಆ ಕಾರಣಕ್ಕಾಗಿ ಇವೆಲ್ಲಾ ಸಂಕಷ್ಟಗಳು ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಇದು ಬಹಳ ಸ್ಪಷ್ಟವಾಗಿ ಹಂತ-ಹಂತವಾಗಿ ಎಲ್ಲಾ ಕೂಡ ಆಗಿದೆ. ಮೊನ್ನೆಯ ದಿವಸ ಮಾನ್ಯ ಉಚ್ಛ ನ್ಯಾಯಾಲಯ ಕೂಡ ಬಹಳ ಸ್ಪಷ್ಟವಾದ ತೀರ್ಪನ್ನು ನೀಡಿದೆ. ಮಾನ್ಯ ಉಚ್ಛ ನ್ಯಾಯಾಲಯ ಈ ರೀತಿ ಹೇಳಿದೆ;

*"Accordingly, the impugned order rendered by the KSAT in Application No.1512-1516/2023 vide Annexure-"B" is stayed. Further, the final selection list dated 03.03.2023 to the post of Assistant Professors vide Annexure-"A9" series is hereby stayed and the interim order of stay is confined to the petitioners only. It is clarified that the respondent/Authority shall not fill up the posts from which the petitioners have been displaced. However, the stay granted in this petition is subject to the result of this petition.*

*It is clarified that the state shall proceed with the counselling. However, the said counselling process shall be subject to the result of these petitions."*

ಇಷ್ಟು ಸ್ಪಷ್ಟವಾಗಿ ಕೋರ್ಟ್ ಆದೇಶವಿದೆ. ಇದಾದ ನಂತರ ನೇಮಕಾತಿಗೆ ಸಂಬಂಧಪಟ್ಟಂತೆ 1,050 ಅಭ್ಯರ್ಥಿಗಳಿಗೆ ಎಲ್ಲಾ ರೀತಿಯ process ಕೂಡ complete ಆಗಿದೆ. ಇಷ್ಟೆಲ್ಲಾ ಆಗಿದ್ದರೂ ಕೂಡ, ಆ ಅಭ್ಯರ್ಥಿಗಳು ಸುಮಾರು ವರ್ಷಗಳಿಂದ ಜಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಅವರು ಹೋರಾಟ ಮಾಡಿರುವುದು ಪತ್ರಿಕೆಗಳಲ್ಲಿ ಒಂದು ದೊಡ್ಡ ಪುಸ್ತಕವೇ ಆಗಿದೆ.

(ಮುಂದು)

(580) 22.07.2024 12.00 LL-BNS (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಸಚಿವರೇ, ಈ ವಿಷಯದಲ್ಲಿ ಮಾನ್ಯ ನ್ಯಾಯಾಲಯದ ಆದೇಶ ಇದೆ, ಎಲ್ಲವೂ ಸರಿಯಾಗಿದೆ. ಹಾಗಾಗಿ, ಅಭ್ಯರ್ಥಿಗಳಿಗೆ ನೇಮಕಾತಿ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಹಾಗಾಗಿ, ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅದರಂತೆ, ತಾವು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಿ.

**ಡಾ: ಎಂ.ಸಿ. ಸುಧಾಕರ್ :-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೋರ್ಟ್ ಆದೇಶದ ಬಗ್ಗೆ ಏನು ಉಲ್ಲೇಖ ಮಾಡಿರುತ್ತಾರೆ, ಅದನ್ನು ನಾನು ಕೂಡ ಓದುತ್ತೇನೆ.

**ಸಭಾಪತಿಯವರು:-** ಅದನ್ನು ಅವರು ಓದಿರುತ್ತಾರೆ. ತಾವು ಕೂಡ ಓದುವುದು ಬೇಡ.

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಕೋರ್ಟ್ ಆದೇಶ ಈ ಕೆಳಕಂಡಂತಿದೆ:

*"It is once again reiterated that the above mentioned directions are being issued as an exceptional measure given the fact that the situation was brought about by reversal of the decisions of the State after the issuance of the Notification."*

ಬೇರೆ ಇಲಾಖೆಯಲ್ಲಿ ಏನು ಆದೇಶವಾಗಿದೆ, ಅದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ, ಈ ವಿಷಯದಲ್ಲಿ ಮಾನ್ಯ ಅಡ್ವೋಕೇಟ್ ಜನರಲ್‌ರವರು ಬಹಳ ಸ್ಪಷ್ಟವಾಗಿ ಅಭಿಪ್ರಾಯ ಕೊಟ್ಟಿರುತ್ತಾರೆ.

**ಸಭಾಪತಿಯವರು:-** ಅದೆಲ್ಲಾ ಬೇಡ. ಈಗ ಇದನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಅಷ್ಟನ್ನು ಮಾತ್ರ ಹೇಳಿ.

**ಡಾ: ಎಂ.ಸಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾವು ಮತ್ತೊಂದು ಬಾರಿ ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯ ಪಡೆಯುತ್ತಿದ್ದೇವೆ. ಏಕೆಂದರೆ, ಈಗಾಗಲೇ ಬೇರೆ ಬೇರೆ ಇಲಾಖೆಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಮಾಡಿದ್ದಾರೆ, ಅದರ ಮೇಲೆ ನಾವು ಮತ್ತೊಮ್ಮೆ ಅಭಿಪ್ರಾಯ ಪಡೆಯುತ್ತಿದ್ದೇವೆ. ಈ ನೇಮಕಾತಿಯಲ್ಲಿ ಸುಮಾರು 44 ಜನ ಹೊರಗುಳಿದಿದ್ದು, ಅವರು ಈ ಪ್ರಶ್ನೆಗಳನ್ನು ಎತ್ತಿರುತ್ತಾರೆ. ರ್‍ಯಾಂಕ್‌ನಲ್ಲಿ ವ್ಯತ್ಯಾಸವಾಗುತ್ತದೆ. ಸದರಿಯವರಿಗೆ ನಾವು ಷರತ್ತುಬದ್ಧ ನೇಮಕಾತಿ ನೀಡಿದರೂ ಸಹ ನಮಗೆ legal complications ಜಾಸ್ತಿಯಾಗುತ್ತದೆ. ಈ ಎಲ್ಲಾ ವಿಚಾರಗಳ ಬಗ್ಗೆ ನಾವು ಅಡ್ವೋಕೇಟ್ ಜನರಲ್‌ರವರ ಜೊತೆ ಮಾತನಾಡಿರುತ್ತೇವೆ. ಸದರಿಯವರು ಆದಷ್ಟು ಬೇಗ ಮತ್ತೊಂದು ಕಾನೂನು ಅಭಿಪ್ರಾಯ ಕೊಡುತ್ತೇವೆಂದು ಹೇಳಿರುತ್ತಾರೆ. ಆ ಅಭಿಪ್ರಾಯದ ಮೇಲೆ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಮ್ಮ ಪ್ರಶ್ನೆ ಸಂಖ್ಯೆ: 592 ಕ್ಕೆ ಮಾನ್ಯ ಸಚಿವರು 20 ದಿವಸ ಕಾಲಾವಕಾಶ ಕೇಳಿರುತ್ತಾರೆ. ಮಾನ್ಯ ಸಚಿವರೇ, ತಾವು ಮಾನ್ಯ ಪುಟ್ಟಣ್ಣನವರ ಪ್ರಶ್ನೆಗೆ 20 ದಿವಸ ಕಾಲಾವಕಾಶ ಕೇಳಿದ್ದೀರಿ, ಆದರೆ ಅಷ್ಟು ದಿವಸ ಸದನ ನಡೆಯುತ್ತದೆಯೇ? ಹಾಗಾಗಿ, ಈ ಸದನ ಮುಗಿಯುವುದರೊಳಗೆ ಅವರ ಪ್ರಶ್ನೆಗೆ ಉತ್ತರ ಒದಗಿಸಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡೆವಳಿಯನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ: 571**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಫೆಬ್ರವರಿ ಮತ್ತು ಮಾರ್ಚ್ ತಿಂಗಳನಲ್ಲಿ ತೊಗರಿಬೇಳೆ ಬಂದಿರುವುದಿಲ್ಲ. ಅದೇ ರೀತಿಯಾಗಿ, ನಾವು ಈಗ ಜುಲೈ ತಿಂಗಳನಲ್ಲಿ ಇದ್ದು, ಕಳೆದ ಜೂನ್ ತಿಂಗಳನಲ್ಲಿ ಶೇಕಡ 50 ರಷ್ಟು ಮಾತ್ರ ತೊಗರಿಬೇಳೆ ಬಂದಿರುತ್ತದೆ. ಅಂದರೆ, 76 ದಿನಗಳಿಗೆ ಆಗುವಷ್ಟು ತೊಗರಬೇಳೆ ಬಂದಿರುತ್ತದೆ. ಹಾಗಾಗಿ, ಮಾನ್ಯ ಸಚಿವರು ಸದರಿ ತೊಗರಿಬೇಳೆಯನ್ನು ಸರಬರಾಜು ಮಾಡುವುದಕ್ಕೆ ಯಾರು ಟೆಂಡರ್ ತೆಗೆದುಕೊಂಡಿರುತ್ತಾರೆ, ಅವರು ಸರಿಯಾದ ರೀತಿಯಲ್ಲಿ ಸರಬರಾಜು ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ):–** ಮಾನ್ಯ ಸಭಾಪತಿಯವರೇ, ಎಲ್ಲಿಯೂ ಕೂಡ ಆ ರೀತಿಯ ವಿಚಾರಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಆದರೆ, ಮೇ ತಿಂಗಳನಲ್ಲಿ ಎರಡು ಬಾರಿ ಟೆಂಡರ್ ಕರೆದಾಗ ಯಾರು ಟೆಂಡರ್ ಹಾಕಿರಲಿಲ್ಲ. ತದನಂತರ, ಟೆಂಡರ್ ಹಾಕಿರುತ್ತಾರೆ. ಆದಾಗ್ಯೂ, ನಮ್ಮಲ್ಲಿ ಬಫರ್ ದಾಸ್ತಾನು ಇದ್ದು, ಕೊರತೆಯಾಗುತ್ತದೆ ಎನ್ನುವಂತಹ ಸಂದರ್ಭ ಉದ್ಭವಿಸದೇ ಇರುವ ರೀತಿ ಯಾವಾಗಲೂ ನೋಡಿಕೊಂಡಿರುತ್ತೇವೆ. ಒಂದು ವೇಳೆ ಆ ರೀತಿಯ ಏನಾದರೂ ಕೊರತೆ ಇದ್ದರೆ, ಮಾನ್ಯ ಸದಸ್ಯರ ಜೊತೆ ಚರ್ಚಿಸಿ, ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಶರಣಗೌಡ ಬಯ್ಯಾಪುರ:–** ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಯಲ್ಲಿ ಏನಾಗಿದೆಯೆಂದರೆ, ಪ್ರಸ್ತುತ ನಾವು ಜುಲೈ ತಿಂಗಳನಲ್ಲಿದ್ದು, ಜೂನ್ ತಿಂಗಳ ದಾಸ್ತಾನನ್ನು ಮೊನ್ನೆಯ ದಿವಸ ಸರಬರಾಜು ಮಾಡಿರುತ್ತಾರೆ. ಅಂದರೆ, ಕೇವಲ 26 ದಿನಗಳಿಗೆ ಆಗುವಷ್ಟು ತೊಗರಿಬೇಳೆಯನ್ನು ಸರಬರಾಜು ಮಾಡಿರುತ್ತಾರೆ. ಈ ಬಗ್ಗೆ ತಮಗೆ ಮಾಹಿತಿ ಇಲ್ಲವೆಂದರೆ, ತಾವು ಅದನ್ನು ಸಂಬಂಧಪಟ್ಟವರಿಂದ ಪಡೆಯಬಹುದಾಗಿದೆ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾಹಿತಿ ತೆಗೆದುಕೊಳ್ಳುತ್ತೇನೆ.

**ಶ್ರೀ ಶರಣಗೌಡ ಬಯ್ಯಾಪುರ:–** ಮಾನ್ಯ ಸಭಾಪತಿಯವರೇ, ಸದರಿ ಮಾಹಿತಿಯನ್ನು ಪಡೆದುಕೊಂಡು ಮುಂದೆ ಈ ರೀತಿ ಕೊರತೆಯಾಗದ ರೀತಿ ನೋಡಿಕೊಳ್ಳಬೇಕು. ಇದರಲ್ಲಿ ಬಫರ್ ದಾಸ್ತಾನು ಎಂದರೆ ಏನು ಎನ್ನುವುದು ಅರ್ಥವಾಗಿರುವುದಿಲ್ಲ.

**ಶ್ರೀ ಎಸ್. ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ಬಫರ್ ದಾಸ್ತಾನು ಎಂದರೆ ನಮ್ಮಲ್ಲಿ ಬಿಸಿಯೂಟಕ್ಕೆ ಅಗತ್ಯವಿರುವ ಆಹಾರ ಧಾನ್ಯಗಳ ದಾಸ್ತಾನು ಇರುವಂಥದ್ದಾಗಿದ್ದು, ಕೊರತೆಯಾದಾಗ ಸದರಿ ಬಫರ್ ದಾಸ್ತಾನಿಂದ ಪೂರೈಕೆ ಮಾಡಬಹುದಾಗಿರುತ್ತದೆ. ಕಳೆದ ಜೂನ್ ತಿಂಗಳನಲ್ಲಿ ಟೆಂಡರ್ ಆಗಿರಲಿಲ್ಲ.

**ಶ್ರೀ ಶರಣಗೌಡ ಬಯ್ಯಾಪುರ:–** ಮಾನ್ಯ ಸಭಾಪತಿಯವರೇ, ಫೆಬ್ರವರಿ ಮತ್ತು ಮಾರ್ಚ್ ತಿಂಗಳನಲ್ಲಿಯೂ ಸಹ ಇದೇ ರೀತಿ ಆಗಿರುತ್ತದೆ. ಸ್ವತಃ ನಾನೇ ಎರಡು ಮೂರು ಶಾಲೆಗಳಿಗೆ ಭೇಟಿ ನೀಡಿದಾಗ ಬಿಸಿಯೂಟದಲ್ಲಿ

ತೊಗರಿಬೇಳೆಯನ್ನು ಕಡಿಮೆ ಪ್ರಮಾಣದಲ್ಲಿ ಬಳಕೆ ಮಾಡಿದ್ದರು. ಈ ಬಗ್ಗೆ ನಾನು ವಿಚಾರಿಸಿದಾಗ, ಮುಂದೆ ನಮಗೆ ದಾಸ್ತಾನು ಬರದೇ ಇದ್ದರೆ ತೊಂದರೆಯಾಗಬಾರದೆಂದು ಇರುವಂತಹ ದಾಸ್ತಾನನ್ನು ಹೊಂದಾಣಿಕೆ ಮಾಡುತ್ತಿದ್ದೇವೆಂದು ಹೇಳಿದರು. ಹಾಗಾಗಿ, ಮುಂದೆ ಈ ರೀತಿ ಆಗದಂತೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಎಸ್. ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಬಿಸಿಯೂಟ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 724**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿರುತ್ತಾರೆ. ಆದರೆ, ನಾನು ಚಿತ್ರದುರ್ಗ ಸರ್ಕಾರಿ ವೈದ್ಯಕೀಯ ಕಾಲೇಜಿಗೆ NMC (National Medical Commission) ಯಿಂದ ಶೋಕಾಸ್ ನೋಟಿಸ್ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಅವರು ಬಂದಿದೆ ಎಂದು ಉತ್ತರ ನೀಡಿರುತ್ತಾರೆ. ಜೊತೆಗೆ, ಸುಮಾರು ನ್ಯೂನತೆಗಳಿರುವುದನ್ನು ಪಟ್ಟಿ ಮಾಡಿ ಕೊಟ್ಟಿರುತ್ತಾರೆ. ಅದಲ್ಲದೇ, ಎನ್‌ಎಂಸಿ ಯು ಸರ್ಕಾರಕ್ಕೆ 15 ಲಕ್ಷ ರೂಪಾಯಿಯನ್ನು ದಂಡವನ್ನು ಸಹ ವಿಧಿಸಿರುತ್ತದೆ. ಸದರಿ ನ್ಯೂನತೆಗಳನ್ನು ಎರಡು ತಿಂಗಳೊಳಗಾಗಿ ಮುಗಿಸಿಲ್ಲವೆಂದರೆ, ಪ್ರಸ್ತುತ 150 ಸೀಟುಗಳು ಈಗಾಗಲೇ ಏನು ದಾಖಲಾತಿಯಾಗಿರುತ್ತದೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಆ ಸಂಖ್ಯೆಯನ್ನು ಕಡಿಮೆ ಮಾಡುತ್ತೇವೆಂಬ ಬಗ್ಗೆ ಬಹಳ ವಿವರವಾದಂತಹ ಶೋಕಾಸ್ ನೋಟಿಸನ್ನು ಕೊಟ್ಟಿರುತ್ತಾರೆ. ಜೊತೆಗೆ, ಮಾನ್ಯ ಮಂತ್ರಿಗಳು, ನೇಮಕಾತಿ ಪ್ರಕ್ರಿಯೆ ಮಾನ್ಯ ನ್ಯಾಯಾಲಯದಲ್ಲಿದೆ ಎಂದು ಮತ್ತೊಂದು ಉತ್ತರ ನೀಡಿರುತ್ತಾರೆ. ಆದರೆ, ನೋಟಿಫಿಕೇಷನ್ ಅನ್ನು ತಪ್ಪು ಮಾಡಿರುವುದರಿಂದ ಅಭ್ಯರ್ಥಿಯೊಬ್ಬರು ಮಾನ್ಯ ನ್ಯಾಯಾಲಯಕ್ಕೆ ಹೋಗಿರುತ್ತಾರೆ. ಹಾಗಾಗಿ, ಇವೊತ್ತಿನ ದಿವಸ 150 ವಿದ್ಯಾರ್ಥಿಗಳು ಏನು ಅಲ್ಲಿ ದಾಖಲಾಗಿರುತ್ತಾರೆ, ಅವರ ಭವಿಷ್ಯ ಇಂದು ಡೋಲಾಯಮಾನವಾಗಿರುವುದರ ಜೊತೆಗೆ, ಮುಂದೆ ವಿದ್ಯಾರ್ಥಿಗಳು ದಾಖಲಾಗುವುದು ಕೂಡ ಸಂಶಯವಾಗಿದೆ. ನನ್ನ ಮೂರನೆಯ ಪ್ರಶ್ನೆಯಲ್ಲಿ ಎಷ್ಟು ಅನುದಾನ ನೀಡಲಾಗಿದೆ ಎಂದು ಕೇಳಿದ್ದು, ಅದಕ್ಕೆ 60 ಕೋಟಿ ರೂಪಾಯಿ ಕೊಟ್ಟಿರುತ್ತಾರೆ ಎಂದು ಉತ್ತರ ನೀಡಿರುತ್ತಾರೆ. ಇದು ಸುಮಾರು 500 ಕೋಟಿ ರೂಪಾಯಿ ಯೋಜನೆಯಾಗಿದ್ದು, 2013ರಲ್ಲಿ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಇದಾದ ನಂತರ, ಸುಮಾರು 6 ಮೆಡಿಕಲ್ ಕಾಲೇಜುಗಳು ಆಗಿರುತ್ತವೆ. ಏತಕ್ಕಾಗಿ ನಮ್ಮ ಜಿಲ್ಲೆಯನ್ನು ಇಷ್ಟೊಂದು ಕಡೆಗಣಿಸುತ್ತಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಡಾ: ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು);-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಬಹಳ ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಅಂದರೆ, ಎನ್‌ಎಂಸಿಯಿಂದ ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯದಲ್ಲಿ ನ್ಯೂನತೆಗಳನ್ನು ಪಟ್ಟಿ ಮಾಡಿಕೊಟ್ಟಿರುವುದನ್ನು ನಾವು ಒಪ್ಪಿಕೊಂಡಿರುತ್ತೇವೆ. ಏಕೆಂದರೆ, ಅದು ಹೊಸ ಕಾಲೇಜಾಗಿದ್ದು, ಕಳೆದ ವರ್ಷ ನಾವೇ ಅದನ್ನು ಪ್ರಾರಂಭ ಮಾಡಿರುತ್ತೇವೆ. ಅಲ್ಲಿ ಇನ್ನು ಕಟ್ಟಡದ ಕೆಲಸ ನಡೆಯುತ್ತಿದೆ. ಸದರಿ ಕೆಲಸ ಏತಕ್ಕೆ ವಿಳಂಬವಾಗಿರುತ್ತದೆ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುತ್ತಾರೆ. ಏಕೆಂದರೆ, ಹಿಂದಿನ ಸರ್ಕಾರದ ಅವಧಿಯಲ್ಲಿ ಆ ಕೆಲಸ ಮಾಡಿರಲಿಲ್ಲ. ಆದರೆ, ನಾವು ಬಂದ ನಂತರ ಆ ಕೆಲಸವನ್ನು ಪ್ರಾರಂಭ ಮಾಡಿಸಿರುತ್ತೇವೆ. ಈಗಾಗಲೇ 60 ಕೋಟಿ ರೂಪಾಯಿಗಳ work progress ಆಗಿರುತ್ತದೆ. ಜೊತೆಗೆ, ಯಾವುದೇ ರೀತಿಯಲ್ಲಿ ನಾವು ಅದನ್ನು ಕಡೆಗಣಿಸುತ್ತಿಲ್ಲ. ಬದಲಾಗಿ, ಈ ಬಗ್ಗೆ ನಾವು ಹೆಚ್ಚು ಆಸಕ್ತಿ

ವಹಿಸಿರುತ್ತೇವೆ. ಅಲ್ಲದೇ, ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ಆರ್ಥಿಕ ಇಲಾಖೆಯಿಂದ ಸಹಮತಿ ಪಡೆದುಕೊಂಡು ನಾವು ಹುದ್ದೆ ನೇಮಕಾತಿಗೆ ಅರ್ಜಿ ಆಹ್ವಾನಿಸಿದ್ದು, ಕೆಲವು ಅಭ್ಯರ್ಥಿಗಳು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದು, ವಿಚಾರಣೆಗೆ ಬಾಕಿ ಇರುತ್ತದೆ. ಈ ಬಗ್ಗೆ ನಾವು ಅಡ್ವೋಕೇಟ್ ಜನರಲ್ ರವರ ಹತ್ತಿರ ಈ ರಿಕ್ವೆಸ್ಟ್ ಮಾಡಿ, ಆದಷ್ಟು ಬೇಗ ಸದರಿ ತಡೆಯಾಜ್ಞೆಯನ್ನು ತೆರವುಗೊಳಸಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಸುವುದಕ್ಕೆ ಅಗತ್ಯ ಕ್ರಮ ಕೈಗೊಂಡಿರುತ್ತೇವೆ. ಈ ವಿಷಯದಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುತ್ತೇವೆಂದು ಅನುಬಂಧದಲ್ಲಿ ಹೇಳರುತ್ತೇವೆ. ಎನ್‌ಎಂಸಿಯವರು ರೈಸ್ ಮಾಡಿರುವಂತಹ ಪಾಯಿಂಟ್ಸ್‌ಗೆ ನಾವು ಉತ್ತರ ಕೊಟ್ಟಿದ್ದೇವೆ. ಹಾಗಾಗಿ, ಈ ವಿಷಯದಲ್ಲಿ ಯಾವುದೇ ರೀತಿಯ ತೊಂದರೆಯಾಗದ ರೀತಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಮತ್ತು ಅದನ್ನು protect ಮಾಡುತ್ತೇವೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವಂತಹ ಉತ್ತರದಲ್ಲಿ ಸದರಿ ಕಾಲೇಜಿನ ಬ್ಲಡ್ ಬ್ಯಾಂಕ್‌ನ ಲೈಸೆನ್ಸ್ ಕೂಡ ನವೀಕರಣ ಮಾಡಬೇಕಾಗಿರುತ್ತದೆ. ಸರ್ಕಾರ ಈ ರೀತಿಯ ಒಂದು ಇನ್‌ಸ್ಟಿಟ್ಯೂಶನ್ ಅನ್ನು ನಡೆಸುತ್ತದೆಯೆಂದರೆ,...

**ಡಾ: ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ನವೀಕರಣವಾಗಿರುತ್ತದೆ. ಅದನ್ನು ಮಾನ್ಯ ಸದಸ್ಯರು ಸ್ವಲ್ಪ ಓದಿಕೊಳ್ಳಬೇಕು.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಪ್ರತಿನಿತ್ಯ 1200 ರಿಂದ 1500 ಜನ ಬರುವಂತಹ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಲೈಸೆನ್ಸ್ ನವೀಕರಣ ಆಗಿಲ್ಲವೆಂದರೆ,...

**ಡಾ: ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಕೊಟ್ಟಿರುವಂತಹ ಉತ್ತರವನ್ನು ಮಾನ್ಯ ಸದಸ್ಯರು ಸರಿಯಾಗಿ ಓದಿಕೊಂಡಿರುವುದಿಲ್ಲ. ನಾವು ಕೊಟ್ಟಿರುವಂತಹ ಅನುಬಂಧದಲ್ಲಿ...

**ಸಭಾಪತಿಯವರು:-** ಈ ಬಗ್ಗೆ ಏನೇನು ಆಗಬೇಕು ಎಂಬುದನ್ನು ತಾವು ಬರೆದುಕೊಡಿ.

**ಡಾ: ಶರಣಪ್ರಕಾಶ್ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದರಿ ಕಾಲೇಜಿನಲ್ಲಿ ಬ್ಲಡ್ ಬ್ಯಾಂಕ್ ಲೈಸೆನ್ಸ್ ನವೀಕರಣ ಆಗಿದ್ದು, ಅದನ್ನು ಅನುಬಂಧದಲ್ಲಿ ಕೊಟ್ಟಿರುತ್ತೇವೆ. ಮಾನ್ಯ ಸದಸ್ಯರು ಅದನ್ನು ಓದಿಕೊಂಡಿರುವುದಿಲ್ಲ. ಅಲ್ಲದೇ, ಈ ವಿಷಯವನ್ನು ಎನ್‌ಎಂಸಿಯವರಿಗೆ ವರದಿ ಸಹ ಮಾಡಲಾಗಿರುತ್ತದೆ. ಹಾಗಾಗಿ, ಇದರಲ್ಲಿ ಯಾವುದೇ ಲೋಪ ಆಗಿರುವುದಿಲ್ಲ. ಈ ವಿಷಯದಲ್ಲಿ ಹಿಂದಿನ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಆದರೆ, ನಾವು ಅಧಿಕಾರಕ್ಕೆ ಬಂದ ಮೇಲೆ ಈ ಕಾಲೇಜನ್ನು ಪ್ರಾರಂಭ ಮಾಡಿರುತ್ತೇವೆ. ಅದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಸದರಿ ಕಾಲೇಜು ಕಟ್ಟಡ ಹಾಗೂ ಮತ್ತಿತರೆ ಕಟ್ಟಡ ಕಾಮಗಾರಿಗೆ ಈಗಾಗಲೇ 60 ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದೆ ಎಂದು ಉತ್ತರ ನೀಡಿರುತ್ತಾರೆ. ಆದರೆ, ಸದರಿ ಕಾಮಗಾರಿಗೆ ಜಿಲ್ಲಾ ಖನಿಜ ನಿಗಮದಿಂದ ಲಿಂಕ್ ಮಾಡಿ ಕೊಡಬೇಕೆಂದು ಇದೆ. ಆದರೆ, ಸದರಿ ಹಣ

ಖರ್ಚು ಮಾಡುವುದಕ್ಕೆ ಸ್ಥಳೀಯ ಶಾಸಕರ ವಿರೋಧವಿದೆ. ಹಾಗಾಗಿ, ಈಗಾಗಲೇ ಕೊಟ್ಟಿರುವ ಹಣವನ್ನು ಜಿಲ್ಲಾ ಖನಿಜ ನಿಗಮದಿಂದ ನೀಡಲಾಗಿದೆಯೇ ಅಥವಾ ಸರ್ಕಾರದಿಂದ ನೀಡಲಾಗಿದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು.

**ಡಾ: ಶರಣಪ್ರಕಾಶ ಆರ್. ಪಾಟೀಲ್:-** ಸದರಿ ಕಾಮಗಾರಿಗೆ ಜಿಲ್ಲಾ ಖನಿಜ ನಿಗಮದಿಂದ ಹಣ ನೀಡಿರುವುದಿಲ್ಲ. ಬದಲಾಗಿ, ಇದು ಸರ್ಕಾರದಿಂದ ನೀಡಿರುವ ಹಣವಾಗಿದೆ.

**ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ: 120**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಸಕ್ತ ವರ್ಷದಿಂದ ಸಾವಿನ ಸಂಖ್ಯೆ ಹೆಚ್ಚುತ್ತಿರುವ ಪ್ರಶ್ನೆಗೆ, ಕೊಟ್ಟಿರುವಂತಹ ಉತ್ತರ ಸತ್ಯಕ್ಕೆ ದೂರವಾಗಿದೆ. ಏಕೆಂದರೆ, ಕೊಪ್ಪಳ ಜಿಲ್ಲಾ ಬೋಧಕ ಆಸ್ಪತ್ರೆಯು tertiary care centre ಆಗಿದ್ದು, ಸುತ್ತಮುತ್ತಲಿನ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೊನೆಯ ಹಂತದ referral case ಗಳು ಬರುತ್ತಿರುತ್ತವೆ ಎಂದು ಹೇಳುವುದು ಒಂದು ಹಾಸ್ಯಾಸ್ಪದವಾಗಿರುತ್ತದೆ. ಏಕೆಂದರೆ, ಕೊಪ್ಪಳ ಜಿಲ್ಲೆಯಲ್ಲಿ ಸುತ್ತಮುತ್ತ ಇರತಕ್ಕಂತಹ ಎಲ್ಲಾ ಕೇಸುಗಳು ಅಲ್ಲಿಯೇ ಬರುವುದು. NICU (Neonatal Intensive Care Unit) ಕೊಪ್ಪಳ ನಗರದಲ್ಲಿ ಒಂದೇ ಇದ್ದು, ಬೇರೆ ಯಾವುದೇ ABark ನೊಂದಾಯಿತ ಆಸ್ಪತ್ರೆಗಳು ಇರುವುದಿಲ್ಲ ಎಂದು ಹೇಳುತ್ತಾರೆ. ಆದರೆ, NICU ಅನ್ನು ಏತಕ್ಕೆ ಹೆಚ್ಚು ಮಾಡಿರುವುದಿಲ್ಲ? ಏಕೆಂದರೆ, ಇಡೀ ಕೊಪ್ಪಳ ಜಿಲ್ಲೆಯಲ್ಲಿ ಅದೊಂದೇ NICU ಆಸ್ಪತ್ರೆ ಇದೆ.

**ಡಾ: ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ನಾವು ಸರಿಯಾಗಿಯೇ ಉತ್ತರ ಕೊಟ್ಟಿದ್ದೇವೆ. NICU ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಇದ್ದು, ಆ ಜಿಲ್ಲೆಯ ಬೇರೆ ಕಡೆ ತಾಲ್ಲೂಕು ಆಸ್ಪತ್ರೆಗಳಲ್ಲಿ NICU ವ್ಯವಸ್ಥೆ ಇರುವುದಿಲ್ಲ. ಹಾಗಾಗಿ, ಏತಕ್ಕಾಗಿ NICU ಆಸ್ಪತ್ರೆಗಳನ್ನು ಜಾಸ್ತಿ ಮಾಡಿರುವುದಿಲ್ಲವೆಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುತ್ತಾರೆ. ಅದಕ್ಕಾಗಿಯೇ, ನಾವು 450 ಬೆಡ್‌ಗಳ ಸಾಮರ್ಥ್ಯದ ಹಾಸ್ಪಿಟಲ್ ಅನ್ನು ಈ ಹಿಂದೆ ನಾನೇ ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದಾಗ ಮಂಜೂರು ಮಾಡಿ, ಈಗ ಅದು 5 ವರ್ಷ ಪೂರ್ಣವಾಗಿರುವುದಿಲ್ಲ. ಆದರೆ, ಈಗ ನಾವು ಪುನಃ ಅಧಿಕಾರಕ್ಕೆ ಬಂದಿದ್ದರಿಂದ, ಅದಕ್ಕೆ ಕ್ಯಾಬಿನೆಟ್ ಅಪ್ರೂವಲ್ ಕೊಡಿಸಿ, ಅದು ಕೇವಲ 3 ತಿಂಗಳಿನಲ್ಲಿ ರೆಡಿಯಾಗಿ, 450 ಹಾಸಿಗೆ ಸಾಮರ್ಥ್ಯದ ಹೊಸ ಆಸ್ಪತ್ರೆಯಲ್ಲಿ ಹೆಚ್ಚಿನ ಸೌಲಭ್ಯವನ್ನು ಒದಗಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

(ಮುಂದು)

(581) 22-07-2024 (12.10) ವೈಎಲ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಇರಬೇಕಾದ ಒಟ್ಟು ಐ.ಸಿ.ಯು ಬೆಡ್‌ಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದೆನು. ಕೇವಲ 7 ಐ.ಸಿ.ಯು. ಬೆಡ್‌ಗಳಿವೆ. ಎಷ್ಟು ಕೇಸ್‌ಗಳು ಬಂದರೂ ಕೂಡಾ ಅವರು ಸ್ವೀಕಾರ ಮಾಡುತ್ತಿಲ್ಲ. ಬಹಳ ತಡೆಹಿಡಿದು ಕೇಸ್‌ಗಳನ್ನು ಕಳುಹಿಸಿಕೊಡುವಂಥ ವ್ಯವಸ್ಥೆಯಾಗುತ್ತಿದೆ. ಎರಡನೆಯದಾಗಿ, ಅಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಐ.ಸಿ.ಯು. ಬೆಡ್‌ಗಳ ಸಮಸ್ಯೆ ಬಹಳ ಇದೆ. ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆ ಕೊಡಲು

ಸುಮಾರು 20 ಐ.ಸಿ.ಯು. ಬೆಡ್‌ಗಳು ಅವಶ್ಯಕವಾಗಿವೆ ಎಂದು ಡಾ॥ ಸುಶೀಲ್ ಕುಮಾರ್‌ರವರು ಕೇಳಿದರೂ ಕೂಡಾ ಐ.ಸಿ.ಯು. ಬೆಡ್‌ಗಳನ್ನು ಹೆಚ್ಚಿಸುವಂಥ ಕೆಲಸವಾಗಿಲ್ಲ. ಕಳೆದ ಸುಮಾರು 03 ತಿಂಗಳಿನಿಂದ ಇವತ್ತಿನವರೆಗೂ ಬಹಳಷ್ಟು ಸಾವುಗಳಾಗಿವೆ. ಒಂದು ವೇಳೆ ಶಸ್ತ್ರಚಿಕಿತ್ಸೆ ಅವಶ್ಯಕತೆ ಇದ್ದ ಪಕ್ಷದಲ್ಲಿ ಸುಮಾರು 03 ತಿಂಗಳವರೆಗೂ ಕಾಯುವಂಥ ವ್ಯವಸ್ಥೆ ಇದೆ. ಮೂರನೆಯದಾಗಿ, ಕೈ-ಕಾಲು ಮುರಿದು ಹೋದ ಪಕ್ಷದಲ್ಲಿ ಅಲ್ಲಿಯೇ ಇರತಕ್ಕಂಥ ಒಬ್ಬ ಹುಡುಗನನ್ನು ಸುಮಾರು 8 ತಿಂಗಳುಗಳಿಂದ ಕಾಯಿಸುವಂಥ ಕೆಲಸವಾಗುತ್ತಿದೆ. ಏತಕ್ಕೆ ಈ ರೀತಿಯಾಗುತ್ತಿದೆ? ಅಲ್ಲಿರುವಂಥ ಅವ್ಯವಸ್ಥೆ ಯಾವ ರೀತಿ ಇದೆ ಎಂಬುದನ್ನು ದಯವಿಟ್ಟು ಮಾನ್ಯ ಸಚಿವರೇ ಬಂದು ಗಮನಿಸಲಿ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಕೊಪ್ಪಳ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ್ದೆನು. ಅಲ್ಲಿ ಏನಾಗಿದೆ ಎಂದರೆ, ಈ ಹಿಂದೆ ನಾವು ಮೆಡಿಕಲ್ ಆಸ್ಪತ್ರೆ ಮಾಡಿದ ಮೇಲೆ district ಆಸ್ಪತ್ರೆಯನ್ನೇ ಆಸ್ಪತ್ರೆಯಾಗಿ ತೋರಿಸಿದ್ದೇವೆ. ಸುಮಾರು 400 ಬೆಡ್‌ಗಳಿಗೆ ಬಹಳ ಒತ್ತಡ ಇದೆ. ಅದಕ್ಕಾಗಿಯೇ ಹಿಂದಿನ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು sanction ಮಾಡಿದ್ದು, ಕಟ್ಟಡ ನಿರ್ಮಾಣ ಈಗ ಮುಗಿಯುವ ಹಂತಕ್ಕೆ ಬಂದಿದೆ. ಸುಮಾರು 05 ವರ್ಷಗಳವರೆಗೂ ಬಹಳ ವಿಳಂಬವಾಗಿತ್ತು. ಈ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿ, ಎರಡು ತಿಂಗಳೊಳಗೆ ಕಟ್ಟಡ ನಿರ್ಮಾಣ ಕೆಲಸ ಮುಗಿಸಬೇಕೆಂದು ಸಮಯವನ್ನು ನಿಗದಿಪಡಿಸಲಾಗಿದೆ. ಹಾಗೆಯೇ ಶಸ್ತ್ರಚಿಕಿತ್ಸೆ ನೀಡುವುದರಲ್ಲಿ ಕೂಡಾ ವಿಳಂಬ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ‘ಕನ್ನಡ ಪ್ರಭಾ’ ದಿನಪತ್ರಿಕೆಯಲ್ಲಿ “ಬಹಳ ಸುದೀರ್ಘವಾಗಿ ಸಮಯವನ್ನು ನೀಡುತ್ತಿದ್ದಾರೆ” ಎಂದು ವರದಿಯಾಗಿದ್ದು, ಇಲಾಖೆಯಲ್ಲಿ ಅದು ನನ್ನ ಗಮನಕ್ಕೆ ಬಂದಿದೆ. ಹಾಗಾಗಿ, ಸಂಬಂಧಪಟ್ಟ ಹೆಚ್.ಓ.ಡಿ. ಯಾರಿದ್ದಾರೆ, ಅವರಿಗೆ ಈಗಾಗಲೇ ವಾರ್ನಿಂಗ್ ನೀಡಲಾಗಿದೆ ಮತ್ತು ಈಗ ಸರಿಪಡಿಸಲಾಗಿದೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಇದು ಮಾತ್ರ ಬಹಳ ಸುಳ್ಳು. ನಾನು ಕಳೆದ 15 ದಿನಗಳ ಹಿಂದೆ ಈ ಪ್ರಶ್ನೆ ಕೇಳಿದ್ದು, ಇಲ್ಲಿಯವರೆಗೂ ಯಾವುದೇ ರೀತಿಯಲ್ಲಿ ಕಾರ್ಯಗತವಾಗಿಲ್ಲ. ಸುಮಾರು 07 ಐ.ಸಿ.ಯು. ಬೆಡ್‌ಗಳು ಇದ್ದು, ಹೆಚ್ಚುವರಿಯಾಗಿ ಅಲ್ಲಿಗೆ ಕಾಮನ್ ಬೆಡ್ ಹಾಕಿದರೆ ಆಗುತ್ತದೆಯೇ?

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ specifically ಏನಾದರೂ ದೂರು ಇದ್ದ ಪಕ್ಷದಲ್ಲಿ ನಾನು ಅವರೊಂದಿಗೆ ಚರ್ಚಿಸಿ, ಸರಿಪಡಿಸುವಂಥ ಕೆಲಸ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂಥ ಪ್ರಶ್ನೆ ಬಹಳ ಮುಖ್ಯವಾದುದಾಗಿದೆ. ದಯವಿಟ್ಟು ಸದನ ಮುಗಿಯುವುದರೊಳಗೆ ಇದಕ್ಕೆ ಉತ್ತರ ಕೊಡಿಸಿ.

**ಸಭಾಪತಿಯವರು:-** ಸದನ ಮುಗಿಯುವುದರೊಳಗೆ ಉತ್ತರ ಕೊಡುವಂತೆ ಈಗಾಗಲೇ ನಾನು ತಿಳಿಸಿದ್ದೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದೀರಿ, ಆದರೆ, ಸರ್ಕಾರ ಉತ್ತರ ಕೊಡಬೇಕಲ್ಲವೇ? ಇದು ಬಹಳ ಮುಖ್ಯವಾದ ವಿಷಯವಾಗಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಪುಟ್ಟಣ್ಣನವರ ಪ್ರಶ್ನೆಗೆ ಸದನ ಮುಗಿಯುವುದರೊಳಗೆ ಉತ್ತರ ಕೊಡಿ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 22ನೇ ಜುಲೈ 2024 ಸಮೂಹ-1 ರಲ್ಲಿನ ಒಟ್ಟು 166 ಪ್ರಶ್ನೆಗಳ ಪೈಕಿ 43 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**೦2. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ**

**ವಿಷಯ:-ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು.**

****

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಿಯಮ 59 ರಡಿ ಮಾನ್ಯ ಶ್ರೀ ಸಿ.ಟಿ.ರವಿಯವರು ಹಾಗೂ ಇತರೆ ಸದಸ್ಯರು ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೋರಿ ಪ್ರಸ್ತಾವವನ್ನು ಮಂಡಿಸಿದ್ದಾರೆ. ಆ ನಿಲುವಳಿ ಸೂಚನೆಯ ಪ್ರಸ್ತಾವವನ್ನು ತಾವು ನಿಯಮ 68 ಕ್ಕೆ ಕನ್ವರ್ಟ್ ಮಾಡಿ, ಚರ್ಚಿಸಲು ಅವಕಾಶ ಕಲ್ಪಿಸಿದ್ದೀರಿ. ಭಾರತೀಯ ಜನತಾ ಪಕ್ಷದವರು, ಜನತಾ ದಳ (ಎಸ್) ಪಕ್ಷದವರು ಮತ್ತು ನಮ್ಮ ಪಕ್ಷದಲ್ಲಿ ಕೂಡಾ ಅನೇಕ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಜೊತೆಗೆ ಚರ್ಚೆ ಕೂಡಾ ಸುದೀರ್ಘವಾಗಿ ಆಗಿದ್ದು, ತಾವು ಕೂಡಾ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಭಾರತೀಯ ಜನತಾ ಪಕ್ಷದಿಂದ ಶ್ರೀ ಸಿ.ಟಿ.ರವಿಯವರ ಆದಿಯಾಗಿ 9 ಜನ ಮಾತನಾಡಿದ್ದಾರೆ. ಅದರಲ್ಲಿ ಶ್ರೀ ಸಿ.ಟಿ.ರವಿಯವರು 2 ಗಂಟೆ 15 ನಿಮಿಷಗಳಷ್ಟು ಬಹಳ ಸುದೀರ್ಘವಾಗಿ ಮಾತನಾಡಿದ್ದಾರೆ. ಉಳಿದ ಸದಸ್ಯರು 20 ನಿಮಿಷ, 18 ನಿಮಿಷ, 15 ನಿಮಿಷ, 16 ನಿಮಿಷ ಮಾತನಾಡಿದ್ದು, ಮಾನ್ಯ ಶ್ರೀ ಎನ್.ರವಿಕುಮಾರ್‌ರವರು 35 ನಿಮಿಷ ಮಾತನಾಡಿದ್ದಾರೆ. ಒಟ್ಟು 4 ಗಂಟೆ 33 ನಿಮಿಷಗಳ ಕಾಲ ಬಿ.ಜೆ.ಪಿ. ಯವರು ಮಾತನಾಡಿದ್ದಾರೆ. ಹಾಗೆಯೇ ಜನತಾ ದಳ ಪಕ್ಷದಲ್ಲಿ ಶ್ರೀ ಎಸ್.ಎಲ್. ಭೋಜೇಗೌಡರವರು, ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಗೋವಿಂದ ರಾಜುರವರು 1 ಗಂಟೆ 29 ನಿಮಿಷಗಳ ಕಾಲ ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಕೂಡಾ ಶ್ರೀ ಐವನ್ ಡಿ.ಸೋಜಾರವರು, ಶ್ರೀ ಯು.ಬಿ.ವೆಂಕಟೇಶ್‌ರವರು ಮತ್ತು ಶ್ರೀ ಎಂ.ನಾಗರಾಜ್‌ರವರು ಒಳಗೊಂಡಂತೆ 3 ಜನರು 1 ಗಂಟೆ 27 ನಿಮಿಷಗಳ ಕಾಲ ಮಾತನಾಡಿದ್ದಾರೆ. ಎಲ್ಲರೂ ಒಳಗೊಂಡಂತೆ ಒಟ್ಟು 7 ಗಂಟೆ 29 ನಿಮಿಷಗಳ ಕಾಲ ಮಾತನಾಡಿದ್ದಾರೆ. ಅದರಲ್ಲಿ ಭಾರತೀಯ ಜನತಾ ಪಕ್ಷದವರೇ ಜಾಸ್ತಿ ಸಮಯ ಮಾತನಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಶ್ರೀ ಸಿ.ಟಿ.ರವಿಯವರೇ ಜಾಸ್ತಿ ಮಾತನಾಡಿರುವುದು. ಾವರು 2 ಗಂಟೆ 30 ನಿಮಿಷ ಮಾತನಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅವರ ಪ್ರಕಾರ ರೂ. 187.33 ಕೋಟಿ ಅಕ್ರಮವಾಗಿದೆ ಎಂದು ಮಾತನಾಡಿದ್ದಾರೆ. ಅವರ ಇಡೀ ವಾದವನ್ನು ನೋಡಿದಾಗ, ಮುಖ್ಯಮಂತ್ರಿಗಳಿಗೆ ಕಳಂಕ ತರಬೇಕು, ಮಸಿ ಬಳಿಯಬೇಕು ಎನ್ನುವಂಥದ್ದಾದರೆ, ಇನ್ನೊಂದು ಉದ್ದೇಶವೇನೆಂದರೆ, ನಮ್ಮ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ವಿರುದ್ಧವಾಗಿದೆ, ಇದನ್ನು ರಾಜ್ಯದ ಜನರಿಗೆ ತಿಳಿಸಬೇಕೆಂದು ಹೇಳಿ, ಅವರು ಸತ್ಯಕ್ಕೆ ದೂರವಾದ ಆರೋಪವನ್ನು ಮಾಡಿದ್ದಾರೆ. ಸತ್ಯಕ್ಕೆ ದೂರವಾದ ಆರೋಪವನ್ನು ಮಾಡಿದ್ದಾರೆ. ಅವರ ಆರೋಪದಲ್ಲಿ ಯಾವುದೇ ಸತ್ಯಾಂಶ ಇಲ್ಲ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸತ್ಯಕ್ಕೆ ದೂರವಾದ . . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಸತ್ಯಾಂಶ ಇಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಹಗರಣ ನಡೆದಿರುವುದು ಸತ್ಯಕ್ಕೆ ದೂರವಾದುದೇ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಮಾತನಾಡಲು ಪ್ರಾರಂಭವೇ ಮಾಡಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಹಗರಣ ನಡೆದಿರುವುದು ಸತ್ಯಕ್ಕೆ ದೂರವಾದುದೇ? (ಗೊಂದಲ) ಹಗರಣ ನಡೆದಿದೆ ಎಂದ ಮೇಲೆ ನಾವು ಹೇಳಿದ್ದು, ಹೇಗೆ ಸತ್ಯಕ್ಕೆ ದೂರವಾಗುತ್ತದೆ?

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅವರಿಗೆ ಸ್ಪಷ್ಟೀಕರಣ ಕೇಳಲು ಅವಕಾಶ ಇದೆ.

**(ಗೊಂದಲ)**

**ಸಭಾಪತಿಯವರು:-** ನನ್ನ ಅನುಮತಿ ಕೇಳಿ ಕೈಯನ್ನು ಎತ್ತಬೇಕು. ನಾನು ಅನುಮತಿ ನೀಡಿದರೆ ಮಾತನಾಡಿ. ಇಲ್ಲದಿದ್ದರೆ ಮಾತನಾಡಬೇಡಿ. ಅದಾಗ್ಯೂ ಮಧ್ಯೆ ಯಾರಾದರೂ ಮಾತನಾಡಿದರೆ ಅದು ಕಡತಕ್ಕೆ ಹೋಗಬಾರದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ್ದು ಎಲ್ಲಾ ಸತ್ಯವಲ್ಲ. ಸತ್ಯಕ್ಕೆ ದೂರವಾದುದನ್ನು ಹೇಳಿದ್ದಾರೆ ಎಂದು ನಾನು ಹೇಳಿದ್ದು. ಹಾಗೆಯೇ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ನಡೆದೇ ಇಲ್ಲವೆಂದು ನಾನು ಹೇಳುತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:-** ಸುಮ್ಮನೆ ಕುಳಿತುಕೊಳ್ಳಿ. ಅವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ಸದನದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈ ಅಕ್ರಮಕ್ಕೆ ಸರ್ಕಾರಕ್ಕಾಗಲೀ, ಆರ್ಥಿಕ ಇಲಾಖೆಯವರಿಗಾಗಲೀ ಅಥವಾ ಸಿದ್ದರಾಮಯ್ಯನವರಿಗೆ ಆಗಲೀ ಯಾವುದೇ ಸಂಬಂಧ ಇಲ್ಲ.

(ಮುಂದು)

(582) 22.07.2024/12.20/ಎಸ್‌ಕೆ- ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿದ್ಧರಾಮಯ್ಯ (ಮುಂದು):-**

I am making it very clear. ಏತಕ್ಕೆ ಸತ್ಯಕ್ಕೆ ದೂರವಾದುದನ್ನು ಹೇಳುವುದು ಎಂದರೆ, ಇದಕ್ಕೋಸ್ಕರ. ಏಕೆಂದರೆ, ಇವರೆಲ್ಲರೂ ಕೂಡ ಸಿದ್ದರಾಮಯ್ಯನವರು ರಾಜೀನಾಮೆ ಕೊಡಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಏತಕ್ಕೆ ರಾಜೀನಾಮೆ ಕೊಡಬೇಕು?

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಏಕೆ enquiry ಗೆ order ಮಾಡಬೇಕು?

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ರವಿಕುಮಾರ್‌ರವರೇ, ತಾವು ಕುಳಿತುಕೊಳ್ಳಿ. ನಾನು ಮಾತನಾಡುವಾಗ ಸುಮ್ಮ ಸುಮ್ಮನೆ ಎದ್ದು ನಿಂತುಕೊಳ್ಳುತ್ತೀರಾ. **(ಗೊಂದಲ)** ತಾವು ಮಾತನಾಡಿದ್ದೀರಾ. ಈಗ ಕುಳಿತುಕೊಳ್ಳಿ. **(ಗೊಂದಲ)** I am not going to give the reply. I am not yielding.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷವಿರಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಯಾವುದು ಕಡತಕ್ಕೆ ಹೋಗಬಾರದು ಎಂದು ತಾವು ಹೇಳಿ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದನ್ನು ಅವರು ವಿಸ್ತೃತವಾಗಿ ಕೇಳಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಹೇಳುತ್ತೇನೆ ಬಿಡಿ. ಮಾನ್ಯ ರವಿಕುಮಾರ್‌ರವರೇ, ನನ್ನ ಅನುಮತಿಯಿಲ್ಲದೇ ಮಾತನಾಡಬಾರದು ಎಂದು ಹೇಳಿದ್ದೇನೆ. ತಾವು ಮಧ್ಯೆ ಎದ್ದು ನಿಂತುಕೊಂಡು ಮಾತನಾಡಿದರೆ, ಕಡತಕ್ಕೆ ಹೋಗುವುದಿಲ್ಲ. ಯಾರು ಮಧ್ಯೆ disturb ಮಾಡಬಾರದು. ಮಾನ್ಯ ಮುಖ್ಯಮಂತ್ರಿಯವರು ಹೇಳುವುದನ್ನು ಪಾಯಿಂಟ್ ಮಾಡಿಕೊಳ್ಳಿ. ಅವರು ಮಾತನಾಡಿದ ನಂತರ ತಾವು ಕೇಳಿ. ಈಗ ಮಾತನಾಡಬೇಡಿ, ಎಲ್ಲರು ಕುಳಿತುಕೊಳ್ಳಿ. ನಾನು allow ಮಾಡುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ನಾನು ತಮಗೆ allow ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರೇ, ತಾವು ಮಾತನಾಡಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಏನು ತಪ್ಪು ಬೇಕಾದರೂ ಮಾಡಬಹುದೇ?

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಇವರಿಗೆಲ್ಲಾ ಹೇಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಅವರಿಗೆ ಮಾತನಾಡುವುದಕ್ಕೆ ಅವಕಾಶವಿದೆ. ಇವರು ಮಾತನಾಡಲಿ ಬಿಡಿ. ಇವರೊಬ್ಬರೇನಾ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಬಂದಿರುವುದು?. ಅವರಿಗೆ ಎಷ್ಟು ಹಕ್ಕಿದೆಯೋ, ಇವರಿಗೂ ಅಷ್ಟೇ ಹಕ್ಕು ಇದೆ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ,..

**(ಗೊಂದಲ)**

**ಸಭಾಪತಿಯಯವರು:-** ಮಾನ್ಯ ನಾಗರಾಜುರವರೇ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಅಕ್ರಮ ನಡೆದಿದೆ ಎಂದು ಅವರು ಹೇಳುವುದು ಸರಿಯೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ನೋಡಿ. ಮಾನ್ಯ ಮುಖ್ಯಮಂತ್ರಿಯವರು...

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ಹೇಳಲಿಲ್ಲ.. ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ತಾವು ಏತಕ್ಕೆ ಎದ್ದುನಿಂತು ಮಾತನಾಡುತ್ತೀರಿ?

**ಶ್ರೀ ಎಂ. ಆರ್. ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಸಿ.ಟಿ. ರವಿಯವರು ಮೊನ್ನೆ ಎರಡು ಗಂಟೆಯ ತನಕ ಮಾತನಾಡಿದ್ದಾರೆ, ಆಗ ಮಾನ್ಯ ಸದಸ್ಯರುಗಳು ಸುಮ್ಮನೆ ಕುಳಿತುಕೊಂಡಿರಲಿಲ್ಲವೇ?

**(ಗೊಂದಲ)**

**ಸಭಾಪತಿಯವರು:-** ನಾನು ಸದನವನ್ನು ನಿಲ್ಲಿಸಿಬಿಡುತ್ತೇನೆ.

**(ಗೊಂದಲ)**

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಬೇಕಾದರೆ, ಇವರಿಗೆ ಮಾತನಾಡುವ ಅವಶ್ಯಕತೆ ಏನಿದೆ?

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಇದೇನಿದು? ತಾವು ಏತಕ್ಕೆ ಎದ್ದುನಿಂತುಕೊಳ್ಳುತ್ತೀರಿ?

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಒಂದೇ ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಅಸಹಾಯಕರಾಗಿದ್ದಾರೆ. ಹಾಗಾಗಿ, ಅವರ support ಗೆ ಬರುತ್ತಿದ್ದಾರೆ. The Hon'ble Chief Minister is helpless.

**(ಗೊಂದಲ)**

**ಸಭಾಪತಿಯವರು:-** ಅಯಿತು. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ತಮ್ಮ ಕಡೆಯವರಿಗೆ ಹೇಳಿ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು reply ಕೊಡುವಾಗ, ದಯವಿಟ್ಟು, ಮಾನ್ಯ ಸದಸ್ಯರು ಯಾರೂ ಮಧ್ಯೆ ಮಾತನಾಡಬೇಡಿ. ಯಾರಾದರೂ ಏನನ್ನಾದರೂ ಕೇಳುವುದು ಇದ್ದರೆ, ಬರೆದುಕೊಳ್ಳಿ. ನಾನು ಉತ್ತರ ಕೊಟ್ಟ ಮೇಲೆ clarification ಕೇಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರಲ್ಲಿ ತಮಗೆ ಯಾವ ವಿಚಾರಕ್ಕೆ ಸ್ಪಷ್ಟೀಕರಣ ಬೇಕೆಂಬುದನ್ನು ಬರೆದುಕೊಂಡ ನಂತರ ಅದಕ್ಕೆ ಉತ್ತರವನ್ನು ಪಡೆದುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ದಯವಿಟ್ಟು, ಇದಕ್ಕೆ ಸಹಕರಿಸಿ.

**ಸಭಾಪತಿಯವರು:-** ಎರಡು ಕಡೆಯವರಿಗೂ ಹೇಳುವುದೇನೆಂದರೆ, ಮಧ್ಯದಲ್ಲಿ ಯಾರೂ ಎದ್ದು ನಿಂತು ಮಾತನಾಡಬೇಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರಿಗೆ (ವಿರೋಧಪಕ್ಷವರಿಗೆ) ಹೇಳಲಿಲ್ಲವಲ್ಲ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ತಮ್ಮನ್ನು ಮಾತನಾಡಿ ಎಂದು ಯಾರು ಹೇಳಿದ್ದಾರೆ? ತಾವು ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ಅವರು ಹೇಳುತ್ತಾರೆ. ತಾವು ಏತಕ್ಕೆ ಹೇಳುತ್ತೀರಾ? ನಾನು ಇಲ್ಲಿ ಏತಕ್ಕೆ ಇದ್ದೇನೆ? ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಅವರಿಗಾದರೂ ಗೌರವ ಕೊಡಿ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತಿದ್ದೇನೆ ಎಂಬುದು ಈ ಗಲಾಟೆಯೊಳಗಡೆ ಮರೆತು ಹೋಯಿತು

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ, ಯಾರು ಮಾತನಾಡಬೇಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಹೀಗೆಲ್ಲಾ ದಾರಿ ತಪ್ಪಲಿ ಎಂದೇ ಅವರು ಮಧ್ಯೆ ಮಧ್ಯೆ ಎದ್ದೇಳುವುದು. **(ಗೊಂದಲ)** ಮಾನ್ಯ ಸಭಾಪತಿಯವರೇ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ನಡೆದಿಲ್ಲ ಎಂದು ನಾನು ಯಾವತ್ತು ಕೂಡ ಹೇಳಿಲ್ಲ. ಅಲ್ಲಿ ಅಕ್ರಮ ನಡೆದಿದೆ. ತನಿಖೆ ಪ್ರಾರಂಭವಾಗಿದೆ. ಯಾರು ತಪ್ಪಿತಸ್ಥರು ಎಂಬುದು ಗೊತ್ತಾಗಬೇಕು. ಇಂಥವರೇ ಮಾಡಿದ್ದಾರೆ ಎಂದು ಈ ಹಂತದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. Because, the investigation is going on. ವಿಚಾರಣೆ ಮುಗಿದ ಮೇಲೆ, ಅವರು charge sheet ಹಾಕಿದ ಮೇಲೆ ಮಾನ್ಯ ನ್ಯಾಯಾಲಯದಲ್ಲಿ trial ಆಗಲಿ. ಅವರ charge sheet ನಲ್ಲಿ ಯಾರು ಅಪರಾಧ ಮಾಡಿದ್ದಾರೆ ಎಂಬ ಬಗ್ಗೆ ಗುರುತಿಸುತ್ತಾರೆ. ಅವರ ಮೇಲೆ ಇರುವಂತಹ ಆರೋಪಗಳು ಸಾಬೀತಾದರೆ, ಅವರಿಗೆ ಶಿಕ್ಷೆಯಾಗುತ್ತದೆ. ಯಾರೇ ಆಗಲಿ, ಉಪ್ಪು ತಿಂದವರು ನೀರು ಕುಡಿಯಲೇಬೇಕು. ಅದರ ಬಗ್ಗೆ ನಮ್ಮದು ಎರಡು ಮಾತಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು ಎಂದು ಹೇಳುವುದರಲ್ಲಿ ಎರಡನೇ ಮಾತಿಲ್ಲ. Our Government is not going to compromise with the corruption. ಯಾರೇ involve ಆಗಿದ್ದರೂ ಕೂಡ, ಅವರಿಗೆ ಕೋರ್ಟ್‌ನ ಮೂಲಕ ಶಿಕ್ಷೆ ಕೊಡಿಸುವಂತಹ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ., ಯವರು ಈ Goebbels ತಂತ್ರಗಾರಿಕೆಯಲ್ಲಿ ಬಹಳ ನಿಪುಣರು. ಈ Goebbels theory ಇದೆಯೆಲ್ಲಾ, ಆ ತಂತ್ರಗಾರಿಕೆಯನ್ನು ಯಾವಾಗಲೂ ಬಳಸುತ್ತಾರೆ. ಆ ತಂತ್ರಗಾರಿಕೆಯನ್ನು ಬಳಸಿ ಸತ್ಯಕ್ಕೆ ದೂರವಾದುದನ್ನು ನೂರು ಬಾರಿ ಮತ್ತು ಸಾವಿರ ಬಾರಿ ಸತ್ಯಕ್ಕೆ ದೂರವಾದುದನ್ನು ಹೇಳುವುದು. ಅದನ್ನು ನಿಜ ಮಾಡಬೇಕೆಂಬುದು ಇವರ ಪ್ರಯತ್ನ ಮತ್ತು ಕುಟಿಲ ತಂತ್ರ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರು corruption ನಲ್ಲಿ……

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ರವಿಕುಮಾರ್‌ರವರೇ, ತಾವು ಆಮೇಲೆ ಏನೇನು ಹೇಳಬೇಕೋ ಹೇಳಿ.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮತ್ತೆ ಎದ್ದುನಿಂತು ಮಾತನಾಡುತ್ತಾರೆ ನೋಡಿ. (ಗೊಂದಲ) ಈ ತರಹ ಮಾಡಿದರೆ, ನಮ್ಮ ಪಕ್ಷದ ಸದಸ್ಯರು react ಮಾಡುತ್ತಾರೆ. (ಗೊಂದಲ) ಆಗ ಸದನ ಹೇಗೆ ನಡೆಯುತ್ತದೆ? ಯಾರೂ ಎದ್ದನಿಂತು ಮಾತನಾಡಬೇಡಿ ಎಂದು ತಾವು ಹೇಳಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ತರಹ ಮಾತನಾಡಿದರೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು, **XXX (ಗೊಂದಲ)** ಅವರಿಗೆ ಎಷ್ಟು ಬಾರಿ ಹೇಳಬೇಕು. ಅವರಿಗೆ ಸ್ವಲ್ಪ ನಾಚಿಕೆಯಾಗಬೇಕು.

**(ಗೊಂದಲ)**

**ಸಭಾಪತಿಯವರು:-** ಯಾರು ಮಾತನಾಡಿದ್ದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ನಾನು ಏನು ಹೇಳುತ್ತಿದ್ದೇನೆಂದರೆ,

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಮಗೆ ಹೇಳುವುದಕ್ಕೆ ಅವರು ಯಾರು?

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ನಾನಿದ್ದಾಗಲಾದರೂ ಕುಳಿತುಕೊಳ್ಳಿ. ಪೀಠಕ್ಕೆ ಮಾರ್ಯಾದೆ ಕೊಡುವುದನ್ನು ಕಲಿಯಿರಿ.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದಕ್ಕೆ ಸದನಕ್ಕೆ ಬಂದಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಒಂದು ನಿಮಿಷ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ತಾವು ಮೊದಲು ಅವರಿಗೆ ಹೇಳಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು intervention ಮಾಡುವುದು ಬೇಡ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಉತ್ತರ ನೀಡಿದ ನಂತರ clarification ಕೇಳಿ ಎಂದು ತಾವು ಈಗಾಗಲೇ ಅವರಿಗೆ ಹೇಳಿದ್ದೀರಿ. ಪ್ರತಿಯೊಂದಕ್ಕೂ ಎದ್ದು ನಿಂತುಕೊಂಡರೆ ಹೇಗೆ ಸಾಧ್ಯ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಪ್ರತಿಯೊಂದಕ್ಕೂ ಎದ್ದುನಿಂತುಕೊಂಡಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ,..

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ...**(ಗೊಂದಲ)** ಅವರ chamber ಗಳಿಗೆ **(ಗೊಂದಲ) ....**

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರು ಎದ್ದು ನಿಂತುಕೊಂಡ ಮೇಲೆ ಯಾರು ಮಾತನಾಡಬಾರದು. ತಾವು ಎದ್ದು ನಿಂತ ಮೇಲೂ ಅವರು ಹೇಗೆ ಮಾತನಾಡುತ್ತಾರೆ? ತಾವು ಎದ್ದು ನಿಂತುಕೊಂಡಾಗಲೂ ಅವರು ಮಾತನಾಡಬಹುದೇ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ನೀವೇಕೆ ಮಾತನಾಡುತ್ತೀರಿ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಎದ್ದು ನಿಂತುಕೊಂಡ ಮೇಲೆಯೂ ಅವರು ಮಾತನಾಡಬಹುದೇ?

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಸಭಾಪತಿಯವರು:-** ಅಷ್ಟೊಂದು ಬುದ್ಧಿ ಇದೆ ಎಂದು ನಾನು ತಿಳಿದುಕೊಂಡಿದ್ದೆ.

**ಶ್ರೀ ಪುಟ್ಟಣ್ಣ:-** ಇವರುಗಳಿಗೆ ಹೇಳಿದ್ದು ಅರ್ಥವಾಗುವುದಿಲ್ಲವೇ?

**ಶ್ರೀ ಸುನೀಲ್ ವಲ್ಯಾಪುರ್:-** ಹೇ, ನಿಂತುಕೊಳ್ಳಯ್ಯ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರು ಪೀಠದಿಂದ ಎದ್ದು ನಿಂತ ಮೇಲೆಯೂ ಯಾರಾದರೂ ಮಾತನಾಡುತ್ತಾರೆಯೇ? ತಾವು ಹಿರಿಯ ಸದಸ್ಯರಾಗಿದ್ದೀರಿ. ಮಾನ್ಯ ಸಭಾಪತಿಯವರು ಎದ್ದು ನಿಂತಾಗಲೂ ಮಾತನಾಡುತ್ತಾರೆಯೇ? **(ಗೊಂದಲ)** ಮಾನ್ಯ ಸಭಾಪತಿಯವರು ಎದ್ದು ನಿಂತ ಮೇಲೆ ಮಾತನಾಡುತ್ತೀರಾ ಎಂಬುದಕ್ಕೆ ಉತ್ತರ ಕೊಡಿ. ನಿಮಗೆ ಏನೂ ಅನಿಸುವುದಿಲ್ಲವೇ?

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):-** ನೀವು ಅದನ್ನು ಮಾಡಿಲ್ಲವೇ?

**ಸಭಾಪತಿಯವರು:-** ನನ್ನ ಅನುಮತಿ ಇಲ್ಲದೇ ಯಾರು ಮಾತನಾಡಿದರೂ ಅದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

ಮಾನ್ಯ ನಾಗರಾಜುರವರೇ, ತಾವು ಪ್ರತಿ ಬಾರಿ ಎದ್ದು ನಿಂತು ಮಾತನಾಡಬೇಡಿ. ಮಾನ್ಯ ಮುಖ್ಯಮಂತ್ರಿಯವರು ಇದ್ದರೆ ಎಂದು ತಾವು ಏನು ಹೇಳಬೇಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಆಯಿತು ಕುಳಿತುಕೊಳ್ಳಿ. ತಾವು ಏತಕ್ಕೆ ಎದ್ದು ನಿಂತು ಮಾತನಾಡುತ್ತೀರಿ?

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಿಮ್ಮ ಹತ್ತಿರ ಮನವಿ ಮಾಡುವುದಕ್ಕೆ ನನಗೆ ಅಧಿಕಾರವಿದೆ. I have the right to ask the Chair.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಇದು ಏನು?

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರ್‌ರವರೇ, ಒಂದು ನಿಮಿಷವಿರಿ. ಮಾನ್ಯ ನಾಗರಾಜುರವರೇ, ನಾನು ಪೀಠದಲ್ಲಿ ಕುಳಿತುಕೊಂಡಿದ್ದೇನೆ. ತಾವು ಕೈ ಎತ್ತಿದಾಗ, ನಾನು ತಮಗೆ ಮಾತನಾಡಲು ಅನುಮತಿ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಮಧ್ಯೆ disturb ಮಾಡಬಾರದು. ಅವರ ಮುಂದೆ ತಾವು ಬಹಳ ಪೌರುಷವನ್ನು ತೋರಿಸಬೇಡಿ ಎಂದು ಹೇಳುತ್ತಿದ್ದೇನೆ. ತಾವು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಸುನೀಲ್ ವಲ್ಯಾಪುರ್:-** ಅವರು ಅವರ chamber ನಲ್ಲಿ ಹೋಗಿ ತೋರಿಸಲಿ. ಮಾನ್ಯ ಸಭಾಪತಿಯವರೇ, **XXX** ಎಂದು ಸಲೀಂ ಅಹಮದ್‌ರವರು ಹೇಳಿರುವ ಬಗ್ಗೆ ಕಡತದಿಂದ ತೆಗೆಸಬೇಕು.

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರರವರೇ, ನಾನು ಕಡತವನ್ನು ತೆಗೆಸಿ ನೋಡಿ ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸುನೀಲ್ ವಲ್ಯಾಪುರ್‌ರವರು ನನ್ನ ಹೆಸರನ್ನು ತೆಗೆದುಕೊಂಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, **(ಗೊಂದಲ)** ಹೇಳಿದ್ದನ್ನು ಮಾತನಾಡಬೇಡಿ.

**(ಮುಂದು)**

(583) 22.07.2024 12.30 ಟಿಸಿಹೆಚ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ ರವರು ನನ್ನ ಹೆಸರು ಹೇಳಿದ್ದಾರೆ. ಅದಕ್ಕೆ ಹೇಳುತ್ತಿದ್ದೇನೆ. ದಯವಿಟ್ಟು ನೀವ್ಯಾರು ಮಾತನಾಡಬೇಡಿ ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದ ನಂತರವೇ clarification ಕೇಳಿ ಎಂದು ಹೇಳಿ. ಅದುಬಿಟ್ಟು ಪದೇಪದೇ ಮಧ್ಯೆ ಎದ್ದು ನಿಂತುಕೊಂಡರೆ ಅವರು ಹೇಗೆ ಉತ್ತರ ಕೊಡುತ್ತಾರೆ?

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಲೀಂ ಅಹಮದ್ ರವರೇ, ಆ ಪೀಠಕ್ಕೆ ಅಧಿಕಾರ ಇದೆ. ಅವರನ್ನು ಆಚೆಗೆ, ಇವರನ್ನು ಆಚೆಗೆ ಕಳುಹಿಸಿ ಎಂದು ಏಕೆ ಹೇಳುತ್ತೀರಿ. ಈಗ ಸನ್ಮಾನ್ಯ ಮುಖ್ಯಮಂತ್ರಿಯವರು ಎಲ್ಲರೂ ಸದಸ್ಯರೆ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಶ್ರೀ ಸುನೀಲ್ ವಲ್ಯಾಪುರ್ ರವರೇ, ದಯವಿಟ್ಟು ಕುಳಿತುಕೊಳ್ಳಿ. ನೋಡಿ, ಸನ್ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ ಉತ್ತರ ಕೊಡುತ್ತಾರೆ. ಎಲ್ಲರೂ ಕೇಳಿಸಿಕೊಳ್ಳಿ. ಒಂದುವೇಳೆ ನಿಮಗೆ ಏನಾದರೂ clarification ಇದ್ದರೆ, ನೋಟ್ ಮಾಡಿಕೊಳ್ಳಿ. ಈ ಮಧ್ಯೆ ಸಣ್ಣಪುಟ್ಟ ಸಂದೇಹಗಳಿರುತ್ತವೆ ಅದನ್ನು ನೋಟ್ ಮಾಡಿಕೊಳ್ಳಿ ನಾನು ಒಪ್ಪುತ್ತೇನೆ. ನಿಮ್ಮ ಎಲ್ಲಾ clarification ಕೇಳುವವರೆಗೆ ಇರುತ್ತಾರೆ. ನಾನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತೇನೆ. ನಿಮ್ಮೆಲ್ಲರ ಕ್ಲಾರಿಫಿಕೇಷನ್‌ಗೂ ಕೂಡ ಉತ್ತರ ಕೊಟ್ಟು ಹೋಗುತ್ತಾರೆ. ಆದ್ದರಿಂದ

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

ದಯಮಾಡಿ ಕುಳಿತುಕೊಳ್ಳಿ. ಯಾರು ಕೂಡ ಮಧ್ಯೆ ಎದ್ದುನಿಂತು ಮಾತನಾಡಬೇಡಿ. ಒಂದುವೇಳೆ ನೀವೇನಾದರೂ ಮಾತನಾಡಬೇಕೆಂದರೆ ಕೈ ಎತ್ತಿರಿ. ನಾನು ಪರ್ಮಿಷನ್ ಕೊಟ್ಟರೆ ಮಾತ್ರ ಮಾತನಾಡಿ. ನೀವು ಮಧ್ಯೆ ಎದ್ದು ನಿಂತು ಮಾತನಾಡಿದರೆ ಅವರಿಗೆ ದಾರಿತಪ್ಪುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದಂತೆ, Joseph Goebbels ಎನ್ನುವವರು ಹಿಟ್ಲರ್‌ನ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದರು. ಅವರನ್ನು ಸತ್ಯಕ್ಕೆ ದೂರವಾದುದನ್ನು ಹೇಳುವುದಕ್ಕೋಸ್ಕರವೇ ಮಂತ್ರಿ ಮಾಡಿದ್ದರು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಮುಖ್ಯಮಂತ್ರಿಯವರೇ, ತಾವು ಆ ಕಡೆ ತಿರುಗಿಕೊಂಡು ಮಾತನಾಡಿದರೆ ಅವರು provoke ಆಗುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಭೋಜೇಗೌಡರೇ, ನಾನು ನಿನ್ನ ಕಡೆ ನೋಡುತ್ತಿರುತೇನೆ. ಏಕೆಂದರೆ ವಿರೋಧ ಪಕ್ಷದ ಕಡೆ ನೀನೊಬ್ಬನೇ ಫ್ರೆಂಡ್ ಅಲ್ಲವೇ?

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ಭೋಜೇಗೌಡರ ಕಡೆ ನೋಡಿದರೆ ನಿಮ್ಮ ಕಥೆ ಮುಗಿಯಿತು. ಹಾಗಾಗಿ ನೀವು ಭೋಜೇಗೌಡರ ಕಡೆ ನೋಡಿಕೊಂಡು ಮಾತನಾಡಬೇಡಿ. ಈ ಪೀಠದ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭೋಜೇಗೌಡ ರವರು ನ್ಯಾಯದ ಪರ ಇದ್ದಾರೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಭೋಜೇಗೌಡರು ಸಾಕಷ್ಟು ಜನಕ್ಕೆ ದಾರಿ ತಪ್ಪಿಸಬಹುದು, ಆದರೆ ನನಗೆ ದಾರಿ ತಪ್ಪಿಸುವುದಕ್ಕೆ ಆಗುವುದಿಲ್ಲ. ದಾರಿ ತಪ್ಪಿಸುವ ಪ್ರಯತ್ನ ಕೂಡ ಮಾಡುವುದಿಲ್ಲ.

**ಸಭಾಪತಿಯವರು:-** ಅಂದರೆ ಅವರು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಿ ಎಂದು ಅರ್ಥ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಭೋಜೇಗೌಡರು ವಿಶ್ವಾಸದಿಂದ ಇದ್ದರೂ ಕೂಡ ಒಂದೊಂದು ಬಾರಿ ಕೈಕೊಟ್ಟುಬಿಡುತ್ತಾರೆ ಅದೇ ಬಂದಿರುವುದು.

**(ಸದನದಲ್ಲಿ ನಗು)**

ಆದ್ದರಿಂದ ಸತ್ಯಕ್ಕೆ ದೂರವಾದುದನ್ನು ಸತ್ಯ ಮಾಡುವುದು ಕಷ್ಟ. ಹಾಗಂತ ಹಿಟ್ಲರ್ ಅಂದುಕೊಂಡಿದ್ದರು. ಪಾಪ, ಕೊನೆಯಲ್ಲಿ ಅವರೇ ಆತ್ಮಹತ್ಯೆ ಮಾಡಿಕೊಂಡರು ಅಲ್ಲವೇ. ಆದ್ದರಿಂದ ನಾನು ಹೆಚ್ಚು ಲಂಬಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಹೇಗಾದರೂ ಮಾಡಿ ಮಸಿ ಬಳಿಯಬೇಕು. ನಮ್ಮ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿರುದ್ಧವಾಗಿದೆ, ಹಿಂದುಳಿದ ವರ್ಗದವರಿಗೆ ವಿರುದ್ಧವಾಗಿದೆ, ಅಲ್ಪಸಂಖ್ಯಾತರ ವಿರುದ್ಧವಾಗಿದೆ, ಮಹಿಳೆಯರಿಗೆ, ರೈತರಿಗೆ ಮತ್ತು ಕಾರ್ಮಿಕರಿಗೆ ವಿರುದ್ಧವಾಗಿದೆ. ಈ ವರ್ಗದ ಎಲ್ಲಾ ಜನರಿಗೆ ವಿರುದ್ಧವಾಗಿರತಕ್ಕಂಥವರೇ ಭಾರತೀಯ ಜನತಾ ಪಕ್ಷದವರು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಅವರು ಯಾವತ್ತು ಕೂಡ ಸಂವಿಧಾನ ಜಾರಿಗೆ ಬಂತಲ್ಲಾ ಅವೊತ್ತಿನಿಂದ ಸಾಮಾಜಿಕ ನ್ಯಾಯದ ಪರವಾಗಿ ಇಲ್ಲ. ಇವರು ಸಂವಿಧಾನವನ್ನೇ ವಿರೋಧ ಮಾಡಿದ್ದಾರೆ. ಏಕೆಂದರೆ, ಸಂವಿಧಾನ ಎಲ್ಲರಿಗೂ ಕೂಡ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಎಲ್ಲಾ ಬಡವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಎಲ್ಲಾ ಶೋಷಿತರಿಗೂ ಸಮಾನ ಅವಕಾಶಗಳನ್ನು ಕಲ್ಪಸಿಕೊಡುತ್ತದೆ. ಅದು ಯಾರೇ ಇರಲಿ, irrespective of caste, religion or language, ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಏಕೆಂದರೆ ಸಮಾನ ಅವಕಾಶ ಕಲ್ಪಿಸಿಕೊಡುವುದರಲ್ಲಿ ಬಿ.ಜೆ.ಪಿ.,ಯವರಿಗೆ ನಂಬಿಕೆ ಇಲ್ಲ. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರತಕ್ಕಂಥ ಅಕ್ರಮವನ್ನು ತೆಗೆದುಕೊಂಡು ಈಗ ಇಡೀ ಕಾಂಗ್ರೆಸ್ ಪಕ್ಷಕ್ಕೆ ಗೂಬೆ ಕೂರಿಸತಕ್ಕಂಥ ಮತ್ತು ಮಸಿ ಬಳಿಯತಕ್ಕಂಥ ಪ್ರಯತ್ನವನ್ನು ಮಾಡುವುದಕ್ಕೆ ಹೊರಟಿದ್ದಾರೆ. ನಾನು ಇಲ್ಲಿ ಬಹಳ ಸ್ಪಷ್ಟಪಡಿಸುವುದಕ್ಕೆ ಬಯಸುವುದೇನೆಂದರೆ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಯಾರೇ ಅಕ್ರಮ ಮಾಡಿದ್ದರೂ ಕೂಡ ತಪ್ಪಿತಸ್ಥರನ್ನು ಯಾವ ಕಾರಣಕ್ಕೂ ಬಿಡುವುದಿಲ್ಲ ಎನ್ನತಕ್ಕಂಥ ಮಾತುಗಳನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಅದಕ್ಕೋಸ್ಕರವೇ ಮಾನ್ಯ ಸಭಾಪತಿಯವರೇ, ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಪರ ಇಲ್ಲವೆಂದು ಹೇಳುವುದಕ್ಕೆ ಯಾವುದೇ ಆಧಾರಗಳಿಲ್ಲ. 2013ರಲ್ಲಿ ಕರ್ನಾಟಕದಲ್ಲಿ ನಾವೇ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆಯನ್ನು ಮಾಡಿದವರು. ಇಡೀ ದೇಶದಲ್ಲಿ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ಈ ಮೂರು ರಾಜ್ಯಗಳಲ್ಲಿ ಮಾತ್ರ SCSP-TSP (Scheduled Caste Sub-Plan & Tribal Sub- Plan) ಕಾಯ್ದೆಯನ್ನು ಮಾಡಲಾಗಿದೆ. ಕೇರಳ ರಾಜ್ಯದಲ್ಲಿ ಮಾಡಿದ್ದಾರೆಯೇ. ಬಿ.ಜೆ.ಪಿ., ಅಧಿಕಾರದಲ್ಲಿರತಕ್ಕಂಥ

ಯಾವುದಾದರೂ ರಾಜ್ಯಗಳಲ್ಲಿ ಮಾಡಿದ್ದಾರೆಯೇ? ಕರ್ನಾಟಕದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಹಣ ಖರ್ಚು ಮಾಡಬೇಕೆಂದು ಕಾಂಗ್ರೆಸ್ ಸರ್ಕಾರ ಕಾನೂನನ್ನು ಮಾಡಿದ್ದೇವೆ. ಬಿ.ಜೆ.ಪಿ.,ಯವರು 2008 ರಿಂದ 2013ನೇ ಸಾಲಿನವರೆಗೆ ಅಧಿಕಾರದಲ್ಲಿ ಇದ್ದರು, ಅವರು ಮಾಡಿದ್ದಾರೆಯೇ. ಬೇರೆ ರಾಜ್ಯಗಳಲ್ಲೂ ಬಿ.ಜೆ.ಪಿ., ಅಧಿಕಾರದಲ್ಲಿ ಇತ್ತು ಮಾಡಿದ್ದಾರೆಯೇ? ಎಲ್ಲೂ ಮಾಡಿಲ್ಲ. ಸುಮಾರು 10 ವರ್ಷಗಳಿಂದ ಕೇಂದ್ರದಲ್ಲಿ ಸನ್ಮಾನ್ಯ ನರೇಂದ್ರ ಮೋದಿಯವರು ಪ್ರಧಾನಿಯಾಗಿದ್ದಾರಲ್ಲಾ ಅವರು ಮಾಡಿದ್ದಾರೆಯೇ? What commitment do they have? ಅವರಿಗೆ ಏನು commitment ಇದೆ. ಆದರೆ ನಾವು ಮಾಡಿದ್ದೇವೆ. ಕಾನೂನು ಮಾಡಿದವರು ನಾವು. ಈ ಕಾನೂನು ಮಾಡುವುದಕ್ಕಿಂತ ಮುಂಚಿತವಾಗಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ.ಯಲ್ಲಿ ರೂ.5000 ದಿಂದ 6,000 ಕೋಟಿಗಳು ಖರ್ಚಾಗುತ್ತಿತ್ತು. ನಾನು ಕೊನೆಯ ವರ್ಷ 2017-2018ನೇ ಸಾಲಿನಲ್ಲಿ ಬಜೆಟ್ ಮಂಡಿಸಿದಾಗ ರೂ. 29,000 ಕೋಟಿಗಳಿಗಿಂತಲೂ ಹೆಚ್ಚು ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಯಲ್ಲಿ ಖರ್ಚು ಮಾಡಿದ್ದೇವೆ. 2024-2025ನೇ ಸಾಲಿನಲ್ಲಿ ರೂ.39,121 ಕೋಟಿಗಳು ಕೊಟ್ಟಿದ್ದೇವೆ. ಜೆ.ಡಿ.(ಎಸ್)ನವರು 1 ವರ್ಷ 2 ತಿಂಗಳು, ಬಿ.ಜೆ.ಪಿ.,ಯವರು 3 ವರ್ಷ 10 ತಿಂಗಳು ಅಧಿಕಾರದಲ್ಲಿ ಇದ್ದರು. ಆಗ ಅವರು ರೂ. 29,000 ಕೋಟೀಗಳಿಗಿಂತಲೂ ಕಡಿಮೆ ಕೊಟ್ಟಿದ್ದಾರೆ. ಇದು ಪ್ರತಿವರ್ಷ ಹೆಚ್ಚಾಗಬೇಕೋ, ಕಡಿಮೆ ಆಗಬೇಕೋ? ಬಜೆಟ್ ಗಾತ್ರ ಜಾಸ್ತಿ ಆಗುತ್ತಿರುತ್ತದೆ. ಅಭಿವೃದ್ಧಿಗೆ ಹಣ ಜಾಸ್ತಿ ಆಗುತ್ತಿರುತ್ತದೆ. ಪರಿಶಿಷ್ಟ ಜಾತಿ ಶೇ.17.15ರಷ್ಟು ಇದ್ದಾರೆ. ಪರಿಶಿಷ್ಟ ಪಂಗಡದವರು ಶೇ. 6.95ರಷ್ಟು ಇದ್ದಾರೆ, ಎರಡನ್ನು ಒಟ್ಟಿಗೆ ಸೇರಿಸಿದರೆ ಶೇ.24.1ರಷ್ಟು ರಷ್ಟು ಇದ್ದಾರೆ. ಈ ವರ್ಷ ಬಜೆಟ್‌ನಲ್ಲಿ ರೂ.160 ಕೋಟಿಗಳು ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡಿದರೆ ಅದರಲ್ಲಿ ರೂ.39,121 ಕೋಟಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಖರ್ಚು ಮಾಡುತ್ತಿದ್ದೇವೆ. Are we against the Scheduled Castes and Scheduled Tribes? ಡಾ. ಬಾಬಾಸಾಹೇಬ್ ಅಂಬೇಡ್ಕರ್ ರವರು ಸಂವಿಧಾನದಲ್ಲಿ ಏನು ಹೇಳಿದ್ದರೋ ಅದರಂತೆ ನಡೆದುಕೊಳ್ಳುತ್ತಿರುವ ಯಾವುದಾದರೂ ಒಂದು ಸರ್ಕಾರ ಇದ್ದರೆ ಅದು ಕಾಂಗ್ರೆಸ್ ಸರ್ಕಾರ. ಶ್ರೀ ಸಿದ್ದರಾಮಯ್ಯನವರ ಸರ್ಕಾರ ಎಂದು ಹೇಳುವುದಕ್ಕೆ ಬಯಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

(ಮುಂದು)

(584)22.7.2024/12.40/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು . . .

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ಒಂದು ನಿಮಿಷ. ನಾನು ನಿಮಗೆ ಏನು ಹೇಳಿದೆ ಎಂದರೆ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ ನಾನು ಮಾತನಾಡುವುದನ್ನು ಕೇಳಿ. ಮಾನ್ಯ ಮುಖ್ಯಮಂತ್ರಿಯವರು yield ಆಗಿಲ್ಲ. ನಮ್ಮಲ್ಲಿ ನಿಯಮ ಏನಿದೆ ಎಂದರೆ ಯಾರೇ ವ್ಯಕ್ತಿ ಮಾತನಾಡುವಾಗ ಅವರು yield ಆದರೆ ನೀವು ಮಾತನಾಡಬೇಕು. ಅವರು yield ಆಗದಿದ್ದರೆ ಮಾತನಾಡುವುದು ಬೇಡ. ನಾನು ಹೆಸರುಗಳನ್ನು ಬರೆದು ಇಟ್ಟುಕೊಂಡಿದ್ದೇನೆ. ನಿಮ್ಮ ಹೆಸರೇ ಮೊದಲಿದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಉತ್ತರವನ್ನು ಕೇಳುವುದಕ್ಕೆ ತಯಾರಿದ್ದೇವೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಈಗ ಮಾತನಾಡುವುದು ಬೇಡ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ, ಕಳೆದ ಸಲ ಏನಾಯಿತೆಂದು ಹೇಳಿ ಬಿಡುತ್ತೇನೆ.

**ಸಭಾಪತಿಯವರು:-** ಈಗ ಬೇಡ ಕುಳಿತುಕೊಳ್ಳಿ. ಆಮೇಲೆ ಹೇಳಿ.

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು**):- ಮಾನ್ಯ ಸಭಾಪತಿಯವರೇ, (**ಗೊಂದಲ**) ಅವಕಾಶ ಕೊಡಬೇಡಿ, ಮಾನ್ಯ ಮುಖ್ಯಮಂತ್ರಿಗಳು yield ಆಗಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನದೊಂದು request ಇದೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಬೇಡ. ನನ್ನ ಮಾತನ್ನು ಕೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ದಾರಿ ತಪ್ಪಿಸಬೇಕೆಂದಿದ್ದಾರೆ.

**ಸಭಾಪತಿಯವರು:-** ನೀವು ಅವರು ಮಾತನಾಡಿದರೆ ಅಡ್ಡ ದಾರಿ ಹಿಡಿಯುತ್ತದೆ. ಬೇಡ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರೇ, ಮಾತನಾಡಿ.

**ಶ್ರೀ ಎನ್. ರವಿಕುಮಾರ್:-** ನಾನು ಈ ಪ್ರಕ್ರಿಯೆಯ ವಿರುದ್ಧ ಇಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಗಳೇ, ತಾವು . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, SCP-TSP (Special Component Plan and Tribal Sub Plan) ಯಲ್ಲಿ ನಾನು ಕೊನೆಯ ಬಜೆಟ್ ಅನ್ನು ಮಂಡಿಸಿದಾಗ ರೂ. 29,00,690 ಕೋಟಿಗಳು (**ಗೊಂದಲ**)

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ. ಆಮೇಲೆ ಮಾತನಾಡಿ.

(**ಗೊಂದಲ**)

**ಶ್ರೀ ಎನ್. ರವಿಕುಮಾರ್:-** (**ಗೊಂದಲ**) ಗ್ಯಾರಂಟಿಗಳಿಗೆ ಹೋಗಿದೆ (**ಗೊಂದಲ**) ಎಲ್ಲಿದೆ ರೂ. 39,000 ಕೋಟಿಗಳು?

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲಿ ಕುಳಿತುಕೊಳ್ಳಿ. ನೀವು ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಯಾವತ್ತು ಕೂಡ ಎಸ್.ಸಿ/ಎಸ್.ಟಿ. ಗಳಿಗೆ ಹೋಗುತ್ತಿಲ್ಲ. ಬಿ.ಜೆ.ಪಿ. ಪಕ್ಷವು ಎಸ್.ಸಿ/ಎಸ್.ಟಿ. ಗಳ ವಿರುದ್ಧ ಇಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅದಾದ ಮೇಲೆ (**ಗೊಂದಲ**)

**ಶ್ರೀ ಎನ್. ರವಿಕುಮಾರ್:-** ಬಿ.ಜೆ.ಪಿ.ಯವರು ಸಾಮಾಜಿಕ ಸಮಾನತೆಯನ್ನು ಕೊಡುತ್ತಿದ್ದರು.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ನಾನು ಅನುಮತಿಯನ್ನು ಕೊಟ್ಟಿಲ್ಲ, ಮಾತನಾಡಬೇಡಿ.

(**ಗೊಂದಲ**)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಇವರು ಅಧಿಕಾರಕ್ಕೆ ಬಂದ ಮೇಲೆ 2019-20ರಲ್ಲಿ ರೂ. 27,391 ಕೋಟಿ, 2020-21ರಲ್ಲಿ ರೂ. 25,950 ಕೋಟಿ, ನಾನು 2017-18ರಲ್ಲಿ ಹೇಳಿದ್ದಕ್ಕಿಂತ ಕಡಿಮೆ ಆಯಿತು. 2021-22ರಲ್ಲಿ ರೂ. 27,021 ಕೋಟಿ, 2022-23ರಲ್ಲಿ ರೂ. 30,263.74 ಕೋಟಿ. ಇವರು ಒಟ್ಟು ಖರ್ಚು ಮಾಡಿರುವುದು ರೂ. 1,60,627 ಕೋಟಿ. ನಾವು ಕಾನೂನು ಮಾಡಿದ ಮೇಲೆ 2014-15, 2015-16, 2016-17, 2017-18ರಲ್ಲಿ ನಾಲ್ಕು ವರ್ಷದಲ್ಲಿ ಖರ್ಚು ಮಾಡಿರುವುದು ರೂ. 80,353 ಕೋಟಿ. There is so much love for these Scheduled Castes and Scheduled Tribes.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಗಳೇ, 25,000 (**ಗೊಂದಲ**) ಗ್ಯಾರಂಟಿಗಳಿಗೆ ಬಳಕೆ ಮಾಡಿದ್ದೀರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ. ಸುಮ್ಮನೆ ಏನೇನೋ ಮಾತನಾಡುತ್ತೀರಿ.

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

(**ಗೊಂದಲ**)

**ಶ್ರೀ ಸಿದ್ದರಾಮಯ್ಯ:-** ಬೇರೆ ಯಾವುದಾದರೂ ನೋಡಿ. ಗ್ಯಾರಂಟಿಗಳಿಗೆ ಆಮೇಲೆ ಉತ್ತರ ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ. ನಿಮಗೆ ಕೊನೆಯಲ್ಲಿ ಅವಕಾಶ ಕೊಡುತ್ತೇನೆ.

(**ಗೊಂದಲ**)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಪದೇ ಪದೇ ಅಡ್ಡಿಪಡಿಸಿದರೆ ನಿಮಗೆ ಅಧಿಕಾರ ಇದೆ. ನಿಯಮ ಮಾಡಬಹುದು. ನೀವು ಅವರನ್ನು suspend ಮಾಡುವಂತಹ ಅವಕಾಶ ಇದೆ. ಪದೇ ಪದೇ ಯಾವಾಗಲಾದರೂ ಎದ್ದೇಳಬಹುದು ಎಂದು ಇದೆಯೇ?

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ನಿಯಮ ಇದೆ. ಮಾನ್ಯ ಮುಖ್ಯಮಂತ್ರಿಯವರು yield ಆದಾಗ ಮಾತನಾಡಬೇಕು. ಕಡತಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದೇನೆ. ಮಾತನಾಡಬಾರದು ಎಂದರೆ ಎಲ್ಲರೂ ತಿಳಿದುಕೊಳ್ಳಬೇಕು. ಅವರೊಬ್ಬರೇ ಅಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನೀವು ಏಳಬೇಡಿ, ಅವರು ಎದ್ದರೆ ನೀವು ಕುಳಿತುಕೊಳ್ಳಬೇಡಿ, come what may This is a democratic setup. They can't take undue advantage.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, Treasury Bench ನವರಿಗೆ ಕೇಳುವ ತಾಳ್ಮೆ ಇರಬೇಕು.

(**ಗೊಂದಲ**)

**ಶ್ರೀ ಸಿದ್ದರಾಮಯ್ಯ:-** ನಿಮಗೂ ಉತ್ತರ ಕೇಳುವಂತಹ ತಾಳ್ಮೆ ಇರಬೇಕು. ಯಾವಾಗಲೂ parliamentary democracy ಯಲ್ಲಿ ತೆಗೆದುಕೊಳ್ಳುವುದು, ಕೊಡುವುದು ಇರುತ್ತದೆ. ಅವರು ಎಲ್ಲವನ್ನೂ ಕೇಳಬೇಕು. ನಾವು ಉತ್ತರ ಕೊಡುವಾಗ ಏನಾದರೂ ;

(**ಗೊಂದಲ**)

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಸಿದ್ದರಾಮಯ್ಯ:-** ನೋಡಿ, ನಾನು ನಿಮ್ಮ ಜೊತೆ ಮಾತನಾಡುವುದಿಲ್ಲ. I don't speak to you. I will speak only through the Hon'ble Chairman. ಎಲ್ಲರೂ ವಿರೋಧಪಕ್ಷದ ನಾಯಕರಾಗಬೇಕು. ನಿಮ್ಮ ಯೋಗ್ಯತೆಗೆ ವಿರೋಧ ಪಕ್ಷದ ನಾಯಕರನ್ನು ಮಾಡಿಕೊಳ್ಳುವುದಕ್ಕಾಗಲಿಲ್ಲ.

(**ಗೊಂದಲ**)

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ನೀವು ಭೌತಿಕವಾಗಿ ದಿವಾಳಿಯಾಗಿದ್ದೀರಿ, ರಾಜಕೀಯ ದಿವಾಳಿಯಾಗಿದ್ದೀರಿ.

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಹಲವು ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದರು)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:-** ನಾನು ಎದ್ದು ನಿಂತರೂ ಮಾತನಾಡುತ್ತೀರಲ್ಲಾ? ಒಂದು ನಿಮಿಷ ಕೇಳಿ. ನಾನು ಹತ್ತು ಸಲ ಹೇಳಿದ್ದೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಅವರಿಗೆ ತಾಳ್ಮೆ ಇಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, (**ಗೊಂದಲ**)

**ಸಭಾಪತಿಯವರು:-** ನೀವೇತಕ್ಕೆ ಮಾತನಾಡುತ್ತೀರಿ? ನಿಮಗೆ ಅಧಿಕಾರ ಯಾರು ಕೊಟ್ಟರು? ನಾನು ಮಾತನಾಡುತ್ತೇನೆ. Treasury Bench ನವರು ಮಾತನಾಡುವಾಗ ಮಾತನಾಡಬಾರದು ಎಂದಿಲ್ಲ. ಮುಖ್ಯಮಂತ್ರಿಗಳು ಮಾತನಾಡುವಾಗ ಯಾರೂ ಮಾತನಾಡಬಾರದು. ಸುಮ್ಮನೇ ಕುಳಿತುಕೊಳ್ಳಿ. ಬರೆದುಕೊಳ್ಳಿ ನಿಮಗೆ ಅವಕಾಶ ಕೊಡುತ್ತೇನೆ. ನಾನು ಹೆಸರು ಬರೆದು ಇಟ್ಟುಕೊಂಡಿದ್ದೇನೆ, ಎಲ್ಲರಿಗೂ ಅವಕಾಶ ಕೊಡುತ್ತೇನೆ. ನಿಮ್ಮೆಲ್ಲರಿಗೂ ಉತ್ತರ ಕೊಡಿಸುವಂತಹ ಕೆಲಸ ಮಾಡುತ್ತೇನೆ. ದಯಮಾಡಿ ನಡುವೆ ಎದ್ದು disturb ಮಾಡಬೇಡಿ. ಈಗ ಯಾರೂ ಮಾತನಾಡುವುದು ಬೇಡ. ಮುಖ್ಯಮಂತ್ರಿಗಳ ಮಾತು ಮುಗಿದ ನಂತರ ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳೇ ಮಾತನಾಡಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾವು ಎತ್ತಿರುವ ಸಮಸ್ಯೆಗೆ ಅವರು ಉತ್ತರ ಕೊಟ್ಟರೆ ಪರವಾಗಿಲ್ಲ. ಅದು ಬಿಟ್ಟು;

(**ಗೊಂದಲ**)

**ಶ್ರೀ ಸಿ.ಟಿ. ರವಿ:-** ಅವರಿಗೆ ಜವಾಬ್ದಾರಿ ಇದೆ (**ಗೊಂದಲ**) ಹೇಳಿದ್ದನ್ನು ಕೇಳುವ ತಾಳ್ಮೆ ಇರಬೇಕು.

(**ಗೊಂದಲ**)

**ಸಭಾಪತಿಯವರು:-** ಯಾರು ಮಾತನಾಡಿದರೂ ಯಾವುದೂ ಕಡತಕ್ಕೆ ಹೋಗಬಾರದು. ಇದೇ ರೀತಿ ಮಾಡಿದರೆ ಸದನವನ್ನು ಮುಂದೂಡಿ ನಾನು ಹೊರಗೆ ಹೋಗುತ್ತೇನೆ. ಕೇಳುವ ಹಾಗಿದ್ದರೆ ಕೇಳಿ. ನಡುವೆ ಎದ್ದೇಳಬಾರದು ಎಂದು ಹೇಳುತ್ತೇನೆ, ಪುನಃ ಎದ್ದೇಳುತ್ತೀರಿ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಅವರನ್ನು ಕೂರಿಸಿ, ನಾವು ಎದ್ದಿದ್ದೇವೆ. ಅವರಿಗೆ ಒಂದು ನ್ಯಾಯ, ನಮಗೆ ಒಂದು ನ್ಯಾಯವೇ? ಅವರು ಎದ್ದು ನಿಂತಿದ್ದಕ್ಕೆ ನಾವು ಎದ್ದು ನಿಂತಿದ್ದೇವೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಕುಳಿತುಕೊಳ್ಳಿ. ನಾನು ಹೇಳುತ್ತೇನೆ. ಅವರು ಮಾಡಿದ ಹಾಗೆ ನೀವೂ ಮಾಡುತ್ತೀರಾ? ಯಾರೂ ಮಾತನಾಡಬೇಡಿ, ಕುಳಿತುಕೊಳ್ಳಿ. ಅವರು ಎದ್ದಾಗ ನೀವೂ ಎದ್ದರೆ ನಿಮಗೂ ಅವರಿಗೂ ವ್ಯತ್ಯಾಸವೇನಿದೆ? (**ಗೊಂದಲ**)

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅನುಮತಿ ಕೊಡಬೇಕು.

**ಸಭಾಪತಿಯವರು:-** ಮಾನ್ಯ ರವಿಯವರೇ, ಒಂದು ನಿಮಿಷ. ಮುಖ್ಯಮಂತ್ರಿಗಳು ಮಾತನಾಡುವಾಗ ನಡುವೆ ತೊಂದರೆ ಮಾಡಿದರೆ ಅದು ಬೇರೆ ಬೇರೆ ರೀತಿ ಹೋಗುತ್ತದೆ. ನಿಮಗೆ ಅವಕಾಶ ಕೊಡುತ್ತೇನೆ, ಆದರೆ ಈಗ ಮಾತನಾಡುವುದು ಬೇಡ. ನಾನು ನಿಮಗೆ ಹೇಳಿದ್ದೇನೆ. ಖಂಡಿತವಾಗಿಯೂ ನಾನು ಯಾರಿಗೂ ನಿಷ್ಕಾಳಜಿ ಮಾಡುವುದಿಲ್ಲ, ಎಲ್ಲರಿಗೂ ಅವಕಾಶ ಕೊಡುತ್ತೇನೆ, ಆಗ ಮಾತನಾಡಿ. ನಿಮ್ಮ ಪ್ರಶ್ನೆ ಏನು ಹೇಳಿ. ಆದರೆ provoke ಮಾಡಬೇಡಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನನ್ನ ಆಕ್ಷೇಪ ಇರುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು Treasury Bench ನ Head ಆಗಿದ್ದಾರೆ. ಅವರಿಗೆ ಜವಾಬ್ದಾರಿ ಇದೆ. ತಾಳ್ಮೆಯಿಂದ;

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

(**ಗೊಂದಲ**)

**ಸಭಾಪತಿಯವರು:-** ನಾನು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಕುಳಿತುಕೊಳ್ಳಿ.

(**ಗೊಂದಲ**)

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನನಗೆ ದುಃಖವಾಗಿದ್ದು ಪ್ರಜಾಪ್ರಭುತ್ವ ಜಬರ್ದಸ್ತಿನ ಮೇಲೆ ನಡೆಯುವುದಿಲ್ಲ.

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು:-** ಜಬರ್ದಸ್ತ್ ಮಾಡುವುದು ನಾವಲ್ಲ.

(**ಗೊಂದಲ**)

(ಮುಂದು)

(585) 22-07-2024 12-50 KH/MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ಮುಂದು):-** ಮಾನ್ಯ ಸಭಾಪತಿಯವರೇ, ಅವರಿಗೆ ಜವಾಬ್ದಾರಿ ಕೊಟ್ಟಿದ್ದಾರೆ ನಾನು ತಪ್ಪು ಮಾಡಿದ್ದೇನೆ ಎನ್ನುವಂತಹ ಒಂದು ಮನೋಭಾವ, ದುರ್ಬಲತೆ ಅವರನ್ನು ಆವರಿಸಿಕೊಂಡಾಗ provocate ಮಾಡುತ್ತಾರೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪಾರ್ಲಿಮೆಂಟ್ . . .

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಅಲ್ಲಿ ವಿರೋಧಪಕ್ಷ ನಾಯಕರ audition ನಡೆಯುತ್ತಿದೆ. ಇವರಿಗೆ ಉತ್ತರ ಕೇಳುವಂತಹ ಆಸಕ್ತಿ ಇಲ್ಲ. ವಿರೋಧಪಕ್ಷದ ನಾಯಕರಿಗೆ audition ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೀವು ಉತ್ತರ ಕೊಟ್ಟುಬಿಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಿ.ಟಿ.ರವಿಯವರೇ, (ಗೊಂದಲ) ನಿಮಗೆ ಬೇಕಾಗಿರುವಂತಹ ರೀತಿಯಲ್ಲಿ ನಾವು ಉತ್ತರವನ್ನು ಕೊಡಬೇಕೇನು? ನೀವು ಎಷ್ಟು ಮಾತನಾಡುತ್ತಿದ್ದೀರಿ. (ಗೊಂದಲ) ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕೆಂದು ಹೇಳುತ್ತೀದ್ದೀರಾ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಸೋಲಿಸಿದರು ಯಾರು? ಅವರನ್ನು ಅಂತಹ ಸಂದರ್ಭದಲ್ಲಿ ಸೋಲಿಸಿ, ಇದರ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ನೈತಿಕತೆ ಎನಿದೆ?

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ಸೋಲಿಸಿದವರು ಹಿಂದೂ ಮಹಾಸಭಾದವರು . . .

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ತುರ್ತು ಪರಿಸ್ಥಿತಿ ಜಾರಿಗೆ ತಂದವರು ಯಾರು?

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ನಿಮಗೇನೂ ಅನಿಸುವುದಿಲ್ಲವೇ?

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೇ ಇಲ್ಲ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೇ ಇಲ್ಲ. ಅವರು ಹೇಗೆ ಬೇಕಾದರೂ ಹಾಗೆ ಮಾತನಾಡಬಹುದೇ? ನಾವು ಅವರಿಗೆ ಬೇಕಾದ ಹಾಗೆ ಮಾತನಾಡಬೇಕೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ನಿಮಗೇನಾದರೂ ಸ್ವಲ್ಪವಾದರೂ . . .

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಬಲ್ಕೀಸ್ ಬಾನುರವರೇ, ನಿಮಗೆ ಯಾರು ಮಾತನಾಡಿ ಅಂದಿದ್ದು? ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಕನಿಷ್ಟಪಕ್ಷ ಮಾನ್ಯ ಮುಖ್ಯಮಂತ್ರಿಯವರನ್ನು ನೋಡಿಯಾದಾರೂ ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಸಿ.ಟಿ.ರವಿಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೆ. ಅವರು ಮಾತನಾಡಿದ್ದಾರೆ. ಈಗ ನಡುನಡುವೆ ಯಾರು ಮಾತನಾಡುವ ಆಗಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಸದನವನ್ನು ನಡೆಸು ಎಂದು ಹೇಳುತ್ತಿರೋ, ಬೇಡ ಎಂದು ಹೇಳುತ್ತಿರೋ? ಇಲ್ಲದಿದ್ದರೆ, ನಾನು ಈ ಕ್ಷಣದಲ್ಲಿಯೇ adjourn ಮಾಡಿಬಿಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಬಂದಿರುವುದು ಮಾನ್ಯ ಮುಖ್ಯಮಂತ್ರಿಗಳ . . .

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಅವರು ಕೇಳುತ್ತಾರೆ. ನಾನು ಅವರಿಗೆ ಹೇಳಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಧ್ಯ ಮಧ್ಯದಲ್ಲಿ ಏಕೆ . . .

**(ಗೊಂದಲ)**

**ಸಭಾಪತಿಯವರು:-** ಇದ್ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಸಭಾಪತಿಯವರ ಆದೇಶದ ಮೇರೆಗೆ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು (ಪೀಠದಿಂದ ಎದ್ದುನಿಂತು):-** ಮಾನ್ಯ ಸದಸ್ಯರುಗಳೇ, ಒಂದು ನಿಮಿಷ. ಇದೇ ರೀತಿ ನೀವು ಮುಂದುವರೆಸಿದರೆ ನಾನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ನಾನು ಉತ್ತರ ಕೊಡಿಸದೇ ಇಲ್ಲಿಗೆ ಮುಕ್ತಾಯ ಮಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು (ಪೀಠದಿಂದ ಎದ್ದುನಿಂತು):-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನಿಮಗೇನಾದರೂ ತಿಳುವಳಿಕೆ ಇದೆ ಏನು? ನಾನು ನಡುವೆ ಎದ್ದು ಮಾತನಾಡಬಾರದು ಎಂದು ಹೇಳುತ್ತೇನೆ. ತಾವು ಎದ್ದು ಮಾತನಾಡುತ್ತೀರಿ. ಅವರು ಉತ್ತರ ಹೇಳುವಾಗ ಬರೆದು ಇಟ್ಟುಕೊಳ್ಳಿ ಎಂದು 10 ಬಾರಿ ಹೇಳಿದ್ದೇನೆ. ಇನ್ನು ಎಷ್ಟು ಸಾರಿ ಹೇಳಬೇಕು. ಇನ್ನು ಮುಂದೆ ಇದೇ ರೀತಿ ನಡೆಸಿದರೆ ನಾನು ಖಂಡಿತವಾಗಿ adjourn ಮಾಡಿ ಹೋಗುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳೇ ತಾವು ಮಾತನಾಡಿ.

**ಡಾ॥ ಎಂ.ಆರ್.ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಂ.ಆರ್.ಸೀತಾರಾಂರವರೇ, ನೀವು ಮಾತನಾಡಬೇಡಿ. ನೀವು ಏಕೆ ಮಾತನಾಡುತ್ತೀರಿ? ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ ಎಂದು ನಿಮಗೆ ಬೇಕಾದ ಹಾಗೆ ಮಾತನಾಡುವುದೇ? ನಿಮಗೆ please ಮಾಡುವುದಕ್ಕೆ ಹೇಳುತ್ತಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಎಸ್‌ಸಿಪಿ., ಟಿಎಸ್‌ಪಿ., ಆಕ್ಟ್ ಅನ್ನು . . .

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ನನ್ನ ಕಡೆ ನೋಡಿ ಮಾತನಾಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ತಮಗೇ address ಮಾಡುತ್ತಿರುವುದು. ನಾನು ಸಭಾಪತಿಯವರಿಗೆ address ಮಾಡುತ್ತೀನಿ. ಆ ಕಡೆ ನೋಡುವುದು ಇಲ್ಲ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ನೀವು ಅವರಿಗೆ provoke ಮಾಡುತ್ತೀರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅವರು provoke ಮಾಡುತ್ತಾರೆ, ನಾನು provoke ಆಗುವುದಿಲ್ಲವೇ? (ಗೊಂದಲ) ನಾನು provoke ಆಗುವುದೇ ಇಲ್ಲ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ನೀವು Provoke ಮಾಡಬೇಡಿ ಎಂದು ಅವರಿಗೆ ಹೇಳಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಒಂದು ಸಾರಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ದಯಮಾಡಿ, ಅವರು ಕುಳಿತುಕೊಳ್ಳಲಿ. ಆಮೇಲೆ ನಾನು ಸ್ಪಷ್ಟೀಕರಣವನ್ನು ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, right, agreed.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಹೇಳಿದಂತೆ, ಎಸ್‌ಸಿಪಿ/ಟಿಎಸ್‌ಪಿ., ಕಾನೂನನ್ನು ತಂದವರು, ಅಸೆಂಬ್ಲಿನಲ್ಲಿ ಪಾಸ್ ಮಾಡಿದವರು, ಅದನ್ನು ಜಾರಿಗೆ ಕೊಟ್ಟವರು ನಮ್ಮ ಪಕ್ಷದ ಸರ್ಕಾರ. ನಾನು ಈಗಾಗಲೇ ಓದಿ ಹೇಳಿದ್ದೇನೆ. ನಮ್ಮ ಕಾಲದಲ್ಲಿ ಎಷ್ಟು ಹಣ ಖರ್ಚಾಯಿತು, ಅವರ ಕಾಲದಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ನಾನು ಹೇಳಿದ್ದೇನೆ. ಏಕೆ ಅವರ ಕಾಲದಲ್ಲಿ ಕಡಿಮೆಯಾಯಿತು ಎಂದು ಕೂಡ ಹೇಳಿದ್ದೇನೆ. ಏಕೆಂದರೆ, ಅವರಿಗೆ ಬದ್ಧತೆ ಇರಲಿಲ್ಲ. ಅದಕ್ಕೋಸ್ಕರ ಅವರು ಕಡಿಮೆ ಮಾಡಿದರು. ಬಜೆಟ್ ಗಾತ್ರ ಜಾಸ್ತಿಯಾಗುತ್ತಿದ್ದರೂ ಕೂಡ ಎಸ್‌ಸಿ ಎಸ್‌ಪಿ/ಟಿಎಸ್‌ಪಿ., ಹಣ ಕಡಿಮೆ ಮಾಡಿದರು. ನಾವು ಈಗ ಅಧಿಕಾರಕ್ಕೆ ಬಂದ ಮೇಲೆ ಕಳೆದ ಬಜೆಟ್‌ನಲ್ಲಿ ರೂ.34,000 ಕೋಟಿ . . .

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಅದು ಈ ವರ್ಷ. ನೀವು attentive ಇಲ್ಲದೇ ಹೋದರೆ ಏನು ಮಾಡುವುದು? 2024-25ನೇ ಸಾಲಿನಲ್ಲಿ ರೂ.39,121 ಕೋಟಿ, 2023-24ನೇ ಸಾಲಿನಲ್ಲಿ ರೂ.34,000 ಕೋಟಿ ಚಿಲ್ಲರೆ, ಅದು ಕೊನೆಗೆ ರೂ.25,000 ಕೋಟಿಗಳಾಯಿತು. ಗೊತ್ತಾಯಿತೇ? ಅದು ನಮ್ಮ ಕಾಲದಲ್ಲಿ ಜಾಸ್ತಿಯಾಯಿತು. ಆಮೇಲೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಈ ಕಂಟ್ರಾಕ್ಟ್‌ಗಳಲ್ಲಿ ಮೀಸಲಾತಿ ಕಾನೂನು ತಂದವರು ಯಾರು? ಬಿಜೆಪಿ.,ಯವರೇ, ಅಲ್ಲ. ನಮ್ಮ ಪಕ್ಷದ ಸರ್ಕಾರ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ಹರ್ಷ ವ್ಯಕ್ತಪಡಿಸಿದರು)**

Reservation in promotion ಅನ್ನು ಇಡೀ ದೇಶದಲ್ಲಿ ಕಂಟ್ರಾಕ್ಟ್‌ನಲ್ಲಿ ಮೀಸಲಾತಿಯನ್ನು ತಂದಿರುವಂತಹ ಸರ್ಕಾರ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ. ಅದು ಕಾಂಗ್ರೆಸ್ ಸರ್ಕಾರ. ಬೇರೆ ಯಾವ ಸರ್ಕಾರವೂ ಅಲ್ಲ. Not only in Karnataka, ಇಡೀ ದೇಶದಲ್ಲಿ. ಅನೇಕ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾರೆಯಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ಬಿಜೆಪಿ., ಸರ್ಕಾರ ಅಧಿಕಾರದಲ್ಲಿ ಇದೆಯಲ್ಲವೇ? ಇದನ್ನು ಏಕೆ ತಂದಿಲ್ಲ. ಎಸ್‌ಸಿಪಿ/ಟಿಎಸ್‌ಪಿ., ಕಾಯ್ದೆ ಏಕೆ ತಂದಿಲ್ಲ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದನ್ನು ಈ ದೇಶದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ತಂದಿರುವುದು. ಇದರ ಬಗ್ಗೆ ಕಡತಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರೇ, ಆಯಿತು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, Reservation in promotion, ಅನ್ನು ಶ್ರೀಮತಿ ರತ್ನಪ್ರಭಾ ರವರು ಮುಖ್ಯ ಕಾರ್ಯದರ್ಶಿಯಾಗಿ ಇರುವಾಗ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ, ವರದಿಯನ್ನು ತೆಗೆದುಕೊಂಡು ಆ ವರದಿಯ ಆಧಾರದ ಮೇಲೆ ಇಡೀ ದೇಶದಲ್ಲಿ ಕಾನೂನು ಮಾಡಿದಂತಹ ಸರ್ಕಾರ, ಕರ್ನಾಟಕದಲ್ಲಿ ಮೊದಲನೆಯ ಸರ್ಕಾರ ಅದು ಕಾಂಗ್ರೆಸ್ ಪಕ್ಷದ ಸರ್ಕಾರ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ಹರ್ಷ ವ್ಯಕ್ತಪಡಿಸಿದರು)**

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರೇ, ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರೇ, ಮಹರ್ಷಿ ವಾಲ್ಮೀಕಿ ವಿಚಾರಕ್ಕೆ ಬನ್ನಿ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಮುಖ್ಯಮಂತ್ರಿಯವರೇ, ವಾಲ್ಮೀಕಿ ನಿಗಮದ ಬಗ್ಗೆ ಮಾತನಾಡಿ. ಬಜೆಟ್ ಬಗ್ಗೆ ಅಲ್ಲ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಹರ್ಷಿ ವಾಲ್ಮೀಕಿ ವಿಚಾರಕ್ಕೆ ಬರಬೇಕಾದರೆ, ಈಗ ಅವರೆಲ್ಲಾ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ನಾವು ದಲಿತರ ವಿರೋಧಿಗಳಿದ್ದೇವೆ ಎಂದರೆ, can we keep quite?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಮುಖ್ಯಮಂತ್ರಿಯವರೇ, ಹೌದು ನೀವು ವಿರೋಧಿಗಳೇ . . .

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನಾನೇ ತಮ್ಮನ್ನು ಛೇರ್‌ಮನ್ ಮಾಡಿದ್ದೇವೆ ಕುಳಿತುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ ಕುಳಿತುಕೊಳ್ಳಿ.

**(ಗೊಂದಲ)**

**ಡಾ|| ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಹೆಚ್.ಸಿ.ಮಹದೇವಪ್ಪನವರೇ, ಹೇಳಿ.

**ಡಾ|| ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, 2017-18ನೇ ಸಾಲಿನಲ್ಲಿ ಕೋರ್ಟ್‌ನಲ್ಲಿ PTCL [Scheduled Castes and Scheduled Tribes(Prohibition of Transfer of Certain Lands)] ನ ಅರ್ಜಿಗಳ ವಿಲೇವಾರಿಯನ್ನು ಎಷ್ಟು ದಿನ ಎಂದು ರದ್ದು ಮಾಡಿಬಿಟ್ಟರು. ಆಗ ಇವರ ಸರ್ಕಾರ ಇತ್ತು. Overnight ಎಸ್‌ಸಿ/ಎಸ್‌ಟಿ., PTCL ಅರ್ಜಿಗಳನ್ನೆಲ್ಲಾ clear ಮಾಡಿಬಿಟ್ಟರು. ಮಾನ್ಯ ಸಿ.ಟಿ.ರವಿಯವರು, ಮಾನ್ಯ ಆರ್.ಅಶೋಕ್‌ರವರಿಗೆ ಎಲ್ಲಾ ಚೆನ್ನಾಗಿ ಗೊತ್ತು. ದಲಿತರ ಕಾಳಜಿ ಗೊತ್ತಿಲ್ಲವೇ? 2023-24ನೇ ಸಾಲಿನಲ್ಲಿ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಬಂದಾಗ ದಲಿತರಿಗೆ ಆದಂತಹ Scheduled Castes and Scheduled Tribes (Prohibition of Transfer of Certain Land Act ನ್ನು ವಾಪಸ್ಸು ತೆಗೆದುಕೊಂಡು ಬಂದೆವು. ಆಗ ದಲಿತರ ಕಾಳಜಿ ಎಲ್ಲಿಗೆ ಹೋಗಿತ್ತು? ಎಷ್ಟು ಲಕ್ಷ . . .

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದವರು 'ಶೇಮ್, ಶೇಮ್' ಎಂದು ಕೂಗಿದರು)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರು ಮತ್ತು ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಇವರಿಬ್ಬರು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಸಭಾಪತಿಯವರ ಆದೇಶದ ಮೇರೆಗೆ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸುನೀಲ್ ವಲ್ಯಾಪುರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ಮಾನ್ಯ ಸುನೀಲ್ ವಲ್ಯಾಪುರೆ ರವರೇ, ಒಂದು ನಿಮಿಷ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಪರವೂ ಇಲ್ಲ. ಅಭಿವೃದ್ಧಿ ಪರವೂ ಇಲ್ಲ. ಪ್ರತಿಯೊಂದು ವಿಷಯದಲ್ಲಿಯೂ . . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಹೆಚ್.ಸಿ.ಮಹದೇವಪ್ಪನವರೇ, ಒಂದು ನಿಮಿಷ. ಮಾನ್ಯ ಸುನೀಲ್ ವಲ್ಯಾಪುರೆ ರವರೇ, ನನ್ನ ಅನುಮತಿ ಇಲ್ಲದೇ ಪದೇ ಪದೇ ಎದ್ದರೆ ನಾನು ಬೇರೆ ಹೇಳಬೇಕಾಗುತ್ತದೆ. ನಾನು ಒಂದು ಸಾರಿ ಕೇಳಿದ್ದೇನೆ.

(ಮುಂದು)

(586) 22.7.2024 1.00 ಪಿಕೆ:ಎಕೆ

**(ಗೊಂದಲ)**

**ಸಭಾಪತಿಯವರು:-** ಸಭಾನಾಯಕರೇ, ನಿಮ್ಮ ಪಕ್ಷದವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಮಾನ್ಯ ಮುಖ್ಯಮಂತ್ರಿಗಳು ಕುಳಿತುಕೊಂಡಿದ್ದಾರೆ. ನೀವು ಏಕೆ ಹೀಗೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಪ್ರತಿಪಕ್ಷದ ಸದಸ್ಯರು ಎದ್ದು ನಿಂತು ಮಾತನಾಡಬಹುದೇ?

**(ಗೊಂದಲ)**

**ಸಭಾಪತಿಯವರು:-** ಅವರು ಮಾತನಾಡಿದರೆ ನೀವು ಏಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೆ, ಅವರು ನಿಮ್ಮ ಮಾತುಗಳನ್ನೂ ಕೇಳುತ್ತಿಲ್ಲ.

**ಸಭಾಪತಿಯವರು:-** ಅವರನ್ನು ಸುಮ್ಮನಾಗಿಸುವುದು ನನ್ನ ಜವಾಬ್ದಾರಿಯಾಗಿದೆ. ನೀವು ಏಕೆ ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತೀರಿ? ಮಾನ್ಯ ಸಭಾನಾಯಕರೇ, ದಯವಿಟ್ಟು ನಿಮ್ಮ ಸದಸ್ಯರಿಗೆ ಹೇಳಿ. ನಾನು ಇಂಥದ್ದನ್ನು ಸಹಿಸುವುದಿಲ್ಲ. ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೆ, ನನ್ನ ಅನುಮತಿ ಇಲ್ಲದೇ ಎದ್ದುನಿಂತು ಮಾತನಾಡಿದರೆ ಬೇರೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನನ್ನ ಅನುಮತಿ ತೆಗೆದುಕೊಂಡು ಮಾತನಾಡಿ. ಮಧ್ಯದಲ್ಲಿ ಎದ್ದುನಿಂತು ಮಾತನಾಡಿದರೆ ಹೊರಗೆ ಹಾಕಬೇಕಾಗುತ್ತದೆ. ನಾನು seriously ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಟಿ.ಶರವಣ:-** ಮಾನ್ಯ ಸಭಾಪತಿಗಳೆ, ಅವರ ಪಕ್ಷದವರೇ ಮಧ್ಯದಲ್ಲಿ ಎದ್ದು ನಿಂತು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮತ್ತೇಕೆ ಎದ್ದು ನಿಂತು ಮಾತನಾಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೆ, ಇಲ್ಲಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಬಗ್ಗೆ ಚರ್ಚೆ ಆಗುತ್ತಿದೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷದಲ್ಲಿ ಮೂರ್ಮೂರು ಸಲ ಎದ್ದು ನಿಂತುಕೊಂಡು ಮಾತನಾಡುತ್ತಿದ್ದಾರೆ. ನಾನು ಎಷ್ಟು ಸಲ ಈ ರೀತಿ ಮಾಡಬೇಡಿ ಎಂದು ಹೇಳಬೇಕು?

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೆ, ಈ ಕಡೆಯವರು ಎದ್ದ ತಕ್ಷಣ ಆ ಕಡೆಯವರೂ ಸಹ ಎದ್ದು ನಿಂತು ಮಾತನಾಡುತ್ತಿದ್ದಾರೆ. ಆಡಳಿತ ಪಕ್ಷದವರಿಗೆ ತಾಳ್ಮೆ ಇರಬೇಕು.

**(ಗೊಂದಲ)**

**ಸಭಾಪತಿಯವರು:-** ಯಾರು ಮಾತನಾಡಬೇಕು ಎನ್ನುವವರ ಹೆಸರನ್ನು ನಾನು ಬರೆದಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ಮೇಲೆ ಅವರ ಹೆಸರುಗಳನ್ನು ಕರೆಯುತ್ತೇನೆ, ಆಗ ಅವರು ಕ್ಲ್ಯಾರಿಫಿಕೇಷನ್ ಕೇಳಲಿ. ಎಷ್ಟೇ ಕ್ಲ್ಯಾರಿಫಿಕೇಷನ್ ಕೇಳಿದರು ಅದಕ್ಕೆ ಉತ್ತರ ಕೊಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಮತ್ತೆ, ನಾನು ಮುಖ್ಯಮಂತ್ರಿಗಳಿಗೆ, ನೀವು ಇದೇರೀತಿ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಬೇರೆ ಬೇರೆ ದೃಷ್ಟಿಕೋನದಿಂದ ಮಾತನಾಡುವಾಗ ಕೆಲವು ಅಂಶಗಳನ್ನು ಪ್ರಸ್ತಾಪಿಸಬೇಕಾಗುತ್ತದೆ. ಎಸ್.ಸಿ./ಎಸ್.ಟಿ ಅವರಿಗೆ ಅನ್ಯಾಯ ಮಾಡಿಲ್ಲ ಎಂದು ಹೇಳುವ ಆಬರ್ಟಿ ಅವರಿಗೆ ಇದೆ. ನೀವು ಹೀಗೆಯೇ ಮಾತನಾಡಿ ಎಂದು ನಾನು ಮುಖ್ಯಮಂತ್ರಿಗಳಿಗೆ ಹೇಗೆ ಹೇಳಲಿ?

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಗಳೆ, ಈಗಾಗಲೇ ಡಾ|| ಮಹದೇವಪ್ಪನವರು PTCL ಕಾಯಿದೆ [The Karnataka Scheduled Castes and Scheduled Tribes (Prohibition of Transfer of Certain Lands) Act] ಬಗ್ಗೆ ಮಾತನಾಡಿದ್ದಾರೆ. ಇವರು ಅಧಿಕಾರದಲ್ಲಿದ್ದಾಗ ತಿದ್ದುಪಡಿಯನ್ನೇ ಮಾಡಲಿಲ್ಲ. ನಾವು ಬಂದ ಮೇಲೆ ತಿದ್ದುಪಡಿ ಮಾಡಿದೆವು. ಅವರಿಗೆ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿಯವರ ಮೇಲೆ ಕಾಳಜಿ ಇದ್ದಿದ್ದರೆ ತಿದ್ದುಪಡಿ ಮಾಡಬಹುದಾಗಿತ್ತಲ್ಲವೇ? ಸೆಕ್ಷನ್ 7(ಡಿ) ಯನ್ನು ನಾವು ತೆಗೆದು ಹಾಕಿದೆವು. ಅವರು 3-4 ವರ್ಷ ಅಧಿಕಾರದಲ್ಲಿದ್ದರು, ಆಗೇನಾದರೂ ತೆಗೆದು ಹಾಕಿದರೇ? ತೆಗೆದು ಹಾಕಲಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ 'Reservation in Promotion' ಏನಿದೆ ಅದಕ್ಕೊಂದು ಕಾಯಿದೆ ಮಾಡಿದೆವು. ಸುಪ್ರೀಂ ಕೋರ್ಟ್‌ನವರು, ಅದು ಸಂವಿಧಾನ ಬಾಹಿರ ಎಂದು ಒಡೆದು ಹಾಕಿತು. ಆಗ ನಾನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾಗಿದ್ದ ಶ್ರೀಮತಿ ರತ್ನಪ್ರಭಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ವರದಿ

ತರಿಸಿಕೊಂಡೆವು. ಸುಪ್ರೀಂ ಕೋರ್ಟ್‌ನ ತೀರ್ಪನ್ನೂ ಇಟ್ಟುಕೊಂಡು, ಸಂವಿಧಾನವನ್ನೂ ಇಟ್ಟುಕೊಂಡು, ಸಂವಿಧಾನದ ರೀತ್ಯಾ ಹೇಗೆ ಸಹಾಯ ಮಾಡುವುದಕ್ಕಾಗುತ್ತದೆ ಎಂಬುದನ್ನು ನೋಡಿ ಒಂದು ಕಾನೂನನ್ನು ಮಾಡಿದೆವು. Luckily, for the Scheduled Castes and Scheduled Tribes, it was upheld by the Supreme Court. ಇದನ್ನು ಇಡೀ ದೇಶದಲ್ಲಿ ಏಕೆ ಮಾಡಲಿಲ್ಲ? ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಬಗ್ಗೆ ಕಾಳಜಿ ಇದ್ದಿದ್ದರೆ ಯಾವುದೇ ರಾಜ್ಯಗಳಲ್ಲಿ ಏಕೆ ಮಾಡಲಿಲ್ಲ? ಕೇಂದ್ರದಲ್ಲೂ ಸಹ ಮಾಡಲಿಲ್ಲ.

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೆ, ಮಾನ್ಯ ವಾಜಪೇಯಿಯವರ ಸರ್ಕಾರ ಮಾಡಿತ್ತು.

**ಸಭಾಪತಿಯವರು:-** ನೀವು ಅದನ್ನು ಆಮೇಲೆ ಹೇಳಿ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಇದುವರೆಗೂ ಕೇಂದ್ರ ಸರ್ಕಾರ ಮಾಡಿಲ್ಲ. ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ is not only the number one State, but this is the only State; ಇದು ಕರ್ನಾಟಕದಲ್ಲೇ ಮಾಡಿರುವಂಥದ್ದಾಗಿದೆ. ಮಾನ್ಯ ಸಭಾಪತಿಗಳೆ, ಇವರು ನಮಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಬಗ್ಗೆ, ಅವರ ಹಿತದ ಬಗ್ಗೆ, ಅವರ ಅಭಿವೃದ್ಧಿ ಮಾಡುವುದರ ಬಗ್ಗೆ ಹೇಳಬೇಕಾಗಿಲ್ಲ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಏನು ಹೇಳಿದರು? ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ, ಕೇವಲ ರಾಜಕೀಯ ಸ್ವಾತಂತ್ರ್ಯ ಬಂದರೆ ಸಾಲದು; ಪ್ರತಿಯೊಬ್ಬರಿಗೂ ಕೂಡ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಬಡವರಿಗೆ, ಆರ್ಥಿಕವಾಗಿ, ಸಾಮಾಜಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ರಾಜಕೀಯ ಸ್ವಾತಂತ್ರ್ಯ ಸಾರ್ಥಕ ಆಗುವುದಕ್ಕೆ ಸಾಧ್ಯ ಎಂದು ಹೇಳಿದರು. ದಿನಾಂಕ 25ನೇ ನವೆಂಬರ್ 1949ರಲ್ಲಿ Constituent Assembly ನಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮಾಡಿರುವಂತಹ ಭಾಷಣ ಓದಬೇಕು. ಅದು ಇವರಿಗೆ ಅರ್ಥವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. 1949 ನವೆಂಬರ್ 25ನೇ ತಾರೀಖಿನ ದಿನ ಡಾ॥ ಅಂಬೇಡ್ಕರ್‌ರವರು ಐತಿಹಾಸಿಕ ಭಾಷಣವನ್ನು ಮಾಡಿದ್ದರು. ದಿನಾಂಕ 26ರಂದು ಲೋಕಸಭೆಯಲ್ಲಿ ಸಂವಿಧಾನವನ್ನು ಮಂಡಿಸಿ ಅಂಗೀಕಾರ ಆಯಿತು. ಮಾನ್ಯ ಅಂಬೇಡ್ಕರ್‌ರವರು 25 ದಿನಾಂಕದಂದು ಭಾಷಣ ಮಾಡಿದ್ದರು. It is an historical speech made by Dr. Babasaheb Ambedkar. ಅದು ಓದದೇ ಇರುವುದರಿಂದ ಇವರಿಗೆ ಇಷ್ಟೊಂದು ಗೊಂದಲವಾಗುತ್ತಿದೆ. ಇವರಿಗೆ ಯಾವುದೇ ಬದ್ಧತೆ ಇಲ್ಲ. ಅದು ಓದಬೇಕಲ್ಲಾ?

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ನಸೀರ್ ಅಹ್ಮದ್‌ರವರು, ಮಾನ್ಯ ಸಚಿವರಾದ ಪ್ರಿಯಾಂಕ್ ಖರ್ಗೆಯವರು ಮತ್ತು ಇನ್ನಿತರ ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದರು)**

**(ಗೊಂದಲ)**

**ಸಭಾಪತಿಯವರು:-** ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಇವರು ಈ ರೀತಿ ಗಲಾಟೆ ಮಾಡುತ್ತಿದ್ದರೆ ನಾನು ಮಾತನಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಮಾನ್ಯ ಶರವಣರವರೇ, ಮಾನ್ಯ ಶರಣಪ್ರಕಾಶ್ ಪಾಟೀಲ್‌ರವರೇ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

(ಮುಂದು)

(587) 22-7-2024 1.10 ಡಿಎಸ್-ಎಕೆ

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರಿಗೆ, ನಿಮಗೆ ಯಾರಿಗೂ ಇದೇ ರೀತಿ ಮಾತನಾಡಿ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಒಂದೊಂದು ಮಾತನಾಡುವಾಗ ಅದರ contents ಹೇಳುತ್ತಿರುತ್ತಾರೆ, ಅದನ್ನು ನೀವು ಕೇಳಬೇಕು. ಅದನ್ನು ಬಿಟ್ಟು ನೀವು ಇದೇ ರೀತಿ ಮಾತನಾಡಿ ಎಂದು ಹೇಳುವುದಕ್ಕೆ ನನಗೂ ಅಧಿಕಾರವಿಲ್ಲ, ನಿಮಗೂ ಅಧಿಕಾರವಿಲ್ಲ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಹರ್ಷಿ ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ಮಾತನಾಡುವುದಕ್ಕೆ ಹೇಳಿ. ಅವರು ವಿಷಯಾಂತರ ಮಾಡಿದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅಜ್ಞಾನಿಯಿಂದ ಅಪಾಯವಿಲ್ಲ. ಆದರೆ ಅಲ್ಪ ಜ್ಞಾನಿಯಿಂದ ಅಪಾಯವಿದೆ. ಅಜ್ಞಾನಿಯಿಂದ ಸಮಾಜಕ್ಕೆ ಹಾನಿ ಇಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಕುಳಿತುಕೊಳ್ಳಿ. ಮಾನ್ಯ ಸಿ.ಟಿ.ರವಿಯವರೇ, ತಾವು 2 ಗಂಟೆ 20 ನಿಮಿಷಗಳ ಕಾಲ ಮಾತನಾಡಿದ್ದೀರಿ. ಜಗತ್ತಿನಲ್ಲಿರುವುದೆಲ್ಲಾ ಮಾತನಾಡಿದ್ದೀರಿ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, **XXX** ಎಲ್ಲರ ಬಗ್ಗೆಯೂ ಅವರು ಮಾತನಾಡಿದರು. ಈಗ ನಮಗೆ ಪಾಠ ಹೇಳುತ್ತಿದ್ದಾರಲ್ಲಾ; ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆ, ನಮಗೆ ಮಾತನಾಡುವುದಕ್ಕೆ ಅವಕಾಶ ಇಲ್ಲವೇ?

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಸಭಾಪತಿಯವರು:-** ಇದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್. ನನ್ನ ವಿಷಯವೇನೆಂದರೆ,…..

**ಸಭಾಪತಿಯವರು:-** ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಭಾಷಣ ಮುಗಿಯುವವರೆಗೆ ನೀವು ಯಾರು ಮಾತನಾಡತಕ್ಕದ್ದಲ್ಲ. ಭಾಷಣ ಮಾಡುವಾಗ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಭಾಷಣ ಮುಗಿದ ಮೇಲೆ ನೀವು ಕೇಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಹರ್ಷಿ ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ಮಾತನಾಡಬೇಕು ಎನ್ನುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಅವರು ಮಾತನಾಡುತ್ತಿದ್ದಾರೆ.

**ಸಭಾಪತಿಯವರು:-** ನಾನು ನಿಮಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿಲ್ಲ, ಕೊಡುವುದಿಲ್ಲ. ನೀವು ಮತ್ತೆ ಮಾತನಾಡಿದರೆ ಅದು ಬೇರೆಯಾಗುತ್ತದೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲವೆಂದರೆ ಹೇಗೆ?

**ಸಭಾಪತಿಯವರು:-** ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲವೆಂದು ತಾವೇ ಹೇಳುತ್ತಿದ್ದೀರಿ. ಅದರ ಮೇಲೆ ಅವರು ರೂಲಿಂಗ್ ಕೊಡಬೇಕೇ?

**(ಗೊಂದಲ)**

**ಶ್ರೀ ಸುನೀಲ್‌ಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್ ವಲ್ಯಾಪುರ್‌ರವರು ವಿರೋಧ ಪಕ್ಷ ನಾಯಕರಾಗುವುದಕ್ಕೆ ಸ್ಪರ್ಧೆ ಮಾಡುತ್ತಿದ್ದಾರೆ, ಮಾಡಲಿ ಬಿಡಿ. This is all competition for Leader of Opposition.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**ಸಭಾಪತಿಯವರು:-** ನಿಯಮಾವಳಿ ಪುಸ್ತಕದಲ್ಲಿರುವುದನ್ನು ಓದಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ವಿಷಯಾಂತರವಾಗಿದೆ. ನಾನು ಓದಿದ್ದೇನೆ. ತಾವು ನನಗೆ ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ಆಗಿರುವಂತಹ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಬದಲು ಸಂವಿಧಾನದ ಬಗ್ಗೆ ಮಾತನಾಡುತ್ತಾರೆ. **(ಗೊಂದಲ)**

**ಸಭಾಪತಿಯವರು:-** ಅವರು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತನಾಡುತ್ತಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಯನ್ನು ತಂದಿರುವಂಥದ್ದು ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ಆಗಿರುವಂತಹ ಭ್ರಷ್ಟಾಚಾರದ ಬಗ್ಗೆ.

**(ಗೊಂದಲ)**

**ಸಭಾಪತಿಯವರು:-** ಇದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ನಾನು ಪಾಯಿಂಟ್ ಆಫ್ ಆರ್ಡರ್‌ಗೆ ಅನುಮತಿಯನ್ನು ಕೊಟ್ಟಿಲ್ಲ, ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ವಿಷಯಾಂತರ ಮಾಡಿದ್ದಾರೆ. **(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನೀವು ಅವರಿಗೆ ಎಷ್ಟು ಸಲ ಹೇಳಬೇಕು, ಆಚೆ ಹಾಕುತೇವೆಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಬಿಡುತ್ತಿಲ್ಲ. ಇದು ಅವರ ಷಡ್ಯಂತರವಾಗಿದೆ. ತಾವು ಎಷ್ಟು ಸಲ ಅವರಿಗೆ ಹೇಳಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಅವರು ಉತ್ತರವನ್ನು ತಾಳ್ಮೆಯಿಂದ ಕೇಳಬೇಕಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬಾರದೆಂದು ಅವರು ಪ್ರಯತ್ನ ಪಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ನಿಮಗೆ ಉತ್ತರ ಬೇಕೋ ಬೇಡವೋ? ಮಾನ್ಯ ಮುಖ್ಯಮಂತ್ರಿಯವರಿಗೆ ಇದೇ ರೀತಿ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಒಂದಕ್ಕೊಂದು connection ಇದ್ದಾಗ ಕೆಲವು ವಿಷಯಗಳನ್ನು ಮಾತನಾಡುತ್ತಿರುತ್ತಾರೆ. ಅವರೇನು ದಾರಿ ಬಿಟ್ಟು ಹೋಗಿಲ್ಲ. ಕೆಲವು ವಿಷಯಗಳನ್ನು ಮಾತನಾಡುವಾಗ ನಿಯಮಗಳನ್ನು ಹೇಳಬೇಕಾಗುತ್ತದೆ. ಅದು ಒಂದಕ್ಕೊಂದು connect ಆಗಿರುವುದಕ್ಕೆ ಅವರು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿಕೊಂಡಿರುವಂಥವನು. ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವಂಥವನು. ಈಗ ಅವರು

ಮಾತನಾಡಿದ್ದಾರೆ. ಸುಮಾರು 9 ಜನರು ಮಾತನಾಡಿದ್ದಾರೆ. ಅವರು ಮಾತನಾಡುವಾಗ ನಾನು ಇರಬೇಕಾಗಿತ್ತು, ನಾನು ಇರಲಿಲ್ಲ. ನಾನು ಕೆಳಮನೆಯಲ್ಲಿದ್ದೆ ಹಾಗಾಗಿ ಇಲ್ಲಿಗೆ ಬರುವುದಕ್ಕಾಗಲಿಲ್ಲ. ಅವರು ಮೂರು ಸಲ, ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದವರು ಎಂದು ಉಪಯೋಗಿಸಲಿಲ್ಲ. ದಲಿತರು, ದಲಿತರು, ದಲಿತರು ಎಂದು ಹೇಳಿದರು. ನಾವು ದಲಿತರ ವಿರೋಧಿಗಳಲ್ಲ, ನಾವು ದಲಿತರ ಪರವಾಗಿದ್ದೇವೆ, ನಾವು ಪರವಾಗಿರುವುದಕ್ಕೆ ಏನಲ್ಲಾ ಮಾಡಿದ್ದೇವೆಂದು ಹೇಳಬೇಕಲ್ಲವೇ? ಅದನ್ನು ಹೇಳುತ್ತಿದ್ದರೆ, ವಿಷಯಾಂತರ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ದುಡ್ಡು ಅಲ್ಲಿ ಹೋಯಿತು, ಇಲ್ಲಿ ಹೋಯಿತು ಎಂದು ಹೇಳುವುದು ವಿಷಯಾಂತರವಲ್ಲವೇ? ಸಿದ್ಧರಾಮಯ್ಯನವರು ರಾಜೀನಾಮೆ ಕೊಡಬೇಕೆಂದು ಹೇಳುವುದು ವಿಷಯಾಂತರವಲ್ಲವೇ? ದಲಿತರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳುವುದು ವಿಷಯಾಂತರವಲ್ಲವೇ? ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ಹಗರಣವಾಗಿದೆ ಎನ್ನುವುದನ್ನು ನಾನು ಒಪ್ಪಿಕೊಂಡಿದ್ದೇನೆ. ತನಿಖೆ ನಡೆಯುತ್ತಿದೆ.

**(ಗೊಂದಲ)**

ಡಾ॥ **ಎಂ.ಆರ್.ಸೀತಾರಾಂ:- XXX**

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಯಾರು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್:-** ಮಾನ್ಯ ಸಭಾಪತಿಯವರೇ, **XXX** ಅವರಿಗೆ ನಾಚಿಕೆಯಾಗಬೇಕು.

**(ಗೊಂದಲ)** (ಮುಂದು)

(588) 22/07/2024 1:20/ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಾನು ಲಿಖಿತ ಹೇಳಿಕೆಯನ್ನು ಓದುತ್ತೇನೆ; ಅದು ರೆಕಾರ್ಡ್ ಆಗಲಿ. **(ಗೊಂದಲ)** ನಾನು ಉತ್ತರಿಸುವಾಗ ನನಗೆ ಅಡ್ಡಿ ಪಡಿಸುತ್ತಾರೆ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಶ್ರೀ ಎಸ್.ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಸಭಾಪತಿಯವರು:-** ಶ್ರೀ ಕೇಶವ ಪ್ರಸಾದ್‌ರವರೇ ನಾನು ಹೇಳುವುದನ್ನು ಕೇಳಿ. ಯಾರಾದರೂ **XXX** ಮಾತನಾಡಿದ್ದರೆ ಅದನ್ನು ಕಡತದಿಂದ ತೆಗೆಯಿರಿ.

**ಶ್ರೀ ಎಸ್.ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೆ, **XXX** ...

**(ಗೊಂದಲ)**

**ಸಭಾಪತಿಯವರು:-** ನಾನು ಅದನ್ನೇ ಹೇಳಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಅವರು ಮಾತನಾಡುವುದು ..., **(ಗೊಂದಲ)** ಅವರು ಹೇಳಿದ್ದನ್ನೆಲ್ಲಾ ನಾವು ಕೇಳಬೇಕೇ?

**ಸಭಾಪತಿಯವರು:- XXX** ಮಾತನಾಡಿರುವುದನ್ನು ಕಡತದಿಂದ ತೆಗೆಯುವಂತೆ ನಾನು ಹೇಳಿದ್ದೇನೆ. ನಾನು ಇನ್ನೇನು ಮಾಡಬೇಕು?

**ಶ್ರೀ ಎಸ್.ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೆ, ಅವರಿಗೆ ಛೀಮಾರಿಯನ್ನು ಹಾಕಬೇಕು.

**ಸಭಾಪತಿಯವರು:-** ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ, ನಿಮಗೂ ಸಹ ಹಾಕಬೇಕಾಗುತ್ತದೆ; ನೀವು ಕುಳಿತುಕೊಳ್ಳಿ.

**ಶ್ರೀ ಎಸ್.ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೆ, ಅವರಿಗೆ ನಾಚಿಕೆಯಾಗಬೇಕು ಏಕೆಂದರೆ, ಅವರು **XXX** ಬಳಸಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ನೀವು ಕುಳಿತುಕೊಳ್ಳಿ. ಎಲ್ಲರಿಗೂ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಛೀಮಾರಿ ಹಾಕಬೇಕಾಗಿರುವುದು ಇವರಿಗೆ, ಏಕೆಂದರೆ ಮುಖ್ಯಮಂತ್ರಿಗಳಿಂದ ಉತ್ತರ ಕೇಳುವುದಕ್ಕೆ ...

**(ಗೊಂದಲ)**

**ಸಭಾಪತಿಯವರು:-** ಶ್ರೀ ನಾಗರಾಜುರವರೇ ಕುಳಿತುಕೊಳ್ಳಿ. ಈಗ ಮುಖ್ಯಮಂತ್ರಿಗಳು ಉತ್ತರವನ್ನು ಓದುತ್ತಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ನೀವು ಹತ್ತಾರು ಬಾರಿ ಹೇಳಿದ್ದೀರಿ; ಆದರೂ ಅವರುಗಳು ಕೇಳುವುದಿಲ್ಲ. ನನ್ನ ಲಿಖಿತ ಹೇಳಿಕೆಯು ಸಿದ್ಧವಿದೆ. ಹೀಗಾಗಿ ನಾನು ಅದನ್ನು ಓದುತ್ತೇನೆ. ನೀವು ಅದನ್ನು ರೆಕಾರ್ಡ್ ಮಾಡಿ. ವಿರೋಧ ಪಕ್ಷದ ಸದಸ್ಯರುಗಳು ಏನಾದರೂ ಮಾತನಾಡಿಕೊಳ್ಳಲಿ; ನಾನು ಅವರಿಗೆ ಯೀಲ್ಡ್ ಆಗುವುದಿಲ್ಲ. ನನಗೆ ಮಾತನಾಡಲು ನೀವು ಅವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಮುಖ್ಯಮಂತ್ರಿಗಳು ತಮ್ಮ ಲಿಖಿತ ಹೇಳಿಕೆಯನ್ನು ಓದಲು ಪ್ರಾರಂಭಿಸಿದರು)**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ,

" 1. ಬಿ.ಜೆ.ಪಿ.ಯವರ ಹುನ್ನಾರ ಇಷ್ಟೆ ಒಂದು, ಮುಖ್ಯಮಂತ್ರಿಯ ಹೆಸರಿಗೆ ಮಸಿ ಬಳಿಯುವುದು......

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಅದರ ಪ್ರತಿಯನ್ನು ನಮಗೆ ನೀಡಬೇಕು.

**(ಗೊಂದಲ)**

**ಸಭಾಪತಿಯವರು:-** ನಂತರದಲ್ಲಿ ನಿಮಗೆ ಪ್ರತಿಗಳನ್ನು ಕೊಡಿಸುತ್ತೇನೆ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೆ, ನಾನು ಮುಖ್ಯಮಂತ್ರಿಗಳಿಂದ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ.

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರುಗಳು ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಲೇಬೇಕೆಂಬ ಘೋಷಣೆಗಳನ್ನು ಕೂಗುತ್ತಿದ್ದರು.)**

**(ಮುಖ್ಯಮಂತ್ರಿಗಳು ತಮ್ಮ ಲಿಖಿತ ಹೇಳಿಕೆಯನ್ನು ಓದುವ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸದನದಲ್ಲಿ ಗೊಂದಲದ ವಾತಾವರಣವನ್ನು ಸೃಷ್ಟಿಸಿದರು)**

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೆ, ನಮಗೆ ಲಿಖಿತ ಹೇಳಿಕೆಯ ಪ್ರತಿಯನ್ನು ಕೊಡಿಸಿ.

**ಸಭಾಪತಿಯವರು:-** ಈಗ ಲಿಖಿತ ಹೇಳಿಕೆಯ ಪ್ರತಿಯನ್ನು ಕೊಡುವುದಕ್ಕಾಗುವುದಿಲ್ಲ; ಆಮೇಲೆ ಕೊಡಿಸುತ್ತೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಇದು ಸರಿಯಾದುದಲ್ಲ. **(ಗೊಂದಲ)** ಇಲ್ಲಿ ರಾಜಕೀಯ ಭಾಷಣವನ್ನು ಮಾಡುವುದು ಬೇಡ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಅವರು ರಾಜಕೀಯ ಭಾಷಣ ಮಾಡುತ್ತಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ.

**ಶ್ರೀ ಸಿದ್ದರಾಮಯ್ಯ:-** ಸಭಾಪತಿಯವರು ನನಗೆ ಅವಕಾಶವನ್ನು ನೀಡಿದ್ದಾರೆ. Allow me to continue.

**(ಗೊಂದಲ)**

**ಸಭಾಪತಿಯವರು:-** ನನಗೆ ಹೇಳುವುದಕ್ಕೆ ಬಿಡಿ. **(ಗೊಂದಲ)** ಮುಖ್ಯಮಂತ್ರಿಗಳೇ, ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ಸದಸ್ಯರುಗಳಿಗೆ ಸಭ್ಯತೆ ಇಲ್ಲ; ಹೀಗಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ಇವರಿಗೆ ತಾಳ್ಮೆಯೂ ಸಹ ಇಲ್ಲ; ಹೀಗಾಗಿ ಏನು ಮಾಡುವುದಕ್ಕೆ ಸಾಧ್ಯ?

**(ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಿಂದ ಘೋಷಣೆಗಳನ್ನು ಕೂಗುವುದನ್ನು ಮುಂದುವರೆಸಿದ್ದರು)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಕೆಲವು ಭಿತ್ತಿ ಫಲಕಗಳನ್ನು ಪ್ರದರ್ಶಿಸಿದರು)**

**(ಗೊಂದಲ)**

(ಮುಂದು)

(589) 22-07-2024/1-30/bkp-vk

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೆ, read and recorded ಎಂದುಬಿಡಿ ಸಾಕು. ಅದು ರೆಕಾರ್ಡ್‌ಗೆ ಹೋಗುತ್ತಿದೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಏತಕ್ಕೆ ಓದುತ್ತಿದ್ದೇನೆಂದರೆ ಇದರ ಪ್ರತಿಯನ್ನು ನಾನು ನಿಮಗೆ ಕೊಡುತ್ತೇನೆ.

**ಸಭಾಪತಿಯವರು:-** ಬೇಡ, ರೆಕಾರ್ಡ್‌ಗೆ ಹೋಗುತ್ತಿದೆ. ಇಷ್ಟು ಸಾಕು. Read and recorded ಎಂದು ಬಿಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, if it is recorded, I will furnish the copy of my written speech. ಇದು ಬಹಳ ಏನಿಲ್ಲ, ಇದನ್ನು ನಾನು ಓದುತ್ತೇನೆ. 10-12 ಪುಟ ಇದೆ, ಓದುತ್ತೇನೆ;

ಮಾನ್ಯ ಸಭಾಪತಿಯವರೆ,

"1. ಬಿ.ಜೆ.ಪಿ.ಯವರ ಹುನ್ನಾರ ಇಷ್ಟೆ ಒಂದು, ಮುಖ್ಯಮಂತ್ರಿಯ ಹೆಸರಿಗೆ ಮಸಿ ಬಳಿಯುವುದು. ಎರಡನೆಯದು, ಸರ್ಕಾರ ಪರಿಶಿಷ್ಟ ಜಾತಿ/ಪಂಗಡಗಳ ವಿರುದ್ಧ ಎಂದು ಬಿಂಬಿಸುವುದು. ಈ ಎರಡೂ ಎಂದಾದರೂ ಸಾಧ್ಯವೆ? ಇಡೀ ಬಿಜೆಪಿ, ಬಿಜೆಪಿಯ ನಾಯಕತ್ವ ಸಂವಿಧಾನ ಜಾರಿಗೆ ಬಂದ ದಿನದಿಂದಲೂ ದಮನಿತ ಸಮುದಾಯಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿರುದ್ಧವಾಗಿದೆ. ಮಹಿಳೆಯರ ವಿರುದ್ಧವಾಗಿದೆ. ದಮನಿತರ ಪರವಾದ ಪ್ರತಿ ನಿಲುವು, ಪ್ರತಿ ಕಾಯ್ದೆ, ಯೋಜನೆಗಳನ್ನು ಜಾರಿಗೆ ತಂದಿದ್ದು ಕಾಂಗ್ರೆಸ್ ನೇತೃತ್ವದ ಸರ್ಕಾರಗಳೆ.

2. ಇದೇ ಬಿಜೆಪಿ ಆಡಳಿತದಲ್ಲಿದ್ದಾಗ ಯಾವ ಯಾವ ನಿಗಮಗಳಲ್ಲಿ ಏನೇನೆಲ್ಲ ನುಂಗಿದ್ದಾರೆ. ಎಂದು ಕೂಡ ಚರ್ಚೆ ನಡೆಯುತ್ತಿದೆ. ನುಂಗುವುದರಲ್ಲಿ ಜಾಣರಾಗಿರುವ ಬಿಜೆಪಿಯವರು ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದಾರೆ. ಇದಕ್ಕಿಂತ ದುರಂತ ಬೇರೆ ಇಲ್ಲ. ವಿರೋಧ ಪಕ್ಷದವರು ತಮ್ಮ ಅಜೆಂಡಾ ಸಾಧಿಸಿಕೊಳ್ಳಲು ಯಾವ ಸುಳ್ಳನ್ನು ಬೇಕಾದರೂ ಹೇಳಬಲ್ಲರು ಎಂಬುದು ಇಲ್ಲಿ ಸಾಬೀತಾಗಿದೆ.

3. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಈ 89.63 ಕೋಟಿಗಳಷ್ಟು ಹಣ ಆಕ್ರಮವಾಗಿ ಹೈದರಾಬಾದಿನ ಆರ್ ಬಿ ಎಲ್ ಬ್ಯಾಂಕಿಗೆ ವರ್ಗಾವಣೆಯಾಗಿರುತ್ತದೆ. (ಈ 89,63 ಕೋಟಿಗಳಲ್ಲಿ 5 ಕೋಟಿ ರೂ ವಾಪಸ್ಸು ಬಂದಿರುತ್ತದೆ). 89,63 ಕೋಟಿ ರೂಪಾಯಿಗಳಲ್ಲಿ 45,02,98,000 ವರ್ಗಾವಣೆಯಾಗಿರುತ್ತವೆ. ಇನ್ನುಳಿದ 44.60 ಕೋಟಿ ರೂಪಾಯಿಗಳನ್ನು ನಿಗಮವು ಇಟ್ಟಿದ್ದ ಫಿಕ್ಸೆಡ್ ಡಿಪಾಸಿಟ್ ಮೇಲೆ ಓವರ್ ಡ್ರಾಫ್ಟ್ ತೆಗೆದಿದ್ದಾರೆ. ಓವರ್ ಡ್ರಾಫ್ಟ್ ಎಂದರೆ ಒಂದು ರೀತಿಯ ಸಾಲವೇ. ಇದು ಅತ್ಯಂತ ಪರಿಣತರಾದ, ಪಳಗಿದ ಖದೀಮರ ಕೆಲಸವೆ. ನಿಗಮವು ದಿನಾಂಕ: 30-3-2024 ರಂದು 50.00 ಕೋಟಿ ರೂಪಾಯಿಗಳನ್ನು ಫಿಕ್ಸೆಡ್ ಡಿಪಾಸಿಟ್ ನಲ್ಲಿಟ್ಟಿದೆ. ಸ್ಟಿಕ್ಸ್ ಸ್ಟೀಕಿಂಗ್, ಈ 50.00 ಕೋಟಿ ಫಿಕ್ಸೆಡ್ ಡಿಪಾಸಿಟ್ ನಮ್ಮ ವಶದಲ್ಲಿಯೆ ಇದೆ. ಯಾಕೆಂದರೆ ಅದು ಫಿಕ್ಸೆಡ್ ಡಿಪಾಸಿಟ್.

4. ವಿರೋಧ ಪಕ್ಷದವರು (ವಿಜಯೇಂದ್ರ) ಹೇಳಿದ ಎರಡನೆ ಸುಳ್ಳು ರಾಜ್ಯ ಸರ್ಕಾರವು ಸಿಬಿಐನವರು ಎಫ್‌ಐಆರ್ ದಾಖಲಿಸಿದ ಮೇಲೆ, ಎಸ್.ಐ.ಟಿ. ರಚಿಸಿದೆ ಎಂದು ಹೇಳಿದ್ದಾರೆ. ವಾಸ್ತವವಾಗಿ ನಮ್ಮಲ್ಲಿ ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ದಿನಾಂಕ 28- 5-2024 ರಂದು ಕ್ರೈಂ ನಂ. 118/2024 ರಂತೆ ಎಫ್‌ಐಆರ್ ದಾಖಲಾಗಿದೆ. ರಾಜ್ಯ ಸರ್ಕಾರವು 31-5-2024 ರಂದು ಆದೇಶ ಹೊರಡಿಸಿ ಎಸ್.ಐ.ಟಿ, ರಚಿಸಿದೆ. ಸಿಬಿಐ ದಿನಾಂಕ 3-6-2024 ರಂದು ಎಫ್‌ಐಆರ್ ದಾಖಲಿಸಿದ್ದಾರೆ.

5. ದಿನಾಂಕ: 03.06.2024 ರಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಜನರಲ್ ಮ್ಯಾನೇಜರ್ (ಹೆಚ್.ಆರ್.) ಗಿರೀಶ್ ಚಂದ್ರ ಜೋಶಿ ಎನ್ನುವವರು ಎಂ.ಜಿ.ರಸ್ತೆ ಶಾಖೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶ್ರೀಮತಿ ಸುಚಿಸ್ಮಿತಾ ರಾವುಲ್ ಚೀಫ್ ಮ್ಯಾನೇಜರ್ (ಬ್ರಾಂಚ್ ಹೆಡ್) ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಹಾಗೂ Prevention of Corruption Act ರ Section 17(A) ರಡಿ ತನಿಖೆ ಮಾಡಲು ಅನುಮತಿ ನೀಡಿ ಸಿ.ಬಿ.ಐ. ಗೆ ಪತ್ರ ಬರೆದಿರುತ್ತಾರೆ.

6. ಸಿ.ಬಿ.ಐ.ಗೆ ಬರೆದಿರುವ ಈ ಪತ್ರದ ಮುಖ್ಯಾಂಶಗಳನ್ನು ನಾನು ಅನುಬಂಧ-1 ರಲ್ಲಿಟ್ಟು ಸದನದಲ್ಲಿ ಮಂಡಿಸುತ್ತಿದ್ದೇನೆ. ಈ ಎರಡರಲ್ಲೂ ಬ್ಯಾಂಕಿನವರೆ ಒಪ್ಪಿಕೊಂಡಿರುವ ಹಾಗೆ ಬ್ಯಾಂಕಿನ ಸಿಬ್ಬಂದಿಗಳೇ ನೇರವಾಗಿ ಈ ಹಗರಣದಲ್ಲಿ ಶಾಮೀಲಾಗಿದ್ದಾರೆ ಎಂಬುದು ಕಂಡುಬರುತ್ತದೆ.

7. ದಿನಾಂಕ 28-5-2024 ರಂದು ಮಹರ್ಷಿ ವಾಲ್ಮೀಕಿ ನಿಗಮದ ಪ್ರಧಾನ ವ್ಯವಸ್ಥಾಪಕ ರಾಜಶೇಖರ್ ಎನ್ನುವವರು ನಿಗಮದ ಹಣ ಖಾಲಿಯಾಗಿರುವುದರ ಕುರಿತು ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ದಿನಾಂಕ: 28.05.2024 ರಂದು ಶ್ರೀ ಎ.ರಾಜಶೇಖರ, ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇವರು ನಿಗಮದಲ್ಲಿ ನಡೆದ ಅವ್ಯವಹಾರದ ಕುರಿತು ಎ. ಮಣಿಮೇಖಲೈ, ಎಂ.ಡಿ. & ಸಿ.ಇ.ಓ., ಯುಬಿಐ, ಶ್ರೀ ನಿತೇಶ್ ರಂಜನ್, ಶ್ರೀ ರಾಮಸುಬ್ರಮಣ್ಯಂ, ಶ್ರೀ ಸಂಜಯ್ ರುದ್ರ, ಶ್ರೀ ಪಂಕಜ್ ದ್ವಿವೇದಿ, ಕಾರ್ಯನಿರ್ವಾಹಕ ನಿರ್ದೇಶಕರು ಯುಬಿಐನ ಮುಖ್ಯ ವ್ಯವಸ್ಥಾಪಕರಾದ ಶ್ರೀಮತಿ ಶುಚಿಸ್ಮಿತಾ ರವುಲ್, ಎಂ.ಜಿ. ರಸ್ತೆ ಶಾಖೆ ಇವರುಗಳ ವಿರುದ್ಧ ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿರುತ್ತಾರೆ.

8. ಅಕ್ರಮ ನಡೆದಿದೆಯೆಂದು ಗೊತ್ತಾದ ಕೂಡಲೆ ಎಫ್.ಐ.ಆರ್ ರಿಜಿಸ್ಟರ್ ಆಗಿದೆ. ಅಕ್ರಮದ ಕುರಿತು ತನಿಖೆ ಮಾಡಲು ಸಮರ್ಥ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ದಿನಾಂಕ: 31-5-2024 ರಂದು ಎಸ್‌ಐಟಿ ರಚಿಸಿದ್ದೇವೆ. ಮೇಲಿನ ಎರಡೂ ಕ್ರಿಮಿನಲ್ ಕೇಸುಗಳನ್ನು ತನಿಖೆ ಮಾಡುವ ಉದ್ದೇಶದಿಂದಲೆ 1 ಜನ ಪೋಲೀಸ್ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಎಚ್‌ಡಿ 64 ಸಿಐಡಿ 2024 ರ ಆದೇಶದಂತೆ ಈ ತಂಡ ರಚನೆಯಾಗಿದೆ.

9. ಎಸ್.ಐ.ಟಿ.ಯು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ಮಾಡುತ್ತಿದೆ. ಎಸ್.ಐ.ಟಿ. ರಚನೆಯಾದ ಕೂಡಲೇ ಕಾರ್ಯ ಪ್ರವೃತ್ತವಾದ ಈ ತಂಡವು ಈ ಕೆಳಕಂಡವರುಗಳನ್ನು ಬಂಧಿಸಿ ವಿಚಾರಣೆ ನಡೆಸುತ್ತಿದೆ.

1. ಜೆ. ಜಿ. ಪದ್ಮನಾಭ, ಪ್ರಧಾನ ವ್ಯವಸ್ಥಾಪಕ ಮಹರ್ಷಿ ವಾಲ್ಮೀಕಿ ನಿಗಮ
2. ಪರಶುರಾಮ್ ದುರ್ಗಣ್ಣನವರ್, ಲೆಕ್ಕಾಧೀಕ್ಷಕ

3. ಸತ್ಯನಾರಾಯಣ ಇಟಕಾರಿ, ಅಧ್ಯಕ್ಷರು, ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತ
4. ನೆಕ್ಕುಂಟೆ ನಾಗರಾಜ್- ಇವರು ಹಿಂದೆ ಶ್ರೀರಾಮುಲು ಜೊತೆ ಇದ್ದರು.
5. ನಾಗೇಶ್ವರರಾವ್, ನೆಕ್ಕುಂಟೆ ನಾಗರಾಜ್ ಅವರ ಭಾವಮೈದುನ
6. ಎಂ. ಚಂದ್ರ ಮೋಹನ್, ಹೈದರಾಬಾದ್
7. ಗಾದಿರಾಜು ಸೂರ್ಯನಾರಾಯಣ ವರ್ಮ, ಹೈದರಾಬಾದ್
8. ಜಗದೀಶ್ ಜಿ ಕೆ ಉಡುಪಿ
9. ತೇಜ ತಮಟಂ, ಬೆಂಗಳೂರು
10. ಪಿಟ್ಟಲ ಶ್ರೀನಿವಾಸ ಗಚ್ಚಿ ಬೌಲಿ
11. ಸಾಯಿತೇಜ ಹೈದರಾಬಾದ್
12. ಕಾಕಿ ಶ್ರೀನಿವಾಸ ರಾವ್, ಆಂಧ್ರಪ್ರದೇಶ.

10. ವಿರೋಧ ಪಕ್ಷದವರು ಉದ್ದೇಶಪೂರ್ವಕವಾಗಿಯೆ ಅನೇಕ ವಿಚಾರಗಳನ್ನು ಮರೆಮಾಚುತ್ತಿದ್ದಾರೆ. ಪ್ರಮುಖವಾಗಿ,

- ✓ ಬ್ಯಾಂಕಿನವರೆ ದಿನಾಂಕ 3-6-2024 ರಂದು ಸಿಬಿಐಗೆ ನೀಡಿರುವ ದೂರಿನಲ್ಲಿ ಒಪ್ಪಿಕೊಂಡಿರುವ ಹಾಗೆ ಎಂಜಿ ರಸ್ತೆಯ ಬ್ರಾಂಚಿನ ಅಧಿಕಾರಿಗಳು ನೇರವಾಗಿ ಅಕ್ರಮದಲ್ಲಿ ಭಾಗಿಯಾಗಿದ್ದಾರೆ.
- ✓ ಬ್ಯಾಂಕಿನ ಅಧಿಕಾರಿಗಳು ಶಿವಕುಮಾರ ಎಂಬ ಅಕ್ರಮ ವ್ಯಕ್ತಿ (ಇದುವರೆಗೆ ತಿಳಿದು ಬಂದ ಮಾಹಿತಿಯ ಪ್ರಕಾರ ಹೈದರಾಬಾದಿನ ಸಾಯಿತೇಜ ಎಂಬ ವ್ಯಕ್ತಿಯನ್ನು ಶಿವಕುಮಾರ ಎಂದು ಹೇಳಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ.) ಯ ವಿವರಗಳನ್ನು ಸರಿಯಾಗಿ ಪರಿಶೀಲಿಸದೆ ಅಕ್ರಮವಾಗಿ ಹಣ ವರ್ಗಾಯಿಸಲು ನೆರವಾಗಿದ್ದಾರೆ. ಈ ಮಾತನ್ನು ನಾನು ಹೇಳುತ್ತಿಲ್ಲ. ಬ್ಯಾಂಕಿನವರೆ ಹೇಳಿದ್ದಾರೆ. ಈ ಆಕ್ರಮ ವ್ಯಕ್ತಿಗೆ ಚೆಕ್ ಬುಕ್ಕನ್ನು ಕೊಟ್ಟಿದ್ದು ಯಾಕೆ? ಆ ಚೆಕ್ಕುಗಳನ್ನು ಆಧರಿಸಿ NEFT/RTGS ಮಾಡಲು ಅವಕಾಶಕೊಟ್ಟಿದ್ದು ಏಕೆ?
- ✓ ಎಂ.ಜಿ. ರಸ್ತೆಯ ಶಾಖೆಯ ಮುಖ್ಯಸ್ಥರು. ಉಪ ಮುಖ್ಯಸ್ಥರು ಚೆಕ್ಕುಗಳನ್ನು ಸರಿಯಾಗಿ ಪರಿಶೀಲಿಸದೆ ಅಕ್ರಮ ಎಸಗಿದ್ದಾರೆ ಎಂದು ಬ್ಯಾಂಕಿನವರೆ ಹೇಳಿದ್ದಾರೆ. ಇದನ್ನೆಲ್ಲ ಆಧರಿಸಿಯೇ ಬ್ಯಾಂಕಿನ ಮೇಲಧಿಕಾರಿಗಳು ಸಿಬಿಐಗೆ ಬರೆದ ದೂರಿನಲ್ಲಿ ತಮ್ಮ ಸಿಬ್ಬಂದಿಯ/ಅಧಿಕಾರಿಗಳ ತಪ್ಪುಗಳನ್ನು ಒಪ್ಪಿಕೊಂಡಿದ್ದಾರೆ.
- ✓ ವಿರೋಧ ಪಕ್ಷದವರಿಗೆ ನಾನು ಕೇಳಬಯಸುವುದೇನೆಂದರೆ, ಯೂನಿಯನ್ ಬ್ಯಾಂಕ್ ರಾಷ್ಟ್ರೀಕೃತ ಬ್ಯಾಂಕೊ ಅಥವಾ ಖಾಸಗಿ ಬ್ಯಾಂಕೊ? ರಾಷ್ಟ್ರೀಕೃತ ಬ್ಯಾಂಕು ಹೌದಾದರೆ ಕೇಂದ್ರದ ಯಾವ ಇಲಾಖೆಯ ಕೆಳಗೆ ಬರುತ್ತಾರೆ? ಹಣಕಾಸು ಇಲಾಖೆಯ ಕೆಳಗೆ ತಾನೆ? ಹಣಕಾಸು ಇಲಾಖೆ ಯಾರ ಅಧೀನದಲ್ಲಿದೆ? ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಹಗರಣದ ಜವಾಬ್ದಾರಿಯನ್ನು ಹೊರುತ್ತಾರೆಯೆ?
- ✓ ನಾನು ಯಾಕೆ ಈ ಪ್ರಶ್ನೆಯನ್ನು ಕೇಳಿದೆ ಎಂದರೆ ರಾಜ್ಯದ APMC ಯಲ್ಲಿ 47.16 ಕೋಟಿ ರೂಪಾಯಿಗಳ ಹಗರಣ ನಡೆದಾಗ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದರು. ಬೊಮ್ಮಾಯಿ ಗೃಹ ಸಚಿವರು ಹಾಗೂ ಎಪಿಎಂಸಿ ಸಚಿವರೂ ಆಗಿದ್ದರು. ಈಗ ವಾಲ್ಮೀಕಿ ನಿಗಮದಲ್ಲಿ ಯಾವ ರೀತಿ ಹಗರಣ ನಡೆದಿತ್ತೋ ಅದೇ ರೀತಿಯಲ್ಲಿ ಹಗರಣ ನಡೆದಿತ್ತು. ಆದರೆ ಬ್ಯಾಂಕಿನವರು ತಮ್ಮ ಸಸ್ಪೆನ್ಸ್ ಅಕೌಂಟಿನಲ್ಲಿದ್ದ ಹಣವನ್ನು ತೆಗೆದು ವಾಪಸ್ಸು ತುಂಬಿದ್ದರು. ವಾಪಸ್ಸು ಕಟ್ಟದಂತೆ ತಡೆದ ಶಕ್ತಿಗಳು ಯಾವುವು? ಎಂಬುದು ಕೂಡ ತನಿಖೆಯಿಂದ ಬಯಲಾಗಬೇಕು. ಸಸ್ಪೆನ್ಸ್

ಖಾತೆಯಿಂದ ಹಣ ವಾಪಾಸ್ ಕೊಟ್ಟರೆ ಲೂಟಿ ಮಾಡಿದವರಿಂದ ವಸೂಲಿ ಮಾಡುವುದು ಯಾವಾಗ? ಅದಕ್ಕೆ ಯಾರು ಜವಾಬ್ದಾರರು?

11. ವಾಲ್ಮೀಕಿ ಅಭಿವೃದ್ಧಿ ನಿಗಮದ ಹೆಸರಿನಲ್ಲಿ ಹಾಗೂ ಇತರೆ ಯಾವುದೇ ನಿಗಮದಲ್ಲಿ ಖಾತೆ ತೆರೆಯುವುದು, ವರ್ಗಾಯಿಸುವುದು ಮತ್ತು ತಮಗೆ ಬಿಡುಗಡೆಯಾದ ಅನುದಾನಗಳನ್ನು ಸಮರ್ಪಕ ರೀತಿಯಲ್ಲಿ ಜನರ ಕಲ್ಯಾಣಕ್ಕೆ ಬಳಸುವುದು ನಿಗಮದ ಮುಖ್ಯಸ್ಥರಾದ ವ್ಯವಸ್ಥಾಪಕ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ.

12. ದಿನಾಂಕ:26.02.2014 ರಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಜಿ.ರಸ್ತೆ ಶಾಖೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಒಂದು ಪತ್ರವನ್ನು ಸಲ್ಲಿಸಿರುತ್ತಾರೆ. ಆ ಪತ್ರದಲ್ಲಿ ಉಳಿತಾಯ ಖಾತೆಯನ್ನು ವ್ಯವಸ್ಥಾಪಕ ನಿರ್ದೇಶಕರು ಮತ್ತು ಲೆಕ್ಕಾಧಿಕಾರಿಯವರು ಜಂಟಿಯಾಗಿ ನಿರ್ವಹಿಸುತ್ತಾರೆಂದು ತಿಳಿಸಿದ್ದು, ಎರಡು ಮಾದರಿ ಸಹಿ, ಇತರೆ ಕೆ.ವೈ.ಸಿ, ವಿವರಗಳು ಹಾಗೂ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

13. ದಿನಾಂಕ: 04.03.2024 ರಂದು ವ್ಯವಸ್ಥಾಪಕ ನಿರ್ದೇಶಕರು ಮತ್ತು ಲೆಕ್ಕಾಧಿಕಾರಿಗಳು ಜಂಟಿಯಾಗಿ ಬ್ಯಾಂಕಿಗೆ ಪತ್ರವನ್ನು ನೀಡಿದಂತೆ ಅಕ್ರಮ ಪತ್ರ ನೀಡಲಾಗಿದೆಯೆಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ಉಳಿತಾಯ ಖಾತೆಗೆ ಸಂಬಂಧಪಟ್ಟಂತೆ ಎಲ್ಲಾ ರೀತಿಯ ವ್ಯವಹಾರಗಳನ್ನು ಅಂದರೆ, ಚೆಕ್‌ಬುಕ್ ಪಡೆಯುವುದು, ಫಿಕ್ಸೆಡ್ ಡೆಪಾಸಿಟ್ ರಸೀದಿಯನ್ನು ಪಡೆಯುವುದು, ಓವರ್ ಡ್ರಾಫ್ಟ್ ದಾಖಲೆಗಳನ್ನು ಪಡೆಯುವುದು ಹಾಗೂ ನಿಗಮದ ಎಲ್ಲಾ ವ್ಯವಹಾರಗಳನ್ನು ಈ ಖಾತೆಯಲ್ಲಿ ನಿರ್ವಹಿಸಲು ನಕಲಿ ಪತ್ರವೊಂದನ್ನು ಸೃಷ್ಟಿಸಿ, ಅದರಲ್ಲಿ ನಿಗಮದಲ್ಲಿಯೇ ಇಲ್ಲದ ಶ್ರೀ ಶಿವಕುಮಾರ್ ಎಂಬ ಅಕ್ರಮ ವ್ಯಕ್ತಿಯನ್ನು ಸೃಷ್ಟಿಸಿ ಅವನನ್ನು ಕಿರಿಯ ಲೆಕ್ಕಾಧಿಕಾರಿ ಎಂದು ಹೇಳಿ ಆತನೇ ಇನ್ನು ಮುಂದಿನ ಅಧಿಕೃತ ಸಹಿದಾರ ಎಂದು ಅನಧಿಕೃತವಾಗಿ ಮಾಡಿ ಆತನ ವಶಕ್ಕೆ ಚೆಕ್ ಬುಕ್‌ನ್ನು ನೀಡಬೇಕೆಂದು ತಿಳಿಸುವ ಪತ್ರವೊಂದನ್ನು ನೀಡಿ, ಚೆಕ್‌ಬುಕ್ಕನ್ನು 04.03.2024 ರಂದು ನಡೆದಿರುವುದಾಗಿ ತಿಳಿದು ಬಂದಿರುತ್ತದೆ. ಈ ಶಿವಕುಮಾರ್ ಎಂಬ ವ್ಯಕ್ತಿ ನಿಜವಾಗಿ ವಾಲ್ಮೀಕಿ ನಿಗಮದ ಸಿಬ್ಬಂದಿಯೆ? ಎಂಬ ಬಗ್ಗೆ ಬ್ಯಾಂಕಿನ ಮ್ಯಾನೇಜರ್ ತಿಳಿದುಕೊಳ್ಳುವ ಪ್ರಯತ್ನವನ್ನೆ ಮಾಡಲಿಲ್ಲ.

14. ನಿರ್ದೇಶಕರ ಮಂಡಳಿ ಸಭೆ ದಿನಾಂಕ;30-3-2024 ರಂದು ನಡೆಯಿತೆಂದು ಬ್ಯಾಂಕಿಗೆ ತಿಳಿಸಲಾಗಿದೆಯೆಂಬಂತೆ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಆದರೆ ಚುನಾವಣೆಯ ಕೋಡ್ ಆಫ್ ಕಂಡಕ್ಟ್ ಇರುವಾಗ ಯಾವ ಸಭೆ ನಡೆಯಲು ಹೇಗೆ ಸಾಧ್ಯ?

15. ಚುನಾವಣಾ ಸಂದರ್ಭದಲ್ಲಿ ಇಷ್ಟು ದೊಡ್ಡ ಪ್ರಮಾಣದ ವ್ಯವಹಾರಗಳು ನಡೆಯುವಾಗ ಆದಾಯ ತೆರಿಗೆ ಇಲಾಖೆಯವರು ಬ್ಯಾಂಕನ್ನು ಕೇಳಲಿಲ್ಲವೆ? ಬ್ಯಾಂಕಿನವರು ಚುನಾವಣಾ ಆಯೋಗದ ಗಮನಕ್ಕೆ ತರಬೇಕಾಗಿತ್ತಲ್ಲ, ಯಾಕೆ ತರಲಿಲ್ಲ? ಬ್ಯಾಂಕಿನ ಮ್ಯಾನೇಜರ್ ಆದಿಯಾಗಿ ಅನೇಕ ಅಧಿಕಾರಿ, ಸಿಬ್ಬಂದಿಗಳು ವಾಲ್ಮೀಕಿ ನಿಗಮದ ಅಧಿಕಾರಿ ಸಿಬ್ಬಂದಿ ಮತ್ತು ಹೊರಗಿನ ಖಾಸಗಿ Fraud ಮಾಡುವ ವ್ಯಕ್ತಿಗಳು ಸೇರಿ ಇದು ಮಾಡಿರುವ ಹುನ್ನಾರ ಎಂದು ವ್ಯಕ್ತವಾಗುತ್ತದೆ. ತನಿಖೆಯಿಂದ ಈ ಎಲ್ಲಾ ಅಂಶಗಳು ಬಯಲಾಗುತ್ತವೆ.

16. ನಿಗಮದವರು ಹೊಸ ಖಾತೆ ತೆರೆಯಬೇಕಾದರೆ, ಖಾತೆ ವರ್ಗಾವಣೆ ಮಾಡಬೇಕಾದರೆ ಆರ್ಥಿಕ ಇಲಾಖೆಯ ಗಮನಕ್ಕೆ ತರಬೇಕು, ಅನುಮತಿ ಪಡೆದುಕೊಳ್ಳಬೇಕು. ಆದರೆ ಈ ಯಾವ ಕೆಲಸವನ್ನೂ ಮಾಡಿಲ್ಲ. ನೇರವಾಗಿ ಖಾತೆಯ ವಿವರವನ್ನು ಖಜಾನೆ-2 ರಲ್ಲಿ ಅಪ್ ಲೋಡ್ ಮಾಡಿದ್ದಾರೆ. ದಿನಾಂಕ: 19.03.2024 ರಂದು ಡಿಡಿಓ ಕಛೇರಿ, ಅಂದರೆ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಇಲಾಖೆಯ ವ್ಯವಸ್ಥಾಪಕರು ಹೊಸ ಬ್ಯಾಂಕ್ ಖಾತೆಯನ್ನು ಕೆ-2 ನಲ್ಲಿ ಅಪ್‌ಲೋಡ್ ಮಾಡಿದ್ದಾರೆ. ಇದನ್ನು ಡಿ.ಡಿ.ಓ.ರವರು (ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಇಲಾಖೆ) ಅನುಮೋದಿಸಿದ್ದಾರೆ. ಡಿ.ಡಿ.ಓ.ರವರ ಜವಾಬ್ದಾರಿಯ ಮೇಲೆ ದಿನಾಂಕ 25-2-2024 ರಂದು 43.33 ಕೋಟಿ ರೂಪಾಯಿಗಳನ್ನು ವಾಲ್ಮೀಕಿ ಅಭಿವೃದ್ಧಿ ನಿಗಮದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಂಜಿ ರಸ್ತೆಯ ಶಾಖೆಗೆ ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ. ವರ್ಷದ ಕಡೆಯಲ್ಲಿ ಆಯವ್ಯಯದಲ್ಲಿ ಕಲ್ಪಿಸಿದ ಅನುದಾನವನ್ನು ಎಲ್ಲರಿಗೂ ಬಿಡುಗಡೆ ಮಾಡುವ ಹಾಗೆಯೇ ಈ ಖಾತೆಗೂ ಹಣ ಬಿಡುಗಡೆಯಾಗಿದೆ. ಯೂನಿಯನ್ ಬ್ಯಾಂಕ್ ಕೂಡ ರಾಷ್ಟ್ರೀಕೃತ ಬ್ಯಾಂಕೆ, ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಕಳ್ಳತನ ನಡೆದಿದೆ.

17. 2015-16 ರಿಂದ 2024-25 ರವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಗಮಗಳಿಗೆ ಹಂಚಿಕೆಯಾದ ಅನುದಾನ ಮತ್ತು ವೆಚ್ಚದ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ವರ್ಷ | ಪ್ರಾರಂಭಿಕ ಶುಲ್ಕ (ಅ) | ಹಂಚಿಕೆ ಯಾದ ಅನುದಾನ (ಆ) | ಬಿಡುಗಡೆ ಯಾದ ಮೊತ್ತ (ಇ) | ಖರ್ಚು (ಈ) | ಉಳಿಕೆ (ಅ+ಇ-ಈ) | ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ | ಷರಾ |
|---|---|---|---|---|---|---|---|---|
| 1 | 2019-20 | 509.22 | 206.34 | 206.34 | 333.51 | 382.05 | 13811 | ಹಿಂದಿನ ಸಾಲಿನಲ್ಲಿ ಬಾಕಿ ಉಳಿದಿದ್ದ ಅನುದಾನದಲ್ಲಿ ವೆಚ್ಚ ಮಾಡಲಾಗಿದೆ. |
| 2 | 2020-21 | 393.07 | 195.90 | 195.90 | 276.00 | 312.96 | 34031 | |
| 3 | 2021-22 | 314.96 | 152.00 | 152.00 | 252.00 | 214.86 | 13304 | |
| 4 | 2022-23 | 264.25 | 329.00 | 304.00 | 338.95 | 229.31 | 12729 | |
| 5 | 2023-24 | 229.31 | 175.00 | 175.00 | 234.61 | 169.70 | 16207 | |
| 6 | 2024-25 | 169.70 | 175.00 | 0.00 | 0.00 | 169.70 | 0.00 | |

ಅಶೋಕ್ ಅವರು ನಿಗಮಕ್ಕೆ ಹಣ ಯಾಕೆ ಬಿಡುಗಡೆ ಮಾಡಿದ್ದು ಎಂದು ಕೇಳಿದ್ದಾರೆ. ಹಣ ವರ್ಷ ವರ್ಷವೂ ಬಿಡುಗಡೆಯಾಗಲೇಬೇಕು. ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ. ವಿಚಾರ ಇರುವುದು ಹಣ ಯಾಕೆ ಬಿಡುಗಡೆ ಮಾಡಿದ್ದು ಎಂಬುದಲ್ಲ. ಬಿಡುಗಡೆ ಮಾಡಿದ ಹಣವನ್ನು ಹೇಗೆ ಬಳಕೆ ಮಾಡಲಾಗುತ್ತದೆ ಎಂಬುದು ಮುಖ್ಯ. ಬಿಡುಗಡೆ ಮಾಡಿದ ಹಣಕ್ಕೆ ನಾನು ಟ್ರಸ್ಟಿ ಎಂಬ ನೈತಿಕತೆ ಪ್ರತಿಯೊಬ್ಬರಿಗೂ ಇರಬೇಕಾಗುತ್ತದೆ. ಕಳ್ಳತನ ಮಾಡಿ ಎಂದು ನಾವು ಹಣ ಬಿಡುಗಡೆ ಮಾಡುತ್ತೇವಾ? ಮಾಡಿದ್ದಾರೆ. ಆದರೆ ಕಳ್ಳತನ ಮಾಡಿದ್ದಾರೆ. ಕಳ್ಳತನ ಮಾಡಿದವರು ಯಾರೇ ಆಗಿದ್ದರೂ ಕಳ್ಳರೆ, ಕಳ್ಳರನ್ನು ಈ ಸರ್ಕಾರವು ಸಹಿಸುವುದಿಲ್ಲ. ಬಿಜೆಪಿಯವರು ಇಮ್ಯುನಿಟಿ ಬೂಸ್ಟರ್ ನೀಡಿದ ಹಾಗೆ ನಾವು ನೀಡುವುದಿಲ್ಲ.

18. ಯಾವುದೇ ಸಂದರ್ಭದಲ್ಲಿ ಕಳ್ಳರು ಏಕಾಏಕಿ ಹುಟ್ಟುವುದಿಲ್ಲ. ಅವರು ಪ್ರೊಫೆಶನಲ್ ಆಗಬೇಕಾದರೆ ಅವರಿಗೆ ಹಿಂದೆ ಬಹಳ ಇಮ್ಯುನಿಟಿ ಸಿಕ್ಕಿರುತ್ತದೆ. ಹಾಗಾಗಿ ಕಳ್ಳರು ಎಲ್ಲಿಂದ ಪ್ರಾರಂಭವಾದರು? ಹೇಗೆ ಪ್ರಾರಂಭವಾದರು? ಅವರನ್ನು ಬೆಳೆಸಿದವರು ಯಾರು? ಎಂಬುದೆಲ್ಲ ಬಹಳ ಮುಖ್ಯವಾದ ಸಂಗತಿಗಳು. ಈ ಎಲ್ಲವುಗಳನ್ನು ತನಿಖಾ ಸಂಸ್ಥೆಗಳು ಗಮನದಲ್ಲಿಟ್ಟುಕೊಂಡು ತನಿಖೆ ನಡೆಸಬೇಕಾಗಿದೆ.

19. ಈ ವಿಷಯದಲ್ಲಿ ಆರೋಪಿಗಳಾಗಿರುವ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ 2017-18 ನೇ ಸಾಲಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ನಗರ ಜಿಲ್ಲೆಯಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿರುವ ಸಂದರ್ಭದಲ್ಲಿ ಈ ವಾಲ್ಮೀಕಿ ನಿಗಮದಲ್ಲಿ ಮಾಡಿದ ಮಾದರಿಯಲ್ಲಿ 4.96 ಕೋಟಿಗೂ ಹೆಚ್ಚು ಅವ್ಯವಹಾರ ನಡೆಸಿದ್ದ ಆರೋಪದ ಮೇಲೆ ಅಮಾನತ್ತಾಗಿ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿತ್ತು. ಆದರೆ, ಅವರನ್ನು ನಿಮ್ಮ ಸರ್ಕಾರ ಆರೋಪಮುಕ್ತಗೊಳಿಸಿ ಆದೇಶಿಸಿತ್ತು.

20. ಹಾಗಿದ್ದರೆ, ಈ ಪದ್ಮನಾಭನನ್ನು ಆರೋಪಮುಕ್ತಗೊಳಿಸಿದ್ದಾಗ ಅಧಿಕಾರದಲ್ಲಿ ಬಿಜೆಪಿ ಸರ್ಕಾರವೆ ಇತ್ತು. ಹಾಗಾಗಿ ಆರೋಪ ಮುಕ್ತಗೊಳಿಸಿ ಅವನಿಗೆ ಇನ್ನೂ ದೊಡ್ಡ ದರೋಡೆ ಮಾಡಲು ಇಮ್ಯುನಿಟಿಯನ್ನು ಒದಗಿಸಿಕೊಟ್ಟಿದ್ದು ಬಿಜೆಪಿ ಸರ್ಕಾರವೇ ಅಲ್ಲವೆ? ಬಿಜೆಪಿ ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳು ಪ್ರಕರಣವನ್ನು ಸರಿಯಾಗಿ ನಿಭಾಯಿಸಿದ್ದರೆ ಆತ ಆರೋಪಮುಕ್ತನಾಗುತ್ತಿದ್ದನೆ?

21. ಪರಿಶಿಷ್ಟ ಜಾತಿ/ ಪಂಗಡಗಳ, ಹಿಂದುಳಿದವರ, ರೈತರ, ಕಾರ್ಮಿಕರ, ರೈತರ, ಮಹಿಳೆಯರ ಏಳಿಗೆಗಾಗಿ ಅವರ ಬದುಕು ಸುಧಾರಿಸುವುದಕ್ಕಾಗಿ ನಮ್ಮ ಸರ್ಕಾರ ಯಾವುದೇ ತ್ಯಾಗಕ್ಕೂ ಸಿದ್ಧ. ಈ ವರ್ಗಗಳ ಕಲ್ಯಾಣಕ್ಕಾಗಿ ಮೀಸಲಿಟ್ಟ ಒಂದು ರೂಪಾಯಿಯನ್ನೂ ಕದಿಯಲು ಬಿಡುವುದಿಲ್ಲ. ದುರುಪಯೋಗವಾಗಲು ಬಿಡುವುದಿಲ್ಲ.

22. ಬಿ.ಜೆ.ಪಿ. ಸರ್ಕಾರದ ಅವಧಿಯಲ್ಲಿ ಅಸಂಖ್ಯಾತ ಹಗರಣಗಳು ನಡೆದಿವೆ. ಕೆಲವು ಮುಖ್ಯ ಹಗರಣಗಳ ಮಾಹಿತಿಯನ್ನು ಸದನದಲ್ಲಿ ಅನುಬಂಧ-2 ರಲ್ಲಿಟ್ಟು ಮಂಡಿಸುತ್ತಿದ್ದೇನೆ. ತಿಂದವರು ತಿಂದುಕೊಂಡು ಹೋಗಲಿ ಎಂದು ಬಿಡುವುದಕ್ಕೆ ನಮ್ಮದು ಯಡಿಯೂರಪ್ಪನವರ ಸರ್ಕಾರವಲ್ಲ, ಬೊಮ್ಮಾಯಿಯವರ ಸರ್ಕಾರವೂ ಅಲ್ಲ. ಮೋದಿ ಸರ್ಕಾರವೂ ಅಲ್ಲ. ಯಾರೇ ತಪ್ಪೆಸಗಿದ್ದರೂ ಅವರನ್ನು ಬಿಡುವ ಪ್ರಶ್ನೆಯೇ ಇಲ್ಲ. We will not compromise with corruption.

23. ಕಳ್ಳರಿಗೆ ಇಮ್ಯುನಿಟಿ ಸಿಕ್ಕಾಗ ಮಾತ್ರ ಬಲಿತುಕೊಳ್ಳುತ್ತಾರೆಂದು ಆಗಲೆ ಹೇಳಿದೆ. ಹಿಂದಿನ ಇಬ್ಬರು ಮುಖ್ಯ ಮಂತ್ರಿಗಳ ಕಾಲದಲ್ಲಿ ಈ ಕಳ್ಳರನ್ನು ಮಟ್ಟ ಹಾಕಿದ್ದರೆ, ಅಥವಾ ಮೋದಿ ಸರ್ಕಾರ ಖದೀಮ ಬ್ಯಾಂಕ್ ಮ್ಯಾನೇಜರುಗಳನ್ನು ಮಟ್ಟ ಹಾಕಿದ್ದರೆ ಇಂದು ದೇಶದಲ್ಲಿ ಈ ರೀತಿಯ ಪ್ರಕರಣಗಳು ನಡೆಯುತ್ತಿದ್ದವೆ? ದೇಶದ ಎಷ್ಟೊಂದು ಬ್ಯಾಂಕುಗಳಲ್ಲಿ ಈ ರೀತಿಯ ಪ್ರಕರಣಗಳು ನಡೆದಿವೆ ಎಂಬ ಮಾಹಿತಿಯನ್ನು ಆರ್‌ಬಿಐ ಪ್ರಕಟಿಸಬೇಕು ಆಗ ಸತ್ಯಾಂಶ ಹೊರಬರುತ್ತದೆ.

24. ಕರ್ನಾಟಕದಲ್ಲಿ ಕಳೆದ 5-6 ವರ್ಷಗಳಲ್ಲಿ ಅನೇಕ ಬ್ಯಾಂಕುಗಳಲ್ಲಿ ಫ್ರಾಡುಗಳು ನಡೆದಿವೆ. ರಾಷ್ಟ್ರೀಕೃತ ಬ್ಯಾಂಕುಗಳು ಯಾರ ಅಧೀನದಲ್ಲಿವೆ? ಆ ಖದೀಮ ಮ್ಯಾನೇಜರುಗಳು ಯಾರ ಅಧೀನದಲ್ಲಿದ್ದಾರೆ? ಕೇಂದ್ರದ ಹಣಕಾಸು ಸಚಿವರ ಅಧೀನದಲ್ಲಿದ್ದಾರೆ ತಾನೆ? ಅಂತಿಮವಾಗಿ ಮೋದಿಯವರ ಅಧೀನದಲ್ಲಿದ್ದಾರೆ ತಾನೆ? ನಮ್ಮ ಜನರ ದುಡ್ಡನ್ನು ಹೇಗೆಂದರೆ ಹಾಗೆ ಲೂಟಿ ಮಾಡುವುದಕ್ಕಾ ಈ ಬ್ಯಾಂಕುಗಳು ಇರುವುದು?

ಇದೇ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಿಂದೆಯೂ ಹಗರಣಗಳಾಗಿವೆ. ಆ ಹಗರಣಗಳನ್ನು ಹೊರತರುವ ಕೆಲಸವನ್ನು ನಾವು ಮಾಡುತ್ತೇವೆ. ವಿವಿಧ ಆರೋಪಿಗಳಿಂದ 34.25 ಕೋಟಿ ಹಣ

ವಸೂಲಿ ಮಾಡಲಾಗಿದೆ. ಇದುವರೆಗೆ ಸರ್ಕಾರವು 85,25,07,698 ರೂ. ಹಣವನ್ನು (ರೂ. 85.25 ಕೋಟಿ) ವಿವಿಧ ಹಂತಗಳಲ್ಲಿ ತನ್ನ ವಶಕ್ಕೆ ಪಡೆದಿದೆ. ಉಳಿದದ್ದನ್ನು ವಶಕ್ಕೆ ಪಡೆಯುವ ಕೆಲಸ ಮಾಡುತ್ತಿದೆ. ಈ ವಿವರವನ್ನು ಅನುಬಂಧ-2 ರಲ್ಲಿಟ್ಟು ಮಂಡಿಸುತ್ತಿದ್ದೇನೆ.

25. ನಿಮ್ಮ ಅವಧಿಯಲ್ಲಿ ನಡೆದಿರುವ ಹಗರಣಗಳಲ್ಲಿ ಎಷ್ಟು ಮೊತ್ತವನ್ನು ರಿಕವರಿ ಮಾಡಿದ್ದೀರಿ ಹೇಳಿ? ನಾವು ತಪ್ಪು ಮಾಡಿದವರನ್ನು ಜೈಲಿಗೂ ಕಳಿಸಿದ್ದೇವೆ. ಹಣವನ್ನೂ ವಾಪಸ್ಸು ತರುತ್ತಿದ್ದೇವೆ. ಆದರೆ ನೀವು ಕಳ್ಳರು ಇನ್ನಷ್ಟು ಕಳ್ಳರಾಗುವಂತೆ ಮಾಡಿದಿರಿ. ಲೂಟಿ ಮಾಡಿದ ಹಣವನ್ನೂ ವಾಪಸ್ಸು ತರಲಿಲ್ಲ.

26. ಅಂತಿಮವಾಗಿ, ಈಗಾಗಲೇ ಈ ಹಗರಣದ ತನಿಖೆಯನ್ನು ರಾಜ್ಯ ಸರ್ಕಾರವು CID, SIT ಗೆ ನೀಡಿ ಆದೇಶಿರುತ್ತದೆ. ಸಿ.ಬಿ.ಐ. ಹಾಗೂ ಇ.ಡಿ. ಸಂಸ್ಥೆಗಳೂ ಕೂಡ ತನಿಖೆ ನಡೆಸುತ್ತಿವೆ. ಈ ಹಗರಣದಲ್ಲಿ ಯಾರು ಯಾರು ಭಾಗಿಯಾಗಿದ್ದಾರೆ ಹಾಗೂ ನಿಗಮದ ಖಾತೆಯಿಂದ ಯಾರ ಖಾತೆಗಳಿಗೆ ಹಣ ವರ್ಗಾವಣೆಯಾಗಿರುತ್ತದೆ ಹಾಗೂ ಇದರ ಮೂಲ (Ultimate) ಫಲಾನುಭವಿಗಳು ಯಾರು ಎಂಬುದು ತನಿಖೆಯು ಪೂರ್ಣಗೊಂಡ ನಂತರವೇ ತಿಳಿಯುತ್ತದೆ.

27. ತನಿಖೆ ನಡೆಯುತ್ತಿರುವಾಗ ನಾನು ಯಾವುದೇ ವ್ಯಕ್ತಿಯ ಬಗ್ಗೆ ಸ್ಪಷ್ಟವಾಗಿ ಇವರೇ ಕಾರಣಕರ್ತರು ಎಂದು ಹೇಳಿದರೆ ತಪ್ಪಾಗುತ್ತದೆ. ಹಾಗೂ ತನಿಖಾ ಸಂಸ್ಥೆಯ ತನಿಖೆಯನ್ನು ದಾರಿ ತಪ್ಪಿಸಿದಂತಾಗುತ್ತದೆ. ಆದುದರಿಂದ, ತನಿಖೆ ಮುಗಿಯುವವರೆಗೂ ಕಾಯಬೇಕಾಗುತ್ತದೆ. ತದನಂತರ ತನಿಖೆಯ ಫಲಿತಾಂತದ ಆಧಾರದ ಮೇಲೆ ತಪ್ಪಿಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಹಾಗೂ ನಿಗಮಕ್ಕೆ ಹಣ ವಾಪಸ್ಸು ಪಡೆಯುವ ಕೆಲಸ ಮಾಡಬೇಕಾಗುತ್ತದೆ.

28. ರಾಜ್ಯ ಸರ್ಕಾರವು ವಾಲ್ಮೀಕಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಜೆ.ಜಿ. ಪದ್ಮನಾಭ, ಹಾಗೂ ಲೆಕ್ಕಾಧೀಕ್ಷಕ ಪರಶುರಾಮ್ ದುರ್ಗಣ್ಣನವರ್ ಇವರನ್ನು ಅಮಾನತ್ತು ಮಾಡಿದೆ. ಎಸ್.ಐ.ಟಿ. ಯು ಬಂಧಿಸಿ ಜೈಲಿಗೆ ಅಟ್ಟಿದೆ. ಇಲಾಖೆಯ ಸಚಿವರಾಗಿದ್ದ ನಾಗೇಂದ್ರ ಅವರು ರಾಜೀನಾಮೆ ನೀಡಿ ವಿಚಾರಣೆ ಎದುರಿಸುತ್ತಿದ್ದಾರೆ. ಅವರನ್ನು ಇ.ಡಿ. ಯು ಬಂಧಿಸಿದೆ. ಹಾಗೆಯೇ, ಬ್ಯಾಂಕಿನ ಸಿಬ್ಬಂದಿಗಳನ್ನು ಸಹ ಎಸ್.ಐ.ಟಿ. ಯವರೆ ಅರೆಸ್ಟ್ ಮಾಡಿ ಜೈಲಿಗೆ ಅಟ್ಟಿದ್ದಾರೆ.

29. ಈ ಹಗರಣದಲ್ಲಿ ಹಣಕಾಸು ಇಲಾಖೆಯ ಯಾವುದೇ ಪಾತ್ರ ಇರುವುದಿಲ್ಲ. ಹಣಕಾಸು ಇಲಾಖೆಯ ಆದೇಶದಂತೆ, ಆಯವ್ಯಯದಲ್ಲಿ ತಿಳಿಸಿದಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯು ನಿಗಮಕ್ಕೆ 4 ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡಿರುತ್ತದೆ. ಆಡಳಿತ ಇಲಾಖೆಯ ಆದೇಶದ ನಂತರ ಸಂಬಂಧಪಟ್ಟ DDO (Drawing and Disbursing Officer) (ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ) ಇವರು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕೋರಿಕೆಯಂತೆ, ಖಜಾನೆಯಿಂದ ಹಣ ಸೆಳೆದು ನಿಗಮದ ಖಾತೆಗೆ ಜಮೆ ಮಾಡಿರುತ್ತಾರೆ. ಇದು ಇಲಾಖೆಯಲ್ಲಿ ಪ್ರತಿ ಕಂತಿನ ಹಣವನ್ನು ಸೆಳೆಯಲು ಇರುವಂತಹ ವಿಧಾನ (Procedure).

ಮಾನ್ಯ ವಿರೋಧ ಪಕ್ಷದ ನಾಯಕರು ಎನ್.ಟಿ.ಟಿ. ಮಾಡ್ಯೂಲ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದರಿಂದ ಎಲ್ಲಾ ಬ್ಯಾಂಕ್ ಖಾತೆಗಳಲ್ಲಿ ನಡೆಯುವ ಟ್ರಾನ್ಸಾಕ್ಷನ್ ಆರ್ಥಿಕ ಇಲಾಖೆಗೆ ತಿಳಿಯುವುದರಿಂದ ಈ ಹಗರಣದ ಬಗ್ಗೆ ಮಾಹಿತಿ ಇದ್ದರೂ ಆರ್ಥಿಕ ಇಲಾಖೆ ಏನೂ ಮಾಡಿರುವುದಿಲ್ಲವೆಂದು ಆರೋಪಿಸಿದ್ದಾರೆ.

ಆದರೆ, ಎನ್.ಟಿ.ಟಿ. ಮಾಡ್ಯೂಲ್‌ನ್ನು 2022 ರಲ್ಲಿ ಜಾರಿ ಮಾಡಲಾಗಿದೆ. ಇದರಲ್ಲಿ ದಾಖಲಾಗಿರುವ ಎಲ್ಲಾ ಬ್ಯಾಂಕ್ ಖಾತೆಗಳಲ್ಲಿ ಆಯಾ ದಿನ ಎಷ್ಟು ಹಣ ಬ್ಯಾಲೆನ್ಸ್ ಇದೆ ಎಂದು ಮಾಹಿತಿ ಖಜಾನೆಗೆ ಲಭ್ಯವಾಗುತ್ತದೆ. ಈ ಮಾಹಿತಿಯನ್ನು ಖಜಾನೆಯಿಂದ ಹಣ ಬಿಡುಗಡೆಗೊಳಿಸಲು ಓಪನಿಂಗ್ ಬ್ಯಾಲೆನ್ಸ್ ನಿರ್ಧಿಷ್ಟಪಡಿಸಲು ನೆರವಾಗುತ್ತದೆ. ಅದರ ಆಧಾರದ ಮೇಲೆ ಹೊಸದಾಗಿ ಹಣ ಬಿಡುಗಡೆಗೊಳಿಸಲು ನಿರ್ಧಾರ ಮಾಡಲಾಗುವುದು. ಇದನ್ನು ಹೊರತುಪಡಿಸಿ ಯಾವುದೇ ಖಾತೆಯಲ್ಲಿರುವ ಪ್ರತಿದಿನದ ವಹಿವಾಟಿನ ಮಾಹಿತಿ ಬ್ಯಾಂಕ್‌ಗಳಿಂದ ಆರ್ಥಿಕ ಇಲಾಖೆಗೆ ಲಭ್ಯವಾಗುವುದಿಲ್ಲ.

೩೦. ವಿರೋಧ ಪಕ್ಷದವರು ನಿಗಮದಲ್ಲಿ ನಡೆದಿರುವ ಹಗರಣದ ಕುರಿತು ಮಾತನಾಡುವಾಗ ಮುಖ್ಯಮಂತ್ರಿಗಳನ್ನು, ಆರ್ಥಿಕ ಇಲಾಖೆಯನ್ನು ಗುರಿ ಮಾಡುತಿದ್ದಾರೆ. ಆದರೆ, ರಾಜ್ಯದಲ್ಲಿ ಹಗರಣಗಳ ಸರಮಾಲೆಯನ್ನೇ ನಡೆಸಿರುವ ಯೂನಿಯನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹಾಗೂ ಇನ್ನಿತರೆ ಬ್ಯಾಂಕುಗಳು ಯಾರ ಅಧೀನದಲ್ಲಿ ಬರುತ್ತವೆ? ವಿರೋಧ ಪಕ್ಷದವರಿಗೆ ಅರ್ಥವಾಗದಿದ್ದರೆ ಬಿಡಿಸಿ ಹೇಳುತ್ತೇನೆ. ಇವೆಲ್ಲವೂ ರಾಷ್ಟ್ರೀಕೃತ ಬ್ಯಾಂಕುಗಳು. ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ಅಧೀನದಲ್ಲಿ ಬರುತ್ತವೆ. ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಹಣಕಾಸು ಸಚಿವರಾಗಿದ್ದಾರೆ. ದೇಶದಲ್ಲಿ ಹೆಚ್ಚು ಬ್ಯಾಂಕಿಂಗ್ ಹಗರಣಗಳು ಪ್ರಾರಂಭವಾಗಿದ್ದೇ ಕಳೆದ 6-7 ವರ್ಷಗಳಿಂದ.

ಉದಾಹರಣೆಗೆ, ಗುರು ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಆಗಿರುವ ಬೃಹತ್ ಹಗರಣದ ಕುರಿತು ಯಾಕೆ ಕೇಂದ್ರ ಸರ್ಕಾರ ಯಾವುದೇ ಕ್ರಮವಹಿಸದೆ ಸುಮ್ಮನಿದೆ? ಬಡ ಠೇವಣಿದಾರರ ಸಾವಿರಾರು ಕೋಟಿ ಹಣವನ್ನು ದೋಚಿಕೊಂಡಿದ್ದರೂ ಐ.ಟಿ., ಇ.ಡಿ., ಸಿ.ಬಿ.ಐ. ನವರು ಏನು ಮಾಡುತ್ತಿದ್ದರು? ಅದರಲ್ಲಿ ಎಷ್ಟು ಹಣ ರಿಕವರಿ ಮಾಡಿ ಬಡ ಠೇವಣಿದಾರರಿಗೆ ಮರಳಿಸಲಾಗಿದೆ? ಬ್ಯಾಂಕಿನ ಆಡಳಿತ ಮಂಡಳಿಯಲ್ಲಿದ್ದ ಬಲಿಷ್ಠ ರಾಜಕಾರಣಿಗಳಿಗೆ ಯಾವ ಶಿಕ್ಷೆ ಆಯಿತು? ಜಯನಗರ, ಬಸವನಗುಡಿಯ ಮನೆಮನೆಗಳಲ್ಲಿ, ಬೀದಿ ಬೀದಿಗಳಲ್ಲಿ ಹಗರಣದಲ್ಲಿ ಭಾಗವಹಿಸಿದ್ದವರು ವಿಧಾನಸೌಧ, ಪಾರ್ಲಿಮೆಂಟಿಗೂ ಹೋಗಿದ್ದಾರೆ ಎಂದು ಮಾತನಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಸೆಲೆಕ್ಟಿವ್ ಅಪ್ರೋಚ್‌ನಿಂದಾಗಿ ಹಗರಣಗಳು ಹೆಚ್ಚಾಗುತ್ತಿವೆಯೇ ಹೊರತು, ಕಡಿಮೆಯಾಗುತ್ತಿಲ್ಲ. ವಿರೋಧ ಪಕ್ಷಗಳ ಮುಖಂಡರ ಮೇಲೆ ಹಗರಣಗಳ ಆರೋಪಗಳಿದ್ದರೆ ಅವರನ್ನು ಬಿ.ಜೆ.ಪಿ. ಗೆ ಸೇರಿಸಿಕೊಂಡ ನಂತರವೇ ಹಗರಣ ಮುಕ್ತ ಮಾಡಲಾಗುತ್ತಿದೆ. ಹೀಗಿದ್ದರೆ ಯಾವ ಕಳ್ಳರಿಗೆ ತಾನೆ ಭಯ ಹುಟ್ಟಲು ಸಾಧ್ಯ? ವಿರೋಧ ಪಕ್ಷದವರನ್ನು ನೋಡಿದರೆ ಇಲ್ಲಿ ಗಂಟೆಗಟ್ಟಲೆ ನಿಂತು ನೈತಿಕತೆಯ ಬಗ್ಗೆ ಪಾಠ ಮಾಡುತ್ತಾರೆ.

೩1. ನಾನು ಪದೇ ಪದೇ ಈ ಸದನಕ್ಕೂ ನಾಡಿನ ಜನರಿಗೂ ಭರವಸೆ ನೀಡಬಯಸುತ್ತೇನೆ. ನಾವು ಪರಿಶಿಷ್ಟ ಜಾತಿ, ಪಂಗಡ, ದಮನಿತ ಸಮುದಾಯದವರಿಗೆ ಒದಗಿಸಿದ ಪ್ರತಿ ಪೈಸೆಯನ್ನೂ ಖರ್ಚು ಮಾಡುತ್ತೇವೆ ಮತ್ತು ಗುಣಾತ್ಮಕವಾಗಿ ವಿನಿಯೋಗಿಸುತ್ತೇವೆ ಹಾಗೂ ಈ ಪ್ರಕರಣದಲ್ಲಿ ಭಾಗಿಯಾಗಿರುವ ಕಳ್ಳರು ಯಾರೇ ಇದ್ದರೂ ಅವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತೇವೆ. ಬಿ.ಜೆ.ಪಿ. ಅವಧಿಯ ಎಲ್ಲ ಹಗರಣಗಳನ್ನೂ ತನಿಖೆಗೆ ಒಪ್ಪಿಸುತ್ತೇವೆ.

**ಅನುಬಂಧ-1**

**ಜನರಲ್ ಮ್ಯಾನೇಜರ್ (ಹೆಚ್.ಆರ್) ಪತ್ರದಲ್ಲಿ ಉಲ್ಲೇಖಿಸಿರುವ ಅಂಶಗಳು ಕೆಳಗಿನಂತಿವೆ:**

1. M/s Karnataka Maharshi Valmiki Scheduled Tribes Development Corporation Limited (M/s KMVSTDCL) was maintaining an account no. 520141001659653 in the name of "MD KMVSTDCL" with the M.G. Road Branch, RO - Bangalore East.

2. In this regard, it is observed that, Ms. Suchismita Raul, as a Branch Head of MG Road Branch, failed to verify the genuineness of signatures of the signatories while accepting request for modification of Email ID and mobile number of signatories in the account of M/s KMVSTDCL. As per website of M/s KMVSTDCL, Email ID is mdkmvstdc@gmail.com' and reported mobile no. of the MD is 9449552240.

3. However, she did not verify the details through website or personal visit to KMVSTDCL office before acceding to request for changing Email ID to 'mdkmvstdcl@gmail.com' and mobile no. to 6026137043.

4. Further, it is observed that, she failed to confirm with the signatories when request was made for issuance of cheque books. She further failed to verify the identity of Mr.Shivakumar mentioned in their communication even when handing over the Cheque book on 04.03.2024.

5. These cheques were used to transfer Govt, funds from the said account in significantly large tranches, yet Ms. Suchismita Raul failed to confirm the genuineness of the transactions from the authorized signatories.

6. Further, while sanctioning SOD limit of Rs. 45.00 crore against fixed deposit to the same customer, she failed to obtain the Article of Association (AOA) and Memorandum of Association (MOA) of the said corporation and did not verify the power of the Competent Authority of the Corporation to avail the SOD facility against Fixed Deposit.

7. Further, she failed to obtain signature of the authorized signatories in her presence, as they later complained and denied having issued any request for sanction of SOD against deposits & denied having executed any loan documents.

8. Due to her above acts of gross negligence, a total of Rs. 89.63 crore was fraudulently transferred from the account of M/s KMVSTDCL. Moreover, the funds were transferred to multiple concerns all of which maintained accounts with RBL Bank & had sequential account numbers.

9. Furthermore, majority of the beneficiaries were engaged in IT related activities which were not related to the nature of activity undertaken by M/s KMVSTDCL, but which, Ms. Suchismita Raul failed to notice.

**ಚೀಫ್ ಮ್ಯಾನೇಜರ್ (ಇ.ಆರ್.ಜಿ.) ಪತ್ರದಲ್ಲಿ ಉಲ್ಲೇಖಿಸಿರುವ ಅಂಶಗಳು ಕೆಳಗಿನಂತಿವೆ:**

1) M/s. Karnataka Maharshi. Valmiki Scheduled Tribes Development Corporation Limited (M/s KMVSTDCL) was maintaining an account no 520141001659653 in the name of "MD KMVSTDCL" with the MG Road Branch, RO - Bangalore East.

2) In this regard, it is observed that, Ms. Deepa D. as Dy.Branch Head of MG Road Branch, failed to verify the genuineness of signatures of the signatories while accepting request for modification of Email ID and mobile number of signatories in the account of M/s KMVSTDCL.

3) Further, she posted/ verified 12 RTGS transactions transferred funds from the account of M/s KMVSTDCL in favour of various beneficiaries. The RTGS/NEFT transactions were done in favour of beneficiaries which were software companies and the quantum of the transactions was significantly large.

4) However, despite that, she failed to identify that large amount of funds were being sent from the accounts of M/s.KMVSTDCL to beneficiaries which were not in tune with the line of activity of M/s. KMVSTDCL.

5) She also failed to identify that all of the beneficiary accounts were maintained with RBL Bank, Banjara Hills, Hyderabad branch and that the accounts were sequentially numbered. Further, Ms. Deepa D also authorized the issuance of 2 Cheque books of 10 leaves each pertaining to the SB.

6) Account no. 520141001659653 of M/s. KMVSTDCL in Finacle on 04.03.2024, without verifying the mandate of M/s.KMVSTDCL regarding issuance of Cheque Books. She further failed to verify the identity of Mr. Shivakumar mentioned in their communication even when handing over the Cheque book on 04.03.2024.

7) She also made entries in Finacle pertaining to issuance of two cheque books of 5 leaves each in the SOD Account no. 034124010000007 of M/s. KMVSTDCL on 30.03.2024 in Finacle, without verifying the mandate of the said Corporation for issuance of Cheque Books.

8) Furthermore, she had authorized updation of Mobile number viz. 6026137043 in the SB a/c no. 520141001659653 of M/s. KMVSTDCL on 04.03.2024, without verifying the signatures of the signatories & without ensuring that proper mandate was obtained from the Corporation for change of linked email id & Mobile number.

9) Thus, it is observed that she failed to confirm the genuineness of the signatures of the signatories while entertaining requests for issuance of cheque books of the concern. The said cheques were used to transfer significantly large amounts of the Govt. funds from the accounts of M/s. KMVSTDCL, yet Ms Deepa failed to confirm the genuineness of the transactions from the authorized signatories. Due to her above acts of gross negligence, a total of Rs. 89.63 Crore was fraudulently transferred from the accounts of M/s. KMVSTDCL. Moreover, it is observed that all the funds were transferred to multiple accounts having sequential account numbers, all of which were maintained with RBL Bank and the beneficiaries were not related to the nature of activity undertaken by M/s. KMVSTDCL.

10) Therefore, there is a need to examine the role of Ms. Deepa D in the fraud committed in the account of M/s KMVSTDCL with the Bank. In view of the above, the undersigned, in his capacity as the Competent Authority to remove Ms. Deepa D from the services of the Bank, accords permission to CBI to investigate the. complaint lodged by the Bank in relation to the account of MD KMVSTDCL against Ms. Deepa D as required under Section 17(A) of the Prevention of Corruption (Amendment) Act, 2018.

11) However, the above permission shall not be construed as sanction for prosecution against Ms. Deepa D.

**ಅನುಬಂಧ-2**

## ಬಿ.ಜೆ.ಪಿ. ಅವಧಿಯ ಪ್ರಮುಖ ಹಗರಣಗಳ ವಿವರ

| ಕ್ರ.ಸಂ. | ಹಗರಣ ನಡೆದ ಇಲಾಖೆ/ನಿಗಮ/ ಮಂಡಳಿ | ಹಗರಣ ನಡೆದ ಅವಧಿ | ಹಗರಣದ ಅವಧಿಯಲ್ಲಿದ್ದ ಮುಖ್ಯಮಂತ್ರಿ | ಹಗರಣದ ಅವಧಿಯಲ್ಲಿದ್ದ ಸಚಿವರು | ಹಗರಣದ ಮೊತ್ತ | ಷರಾ |
|---|---|---|---|---|---|---|
| 1 | ಎ.ಪಿ.ಎಂ.ಸಿ. | 2020-21 | ಬಿ.ಎಸ್. ಯಡಿಯೂರಪ್ಪ | ಬಸವರಾಜ ಬೊಮ್ಮಾಯಿ | 47.16 ಕೋಟಿ | |
| 2 | ಭೋವಿ ಅಭಿವೃದ್ಧಿ ನಿಗಮ | 2021-22 | ಬಸವರಾಜ ಬೊಮ್ಮಾಯಿ | ಕೋಟ ಶ್ರೀನಿವಾಸ ಪೂಜಾರಿ | 87.00 ಕೋಟಿಗೂ ಹೆಚ್ಚು | ಗೂಳಿಹಟ್ಟಿ ಶೇಖರ್ ರವರು 100 ಕೋಟಿಗೂ ಹೆಚ್ಚು ಎಂದು ಮಾಧ್ಯಮಗಳಿಗೆ ಹೇಳಿಕೆ ಕೊಟ್ಟಿದ್ದಾರೆ. |
| 3 | ದೇವರಾಜ ಅರಸು ಟ್ರಕ್ ಟರ್ಮಿನಲ್ | 2022-23 | ಬಸವರಾಜ ಬೊಮ್ಮಾಯಿ | ಶ್ರೀರಾಮುಲು | 50.00 ಕೋಟಿಗೂ ಹೆಚ್ಚು | ನಿಗಮದ ಮಾಜಿ ಅಧ್ಯಕ್ಷ ಡಿ.ಎಸ್. ವೀರಯ್ಯ ಹಾಗೂ ಎಂ.ಡಿ. ಶಂಕರಪ್ಪ ಜೈಲಿನಲ್ಲಿದ್ದಾರೆ. |
| 4 | ಗಂಗಾ ಕಲ್ಯಾಣ ಯೋಜನೆ (ಅಂಬೇಡ್ಕರ್, ಭೋವಿ. ಆದಿಜಾಂಬವ, ಮುಂತಾದ ನಿಗಮಗಳು) | 2021-22 | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಕೋಟ ಶ್ರೀನಿವಾಸ ಪೂಜಾರಿ | 430.00 ಕೋಟಿಗೂ ಹೆಚ್ಚು | |
| 5 | ಪ್ರವಾಸೋದ್ಯಮ ಇಲಾಖೆ | 2021-22 | ಬಸವರಾಜ ಬೊಮ್ಮಾಯಿ | ಸಿ.ಪಿ. ಯೋಗೇಶ್ವರ್ | 2.47 ಕೋಟಿ | |

| ಕ್ರ.ಸಂ. | ಹಗರಣ ನಡೆದ ಇಲಾಖೆ/ನಿಗಮ/ ಮಂಡಳಿ | ಹಗರಣ ನಡೆದ ಅವಧಿ | ಹಗರಣದ ಅವಧಿಯಲ್ಲಿದ್ದ ಮುಖ್ಯಮಂತ್ರಿ | ಹಗರಣದ ಅವಧಿಯಲ್ಲಿದ್ದ ಸಚಿವರು | ಹಗರಣದ ಮೊತ್ತ | ಷರಾ |
|---|---|---|---|---|---|---|
| 5 | ಕಿಯೋನಿಕ್ಸ್ ಹಗರಣ | 2019 ರಿಂದ 2023 | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಅಶ್ವತ್ಥ್‌ನಾರಾಯಣ | ಸುಮಾರು 500 ಕೋಟಿ | ಸಿ.ಎ.ಜಿ. ವರದಿಯಲ್ಲಿ ಉಲ್ಲೇಖ |
| 6 | ಕೋವಿಡ್ ಹಗರಣ | 2019-20 ರಿಂದ ಏಪ್ರಿಲ್-23 ರವರೆಗೆ | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಕೆ.ಸುಧಾಕರ್, ಶ್ರೀರಾಮುಲು ಹಾಗೂ ಇತರೆ ಮಂತ್ರಿಗಳು, ಅಧಿಕಾರಿಗಳು | ಬಿ.ಜೆ.ಪಿ.ಯ ಮಾನ್ಯ ಸದಸ್ಯರಾದ ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ ಅವರು 40,000 ಕೋಟಿಗೂ ಹೆಚ್ಚು ಹಗರಣ ನಡೆದಿದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಬಿಜೆಪಿಯ ಮತ್ತೊಬ್ಬ ಸದಸ್ಯರಾದ ಎಚ್.ವಿಶ್ವನಾಥ್ ಮತ್ತು ಗೂಳಿಹಟ್ಟಿ ಶೇಖರ್ ರವರು ಭದ್ರಾ ಮೇಲ್ದಂಡೆ ಯೋಜನೆಯಡಿ 2,000 ಕೋಟಿಗೂ ಹೆಚ್ಚು ಹಗರಣ ನಡೆದಿದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಈ ಕುರಿತು ಜಸ್ಟೀಸ್ ನಾಗಮೋಹನದಾಸ್ ಹಾಗೂ ಜಸ್ಟೀನ್ ಜಾನ್ ಮೈಕೆಲ್ ಡಿ.ಕುನ್ಹಾ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.<br><br>ಗುತ್ತಿಗೆದಾರರ ಸಂಘದವರು ರಾಷ್ಟ್ರಪತಿಗಳಿಗೆ ದೂರು ಬರೆದಿದ್ದರು, ಬೆಳಗಾವಿ ಜಿಲ್ಲೆಯ ಸಂತೋಷ್ ಪಾಟೀಲ ಆತ್ಮಹತ್ಯೆ ಮಾಡಿಕೊಂಡರು, ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ರಾಜೀನಾಮೆ ನೀಡಿದ್ದರು. | |
| 7 | 40% ಹಗರಣ | 2019-20 ರಿಂದ ಏಪ್ರಿಲ್-23 ರವರೆಗೆ | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಅಭಿವೃದ್ಧಿ ಇಲಾಖೆ ಹಾಗೂ ಕಾಮಗಾರಿಗಳು, ಸರಕು & ಸೇವೆಗಳನ್ನು ಒದಗಿಸಿದ್ದ ಸಚಿವರು & ಅಧಿಕಾರಿಗಳು | | |

| ಕ್ರ.ಸಂ. | ಹಗರಣ ನಡೆದ ಇಲಾಖೆ/ನಿಗಮ/ ಮಂಡಳಿ | ಹಗರಣ ನಡೆದ ಅವಧಿ | ಹಗರಣದ ಅವಧಿಯಲ್ಲಿದ್ದ ಮುಖ್ಯಮಂತ್ರಿ | ಹಗರಣದ ಅವಧಿಯಲ್ಲಿದ್ದ ಸಚಿವರು | ಹಗರಣದ ಮೊತ್ತ | ಷರಾ |
|---|---|---|---|---|---|---|
| 8 | ಪಿ.ಎಸ್.ಐ. ಮತ್ತು ಇತರೆ ನೇಮಕಾತಿ | 2019-20 ರಿಂದ 2022-23 ರವರೆಗೆ | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಬಸವರಾಜ ಬೊಮ್ಮಾಯಿ | ನೂರಾರು ಕೋಟಿ | ಜಸ್ಟೀಸ್ ವೀರಪ್ಪ ಅವರು ತನಿಖಾ ವರದಿ ಸಲ್ಲಿಸಿದ್ದಾರೆ. |
| 9 | ಪರಶುರಾಮ ಥೀಮ್ ಪಾರ್ಕ್ ಹಗರಣ | 2022-23 | ಬಸವರಾಜ ಬೊಮ್ಮಾಯಿ | | 11.00 ಕೋಟಿಗೂ ಹೆಚ್ಚು | |
| 10 | ಬಿಟ್ ಕಾಯಿನ್ ಹಗರಣ | 2021 ರಿಂದ 2023 | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಬಸವರಾಜ ಬೊಮ್ಮಾಯಿ ಗೃಹ ಸಚಿವರಾಗಿದ್ದರು | ಸಾವಿರಾರು ಕೋಟಿ | |
| 11 | ಯಡಿಯೂರಪ್ಪ ಆಪ್ತ ಉಮೇಶ್ ಮತ್ತು ಇತರರ ಮನೆಯಲ್ಲಿ ಸಿಕ್ಕಿದ್ದು. ಯಡಿಯೂರಪ್ಪ ನವರ ಅಕ್ರಮ ಆಸ್ತಿ. | 2021 | ಬಿ.ಎಸ್. ಯಡಿಯೂರಪ್ಪ | | 750 ಕೋಟಿಗೂ ಹೆಚ್ಚು | |
| 12 | ಯಡಿಯೂರಪ್ಪ ಮತ್ತು ವಿಜಯೇಂದ್ರ ಕುಟುಂಬದ ಆದಾಯ ಮೀರಿದ ಆಸ್ತಿ ಪ್ರಕರಣ | ನೂರಾರು ಕೋಟಿ | | | | |
| 13 | ಯಡಿಯೂರಪ್ಪ ರವರ ವಿರುದ್ಧ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಈಶ್ವರಪ್ಪ ರಾಜ್ಯಪಾಲರಿಗೆ ದೂರು ನೀಡಿದ್ದರು. | | | | | |
| 14 | ಬಿ.ಜೆ.ಪಿ. ಸರ್ಕಾರದ ಅಬಕಾರಿ ಸಚಿವರ ಹಗರಣದ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದಿದ್ದರು. | 2019 ರಿಂದ 2021 | ಬಿ.ಎಸ್. ಯಡಿಯೂರಪ್ಪ | ಹೆಚ್. ನಾಗೇಶ್ | ನೂರಾರು ಕೋಟಿ | ಅಬಕಾರಿ ಸಚಿವರನ್ನು ಬದಲಾಯಿಸಲಾಗಿತ್ತು. |

| ಕ್ರ.ಸಂ. | ಹಗರಣ ನಡೆದ ಇಲಾಖೆ/ನಿಗಮ/ ಮಂಡಳಿ | ಹಗರಣ ನಡೆದ ಅವಧಿ | ಹಗರಣದ ಅವಧಿಯಲ್ಲಿದ್ದ ಮುಖ್ಯಮಂತ್ರಿ | ಹಗರಣದ ಅವಧಿಯಲ್ಲಿದ್ದ ಸಚಿವರು | ಹಗರಣದ ಮೊತ್ತ | ಷರಾ |
|---|---|---|---|---|---|---|
| 15 | ಕೆ.ಕೆ.ಆರ್.ಡಿ.ಬಿ. | 2019–20 ರಿಂದ ಏಪ್ರಿಲ್–2023 | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಪಿ. ಮುನಿರತ್ನ | 200 ಕೋಟಿಗೂ ಹೆಚ್ಚು | ದತ್ತಾತ್ರೇಯ ಪಾಟೀಲ ರೇವೂರ ನಿಗಮದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹಗರಣ ನಡೆದಿದೆ. |
| 16 | ಕಂದಾಯ ಇಲಾಖೆಯ ಹಗರಣ | 2019–20 ರಿಂದ ಏಪ್ರಿಲ್–2023 | ಬಿ.ಎಸ್. ಯಡಿಯೂರಪ್ಪ & ಬಸವರಾಜ ಬೊಮ್ಮಾಯಿ | ಆರ್. ಅಶೋಕ್ | | ಶೃಂಗೇರಿಯ ಸಬ್ ರಿಜಿಸ್ಟ್ರಾರ್ ಹೆಚ್.ಎಸ್. ಚಲುವರಾಜು, ಆರ್. ಅಶೋಕ್ ಕಂದಾಯ ಸಚಿವರಾಗಿದ್ದಾಗ ಅವರ ಆಪ್ತ ಸಹಾಯಕರು ಲಂಚ ಕೇಳಿದ್ದ ಪ್ರಕರಣ ಹಾಗೂ ಆರ್. ಅಶೋಕ್ ಅವರ ಮೇಲೆ ಭೂಅಕ್ರಮಕ್ಕೆ ಸಂಬಂಧಿಸಿದಂತೆ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಪೆಂಡಿಂಗ್ ಇದ್ದರೂ ಚುನಾವಣಾ ಅಫಿಡವಿಟ್‌ನಲ್ಲಿ ಈ ಕ್ರಿಮಿನಲ್ ಕೇಸ್ ಕುರಿತು ಯಾವುದೇ ಮಾಹಿತಿ ಸಲ್ಲಿಸಿಲ್ಲ. |
| 17 | ಕೃಷಿ ಇಲಾಖೆ | 2021 ರಿಂದ 2023 | ಬಸವರಾಜ ಬೊಮ್ಮಾಯಿ | ಬಿ.ಸಿ. ಪಾಟೀಲ್ | | ಕೃಷಿ ಸಚಿವರಾಗಿದ್ದ ಬಿ.ಸಿ.ಪಾಟೀಲ್ ರವರು ಕೃಷಿ ಇಲಾಖೆಯ ನೌಕರರೇ ಲಂಚ ವಸೂಲಿ ಮಾಡುತ್ತಿದ್ದ ಕುರಿತು ರಾಜ್ಯಪಾಲರಿಗೆ ಪತ್ರ ಬರೆದಿದ್ದರು. |

| ಕ್ರ.ಸಂ. | ಹಗರಣ ನಡೆದ ಇಲಾಖೆ/ನಿಗಮ/ ಮಂಡಳಿ | ಹಗರಣ ನಡೆದ ಅವಧಿ | ಹಗರಣದ ಅವಧಿಯಲ್ಲಿದ್ದ ಮುಖ್ಯಮಂತ್ರಿ | ಹಗರಣದ ಅವಧಿಯಲ್ಲಿದ್ದ ಸಚಿವರು | ಹಗರಣದ ಮೊತ್ತ | ಷರಾ |
|---|---|---|---|---|---|---|
| 18 | ಅಂಗನವಾಡಿಗಳಿಂದ ಗರ್ಭಿಣಿಯರು ಮತ್ತು ಮಕ್ಕಳಿಗೆ ಮಾತೃಪೂರ್ಣ ಯೋಜನೆಯಿಂದ ನೀಡಲಾಗುತ್ತಿದ್ದ ಮೊಟ್ಟೆ ಹಗರಣ | 2019 ರಿಂದ 2021 | ಬಿ.ಎಸ್. ಯಡಿಯೂರಪ್ಪ | ಶಶಿಕಲಾ ಜೊಲ್ಲೆ | ಗಂಗಾವತಿ ಶಾಸಕರಾಗಿದ್ದ ಪರಣ್ಣ ಮುನವಳ್ಳಿ ಕೂಡ ಭಾಗಿಯಾಗಿದ್ದರು. | |
| 19 | ಕೆ.ಐ.ಎ.ಡಿ.ಬಿ. | 2008 ರಿಂದ 2013 | ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸದಾನಂದ ಗೌಡ | | ಕಟ್ಟಾ ಸುಬ್ರಮಣ್ಯ ನಾಯ್ಡು, ಮುರುಗೇಶ ನಿರಾಣಿ, ಮುಂತಾದವರು ಭಾಗಿಯಾಗಿದ್ದ ಬೃಹತ್ ಹಗರಣ ಕಾಂಡದ ಬಿಸಿ ಇನ್ನೂ ಆರಿಲ್ಲ. | |
| 20 | ಗಣಿ ಹಗರಣ, ಬಿ.ಡಿ.ಎ. ಮತ್ತು ಕೆ.ಐ.ಎ.ಡಿ.ಬಿ. ಡಿನೋಟಿಫಿಕೇಶನ್ ಹಗರಣದಲ್ಲಿ ಮುಖ್ಯಮಂತ್ರಿಗಳು ಹಾಗೂ ಹಲವಾರು ಸಚಿವರಗಳು ಜೈಲಿಗೆ ಹೋಗಿದ್ದಾರೆ. | 2008 ರಿಂದ 2013 ರವರೆಗೆ | ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸದಾನಂದ ಗೌಡ | | | |
| 21 | ಗುರು ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕಿನ ಬೃಹತ್ ಹಗರಣ | ಇದುವರೆಗೂ ಈ ಹಗರಣದಲ್ಲಿ ಬಡ ಜನರ ಸಾವಿರಾರು ಕೋಟಿ ಹಣವನ್ನು ದೋಚಿರುವ ಖದೀಮರನ್ನು ಇದುವರೆಗೂ ಐ.ಟಿ., ಇ.ಡಿ. ಮತ್ತು ಸಿಬಿಐ ನವರು ಬಂಧಿಸುವ ಕೆಲಸ ಮಾಡಿಲ್ಲ. ಜಯನಗರ, ಬಸವನಗುಡಿಯ ಬೀದಿ ಬೀದಿಗಳಲ್ಲಿ ಕಳ್ಳರು ವಿಧಾನಸೌಧ, ಪಾರ್ಲಿಮೆಂಟಿಗೂ ಆಯ್ಕೆಯಾಗಿ ಹೋಗಿದ್ದಾರೆಂದು ಮಾತನಾಡಿಕೊಳ್ಳುತ್ತಿದ್ದಾರೆ. | | | | |

ಬಗೆದಷ್ಟೂ ಬಿ.ಜೆ.ಪಿ. ಅವಧಿಯ ಲೆಕ್ಕ ಹಾಕಲಾಗದಷ್ಟು ಹಗರಣಗಳು ಬಯಲಾಗುತ್ತಲೇ ಇವೆ. ಈ ಹಗರಣಗಳ ಕುರಿತು ವಿವಿಧ ತನಿಖೆಗಳು ನಡೆಯುತ್ತಿವೆ. ಭ್ರಷ್ಟರು ಹಾಗೂ ದುರುಳರು ಜೈಲಿಗೆ ಹೋಗುವ ದಿನಗಳು ದೂರವಿಲ್ಲ.

## ಅನುಬಂಧ-3

### ನಮ್ಮ ಎಸ್.ಐ.ಟಿ.ಯು ಇದುವರೆಗೆ ಮುಟ್ಟು ಗೋಲು ಹಾಕಿಕೊಂಡಿರುವ ಮೊತ್ತ

| ಕ್ರ.ಸಂ. | ಪಿ.ಎಫ್. ಸಂಖ್ಯೆ | ವಶಪಡಿಸಿಕೊಂಡ ಮೊತ್ತ (ರೂ.) | ವಶಪಡಿಸಿಕೊಂಡ ವಿವರ |
|---|---|---|---|
| 1 | 14/2024 | 8,21,62,600 | ಸತ್ಯನಾರಾಯಣ ವರ್ಮಾ |
| 2 | 16/2024 | 3,62,47,200 | ಪದ್ಮನಾಭ ಜೆ.ಜಿ. |
| 3 | 17/2024 | 30,00,000 | ಪದ್ಮನಾಭ ಜೆ.ಜಿ. |
| 4 | 18/2024 | 1,49,65,200 | ನಾಗೇಶ್ವರ ರಾವ್ |
| 5 | 20/2024 | 30,00,000 | ಚಂದ್ರಮೋಹನ್ |
| 6 | 26/2024 | 12,50,000 | ಜಿ.ಕೆ. ಜಗದೀಶ್ |
| 7 | 27/2024 | 3,10,000 | ಸತ್ಯನಾರಾಯಣ ವರ್ಮಾ |
| 8 | 28/2024 | 24,00,000 | ಸತ್ಯನಾರಾಯಣ ವರ್ಮಾ |
| ಒಟ್ಟು ನಗದು | | **14,33,35,000** | |
| 9 | 207 ಗ್ರಾಂ ಚಿನ್ನ | 13,50,000 | ಚಂದ್ರಮೋಹನ್ |
| 10 | 47.6 ಗ್ರಾಂ ಚಿನ್ನ | 3,09,400 | ಜಿ.ಕೆ. ಜಗದೀಶ್ |
| ಒಟ್ಟು ನಗದು | | **14,49,94,400** | |
| 11 | ವಿವಿಧ 217 ಬ್ಯಾಂಕ್ ಅಕೌಂಟ್ ಗಳನ್ನು ಗುರುತಿಸಿ ಅವುಗಳಲ್ಲಿದ್ದ | 13,72,94,132 ರೂ.ಗಳನ್ನು ಫ್ರೀಜ್ ಮಾಡಲಾಗಿರುತ್ತದೆ. | |
| 12 | ಈ ಪ್ರಕರಣದಲ್ಲಿ ಭಾಗಿಯಾಗಿರುವ ಸತ್ಯನಾರಾಯಣ ವರ್ಮಾ ಮತ್ತು ಇತರೆ ಆರೋಪಿಗಳು ಅಕ್ರಮವಾಗಿ ಬೇರೆ ವ್ಯಕ್ತಿಗಳ ಖಾತೆಗಳಿಗೆ ವರ್ಗಾಯಿಸಿದ್ದ 1.50 ಕೋಟಿ ರೂ. ಹಣವನ್ನು ಜನರೇ ವಾಪಾಸ್ ಕಟ್ಟಿದ್ದಾರೆ. ಆ ಹಣ ಕೂಡ ಸರ್ಕಾರದಲ್ಲಿದೆ. | 1,50,00,000 | |
| 13 | ಎಸ್.ಐ.ಟಿ. ಯು ಸತ್ಯನಾರಾಯಣ ವರ್ಮಾ ಲ್ಯಾಂಬೋರ್ಗಿನಿ ಉರಸ್ ಎಂಬ ಕಾರ್‌ನ್ನು ಬಿಗ್‌ಬಾಯ್ಸ್ ಟಾಯ್ಸ್ ಲಿ. ಕಂಪನಿ ಮೂಲಕ ಖರೀದಿ ಮಾಡಿದ್ದ. ಈಗ ಆ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಸದರಿ ಕಂಪನಿಯು ಕಾರನ್ನು ವಾಪಸ್ ಪಡೆದು 3,31,19,166 ರೂ. ಹಣವನ್ನು ಸರ್ಕಾರಕ್ಕೆ ಮರಳಿಸುವುದಾಗಿ ಸಂಬಂಧಿತ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. | 3,31,19,166 | |

| ಕ್ರ.ಸಂ. | ಪಿ.ಎಫ್. ಸಂಖ್ಯೆ | ವಶಪಡಿಸಿಕೊಂಡ ಮೊತ್ತ (ರೂ.) | ವಶಪಡಿಸಿಕೊಂಡ ವಿವರ |
|---|---|---|---|
| 14 | ಇದೇ ಸತ್ಯನಾರಾಯಣ ವರ್ಮಾ 1.21 ಕೋಟಿಗೂ ಹೆಚ್ಚು ಬೆಲೆಬಾಳುವ ಬೆಂಜ್ ಕಾರನ್ನು ಖರೀದಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಈ ಕಾರನ್ನು ಎಸ್.ಐ.ಟಿ.ಯು ತನ್ನ ವಶಕ್ಕೆ ಪಡೆದಿರುತ್ತದೆ. ಈ ಕಾರನ್ನೂ ಸಹ ಮರಳಿ ಕಂಪನಿಗೆ ನೀಡಿ ಅದರ ಮೌಲ್ಯವನ್ನು ವಾಪಸ್ ಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ. | 1,21,00,000 | |
| 15 | ದಿನಾಂಕ:23.05.2024 ರಂದು ಅಕ್ರಮವಾಗಿ ವರ್ಗಾವಣೆಯಾಗಿದ್ದ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಿಂದ[ ರತ್ನಾಕರ್ ಬ್ಯಾಂಕ್] ಎಸ್.ಟಿ. ನಿಗಮದ ಖಾತೆಗೆ 5.00 ಕೋಟಿ ಮರಳಿಸಿರುತ್ತಾರೆ. | 5,00,00,000 | |
| 16 | ಯೂನಿಯನ್ ಬ್ಯಾಂಕ್‌ನಿಂದ ಅಕ್ರಮವಾಗಿ ಹಣ ವರ್ಗಾವಣೆಯಾಗಿದ್ದ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 46.00 ಕೋಟಿಗೂ ಹೆಚ್ಚು ಹಣ ರತ್ನಾಕರ್ ಬ್ಯಾಂಕ್ ಲಿ. ನಲ್ಲಿದೆ. ಈ ಹಣವನ್ನು ನಮ್ಮ ಎಸ್.ಐ.ಟಿ. ತಂಡವು ಫ್ರೀಜ್ ಮಾಡಿರುತ್ತದೆ. ಅದನ್ನು ಹಿಂಪಡೆಯುವ ಪ್ರಕ್ರಿಯೆ ಪ್ರಾರಂಭಿಸಲಾಗುತ್ತಿದೆ. | 46,00,00,000 | |
| ಒಟ್ಟು | | **85,25,07,698** | |

**ಸಭಾಪತಿಯವರು:–** ತಮ್ಮ ಹತ್ತಿರ ಇರುವ ಎಲ್ಲಾ ಪ್ರತಿಗಳನ್ನು ನಮಗೆ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ನೀಡಿರುವಂತಹ ಉತ್ತರದ ಹೇಳಿಕೆಯ ಪ್ರತಿಯನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

**(ಮಾನ್ಯ ಸಭಾಪತಿಯವರ ನಿರ್ದೇಶನದಂತೆ ಮಾನ್ಯ ಮುಖ್ಯಮಂತ್ರಿಗಳು ಓದಿದ ಲಿಖಿತ ಹೇಳಿಕೆಯನ್ನು ನಡಾವಳಿಯಲ್ಲಿ ದಾಖಲಿಸಲಾಯಿತು)**

ಮುಂದು...

(590) 22.07.2024 01.40 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಈಗ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವನ್ನು ಮಧ್ಯಾಹ್ನ 01 ಗಂಟೆ 41 ನಿಮಿಷಗಳಿಗೆ 10 ನಿಮಿಷಗಳ ಕಾಲ ಮುಂದೂಡಲಾಯಿತು)**

(591) 22-07-2024 (2.00) ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**(ಮಧ್ಯಾಹ್ನ 1 ಗಂಟೆ 41 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ 2 ಗಂಟೆ 7 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿ ಮತ್ತು ಶ್ರೀ ಎಸ್.ಎಲ್.ಭೋಜೇಗೌಡರನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)**

**ಸಭಾಪತಿಯವರು:-** ಯಾರೂ ಸಹ ಸದನದ ಬಾವಿಯಲ್ಲಿ ಇರುವುದು ಬೇಡ. ಎಲ್ಲರೂ ತಮ್ಮ ಸ್ಥಾನಗಳಿಗೆ ತೆರಳಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿಲುವಳಿ ಸೂಚನೆ…

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೆ, ಅದನ್ನು ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ. ಮತ್ತೆ ಅದರ ಬಗ್ಗೆ ಹೇಳುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಾನು submission ಮಾಡುತ್ತಿದ್ದೇನೆ.

**ಸಭಾಪತಿಯವರು:-** ಅದು ಈಗ ಬೇಡ. ಊಟಕ್ಕೆ ಬಿಟ್ಟ ನಂತರ ಶೂನ್ಯವೇಳೆ ಮುಗಿದ ಮೇಲೆ ತೆಗೆದುಕೊಳ್ಳೋಣ. ನಾನು ಅವಕಾಶ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಆಯಿತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಈಗ ಒಂದು ವಿಚಾರವನ್ನು ಹೇಳಲೇಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವೇ ಹೇಳುತ್ತೀರಿ, ಈಗ ಅವರು ಸದನದ ಬಾವಿಯಲ್ಲಿ ಇದ್ದಾಗ ತಾವು ಹೇಗೆ ಮಾತನಾಡುತ್ತೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಸದನದ ಬಾವಿಯಲ್ಲಿ ಇಲ್ಲ. ನಾನು ನನ್ನ ಸ್ಥಾನದಲ್ಲಿದ್ದೇನೆ.

**ಸಭಾಪತಿಯವರು:-** ಆದರೆ ಉಳಿದ ಸದಸ್ಯರು ಸದನದ ಬಾವಿಯಲ್ಲಿ ಇದ್ದಾರಲ್ಲವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾನು ನನ್ನ ಸ್ಥಾನದಿಂದಲೇ ತಮಗೆ ಬಹಳಷ್ಟು ಬಾರಿ ಮನವಿಯನ್ನು ಮಾಡಿದೆ. ಈ ಸದನಕ್ಕೆ ಅದರದೇ ಆದಂತಹ ಇತಿಹಾಸ ಇದೆಯೆಂದು ನಾವೆಲ್ಲರೂ ಸಹ ಭಾಷಣ ಮಾಡುತ್ತೇವೆ. ನಾವು ಈ ಸದನದ sanctity ಕಾಪಾಡಬೇಕಲ್ಲವೇ? ತಾವು ಸುದೀರ್ಘವಾಗಿ 40 ರಿಂದ 45 ವರ್ಷ ಇಲ್ಲಿ ಕುಳಿತು ಎಲ್ಲಾ ಅಧಿಕಾರಗಳನ್ನು ನೋಡಿರುವಂತಹವರು. ತಾವು ಆಗಾಧವಾದಂತಹ ಅನುಭವವನ್ನು ಹೊಂದಿರುವಂತಹವರು. When the House is not in order, ಸದನ order ನಲ್ಲಿ ಇಲ್ಲವೆಂದು ತಮಗೂ ಸಹ ಗೊತ್ತಿದೆ. ಸದನ order ನಲ್ಲಿ ಇಲ್ಲವೆಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಅವರ ಸುದೀರ್ಘವಾದ ಅನುಭವದಲ್ಲಿ ಭಾಷಣವನ್ನು ಓದಿದ್ದು ಸದನಕ್ಕೆ ಬಹು ದೊಡ್ಡ ಅಗೌರವ ತಂದ ಹಾಗೆ ಆಗಿದೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅ ರೀತಿ ಏನೂ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಒಂದು ನಿಮಿಷ. ಮತ್ತೊಂದು ವಿಚಾರವೇನೆಂದರೆ, ಅವರು ಭಾಷಣ ಓದಿದ್ದರಿಂದ ನಮಗೆ ಏನು ತೊಂದರೆ ಇಲ್ಲ. ಅವರು ಅದನ್ನು ಓದಲಿ. ಆದರೆ, ಸಭಾನಾಯಕರು ಇರಬಹುದು ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಇರಬಹುದು. ಅವರು ಈ ಸದನದಲ್ಲಿ ಮಂಡಿಸತಕ್ಕಂತಹ ಯಾವುದೇ ಪೇಪರ್ ಇರಬಹುದು. ಅದನ್ನು ಮಂಡಿಸಿದ ಮೇಲೆ ಅಥವಾ ಪ್ರಾರಂಭ ಮಾಡಿದ ಮೇಲೆ ನಾವು ಬಾಯಿಬಿಟ್ಟು ಕೇಳಿದರೂ ಕೂಡ ಅದರ ಪ್ರತಿ ಸಿಗದೇ ಇರತಕ್ಕಂಥದ್ದು, ಇದು ಯಾವ ಪರಿಸ್ಥಿತಿ ಎಂದು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ಅದು ಯಾವಾಗ ಉದ್ಭವವಾಯಿತು ಎಂದರೆ, ಅದು ಎಲ್ಲಾ ಅಡತಡೆಯಾಗಿ ನಂತರ ಮಾತನಾಡುವುದಕ್ಕೆ ಬಾರದೇ ಇದ್ದಾಗ ಮತ್ತು ಅದು ಉದ್ಭವವಾದಾಗ ನಾವು immediately ಇಳಿದಿದ್ದು. ತಾವು ಆ copy ಯ ಬಗ್ಗೆ ಸ್ವಲ್ಪ ಕೇಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಆ ವಿಷಯಕ್ಕೆ ಸಂಬಂಧಪಟ್ಟಂತೆ ಬರುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ಒಂದು ನಿಮಿಷ. ನಾನು copy ಯ ಬಗ್ಗೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ತಮ್ಮ defence…

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಅದನ್ನು ಮಂಡನೆ ಮಾಡಿದ ಮೇಲೆ ಅದು ಸದನದ ಆಸ್ತಿ. ಅವರು ನಮ್ಮ ಸದನದ ಸದಸ್ಯರಿಗೆ **(ಗೊಂದಲ)** ಹೇಗೆ ಕೊಡೋಣವೆಂದು ಹೇಳಿದರು. ಅದು ನಮ್ಮ ಸದನದ ಆಸ್ತಿ.

**(ಗೊಂದಲ)**

(ಮುಂದು)

(592) 22.07.2024 02.10 LL-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ತಮ್ಮಿಂದ ಇಂತಹ defence ಅನ್ನು ನಿರೀಕ್ಷೆ ಮಾಡುವುದಿಲ್ಲ. ಏಕೆಂದರೆ, ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಲಿಖಿತ ಹೇಳಿಕೆಯನ್ನು ಓದುತ್ತೇನೆಂದು ಹೇಳಿದಾಗ, ಲಿಖಿತ ಹೇಳಿಕೆಯ ಪ್ರತಿಗಳು ಸದ್ಯಕ್ಕೆ ರೆಡಿ ಇಲ್ಲವೆಂದು ಕಂಡುಬಂದಾಗ, ಈಗ ನಾನು ಸದನವನ್ನು 5 ನಿಮಿಷಗಳ ಕಾಲ ಮುಂದೂಡಿ, ಸದರಿ ಲಿಖಿತ ಹೇಳಿಕೆ ಪ್ರತಿ ಜೆರಾಕ್ಸ್ ಮಾಡಿ ತರಿಸುತ್ತೇನೆ. ನಂತರ, ತಾವು ಅದನ್ನು ಓದಿ ಎಂದು ಹೇಳಬಹುದಾಗಿತ್ತು. ಆ 5 ನಿಮಿಷ ಸದನ ಮುಂದೂಡಿದ್ದರೆ ಏನೂ ನಷ್ಟವಾಗುತ್ತಿರಲಿಲ್ಲ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಾನು ಸದನವನ್ನು ಅರ್ಧಕ್ಕೆ ನಿಲ್ಲಿಸಿ...

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸದನದ ಗೌರವಕ್ಕೆ ಎಲ್ಲಿಯೋ ಒಂದು ಕಡೆ ಚ್ಯುತಿ ಬರುವುದಕ್ಕೆ...

**ಸಭಾಪತಿಯವರು:-** ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇವರ ಹತ್ತಿರ ಗೌರವ ಎಲ್ಲಿ ಇದೆ..? ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಾತನಾಡುವಾಗ ಕೇಳುವಷ್ಟು ತಾಳ್ಮೆ ಇಲ್ಲ ಇವರಿಗೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನದ ನಿಯಮಾವಳಿಗಿಂತಲೂ ಮಾನ್ಯ ಮುಖ್ಯಮಂತ್ರಿಗಳು ದೊಡ್ಡವರೇ?

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ...

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕೇಳಿ. **(ಗೊಂದಲ)** ಸುಧಾರಣೆಯಾಗಬಹುದೆಂದು ನಾನು ಅನೇಕ ಪ್ರಯತ್ನ ಮಾಡಿರುತ್ತೇನೆ. **(ಗೊಂದಲ)** ನನ್ನ ಕರ್ತವ್ಯ ಏನೆಂದರೆ, ಸುಧಾರಣೆ ಮಾಡುವುದು. ಅದು ಆಗಲಿ ಎಂದು ನಾನು ಪ್ರಯತ್ನ ಮಾಡಿರುತ್ತೇನೆ. ಅದು ಆಗುವುದಿಲ್ಲವೆಂದು ಗೊತ್ತಾದಾಗ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಓದುತ್ತಿರುವ ಲಿಖಿತ ಉತ್ತರದ ಪ್ರತಿಯನ್ನು ಎಲ್ಲಾ ಸದಸ್ಯರಿಗೆ ಕೊಡಬೇಕೆಂದು ಹೇಳಿ, ಸದರಿ ಲಿಖಿತ ಉತ್ತರ read and recorded ಎಂದು ಹೇಳಿ, ಸದನವನ್ನು ಮುಂದೂಡುತ್ತೇನೆಂದು ಹೇಳಿದೆನು. ಇಂತಹ ಪ್ರಯತ್ನವನ್ನು ನಾನು ಮಾಡಬೇಕಾಗುತ್ತದೆ **(ಗೊಂದಲ)** ಇದನ್ನು ನಾನು ಒಮ್ಮಿಂದ ಒಮ್ಮೆಲೇ ಮಾಡುವುದಕ್ಕಾಗುವುದಿಲ್ಲ. **(ಗೊಂದಲ)** ಸದನವನ್ನು ಭೋಜನ ವಿರಾಮಕ್ಕಾಗಿ ೩-೦೦ ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ 2 ಗಂಟೆ 11 ನಿಮಿಷದಿಂದ 3 ಗಂಟೆಯವರೆಗೆ ಮುಂದೂಡಲ್ಪಟ್ಟಿತು)**

(೫೯೩)22.7.2024/3.30/ಎಂ.ಎಂ-ಎ.ಕೆ

**(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ ೦3 ಗಂಟೆ 31 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**ಸಭಾಪತಿಯವರು:-** ಈಗ ಶೂನ್ಯವೇಳೆ.

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಪಶ್ಚಿಮ ಘಟ್ಟಗಳು ಸೇರಿದಂತೆ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸುತ್ತಿರುವುದರಿಂದ ಭೂಕುಸಿತ, ಪ್ರವಾಹ ಮತ್ತು ನೈಸರ್ಗಿಕ ವಿಕೋಪಗಳು ಹೆಚ್ಚಾಗುತ್ತಿರುವ ಕುರಿತು.**

- - - - -

**ಡಾ॥ ಯತೀಂದ್ರ. ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ನನಗೆ ಈ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ಇತ್ತೀಚೆಗೆ ರಾಜ್ಯದಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಪಶ್ಚಿಮಘಟ್ಟದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಉತ್ತರ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ೬೬ರ ಶಿರೂರಿನಲ್ಲಿ ಗುಡ್ಡ ಕುಸಿದು ಐದು ಮಂದಿ ಮೃತಪಟ್ಟಿದ್ದು 11 ಮಂದಿ ನಾಪತ್ತೆಯಾಗಿದ್ದಾರೆ. ಗುಡ್ಡ ಕುಸಿದ ರಭಸಕ್ಕೆ ಹೆದ್ದಾರಿಯಲ್ಲಿದ್ದ ಗ್ಯಾಸ್ ಟ್ಯಾಂಕರ್ ಸೇರಿ ಕೆಲವು ವಾಹನಗಳು ಮಣ್ಣಿನ ಸಮೇತ ಪಕ್ಕದಲ್ಲಿದ್ದ ಗಂಗಾವಳಿ ನದಿಗೆ ಬಿದ್ದು ಕೊಚ್ಚಿ ಹೋಗಿದೆ. ಹೆದ್ದಾರಿ ಪಕ್ಕದಲ್ಲಿ ಚಹಾ ಅಂಗಡಿ ಹೊಂದಿದ್ದ ಶ್ರೀ

ಲಕ್ಷ್ಮಣ ನಾಯಕ್ ಸೇರಿದಂತೆ ಮೂರು ಜನರ ಮೃತ ದೇಹ ಗೋಕರ್ಣದ ದುಬ್ಬನಸಸಿ ಕಡಲ ತೀರದಲ್ಲಿ ಸಿಕ್ಕಿದೆ. ಪಶ್ಚಿಮ ಘಟ್ಟಗಳ ಭಾಗದಲ್ಲಿ ಯಾವಾಗಲೂ ಹೆಚ್ಚು ಮಳೆಯಾಗುತ್ತಿದ್ದು ಭೂಕುಸಿತ ಮತ್ತು ಪ್ರವಾಹ ಆಗುತ್ತಿರುತ್ತದೆ. ಇದರಿಂದಾಗಿ ಪ್ರತಿವರ್ಷ ಹೆದ್ದಾರಿಗಳು ಬಂದ್ ಆಗುತ್ತಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದೆ. ಮುಂದುವರೆದು ರಾಷ್ಟ್ರೀಯ ಹೆದ್ದಾರಿ 66ರ ಕಾಮಗಾರಿಯನ್ನು ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು 2014ನೇ ಸಾಲಿನಿಂದ ಪ್ರಾರಂಭಿಸಿ 2020ರಲ್ಲಿ ಮುಕ್ತಾಯಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಈ ಯೋಜನೆಗಳನ್ನು ರೂಪಿಸಲು ಗುಡ್ಡಗಳನ್ನು ಕೊರೆದಿದ್ದು ಸುರಕ್ಷಿತ ಕ್ರಮವಾಗಿ ತಡೆಗೋಡೆಗಳನ್ನು ವೈಜ್ಞಾನಿಕವಾಗಿ ನಿರ್ಮಿಸದ ಕಾರಣ ಈ ಅವಘಡ ಸಂಭವಿಸಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ದಿನಾಂಕ 21.7.2024ರಂದು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತಪಟ್ಟವರ ಕುಟುಂಬಕ್ಕಾಗಿ ರೂ. 5,00,000/- ಪರಿಹಾರ ಘೋಷಿಸಿದ್ದು ಈ ಭೂಕುಸಿತವು ಪ್ರಕೃತಿ ವಿಕೋಪವಲ್ಲ, ಬದಲಾಗಿ ಐ.ಆರ್.ಬಿ. ಸಂಸ್ಥೆಯ ಅವೈಜ್ಞಾನಿಕ ಕಾಮಗಾರಿಯಿಂದಾಗಿದ್ದು ರಸ್ತೆ ನಿರ್ಮಾಣವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಮಾಡಿದ್ದಾರೆಂದು ತಿಳಿಸಿರುತ್ತಾರೆ. ಅಲ್ಲದೇ ರಾಜ್ಯದ ಏಳು ಹೆದ್ದಾರಿಗಳು ಅಪಾಯದ ಹಂತದಲ್ಲಿದ್ದು ಶಿರಸಿ, ಕುಮಟಾ ರಾಷ್ಟ್ರೀಯ ಹೆದ್ದಾರಿಗಳು ಬಂದ್ ಆಗಿದ್ದು ಶೃಂಗೇರಿ ತಾಲ್ಲೂಕಿನ ನೆಮ್ಮಾರ್ ಬಳಿ ಹೆದ್ದಾರಿಯಲ್ಲಿ ಬಿರುಕು ಮೂಡಿದೆ. ದೇವಮನೆ ಘಾಟ್ ಬಳಿ ಸೇತುವೆ ಮುಳುಗಡೆ ಆಗಿದೆ. ಶಿರಾಡಿ ಘಾಟ್ ಹೆದ್ದಾರಿ ಕೂಡ ಬಂದ್ ಆಗಿದ್ದು ಸಕಲೇಶಪುರ ಮಾರನಳ್ಳಿ ಚತುಷ್ಪಥ ರಸ್ತೆ ನಿರ್ಮಾಣಕ್ಕೆ ಅಡ್ಡಿಯಾಗಿದೆ. ಇದರಿಂದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಸಂಪರ್ಕ ಕಳೆದುಕೊಂಡು ದ್ವೀಪದಂತಾಗಿದ್ದು ಜನಜೀವನ ಅಸ್ತವ್ಯಸ್ತವಾಗಿರುತ್ತದೆ. ಈ ಅವಘಡಗಳಿಗೆ ಬಹುಮುಖ್ಯ ಕಾರಣ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಪರಿಸರ ಪ್ರಭಾವದ ಮೌಲ್ಯಮಾಪನ ಅಂದರೆ Environmental Impact Assessment ಅನ್ನು ಸರಿಯಾಗಿ ಮಾಡದೇ ಅವೈಜ್ಞಾನಿಕವಾಗಿ ಯೋಜನೆಗಳನ್ನು ರೂಪಿಸಿ ಕಳಪೆ ಕಾಮಗಾರಿ ಕೈಗೊಂಡು ಟೋಲ್ ಸಂಗ್ರಹ ಮಾಡುವುದಕ್ಕೋಸ್ಕರ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುವುದರಿಂದ ಹೆಚ್ಚು ಹೆಚ್ಚು ಈ ರೀತಿ ಪ್ರಾಣ ಹಾನಿಯಾಗುತ್ತಿದೆ. ಈ ಬಗ್ಗೆ ಸರ್ಕಾರವು ಪರಿಸರಕ್ಕೆ ತೊಂದರೆಯಾಗದಂತೆ ಯೋಜನೆಗಳನ್ನು ಪುನರ್ ರೂಪಿಸಿ ತ್ವರಿತವಾಗಿ ಪೂರ್ಣಗೊಳಿಸಲು ಮತ್ತು ಕಳಪೆ ಕಾಮಗಾರಿ ಕೈಗೊಂಡ ಕಂಪನಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ತಾವು ಎಚ್ಚರಿಕೆ ಮೇಲೆ ಎಚ್ಚರಿಕೆ ಕೊಡುತ್ತೀರಿ. ಇಲ್ಲಿ ಆರು ಜನ ಮಂತ್ರಿಗಳಿಲ್ಲ, 8 ಜನ ಅಧಿಕಾರಿಗಳಿಲ್ಲ. ತಾವು ಸಭೆಯನ್ನು ಹೇಗೆ ನಡೆಸುತ್ತೀರಿ? ತಾವು ವಾರ್ನ್ ಮಾಡಿದ ಮೇಲೆಯೂ ಇದು ಪುನರಾವರ್ತನೆಯಾಗುತ್ತಿದೆ. ಇದು ಪ್ರತಿದಿನವೂ ಮಕ್ಕಳಿಗೆ ಮಾಡುವ ಪಾಠವೇ?

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ಬರುತ್ತಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಜೊತೆಗೆ ಇಲ್ಲಿ ಸರ್ಕಾರದ ಮುಖ್ಯ ಸಚೇತಕರೇ ಇಲ್ಲ. ಇನ್ನು ಯಾರಿಗೆ ಹೇಳುವುದು?

**ಸಭಾಪತಿಯವರು:-** ನನ್ನ ಚೇಂಬರ್‌ನಲ್ಲಿ ಕುಳಿತಿದ್ದಾರೆ ಕರೆಸಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆರೋಗ್ಯ ಮಂತ್ರಿಗಳಿಲ್ಲ, ಅಧಿಕಾರಿಗಳೊಬ್ಬರೂ ಇಲ್ಲ. ವಿಧಾನ ಪರಿಷತ್ ಇಷ್ಟು ಅಸಡ್ಡೆಯಾಗಬಾರದು.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಆಯಿತು ಕರೆಸುತ್ತೇನೆ. ಚೀಫ್ ವಿಪ್‌ರವರನ್ನು ಕರೆಸಿ. ಈಗ ಮಾನ್ಯ ಸಿ.ಟಿ. ರವಿಯವರು ವಿಷಯವನ್ನು ಪ್ರಸ್ತಾಪ ಮಾಡಲಿ.

**ಆ) ವಿಷಯ:- ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯ ಅರ್ಚಕರಿಗೆ ವೇತನ ನಿಗದಿಪಡಿಸಿ ಪ್ರತೀ ತಿಂಗಳು ಕಾಲಮಿತಿಯೊಳಗೆ ವೇತನ ಪಾವತಿಸುವ ಬಗ್ಗೆ.**

- - - -

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು. ಚಿಕ್ಕಮಗಳೂರು ತಾಲ್ಲೂಕಿನ ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯು ಧಾರ್ಮಿಕ ದತ್ತಿ ಇಲಾಖೆಯ ''ಎ'' ವರ್ಗದ ಸಂಯುಕ್ತ ಧಾರ್ಮಿಕ ಸಂಸ್ಥೆಯಾಗಿದ್ದು, ಹಲವು ಹೋರಾಟಗಳ ನಂತರ ನ್ಯಾಯಾಲಯದ ನಿರ್ದೇಶನದ ಮೇರೆಗೆ ಅರ್ಚಕರ ನೇಮಕ ಆಗಿರುತ್ತದೆ. ದಿನಾಂಕ 01.04.2023ರಿಂದ ಅನ್ವಯವಾಗುವಂತೆ ಅರ್ಚಕರ ನೇಮಕವಾಗಿದ್ದರೂ ಸಹ ಈವರೆಗೆ ಅರ್ಚಕರಿಗೆ ವೇತನ ನಿಗದಿಪಡಿಸಿರುವುದಿಲ್ಲ. ವೇತನ ನಿಗದಿಪಡಿಸುವ ವಿಚಾರಕ್ಕೆ ಸಂಬಂಧಪಟ್ಟಂತೆ ಹಿಂದಿನ ಅಧಿವೇಶನದಲ್ಲಿ ಪ್ರಸ್ಥಾಪಿಸಲಾಗಿ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಅರ್ಚಕರಿಗೆ ವೇತನ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಸಚಿವರು ಸದನಕ್ಕೆ ಉತ್ತರ ನೀಡಿರುತ್ತಾರೆ. ''ಅರ್ಚಕರು ಆರತಿ ತಟ್ಟೆಯಲ್ಲಿ ಸಂಗ್ರಹವಾಗುವ ಹಣವನ್ನು ಪಡೆಯುತ್ತಿರುವ ಕಾರಣ, ಆರತಿ ತಟ್ಟೆ ಹಣದ ಜೊತೆಗೆ ವೇತನ ಶ್ರೇಣಿ ನೀಡಲು ಅವಕಾಶ ಇರುವುದಿಲ್ಲ'' ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ನೀಡಿರುತ್ತಾರೆ.

ಈ ಹಿಂದೆ ನೇಮಕವಾಗಿರುವ ಮುಜ಼ಾವರ್‌ಗಳಿಗೆ ವೇತನ ನೀಡುತ್ತಿದ್ದರೂ ಅರ್ಚಕರಿಗೆ ಮಾತ್ರ ವೇತನ ನೀಡದಿರುವುದು ಇದು ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ರೀತಿ ಆಗಿದೆ. ಮುಜಾವರ್‌ಗಳು ತಟ್ಟೆಕಾಸನ್ನು ಪಡೆಯುತ್ತಿದ್ದರೂ ಸಹ ಅವರಿಗೆ ವೇತನ ನಿಗದಿಪಡಿಸಿ ಪ್ರತೀ ತಿಂಗಳು ವೇತನ ಪಾವತಿ

ಮಾಡಲಾಗುತ್ತಿದ್ದು, ಅರ್ಚಕರಿಗೆ ಮಾತ್ರ ವೇತನ ನೀಡದೆ ಸರ್ಕಾರ ತಾರತಮ್ಯ ಮಾಡುತ್ತಿದೆ. ಸರ್ಕಾರ ಕೂಡಲೆ ಅರ್ಚಕರಿಗೂ ಸಹ ಸೂಕ್ತ ವೇತನ ನಿಗದಿಪಡಿಸಿ ಪ್ರತೀ ತಿಂಗಳು ಕಾಲಮಿತಿಯೊಳಗೆ ವೇತನ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೀವು ಇದಕ್ಕೆಲ್ಲಾ ಉತ್ತರ ತರಿಸಿಕೊಡಬೇಕು. ನಾನು ಹಿಂದೆ ಹೇಳಿದ ಎಲ್ಲದಕ್ಕೂ ನಾಳೆ, ನಾಳಿದ್ದು ಅಷ್ಟರಲ್ಲಿ ಉತ್ತರ ತರಿಸಿಕೊಡಿ. ಈಗ ಮಾನ್ಯ ಎಂ. ನಾಗರಾಜು, ಗೈರು ಹಾಜರಿ. ಮಾನ್ಯ ಟಿ.ಎ. ಶರವಣರವರು ವಿಷಯವನ್ನು ಪ್ರಸ್ತಾಪ ಮಾಡಲಿ.

**ಇ) ವಿಷಯ:- ರಾಜ್ಯದಲ್ಲಿ ಡೆಂಘೀ ಹೆಚ್ಚಳದ ಹಿನ್ನೆಲೆಯಲ್ಲಿ 108 ಆಂಬುಲೆನ್ಸ್ ಸೇವೆಗೆ 7 ವರ್ಷವಾದರೂ ಹೊಸ ಟೆಂಡರ್ ಕರೆಯದೇ ಇರುವ ಕುರಿತು.**

- - - -

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ಈ ಕೆಳಕಂಡ ಸಾರ್ವಜನಿಕ ಮಹತ್ವವಾದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ರಾಜ್ಯದಲ್ಲಿ ಡೆಂಘೀ ರುದ್ರನರ್ತನ ಹಿನ್ನೆಲೆಯಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸುವಂತೆ ಒತ್ತಾಯ ಕೇಳಿ ಬರುತ್ತಿದೆ. ಆದರೆ, 108 ಆಂಬುಲೆನ್ಸ್ ಸೇವೆ ಒದಗಿಸುವ ಟೆಂಡರ್ ರದ್ದಾಗಿ ಏಳು ವರ್ಷ ಕಳೆದರೂ ಈವರೆವಿಗೂ ಹೊಸಬರಿಗೆ ಟೆಂಡರ್ ನೀಡಲು ಆರೋಗ್ಯ ಇಲಾಖೆಗೆ ಸಾಧ್ಯವಾಗಿಲ್ಲ. ಇದು ತುರ್ತು ಆರೋಗ್ಯ ಸೇವೆಗಳ ಬಗೆಗಿನ ವಿಳಂಬ ಧೋರಣೆಯ ದ್ಯೋತಕ ಎಂಬ ಆರೋಪ ಕೇಳಿ ಬಂದಿದೆ. ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಆಂಬುಲೆನ್ಸ್ ಸೇವೆಯಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ 2023ರ ಜುಲೈ 22 ರಂದು ತಾಂತ್ರಿಕ ಸಲಹಾ ಸಮಿತಿ ನೇಮಿಸಲಾಗಿತ್ತು. ಈ ತಾಂತ್ರಿಕ ಸಲಹಾಸಮಿತಿ ವರದಿ ನೀಡಿ ತಿಂಗಳುಗಳೇ ಕಳೆದರೂ ಈವರೆಗೂ ಟೆಂಡರ್ ಕರೆಯಲು ಉನ್ನತ ಮಟ್ಟದ ಸಮಿತಿ ಒಪ್ಪಿಗೆ ನೀಡಿಲ್ಲ. ಹೀಗಾಗಿ ಆಂಬುಲೆನ್ಸ್ ಸೇವೆಗೆ ಹಿಡಿದಿರುವ ಗ್ರಹಣ ಮುಂದುವರೆದಿದೆ. ರಾಜ್ಯದಲ್ಲಿ ತುರ್ತು ಅನಾರೋಗ್ಯ ಸಂದರ್ಭಗಳಲ್ಲಿ ಆರೋಗ್ಯ ಕವಚ ಆಂಬುಲೆನ್ಸ್ ಸೇವೆ ಒದಗಿಸಲು 2007ರಲ್ಲಿ ಟೆಂಡರ್ ಪಡೆದಿದ್ದ ಜಿ.ವಿ.ಕೆ.ಯ ಸಂಸ್ಥೆಯ ಗುತ್ತಿಗೆಯನ್ನು ಅಸಮರ್ಪಕ ಸೇವೆ ಹಾಗೂ ನಿಯಮ ಉಲ್ಲಂಘನೆ ಕಾರಣ ನೀಡಿ 2017ರಲ್ಲಿ ಟೆಂಡರ್ ರದ್ದುಪಡಿಸಿತ್ತು. ಜಿವಿಕೆ-ಇಎಂಆರ್ಇ ಸಂಸ್ಥೆಯು ವಿಳಂಬ ಸೇವೆ, ಜಿ.ಪಿ.ಎಸ್ ಅಳವಡಿಕೆ ಮಾಡದಿರುವುದು, ಸಿಬ್ಬಂದಿಯ ನಿರ್ವಹಣೆ ವೈಫಲ್ಯ ಸೇರಿದಂತೆ ಟೆಂಡರ್ ಷರತ್ತುಗಳನ್ನು ಉಲ್ಲಂಘಿಸಿದೆ ಎಂಬ ಕಾರಣಕ್ಕೆ ಟೆಂಡರ್ ರದ್ದುಪಡಿಸಲಾಗಿತ್ತು. ಬಳಿಕ 3 ಬಾರಿ ಟೆಂಡರ್ ಕರೆದಿದ್ದರೂ ಯಾರೊಬ್ಬರೂ ಭಾಗವಹಿಸಿರಲಿಲ್ಲ. ಹೀಗಾಗಿ 2019ರಲ್ಲಿ ಜಿವಿಕೆ ಹಾಗೂ ತುರ್ತು ಗ್ರೀನ್ ಹೆಲ್ತ್ ಜೊತೆ ಒಡಂಬಡಿಕೆ

ಆಧಾರದ ಮೇಲೆ ಆಂಬುಲೆನ್ಸ್ ಸೇವೆ ನೀಡಲಾಗುತ್ತಿದೆ. ಆದರೆ, 7 ವರ್ಷದಿಂದ ಅಧಿಕೃತ ಟೆಂಡರ್ ಪಡೆದಿರುವ ಆಂಬುಲೆನ್ಸ್ ಸೇವಾದಾರ ಸಂಸ್ಥೆ ಇಲ್ಲದಂತಾಗಿದೆ. ಆದುದರಿಂದ, ಆಂಬುಲೆನ್ಸ್ ಸೇವೆಯಲ್ಲಿ ಸತತವಾಗಿ ವ್ಯತ್ಯಯವಾಗುತ್ತಿದೆ. ಮುಂದುವರೆದು, 108 ಆಂಬುಲೆನ್ಸ್ ಸೇವೆ ಕುರಿತು 2014-19ರವರೆಗಿನ ಪ್ರಕರಣಗಳ ಬಗ್ಗೆ ಸಿಎಜಿ ವರದಿ ಸಲ್ಲಿಸಿದ್ದು ಶೇ.60ರಷ್ಟು ಎಮರ್ಜೆನ್ಸಿ ಪ್ರಕರಣಗಳಲ್ಲಿ 108 ಆಂಬುಲೆನ್ಸ್ ಸೇವೆ ನಿಗದಿತ ಸಮಯಕ್ಕೆ ದೊರೆತಿಲ್ಲ ಮತ್ತು 51 ಲಕ್ಷ ಎಮರ್ಜೆನ್ಸಿ ಪ್ರಕರಣಗಳಲ್ಲಿ 41.9 ಲಕ್ಷ ಮಾತ್ರ ಆಂಬುಲೆನ್ಸ್ ನಿಯೋಜಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಟೆಂಡರ್ ರದ್ದುಪಡಿಸಿ ಬೇರೆ ಕಂಪನಿಗೆ ಟೆಂಡರ್ ನೀಡಲು ನಿರ್ಧರಿಸಲಾಗಿತ್ತು. ಆದರೆ ಒಡಂಬಡಿಕೆ ಆಧಾರದ ಮೇಲೆ 746 ಆಂಬುಲೆನ್ಸ್ ನಿರ್ವಹಿಸಲು ಅವಕಾಶ ನೀಡಲಾಗಿತ್ತು. ಆದರೆ ಒಡಂಬಡಿಕೆ ಮಾಡಿಕೊಂಡಿರುವ ಸಂಸ್ಥೆಗೆ ಸರ್ಕಾರ ಕಾಲ ಕಾಲಕ್ಕೆ ವೇತನ ನೀಡುತ್ತಿದ್ದರೂ ಅವರು ಸಿಬ್ಬಂದಿಗೆ ನೀಡುತ್ತಿಲ್ಲ. ಜೊತೆಗೆ ಸರ್ಕಾರಿ ಆಸ್ಪತ್ರೆ ಬದಲಿಗೆ ಖಾಸಗಿ ಆಸ್ಪತ್ರೆಗೆ ರೋಗಿಯನ್ನು ಕರೆದುಕೊಂಡು ಹೋಗುವುದು, ರೋಗಿಯ ಬಳಿ ಹಣ ಪಡೆಯುವುದು ಸೇರಿದಂತೆ ಹಲವು ಸಮಸ್ಯೆಗಳಿಗೆ ಈವರೆಗೆ ಪರಿಹಾರ ಕಂಡುಕೊಂಡಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತೇನೆ.

(ಮುಂದು)

(594) 22-07-2024 3-40 KH/VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್. ಬೋಸರಾಜು (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಟಿ.ಎ.ಶರವಣ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ. ನೋಡಿ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರು ಮುಂದಿನ ಶೂನ್ಯವೇಳೆ ಪ್ರಶ್ನೆಯನ್ನು ಕೇಳಬೇಕು. ಮಾನ್ಯ ಟಿ.ಎ.ಶರವಣರವರೇ, ಭಾಷಣ ಮಾಡುವ ಆಗಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಎರಡು ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಕೇಳಿರುವಂತಹ ಪ್ರಶ್ನೆಗಳಿಗೆ ಮತ್ತು ಇವತ್ತು ಕೇಳಿರುವಂತಹ ಪ್ರಶ್ನೆಗೆ ಉತ್ತರವೇ ಬರುವುದಿಲ್ಲ. ನಾವು ಏತಕ್ಕೋಸ್ಕರ ಪ್ರಶ್ನೆ ಕೇಳಬೇಕೆಂದು ಮಾನ್ಯ ಸಭಾನಾಯಕರು ಹೇಳಿಬಿಡಲಿ. ಇವರು ಮಾನ್ಯ ಮಂತ್ರಿಗಳ ಬಳಿಯೇ ಕುಳಿತುಕೊಂಡಿರುತ್ತಾರೆ. ಉತ್ತರವೇ ಸಿಗುವುದಿಲ್ಲ. ಇವರಿಗೆ ಏನೆಂಥ ಹೇಳಬೇಕು ಹೇಳಿ.

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರು ಮುಂದಿನ ಶೂನ್ಯವೇಳೆ ಪ್ರಶ್ನೆಯನ್ನು ಕೇಳಬೇಕು. ಮಾನ್ಯ ಟಿ.ಎ.ಶರವಣರವರ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಗಳಿಗೆ ಬೇಗ ಉತ್ತರ ಕೊಡಿಸಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಉತ್ತರ ಯಾವಾಗ ಕೊಡುತ್ತಾರೆ ಎಂದು ಹೇಳಿಬಿಡಲಿ. ಇದು emergency ಇದೆ. ಇವತ್ತು ಆರೋಗ್ಯ ಪರಿಸ್ಥಿತಿ, ಡೆಂಗ್ಯೂ ಎನ್ನುವುದು ಎಷ್ಟು ರುದ್ರತಾಂಡವ ಆಡುತ್ತಿದೆ ಎನ್ನುವುದು ತಮ್ಮಗೆಲ್ಲಾ ಗೊತ್ತಿದೆ. ಯಾವಾಗ ಉತ್ತರ ಕೊಡುತ್ತಾರೆ ಎಂದು ಹೇಳಿಬಿಡಲಿ. ಇನ್ನು 2 ದಿವಸಗಳಲ್ಲಿ ಅಧಿವೇಶನ ಮುಗಿಯುತ್ತದೆ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ಆದಷ್ಟು ಬೇಗನೆ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾನಾಯಕರೇ, ಯಾವಾಗ ಉತ್ತರವನ್ನು ಕೊಡುತ್ತೀರೆಂದು ಹೇಳಿ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ಯಾವಾಗ ಎಂದು ಕಣಿ ಕೇಳುತ್ತಿರೇನು? ಉತ್ತರವನ್ನು ಕೊಡಿಸುತ್ತೇನೆ ಎಂದು ಹೇಳಿದ್ದೇನೆ. ಮಾನ್ಯ ಸಭಾನಾಯಕರೇ, ಬೇಗ ಉತ್ತರವನ್ನು ಕೊಡಿಸಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಕಳೆದ ವಾರದ ಶೂನ್ಯವೇಳೆಯ ಪ್ರಶ್ನೆಯ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆದಷ್ಟು ಬೇಗ ಅವರಿಗೆ ಉತ್ತರವನ್ನು ಕೊಡಿಸಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಗೊತ್ತಾಯಿತು. ಆದಷ್ಟು ಬೇಗ ಉತ್ತರವನ್ನು ತರಿಸಿಕೊಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಬೇಡಿ ಎಂದು ಹೇಳಿ. ನಾನು ಪ್ರಶ್ನೆಯನ್ನು ಕೇಳುವುದಿಲ್ಲ.

**ಈ) ವಿಷಯ:- ಹೊಸದಾಗಿ ರಚನೆಯಾದ ತಾಲ್ಲೂಕಿನ ಪ್ರೌಢಶಾಲೆಗಳ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ವೇತನ ಪಾವತಿ ಮಾಡದಿರುವ ಕುರಿತು.**

***

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ:20-07-2024 ರಂದು ಅಪರ ಆಯುಕ್ತಾಲಯ ಶಾಲಾ ಶಿಕ್ಷಣ ಕಲಬುರಗಿಯಲ್ಲಿ ಆರ್‌ಎಮ್‌ಎಸ್‌ಎ ಪ್ರೌಢಶಾಲೆ ಸಿಬ್ಬಂದಿಗಳು ಕಳೆದ 4-5 ತಿಂಗಳುಗಳಿಂದ ಸರಿಯಾದ ವೇತನ ಪಾವತಿ ಆಗದೇ ಇರುವುದರಿಂದ,

ಪ್ರತಿಭಟನೆ ನಡೆಸಿರುತ್ತಾರೆ. ಕಳೆದ 2 ವರ್ಷಗಳಿಂದ ಹೊಸದಾಗಿ ರಚನೆಯಾದ ತಾಲ್ಲೂಕುಗಳ ಆರ್‌ಎಮ್‌ಎಸ್‌ಎ ಪ್ರೌಢಶಾಲೆ ಸಿಬ್ಬಂದಿಗಳ ವೇತನವು 4-5 ತಿಂಗಳು ಕಳೆದರೂ ಪಾವತಿ ಆಗಿರುವುದಿಲ್ಲ. ಇದರಿಂದ ಶಿಕ್ಷಕರು ಸರಿಯಾದ ಸಮಯಕ್ಕೆ ವೇತನ ಪಾವತಿ ಆಗದೇ ಇರುವುದರಿಂದ, ತುಂಬಾ ತೊಂದರೆಗೆ ಹಾಗೂ ಜೀವನ ನಿರ್ವಹಣೆ ಮಾಡಲು ಕಷ್ಟಕರವಾಗುತ್ತಿದೆ. ಈ ಕುರಿತು ಹಲವು ಬಾರಿ ಆರ್‌ಎಂಎಸ್‌ಎ ಕಛೇರಿಗೆ ಭೇಟಿ ನೀಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದರೂ ಕೂಡ ಗಂಭೀರವಾಗಿ ಪರಿಗಣಿಸದೇ ಇರುವುದರಿಂದ ಸರಿಯಾದ ಪರಿಹಾರ ಒದಗಿಸುವಲ್ಲಿ ತೊಂದರೆಯಾಗಿರುತ್ತದೆ. ಈ ಸಮಸ್ಯೆ ಕಲಬುರಗಿ ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯಾದ್ಯಂತ ಹೊಸ ತಾಲ್ಲೂಕುಗಳ ರಚನೆಯಾದ ಆರ್‌ಎಂಎಸ್‌ಎ ಶಾಲೆಗಳ ಪರಿಸ್ಥಿತಿಯಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳ ವೇತನ ಬೇಡಿಕೆ ಸಲ್ಲಿಸುವಾಗ ಹೊಸದಾಗಿ ರಚನೆಯಾದ ತಾಲ್ಲೂಕುಗಳಿಗೆ ಹಂಚಿಕೆಯಾದ ಪ್ರೌಢಶಾಲೆಗಳ ಸಿಬ್ಬಂದಿಗಳಿಗೆ ವೇತನ ಅನುದಾನ ಬೇಡಿಕೆಯನ್ನು ಪ್ರತ್ಯೇಕವಾಗಿ ನೀಡುವಂತೆ ಮನವಿ ಸಲ್ಲಿಸದೇ ಇರುವುದರಿಂದ, ಈ ಸಮಸ್ಯೆ ಪ್ರತಿ ತಿಂಗಳು ಉದ್ಭವಿಸುತ್ತಿದೆ. ಆದ್ದರಿಂದ ಹೊಸದಾಗಿ ರಚನೆಯಾದ ತಾಲ್ಲೂಕುಗಳ ಪ್ರೌಢಶಾಲೆಗಳ ಸಿಬ್ಬಂದಿಗಳಿಗೆ ಸರಿಯಾದ ಸಮಯಕ್ಕೆ ಪ್ರತಿ ತಿಂಗಳು ಸರಿಯಾಗಿ ವೇತನ ಆಗುವಂತೆ ನೋಡಿಕೊಂಡು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ ಕೂಡಲೇ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಈ ಮೂಲಕ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖಾ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ.ನಮೋಶಿ ಯವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ವ್ಯಾಪಕವಾಗಿ ನಡೆಯುತ್ತಿದ್ದು, ಈ ಕೃತ್ಯಗಳಲ್ಲಿ ಭಾಗಿಯಾದ ದುಷ್ಟರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ.**

***

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ವ್ಯಾಪಕವಾಗಿ ನಡೆಯುತ್ತಿವೆ ಏನೋ ಎಂಬ ಆತಂಕ ನಿರಂತರವಾಗಿ ಕಾಡುವ ಹೊತ್ತಿನಲ್ಲೇ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ನಡೆದ ಪ್ರಕರಣಗಳು ರಾಜ್ಯಾದ್ಯಂತ ದಿಗ್ಭ್ರಮೆ ಉಂಟು ಮಾಡಿದ್ದು ತಮಗೆ ತಿಳಿದಿರುವ ವಿಷಯವೇ ಆಗಿರುತ್ತದೆ. ವೈದ್ಯರು ನರ್ಸ್‌ಗಳು ತಂತ್ರಜ್ಞಾನ ಬಳಸಿ ಲಿಂಗ ಪತ್ತೆ ಮಾಡಿ ಹೆಣ್ಣು ಮಗುವಾಗಿ

ಜನಿಸಿ ಸರ್ವರಂತೆ ಬದುಕಿ ಬಾಳಬೇಕಾದ ಹೂವುಗಳನ್ನು ಹೊಸಕಿ ಹಾಕುವ ಕೃತ್ಯದಲ್ಲಿ ನಿರತರಾಗಿರುವುದು ವಿಷಾದನೀಯ ಸಂಗತಿ.

ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಭ್ರೂಣ ಹತ್ಯೆ ಘಟನೆಗಳು ನಡೆದ ನಂತರ ಈಗ ಮತ್ತೆ ಗೋಕಾಕ್‌ನ ಮೂಡಲಗಿ, ಮಮದಾಪುರ ಭ್ರೂಣ ಹತ್ಯೆ ಪ್ರಕರಣಗಳಿಗೆ ಸಾಕ್ಷಿಯಾಗಿವೆ. ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ತಾಲ್ಲೂಕುಗಳಲ್ಲಿನ ಆಸ್ಪತ್ರೆಗಳಲ್ಲಿ ಇಕ್ರಾ ಮೆಟರ್ನಿಟಿ ಅಂಡ್ ಸರ್ಜಿಕಲ್ ಹಾಸ್ಪಿಟಲ್‌ಗಳಲ್ಲಿ ಅಂಗಪತ್ತೆ ಮಾಡುವ ಯಂತ್ರಗಳನ್ನು ದುರುಪಯೋಗ ಮಾಡಿಕೊಂಡು ನೂರಾರು ಲಿಂಗಪತ್ತೆ ಮಾಡಿ ಭ್ರೂಣ ಹತ್ಯೆಗೆ ಕಾರಣರಾಗಿದ್ದಾರೆ ಎಂದು ತಿಳಿದುಬಂದಿದೆ. ಇದಲ್ಲದೆ ಮೂಡಲಗಿಯಲ್ಲಿನ ಆರೋಗ್ಯಧಾಮ ಮಲ್ಟಿ ಸ್ಪೆಷಾಲಿಟಿ ಕ್ಲಿನಿಕ್‌ನಲ್ಲಿಯೂ ಸಹ ಮಮದಾಪುರದಲ್ಲಿ ಪೂಜಾರ್ ಕ್ಲಿನಿಕ್‌ನಲ್ಲಿ ಬಿ.ಎಂ.ಎಸ್.ಮಾಡಿರುವ ಡಾಕ್ಟರ್‌ಗಳು ಸಹ ಈ ದಂಧೆಯಲ್ಲಿ ಇರುವುದು ತಿಳಿದುಬಂದಿದೆ. ಅಲ್ಲದೇ ಕಿತ್ತೂರು ಪಟ್ಟಣದಲ್ಲಿ ಅಬ್ದುಲ್ ಗಫಾರ್ ಲಾಡಖಾನ್ ಎಂಬುವವನು ನಕಲಿ ವೈದ್ಯನಾಗಿ ಭ್ರೂಣ ಹತ್ಯೆ ಮಾಡಿದ್ದು ತಿಗಡಿಹಳ್ಳಿ ಗ್ರಾಮದ ಫಾರ್ಮ್‌ಹೌಸ್‌ನಲ್ಲಿ ಭ್ರೂಣದ 3 ಶವಗಳು ಪತ್ತೆಯಾಗಿರುತ್ತವೆ. ಇವನಿಗೆ ಶ್ರೀ ರೋಹಿತ್ ಕುಪ್ಪಸಗೌಡರ್ ಎಂಬುವವನ ಸಹಕಾರವಿತ್ತೆಂದು ಹೇಳಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಈ ರೀತಿ ದಿಗ್ಭ್ರಮೆ ಹುಟ್ಟಿಸುವ ಕೃತ್ಯ ನಡೆದಿರುವುದು ಅತ್ಯಂತ ಖೇದನೀಯ ಸಂಗತಿ. PC and P.N.D.T Act ಭ್ರೂಣ ಹತ್ಯೆ ನಿಷೇಧ ಕಾಯ್ದೆ ಬಹಳ ಬಲವಾದ ಕಾಯ್ದೆ ಎಂದಾದರೆ ಈ ಕೃತ್ಯ ಮಾಡುವವರು ನಿರಂತರವಾಗಿ ನಿರ್ಭಯವಾಗಿ ಮಾಡುತ್ತಿದ್ದಾರೆ ಎಂಬುದು ಶೋಚನೀಯ ಸಂಗತಿಯಾಗಿದೆ.

ಆದಕಾರಣ, ತತಕ್ಷಣವೇ ಈ ಕೃತ್ಯಗಳಲ್ಲಿ ಭಾಗಿಯಾದ ದುಷ್ಟರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ಜರುಗಿಸಿ ಶಿಕ್ಷೆಗೆ ಗುರಿಯಾಗುವಂತೆ ಕ್ರಮವಹಿಸಲು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಆರೋಗ್ಯ ಸಚಿವರು . . .

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಹಿಂದಿನ ಅಧಿವೇಶನದಲ್ಲಿ ನಾವು ಅನೇಕ ಪ್ರಶ್ನೆಯನ್ನು ಕೇಳಿದ್ದು, ಒಂದಕ್ಕೂ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಉಮಾಶ್ರೀಯವರೇ, ನಾನು ಈಗಾಗಲೇ ಹೇಳಿದ್ದೇನೆ. ಮಾತನಾಡುವ ಆಗಿಲ್ಲ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಮಾಶ್ರೀ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೂ ಉತ್ತರವೇ ಬಂದಿಲ್ಲ. ದಯಮಾಡಿ ಉತ್ತರಗಳನ್ನು ಕೊಡಿಸಿ ಎಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಉಮಾಶ್ರೀಯವರೇ, ಉತ್ತರಗಳನ್ನು ಕೊಡಿಸುತ್ತೇನೆ.

**ಊ) ವಿಷಯ:- ಬಸವಣ್ಣನವರ ಕಾಯಕಭೂಮಿ ಬಸವಕಲ್ಯಾಣದಲ್ಲಿ ಪ್ರಗತಿಯಲ್ಲಿರುವ ಅನುಭವ ಮಂಟಪ ಕಾಮಗಾರಿ ಅಭಿವೃದ್ಧಿಗೆ ಪೂರಕ ಮೂಲಸೌಕರ್ಯ ಹಾಗೂ ಅಗತ್ಯ ಅನುದಾನ ಒದಗಿಸುವ ಕುರಿತು.**

***

**ಡಾ॥ ಎಂ.ಜಿ.ಮೂಳೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುಮತಿ ಕೊಟ್ಟಿರುವುದಕ್ಕೆ ಧನ್ಯವಾದಗಳು. ಬಸವಣ್ಣನವರ ಕಾಯಕ ಭೂಮಿ ಬಸವಕಲ್ಯಾಣದಲ್ಲಿ ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂದ 18 ವರ್ಷಗಳಲ್ಲಿ ಶರಣರ ಸ್ಮಾರಕಗಳ ಜೀರ್ಣೋದ್ಧಾರ ಕಾರ್ಯಕ್ಕೆ ಚಾಲನೆ ಸಿಕ್ಕಿದ್ದು, ನೂತನ ಅನುಭವ ಮಂಟಪ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ, ನಗರವನ್ನು ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಿಸುವ ಆಶಯಕ್ಕೆ ಪೂರಕ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಕೆಲಸ ಕೈಗೊಳ್ಳಲು ವಿಸ್ತೃತ ಯೋಜನೆಗೆ ಅಗತ್ಯ ಅನುದಾನ ಬೇಕಿದೆ.

ಒಂದು ಲಕ್ಷದ ಅಸುಪಾಸಿನಲ್ಲಿರುವ ನಗರದ ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಲಭ್ಯಗಳಿಲ್ಲ, ಒಳಚರಂಡಿ (ಯುಜಿಡಿ) ವ್ಯವಸ್ಥೆ ಇಲ್ಲ. ಒಳಚರಂಡಿಯಲ್ಲಿ ಮಳೆ ನೀರು ಹರಿದು ಹೋಗಲು ಸಹ ವ್ಯವಸ್ಥಿತವಾದ ಚರಂಡಿಗಳಿಲ್ಲ. ಜೋರಾದ ಮಳೆಯಾದರೆ ಕೆಲವೆಡೆ ರಸ್ತೆಯ ನೀರು ಹರಿದು ದುರ್ವಾಸನೆ ಹರಡುತ್ತದೆ. ಅಲ್ಲದೆ ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ, ಚಿಕೂನ್ ಗುನ್ಯಾ, ಮಲೇರಿಯಾ, ಅನೇಕ ರೋಗಗಳನ್ನು ತಡೆಯುವಲ್ಲಿ ವಿಫಲವಾಗುತ್ತಿದೆ.

ಜನಸಂಖ್ಯೆ ಹೆಚ್ಚಾದಂತೆ ಸಂಚಾರ ದಟ್ಟಣೆಯೂ ಅಧಿಕವಾಗಿದೆ. ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ರಿಂಗ್ ರೋಡ್, ಒಳಚರಂಡಿ ಜತೆಗೆ ಸಂಸ್ಕರಣಾ ಘಟಕ ಹಾಗೂ ನಗರದ ಎಲ್ಲಾ ಪ್ರಮುಖ ರಸ್ತೆ ಬದಿ ಸಮರ್ಪಕ ಚರಂಡಿ, ಫುಟ್‌ಪಾತ್, ಸಾರ್ವಜನಿಕ ಶೌಚಾಲಯ ನಿರ್ಮಾಣವಾಗಬೇಕಿದೆ. ಕುಡಿಯುವ ನೀರು, ವಿದ್ಯುತ್ ಸರಬರಾಜು ವ್ಯವಸ್ಥೆ ಇಲ್ಲ. ಪ್ರವಾಸಿ ತಾಣವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರದಲ್ಲಿ ಪೂರಕವಾಗಿ ಕೆಲಸಗಳಾಗಬೇಕಿದೆ. ಈ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಜಿ.ಮೂಳೆ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಖ)ವಿಷಯ:- 2022-23ನೇ ಸಾಲಿನ ರಾಜ್ಯದ ಸರ್ಕಾರಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳ ಹಾಗೂ ಚಿಕ್ಕಮಗಳೂರು ಶಾರದಾ ಕಾನೂನು ಕಾಲೇಜು ವಿದ್ಯಾರ್ಥಿಗಳ ಫಲಿತಾಂಶವನ್ನು ಕೂಡಲೇ ನೀಡುವ ಬಗ್ಗೆ.**

***

**ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದ ಸರ್ಕಾರಿ ಕಾನೂನು ಕಾಲೇಜುಗಳಲ್ಲಿ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಹೊಂದಿದ ಕಾನೂನು ವಿದ್ಯಾರ್ಥಿಗಳು ಮೊದಲನೇ ವರ್ಷದ ಕಾನೂನು ಪದವಿಯ 2 ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಬರೆದು, ಈ ಸಂಬಂಧ ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಇವರು ಫಲಿತಾಂಶ ಪ್ರಕಟಿಸಿರುವುದು ಸರಿಯಷ್ಟೇ. ತದನಂತರ 2 ನೇ ವರ್ಷದ ಕಾನೂನು ವ್ಯಾಸಂಗದ ಪರೀಕ್ಷೆಗಳನ್ನು ಏಪ್ರಿಲ್/ಮೇ 2024ರಲ್ಲಿ ಬರೆದಿದ್ದು, ಫಲಿತಾಂಶವನ್ನು ಪ್ರಕಟಿಸದೇ ವಿದ್ಯಾರ್ಥಿಗಳ ಫಲಿತಾಂಶವನ್ನು ರಾಜ್ಯದ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಇತರೆ ಜಿಲ್ಲೆಗಳಲ್ಲಿ ತಡೆಹಿಡಿದಿರುವುದಾಗಿ ತಿಳಿದು ಬಂದಿರುತ್ತದೆ. ಈ ಕುರಿತಂತೆ ವಿಶ್ವವಿದ್ಯಾಲಯದ ಮಾಹಿತಿ ಪ್ರಕಾರ ಹೆಚ್ಚುವರಿ ವಿಭಾಗದ ವಿದ್ಯಾರ್ಥಿಗಳ ಪ್ರವೇಶಾತಿಗೆ ಕರ್ನಾಟಕ ಕಾನೂನು ವಿಶ್ವವಿದ್ಯಾಲಯದವರು ಹಾಗೂ ಸರ್ಕಾರದವರು ಮಾನ್ಯತೆ ನೀಡಿದ್ದು, BCI (Bar Council of India) ನವದೆಹಲಿ ಇವರಿಂದ ಹೆಚ್ಚುವರಿ ವಿಭಾಗಕ್ಕೆ ಮಾನ್ಯತೆ ಬಂದಿಲ್ಲವಾದ್ದರಿಂದ, ಸದರಿ ವಿದ್ಯಾರ್ಥಿಗಳ ಫಲಿತಾಂಶ ತಡೆಹಿಡಿದಿರುವುದಾಗಿ ತಿಳಿದು ಬಂದಿರುತ್ತದೆ. ಈ ರೀತಿ ಫಲಿತಾಂಶವನ್ನು ತಡೆಹಿಡಿದಿರುವ ಕಾನೂನು ವಿಶ್ವವಿದ್ಯಾಲಯದ ಧೋರಣೆಯಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಉಂಟಾಗಿರುತ್ತದೆ. ಸದರಿ ವಿದ್ಯಾರ್ಥಿಗಳು ಹಳ್ಳಿ, ಗ್ರಾಮೀಣ ಪ್ರದೇಶಗಳಿಂದ ಬಂದವರಾಗಿದ್ದು, ಎಲ್ಲರೂ ಆರ್ಥಿಕವಾಗಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಾಗಿರುತ್ತಾರೆ. ಕಾನೂನು ವಿಶ್ವವಿದ್ಯಾಲಯದವರು 2ನೇ ವರ್ಷದ 3ನೇ ಸೆಮಿಸ್ಟರ್ ಬಿ.ಎ., ಎಲ್.ಎಲ್.ಬಿ., ಪರೀಕ್ಷೆಗೆ ಸದರಿ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಕಟ್ಟಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶವನ್ನು ನೀಡಿ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿದಿರುವುದು ದುರಾದೃಷ್ಟಕರ ಸಂಗತಿ. BCI (Bar Council of India) ನವದೆಹಲಿ ಹೆಚ್ಚುವರಿ ವರ್ಗ ಅನುಮತಿ ಪಡೆದುಕೊಳ್ಳುವುದು. ಆಯಾ ಕಾಲೇಜುಗಳ/ವಿಶ್ವವಿದ್ಯಾಲಯದ ಕರ್ತವ್ಯವಾಗಿರುತ್ತದೆ. ಈ ರೀತಿ ಅನುಮತಿ ಪಡೆದುಕೊಳ್ಳದೇ, ಬೇಕಾಬಿಟ್ಟಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಂಡು, ಶುಲ್ಕವನ್ನು

ಪಡೆದು, ಅವರು ಪರೀಕ್ಷೆಯ ಫಲಿತಾಂಶವನ್ನು ತಡೆಹಿಡಿಯುವುದರಿಂದ, ವಿದ್ಯಾರ್ಥಿಗಳ ಭವಿಷ್ಯದಲ್ಲಿ ಆಟ ಆಡಿದ ಹಾಗಿರುತ್ತದೆ. ಈ ಸಂಬಂಧ ಕೂಡಲೇ ಸರ್ಕಾರಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳ ಹಾಗೂ ಚಿಕ್ಕಮಗಳೂರು ಶಾರದಾ ಕಾನೂನು ಕಾಲೇಜು ಮತ್ತು ಫಲಿತಾಂಶ ಬಾಕಿ ಇರಿಸಿಕೊಂಡಿರುವ ಇನ್ನಿತರೇ ಕಾಲೇಜುಗಳಲ್ಲಿನ ಕಾನೂನು ವಿದ್ಯಾರ್ಥಿಗಳ 2022-23ನೇ ಸಾಲಿನ ಫಲಿತಾಂಶವನ್ನು ಕೂಡಲೇ ನೀಡಿ, ಅವರ ಭವಿಷ್ಯಕ್ಕೆ ಅನುಕೂಲ ಮಾಡಿಕೊಡುವ ಸಂಬಂಧ ಶೂನ್ಯವೇಳೆಯಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಎಲ್. ಅನಿಲ್‌ಕುಮಾರ್ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(595) 22.7.2024 3.50 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**೦4. ಮಾನ್ಯ ಸಭಾಪತಿಗಳ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

ಅ) **ವಿಷಯ: ರಾಜ್ಯದಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವ ಬಗ್ಗೆ.**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ)-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಎಂ.ನಾಗರಾಜುರವರು ದಿನಾಂಕ 15.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

ಆ) **ವಿಷಯ: ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ವರದಿಯನ್ನು ಕೂಡಲೇ ಜಾರಿಗೊಳಿಸಿ ನ್ಯಾಯ ಒದಗಿಸುವ ಬಗ್ಗೆ.**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಮುಖ್ಯಮಂತ್ರಿಯವರ ಪರವಾಗಿ)–** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ದಿನಾಂಕ 15.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಪರೀಕ್ಷೆ ನಡೆಸಿ ಭರ್ತಿ ಮಾಡದೇ, ಪ್ರಾಧ್ಯಾಪಕರ ಬಡ್ತಿ ಮೂಲಕ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತಂದು ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ)-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಎಸ್.ಎಲ್.ಭೋಜೇಗೌಡರವರು ದಿನಾಂಕ 16.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ)ವಿಷಯ: ಮೀಸಲು ಅರಣ್ಯ ಮಾಡುವ ಪ್ರಸ್ತಾವನೆಯನ್ನು ಹಿಂಪಡೆಯುವ ಬಗ್ಗೆ**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)–** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)ರವರು ದಿನಾಂಕ 16.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಉ) ವಿಷಯ: ರಾಜ್ಯದಲ್ಲಿ ಡೆಂಘ್ಯೂ ಪ್ರಕರಣಗಳು ಉಲ್ಬಣಗೊಳ್ಳದಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವ ಕುರಿತು**.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಟಿ.ಎ.ಶರವಣರವರು ದಿನಾಂಕ 16.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಊ)ವಿಷಯ: ಕ್ರೈಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿ ದಾಖಲಾತಿಗೆ ಅರ್ಹ ಪ್ರತಿಭಾವಂತ ಮಕ್ಕಳಿಗೆ ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಶಿಕ್ಷಣ ನೀಡುವ ಬಗ್ಗೆ.**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಸಮಾಜ ಕಲ್ಯಾಣ ಸಚಿವರ ಪರವಾಗಿ)–** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಚಿದಾನಂದ್ ಎಂ.ಗೌಡ ಹಾಗೂ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ ಅವರುಗಳು ದಿನಾಂಕ 16.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಖ)ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಹಿತದೃಷ್ಟಿಯಿಂದ ಕಾನೂನು ತೊಡಕುಗಳನ್ನು ನಿವಾರಿಸಿ ಮೀಸಲಾತಿ ಪ್ರಕಟಿಸುವ ಕುರಿತು.**

---

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಪೌರಾಡಳಿತ ಸಚಿವರ ಪರವಾಗಿ)–** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಮಂಜುನಾಥ್ ಭಂಡಾರಿಯವರು ದಿನಾಂಕ 18.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಎ) ವಿಷಯ: ಕೇಂದ್ರ ಸಾರಿಗೆ ಇಲಾಖೆಯು ವಾಣಿಜ್ಯ ಇಲಾಖೆಗಳಿಗೆ ಪ್ಯಾನಿಕ್ ಬಟನ್ ಮತ್ತು ಜಿ.ಪಿ.ಆರ್.ಎಸ್. ಎಂಬ ಅವೈಜ್ಞಾನಿಕ ಸಾಧನವನ್ನು ಅಳವಡಿಸಿ, ಟ್ಯಾಕ್ಸಿ ಚಾಲಕರು ಹಾಗೂ ಮಾಲೀಕರಿಗೆ ತೊಂದರೆಯುಂಟು ಮಾಡುತ್ತಿರುವ ಬಗ್ಗೆ.**

---

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಸಾರಿಗೆ ಹಾಗೂ ಮುಜರಾಯಿ ಸಚಿವರ ಪರವಾಗಿ)-** ಮಾನ್ಯ ಸಭಾಪತಿಗಳೆ, ಮಾನ್ಯ ಶಾಸಕರಾದ ಶ್ರೀ ಐವನ್ ಡಿ'ಸೋಜಾರವರು ದಿನಾಂಕ 19.7.2024ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**೦5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಒಳಗೊಂಡಂತೆ ದೈನಂದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದವರ ಆರ್ಥಿಕ ಸ್ಥಿತಿ ಶೋಚನೀಯವಾಗಿರುವುದರ ಬಗ್ಗೆ.**

**ಸಭಾಪತಿಯವರು:-** ನಿಯಮ 59ರ ಪ್ರಕಾರ ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೋರಿಕೆ ಪ್ರಸ್ತಾವವನ್ನು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದಂತಹ ಶ್ರೀ ಸಿ.ಟಿ.ರವಿ, ಶ್ರೀ ಶಶೀಲ್ ಜಿ.ನಮೋಶಿ, ಶ್ರೀ ಎನ್.ರವಿಕುಮಾರ್, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಶ್ರೀ ಕೇಶವ ಪ್ರಸಾದ್.ಎಸ್ ಹಾಗೂ ಶ್ರೀ ಕೆ.ಎಸ್.ನವೀನ್‌ರವರುಗಳು ನೀಡಿರುತ್ತಾರೆ.
ಮಾನ್ಯ ಸಿ.ಟ.ರವಿಯವರೇ ಅದರಲ್ಲಿರುವ ವಿಷಯವನ್ನು ಹೇಳಬಿಡಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಭಾಗ್ಯಗಳ ಹೆಸರಿನಲ್ಲಿ ಬೆಲೆ ಏರಿಕೆ ಭಾಗವನ್ನು ಅಘೋಷಿತವಾಗಿ ರಾಜ್ಯ ಸರ್ಕಾರ ಜನರಿಗೆ ಕರುಣಿಸಿದೆ. ವಿದ್ಯುತ್ ದರದ ಹೆಚ್ಚಳದಿಂದ ಆರಂಭಗೊಂಡು, ಹಾಲು-ಆಲ್ಕೋಹಾಲ್ ದರವನ್ನು ಏರಿಸಿದ್ದಲ್ಲದೇ, ರೈತರ ಬಿತ್ತನೆ ಬೀಜದ ದರವನ್ನು ಪ್ರತಿಶತ 40ರಷ್ಟು ಬೆಲೆಯನ್ನು ಹೆಚ್ಚು ಮಾಡಿದೆ. ಅದರ ಪರಿಣಾಮ ದಿನಸಿ ವಸ್ತುಗಳೂ ಒಳಗೊಂಡಂತೆ ಎಲ್ಲಾ ಆಹಾರ ಧಾನ್ಯಗಳ ಬೆಲೆಗಳು ಗಗನಕ್ಕೇರಿವೆ. ಬೆಲೆ ಏರಿಕೆಯಿಂದ ಮಧ್ಯಮ ವರ್ಗದ ಜನಜೀವನ ಬಹಳ ದುಬಾರಿಯಾಗಿದೆ; ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಸ್ಟಾಂಪ್ ಡ್ಯೂಟಿ ಹೆಚ್ಚಳ ಮಾಡಿದ್ದಾರೆ, ಅಬಕಾರಿ ದರ ಹೆಚ್ಚಳ ಮಾಡಿದ್ದಾರೆ. ಹಾಗೆಯೇ, ಮೋಟರ್ ವೆಹಿಕಲ್ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಛಾಪಾ ಕಾಗದದ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ರೂ. 20 ಇದ್ದ ಛಾಪಾ ಕಾಗದಕ್ಕೆ ರೂ. 100 ಕೊಡಬೇಕು. ರೂ. 100 ಇದ್ದದ್ದು ರೂ. 500 ಕೊಡಬೇಕು. ಅಷ್ಟು ಮಾತ್ರವಲ್ಲ ಮರಣ ಪ್ರಮಾಣ ಪತ್ರ, ಜನನ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರಗಳ ದರವನ್ನೂ ಕೂಡ ಹೆಚ್ಚಳ ಮಾಡಿ, ರೈತರು ತೆಗೆದುಕೊಳ್ಳುವ ಪಹಣಿ ದರ ಹೆಚ್ಚು ಮಾಡಿದ್ದಾರೆ. ಕೊಟಿದ್ದು 5 ಆದರೆ 50 ಕಡೆಯಿಂದ ಕಿತ್ತುಕೊಂಡಿದ್ದಾರೆ. 5 ಕಡೆ ಕೊಟ್ಟು 50 ಕಡೆಯಿಂದ ಕಿತ್ತುಕೊಳ್ಳುವ ಕೆಲಸವನ್ನು ಸರ್ಕಾರ ಮಾಡಿದೆ. ಹಾಗಾಗಿ ಈ ಕುರಿತು ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಡೀ ದೇಶದಲ್ಲಿ ಹಣದುಬ್ಬರದಲ್ಲಿ 2 ಸ್ಥಾನದಲ್ಲಿದ್ದೇವೆ. ಕೇಂದ್ರದ ಮಟ್ಟದಲ್ಲಿ ಹಣದುಬ್ಬರ 4.75 ಇದ್ದರೆ ರಾಜ್ಯ ಸರ್ಕಾರದ ಹಣದುಬ್ಬರ 5.93 ಇದೆ.

**ಸಭಾಪತಿಯವರು:-** ನೀವು ಹೇಳಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ಇಂತಹ ವಿಚಾರಗಳು ಸಾಮಾನ್ಯವಾಗಿ ಬರುತ್ತಿರುತ್ತವೆ. ಇದನ್ನು ನಿಯಮ 330ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ನಿಯಮ 59ರ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯವನ್ನು**

**ನಿಯಮ 330ಕ್ಕೆ ಪರಿವರ್ತಿಸಲಾಯಿತು.**

**06. ಶಾಸನ ರಚನೆ.**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ(ಸಹಕಾರ ಸಚಿವರು)(ಕೃಷಿ ಮಾರುಕಟ್ಟೆಯನ್ನು ಹೊರತುಪಡಿಸಿ):-** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಗೃತ ರೂಪದಲ್ಲಿರುವ 2024ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ(ಸಹಕಾರ ಸಚಿವರ) (ಕೃಷಿ ಮಾರುಕಟ್ಟೆ ಹೊರತುಪಡಿಸಿದಂತೆ):-** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ 2024 ಅನ್ನು, 21.2.2024ರಂದು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024ಅನ್ನು ದಿನಾಂಕ 28.2.2024 ವಿಧಾನ ಪರಿಷತ್ತಿನಲ್ಲಿ ಪರ್ಯಾಲೋಚನೆಗೆ ಮಂಡಿಸಿದ ಸಂದರ್ಭದಲ್ಲಿ ವಿಧೇಯಕಕ್ಕೆ ಕೆಲವು ತಿದ್ದುಪಡಿಗಳನ್ನು ತರಲು, ವಿಧೇಯಕಗಳನ್ನು ಸಮಗ್ರವಾಗಿ ಪರಿಶೀಲಿಸಲು ಮಾನ್ಯ ಸದಸ್ಯರುಗಳು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 116ರ ಅನ್ವಯ ವಿಧೇಯಕಗಳನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು. ಅದರಂತೆ 3 ತಿಂಗಳ ಒಳಗೆ ಸದನಕ್ಕೆ ವರದಿ ನೀಡಲು ದಿನಾಂಕ 19.3.2024ರಂದು

ತಾವು ಸಮಿತಿಯನ್ನು ರಚಿಸಿದಿರಿ. ಲೋಕಸಭೆಯ ಚುನಾವಣೆ ನಿಮಿತ್ತ, ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಪರಿಶೀಲನಾ ಸಮಿತಿ ಸಭೆ ಸೇರಲು ಸಾಧ್ಯವಾಗದ ಕಾರಣ, ಪರಿಶೀಲನಾ ಸಮಿತಿಯ ಕಾಲಾವಧಿಯನ್ನು ಸದನದ ಸಹಮತಿಯೊಂದಿಗೆ ಕಾಯ್ದಿರಿಸಿ 19.6.2024ರಿಂದ 2 ತಿಂಗಳವರಗೆ ವಿಸ್ತರಿಸಿದ್ದೀರಿ. ದಿನಾಂಕ 15.7.2024ರಂದು ಸದನದ ಸಹಮತಿಯನ್ನು ಪಡೆಯಲಾಗಿರುತ್ತದೆ. ದಿನಾಂಕ 19.3.2024ರಂದು ಪರಿಶೀಲನಾ ಸಮಿತಿ ರಚನೆಗೊಂಡಿದ್ದು, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 229(1)ರ ರೀತ್ಯಾ ನನ್ನನ್ನು ಅಧ್ಯಕ್ಷನನ್ನಾಗಿ, ಮಾನ್ಯ ಕಾನೂನು ಸಚಿವರನ್ನು ಸದಸ್ಯರನ್ನಾಗಿ ತಾವು ನಾಮ ನಿರ್ದೇಶನ ಮಾಡಿದಿರಿ. ಪರಿಶೀಲನಾ ಸಮಿತಿಯು ದಿನಾಂಕ 15.6.2024, 29.6.2024 ಮತ್ತು 16.7.2024ಗಳಂದು ಸಭೆಗಳನ್ನು ನಡೆಸಿ, ವಿಧೇಯಕಗಳ ಬಗ್ಗೆ ಮಾನ್ಯ ಶಾಸಕರುಗಳ, ಕಾರ್ಯದರ್ಶಿ, ಸಹಕಾರ ಇಲಾಖೆ, ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು, ಶಾಸನ ರಚನಾ ಇಲಾಖೆಯ ಅಧಿಕಾರಿಗಳ ಸಲಹೆಗಳೊಂದಿಗೆ ಖಂಡ ಖಂಡವಾಗಿ ಚರ್ಚಿಸಿ ಕೆಳಕಂಡ ಉಪಖಂಡಗಳಿಗೆ ತಿದ್ದುಪಡಿಯನ್ನು ತರಲು ಸಮಿತಿ ಶಿಫಾರಸ್ಸು ಮಾಡಿರುತ್ತದೆ. ಆ ಶಿಫಾರಸ್ಸುಗಳನ್ನು ಮಂಡಿಸಿದ್ದೇನೆ.

**ಸಭಾಪತಿಯವರು:- ಪ್ರಸ್ತಾವ ಏನೆಂದರೆ,**

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 12 ರವೆರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 12ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 12 ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕ್ಯಾತಂದ್ರ ಎನ್.ರಾಜಣ್ಣ (ಸಹಕಾರ ಸಚಿವರು,ಕೃಷಿ ಮಾರುಕಟ್ಟೆ ಹೊರತುಪಡಿಸಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳೊಂದಿಗೆ ಅಂಗೀಕರಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

(596) 22-7-2024 4.00 ಡಿಎಸ್-ಬಿಎನ್ಎಸ್

**ಆ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕ್ಯಾತ್ಸಂಧ್ರ ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ" ವನ್ನು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳ ರೀತ್ಯಾ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ"ವನ್ನು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳ ರೀತ್ಯಾ ಪರ್ಯಾಲೋಚಿಸುವುದು**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 19 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 19 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 19 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕ್ಯಾತ್ಸಂದ್ರ ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ"ವನ್ನು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳ ರೀತ್ಯಾ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ "ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ" ವನ್ನು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳ ರೀತ್ಯಾ ತಿದ್ದುಪಡಿಗಳೊಂದಿಗೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**07. ಗಮನ ಸೆಳೆಯುವ ಸೂಚನೆಗಳು**

ಅ)**ವಿಷಯ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಭಿವೃದ್ಧಿಯ ಉಪ ಯೋಜನೆಗಳಿಗೆ ಮೀಸಲಿಡಲಾಗಿದ್ದ ಹಣವನ್ನು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಬಗ್ಗೆ.**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಭಿವೃದ್ಧಿಯ ಉಪ ಯೋಜನೆಗಳಿಗೆ ಮೀಸಲಿಡಲಾಗಿದ್ದ ಹಣವನ್ನು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಡಾ॥ ಹೆಚ್.ಸಿ.ಮಹದೇವಪ್ಪ(ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರ ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಹಣ ಮೀಸಲಾಗಿಟ್ಟಿರುವುದನ್ನು ಸರ್ಕಾರ ಐದು ಗ್ಯಾರಂಟಿ ಯೋಜನೆಗಳಿಗೆ ಬಳಸಿ ದುರುಪಯೋಗ ಮಾಡುತ್ತಿದ್ದಾರೆ ಎನ್ನುವುದು ಅವರ ಉದ್ದೇಶವಾಗಿದೆ. ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ಈ ಸದನದಲ್ಲಿ ಮತ್ತು ಬೆಳಗಾವಿ ಅಧಿವೇಶನದಲ್ಲಿ ವಿವರವಾದ ಚರ್ಚೆ ನಡೆದಿದೆ. ಉತ್ತರವನ್ನು ನಾನು ಕೊಟ್ಟಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಮ್ಮ ಇತರ ಸದಸ್ಯರುಗಳು ಉತ್ತರ ಕೊಟ್ಟಿದ್ದಾರೆ. ಆ ಕಡೆಯ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಇದರ ಉದ್ದೇಶವನ್ನು ಸರ್ಕಾರದವರು ಹೇಳಿದರೂ ಕೂಡ ಇಲ್ಲ, ನೀವು ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ, ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದೀರಿ ಎಂದು ಪದೇಪದೇ ಇಲ್ಲಿ ಪ್ರಶ್ನೆಯನ್ನು ಕೇಳುತ್ತಲೇ ಇದ್ದಾರೆ. ಈ ಕಾಯ್ದೆಯ ಮೂಲ ಉದ್ದೇಶವನ್ನು ಬೆಳಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಹೇಳಿದ್ದಾರೆ. ಮತ್ತೆ ಇದರ ವಿವರಣೆ ಅಗತ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಕೇಂದ್ರ ಸರ್ಕಾರ ಅಥವಾ ದೇಶದ ಬೇರೆ ಬೇರೆ ರಾಜ್ಯ ಸರ್ಕಾರಗಳು, ಕರ್ನಾಟಕ ಸರ್ಕಾರವು ಸೇರಿ ಬಜೆಟ್‌ನ್ನು ತಯಾರು ಮಾಡುವಾಗ ಸಮಾಜ ಕಲ್ಯಾಣ ಇಲಾಖೆಗಳಿಗೆ ಮತ್ತು ಇತರೆ ಇಲಾಖೆಗಳಿಗೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಹಣವನ್ನು ಯೋಜನೆಗಳಿಗೆ ಕೊಡುತ್ತಿದ್ದರು. ವಿವಿಧ ಇಲಾಖೆಯ ಸಾಮಾನ್ಯ ಯೋಜನೆಗಳಿಗೂ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಭಾಗದ ಹಣವನ್ನು ಆ ವರ್ಗಗಳ ಜನರ ಅಭಿವೃದ್ಧಿಗೆ ಮತ್ತು ಆ ಇಲಾಖೆಯ ಕಾರ್ಯಕ್ರಮಗಳಿಗೆ ಸೀಮಿತವಾಗಿ ಬಳಸುವುದಕ್ಕೆ ಇದರ ಉಪಯೋಗವಾಗುತ್ತಿತ್ತು. ಈ ಯೋಜನೆಯನ್ನು ಅನ್ಯ ಉದ್ದೇಶಕ್ಕೆ ಅನ್ಯರಿಗೆ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆ ಕಾಯ್ದೆ ಇಲ್ಲದಿದ್ದಾಗಲೂ ಅವಕಾಶ ಇರಲಿಲ್ಲ. ಈಗಲೂ ಕೂಡ ಅವಕಾಶವಿಲ್ಲ. ಭಾರತ ಸರ್ಕಾರದ ನೀತಿ ಆಯೋಗದ ಮಾರ್ಗಸೂಚಿಗಳಂತೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುದಾನವನ್ನು ವಿವಿಧ ಇಲಾಖೆಯ ಸಾಮಾನ್ಯ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಶೇಕಡವಾರು ಅನುದಾನವನ್ನು ಹಂಚಿಕೆ ಮಾಡುವುದಕ್ಕೆ ತಿಳಿಸಲಾಗಿರುತ್ತದೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಭಾರತ ಸರ್ಕಾರದ ನೀತಿ ಆಯೋಗದ ಮಾರ್ಗಸೂಚಿಯಂತೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಹಣವನ್ನು ಯೋಜನೆಗಳನ್ನು ಮಾಡುವಾಗ 2011ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಹಣ ಬಳಸಬೇಕೆಂದು ಹೇಳಿದೆ. ಅದೇ ಮಾರ್ಗಸೂಚಿಯ ಪ್ರಕಾರ ಭಾರತ ಸರ್ಕಾರ ತನ್ನ ವಿವಿಧ

ಯೋಜನೆಗಳಿಗೆ ಈ ಹಣವನ್ನು ಸಾಮಾನ್ಯ ಯೋಜನೆಗಳನ್ನು ಮಾಡುವಾಗ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಹಣದಲ್ಲಿ ಆ ವರ್ಗಗಳ ಫಲಾನುಭವಿಗಳ ಯೋಜನೆ ಇರಬಹುದು, ವ್ಯಕ್ತಿಗತವಾದ ಕಾರ್ಯಕ್ರಮಗಳಿಗೆ ಆ ಹಣವನ್ನು ಕೊಡುವಂತಹ ವಾಡಿಕೆ ಇದೆ. Undivided ಆಂಧ್ರ ಪ್ರದೇಶದಲ್ಲಿ ಮೊದಲನೇ ಬಾರಿಗೆ 2008-2009ನೇ ಇಸವಿಯಲ್ಲಿ ಈ ಕಾಯ್ದೆ ಜಾರಿಗೆ ಬಂತು. ಆ ಕಾಯ್ದೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಯೋಜನಾ ಗಾತ್ರದಲ್ಲಿ ಹಣವನ್ನು ನಿಗದಿ ಮಾಡಿ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮಾಡುವಾಗ ಆ ಸಮುದಾಯಗಳಿಗೆ ಈ ಹಣವನ್ನು ವಿನಿಯೋಗಿಸಬೇಕೆಂದು ಕಾಯ್ದೆಯಲ್ಲಿ ಹೇಳಿದ್ದಾರೆ.

(ಮುಂದು)

(597) 22/07/2024 4:10/ಎಸ್‌ಪಿಆರ್/ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಡಾ॥ ಹೆಚ್.ಸಿ.ಮಹದೇವಪ್ಪ (ಮುಂದು):-**

2013 ನೇ ಇಸ್ವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರದ ಅವಧಿಯಲ್ಲಿ ಅಂದಿನ ಹಾಗೂ ಇಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ಕಾಯ್ದೆಯನ್ನು ಜಾರಿಗೆ ತಂದರು. ಆಂಧ್ರಪ್ರದೇಶ ರಾಜ್ಯದ ಕಾಯ್ದೆಗಿಂತ ಹೆಚ್ಚು ಶಕ್ತಿಯುತವಾದ ಕಾಯ್ದೆಯನ್ನು ನಾವು ಮಾಡಿದ್ದೇವೆ. ಆಂಧ್ರಪ್ರದೇಶ ರಾಜ್ಯದ ಕಾಯ್ದೆಯಲ್ಲಿ non-lapsable fund and penal clause, ಇವುಗಳು ಇರಲಿಲ್ಲ. ನಮ್ಮ ರಾಜ್ಯದಲ್ಲಿ ಯಾರಾದರೂ ದುರುದ್ದೇಶದಿಂದ ಹಣವನ್ನು ದುರುಪಯೋಗ ಮಾಡಿಕೊಂಡರೆ, ಅವರು ಆರು ತಿಂಗಳುಗಳ ಕಾಲ ಜೈಲು ವಾಸವನ್ನು ಅನುಭವಿಸಬೇಕು. ಈ ರೀತಿಯ penal clause ಹಾಕಿ, ಕಾಯ್ದೆಯನ್ನು ಬಲಗೊಳಿಸಿದ್ದೇವೆ. As far as the SCs and STs Act and as far as the expenditure for SC/ST programmes are concerned, it is a very powerful Act in the Country. ಇದು ಇಷ್ಟು ಶಕ್ತಿಯುತವಾದ ಕಾಯ್ದೆಯಾಗಿದೆ. ಇಂತಹ ಕಾಯ್ದೆಯನ್ನು ಜಾರಿಗೊಳಿಸಿ, ಯೋಜನಾ ಗಾತ್ರಕ್ಕನುಗುಣವಾಗಿ 2014-15 ನೇ ಸಾಲಿನಿಂದ ನಾವು ಈ ಯೋಜನೆಗಳನ್ನು ಮಾಡುತ್ತಿದ್ದೇವೆ. ಕಾಯ್ದೆಯ ಕಲಂ 7 (ಎ), (ಬಿ), (ಸಿ) ಮತ್ತು (ಡಿ) ಎಂಬ ನಾಲ್ಕು ವಿಭಾಗಗಳನ್ನು ಮಾಡಿದ್ದೇವೆ. ಇದರಲ್ಲಿ ನೇರ ಫಲಾನುಭವಿಗಳಿರಬಹುದು, ಆರೋಗ್ಯ, ಶಿಕ್ಷಣ ಮತ್ತಿತರೆ ಯೋಜನೆಗಳಿರಬಹುದು, ವಿವಿಧ ಇಲಾಖೆಗಳ ಸಾಮಾನ್ಯ ಕಾರ್ಯಕ್ರಮಗಳಿರಬಹುದು. ಈ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ಈ ಹಣದಲ್ಲಿಯೇ ಆ ವರ್ಗದ ಜನರಿಗೆ ಮಾತ್ರ ಸೌಲಭ್ಯಗಳನ್ನು ಕೊಡಬೇಕೆಂಬ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದ್ದು, ಪ್ರಸ್ತುತ ಇದು ಚಾಲ್ತಿಯಲ್ಲಿರುತ್ತದೆ. ಕಾಯ್ದೆಯ ಕಲಂ 7

(ಡಿ) ಅಂದರೆ, deemed expenditure…. divisible communities ಎಂದರೆ, ಅಲ್ಲಿ ಒಂದು ಸಮುದಾಯವಿರುತ್ತದೆ; ಅದು ಕಣ್ಣಿಗೆ ಕಾಣಿಸುವುದಿಲ್ಲ. ಅಲ್ಲಿ ಪರಿಶಿಷ್ಟ ಜಾತಿಯವರು ಇದ್ದಾರೆಯೋ ಅಥವಾ ಇಲ್ಲವೋ ಗೊತ್ತಾಗುವುದಿಲ್ಲ. ಹೀಗೆ divisible communities ಇದೆಯೋ ಅಥವಾ ಇಲ್ಲವೋ ಎಸ್.ಸಿ.ಪಿ. ಯ ಒಂದು ಭಾಗದ ಹಣವನ್ನು ಅಲ್ಲಿ ವ್ಯಯ ಮಾಡುವ ನಡವಳಿಕೆಗಳು ನಡೆದಿವೆ. ಕಾಂಗ್ರೆಸ್ ಪಕ್ಷದ ಸರ್ಕಾರವು ಅಧಿಕಾರದಲ್ಲಿದ್ದಾಗ ಇದು ಸ್ವಲ್ಪ ಮಟ್ಟಿಗೆ ನಡೆದಿದೆ. ಭಾರತೀಯ ಜನತಾ ಪಾರ್ಟಿಯ ಪಕ್ಷವು ಅಧಿಕಾರದಲ್ಲಿದ್ದಾಗ 8-10 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು deemed expenditure ಎಂಬುದಾಗಿ ಮಾಡಿದ್ದಾರೆ. ಹೀಗೆ ಮಾಡಿದ ವೆಚ್ಚದ ಶೇಕಡಾ 5 ರಿಂದ 8 ರ ವರೆಗಿನ ಹಣವನ್ನು ಸರ್ಕಾರಗಳು ಬಳಸಿಕೊಂಡಿವೆ. ಇದು ನಮ್ಮ ಸರ್ಕಾರ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ಬಂದಾಗ, ಮುಖ್ಯಮಂತ್ರಿಗಳು ಕಳೆದ ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ deemed expenditure ಎಂಬುದನ್ನು ತೆಗೆದು ಹಾಕಿದರು. ಸುಮಾರು ಶೇಕಡಾ 8 ರಷ್ಟು ಹಣ deemed expenditure ಗೆ ಹೋಗುತ್ತಿದ್ದು, ಅದು ನಮ್ಮ ಯೋಜನೆಗಳಿಗೆ ಉಪಯೋಗವಾಗುವ ರೀತಿಯಲ್ಲಿ ಈ ತಿದ್ದುಪಡಿಯನ್ನು ಮಾಡಲಾಯಿತು. ಎಸ್‌ಸಿಪಿ/ಟಿಎಸ್‌ಪಿ ಹಣವನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗುತ್ತದೆ. ಆ ಇಲಾಖೆಯ ಕಾರ್ಯಕ್ರಮಗಳ ಮೂಲಕ ಅಲ್ಲಿರುವ ಫಲಾನುಭವಿಗಳಿಗೆ, ಎಸ್.ಸಿ. ಮತ್ತು ಎಸ್.ಟಿ. ಜನರಿಗೆ ಈ ಹಣವನ್ನು ಕೊಡಲಾಗುತ್ತದೆ ಹೊರತು ಈ ಹಣವನ್ನು ಬೇರೆಯವರಿಗೆ ನೀಡುವುದಕ್ಕೆ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. 2023 ನೇ ಇಸ್ವಿಯಲ್ಲಿ ನಮ್ಮ ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ, ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿರುವುದು ಎಲ್ಲರಿಗೂ ತಿಳಿದಿದೆ. ಈ ಗ್ಯಾರಂಟಿಯಡಿ ಯೋಜನೆಗಳನ್ನು ಮಾಡುವಾಗ, ಕಾಯ್ದೆಯ ಕಲಂ 7 (ಎ), (ಬಿ) ಮತ್ತು (ಸಿ) ರಡಿ there is provision. ಕಾಯ್ದೆಯಿಂದ ಕಲಂ 7 (ಡಿ) ಅನ್ನು ತೆಗೆದುಹಾಕಲಾಗಿದೆ. ಕಾಯ್ದೆಯ ಕಲಂ 7 (ಸಿ) ಅನ್ನು ಬಳಸಿಕೊಂಡು ಆ ಯೋಜನೆಯಲ್ಲಿಯ ಎಸ್.ಸಿ. ಮತ್ತು ಎಸ್.ಟಿ. ಫಲಾನುಭವಿಗಳಿಗೆ ಈ ಹಣವನ್ನು ನೀಡುವುದಕ್ಕೆ ಪ್ರಾರಂಭಿಸಿದ್ದೇವೆ. ಇದನ್ನು ಅನೇಕ ವಿರೋಧ ಪಕ್ಷದ ಸದಸ್ಯರುಗಳು ಮತ್ತು ಸಂಘಟನೆಯ ಸ್ನೇಹಿತರು ಈ ಹಣವು ಯೋಜನೆಗಳಿಗೆ ಹೋಗುತ್ತಿದೆ ಎಂದು ಪರಿಭಾವಿಸಿದ್ದಾರೆ. ಯಾವುದೇ ಕಾರಣಕ್ಕೂ ಈ ಹಣ ಸಾಮಾನ್ಯ ಯೋಜನೆಯ ಸಾಮಾನ್ಯ ಜನರ ಬಳಕೆಗಾಗಿ ಬಳಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಎರಡೂ ಸದನಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆಯನ್ನು ಅಂಗೀಕರಿಸಲಾಗಿದೆ. The provisions are very well read by the Hon'ble Members of this August House and the lower House. ಕಾಯ್ದೆಯ ಕಲಂಗಳನ್ನು ಎಲ್ಲಾ ಸದಸ್ಯರುಗಳು ಅಧ್ಯಯನ ಮಾಡಿದ್ದಾರೆ ಹಾಗೂ ಒಪ್ಪಿಕೊಂಡಿದ್ದಾರೆ. ಯೋಜನೆಗಳನ್ನು ಮಾಡುವಾಗ ಕಾಯ್ದೆಯ ಕಲಂ 7 (ಎ), (ಬಿ), (ಸಿ) ಮತ್ತು (ಡಿ) ರನ್ವಯ, ಹಣವನ್ನು ಬಳಕೆ ಮಾಡಲು ಒಪ್ಪಿಗೆಯನ್ನು ನೀಡಿದರು. ಕಾಯ್ದೆಯ ಕಲಂ 7 (ಡಿ) ರಡಿ divisible communities ಗೆ ಎಂದು ಹೇಳಿ ಖರ್ಚು ಮಾಡುವುದು ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲವೆಂದು ಎರಡೂ ಸದನದ ಸದಸ್ಯರು ಹೇಳಿದ ಮೇಲೆ, ಮುಖ್ಯಮಂತ್ರಿಗಳು ಈ ಬಗ್ಗೆ ಸಭೆಯನ್ನು

ನಡೆಸಿದರು. ಈ ಬಗ್ಗೆ ದಲಿತ ಸಂಘಟನೆಗಳೊಂದಿಗೆಯೂ ಸಹ ಚರ್ಚಿಸಿ, ಕಾಯ್ದೆಯ ಕಲಂ 7 (ಡಿ) ಅನ್ನು ತೆಗೆದು ಹಾಕಿದರು. ಕಾಂಗ್ರೆಸ್ ಪಕ್ಷದ ಸರ್ಕಾರದ ಅವಧಿಯಲ್ಲಿ ಕಳೆದ ಬಾರಿ ಐದರಿಂದ ಆರು ಸಾವಿರ ಕೋಟಿ ರೂಪಾಯಿಗಳಷ್ಟು ಹಣವು ಕಾಯ್ದೆಯ ಕಲಂ 7 (ಡಿ) ರಡಿ ಬಳಕೆ ಮಾಡಲಾಗಿದೆ. ಅದೇ ರೀತಿಯಾಗಿ ಭಾರತೀಯ ಜನತಾ ಪಕ್ಷದ ಸರ್ಕಾರವು ಅಧಿಕಾರದಲ್ಲಿದ್ದಾಗ ಎಂಟರಿಂದ ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ನಗರಾಭಿವೃದ್ಧಿ, ನೀರಾವರಿ, ಲೋಕೋಪಯೋಗಿ ಮತ್ತಿತರೆ ಪ್ರಮುಖವಾದ ಖಾತೆಗಳಿಗೆ ಕಾಯ್ದೆಯ ಕಲಂ 7 (ಡಿ) ರಡಿ ಬಳಕೆ ಮಾಡಲಾಗಿದೆ. ಈ ಕಾರಣಕ್ಕಾಗಿ ಕಾಯ್ದೆಯ ಕಲಂ 7 (ಡಿ) ರನ್ನು ರದ್ದು ಪಡಿಸಲಾಗಿದೆ. ಕಾಯ್ದೆಯ ಕಲಂ 7 (ಸಿ) ರಡಿ ಬಳಕೆ ಮಾಡಲಾಗುವ ಹಣದಲ್ಲಿ ಸುಮಾರು ಒಂಭತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಎಸ್‌ಸಿಪಿ ಯೋಜನೆಗಳಿಗಾಗಿ ಮತ್ತು ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಟಿಎಸ್‌ಪಿ ಯೋಜನೆಗಳಿಗಾಗಿ ಅಂದರೆ ಒಟ್ಟಾರೆಯಾಗಿ ಹದಿನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಇಲ್ಲಿನ ಒಂದು ಕೋಟಿ ಹತ್ತು ಲಕ್ಷ ಎಸ್‌ಸಿ ಮತ್ತು ಎಸ್‌ಟಿ ವರ್ಗದ ಫಲಾನುಭವಿಗಳಿಗೆ ತಲುಪಿಸುತ್ತಿದ್ದೇವೆ. ಒಟ್ಟಾರೆಯ ಗ್ಯಾರಂಟಿ ಯೋಜನೆಗಳಿಗೆ ಐವತ್ತೆಂಟರಿಂದ ಐವತ್ತೊಂಭತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ. ಇಷ್ಟು ಜನರಿಗೆ ಈ ಹಣವನ್ನು ಸೇರಿಸಿ ಕೊಡುತ್ತಿಲ್ಲ. 2000 ನೇ ಇಸ್ವಿಯ ಜನಗಣತಿಯ ಪ್ರಕಾರ ಶೇಕಡಾ 17.15 ರಷ್ಟು ಎಸ್‌ಸಿ ವರ್ಗದ ಜನರಿದ್ದಾರೆ ಮತ್ತು ಶೇಕಡಾ 6.95 ರಷ್ಟು ಎಸ್‌ಟಿ ವರ್ಗದ ಫಲಾನುಭವಿಗಳಿದ್ದಾರೆ. ಇವರುಗಳಿಗೆ ಮಾತ್ರವೇ ಹಣ ನೀಡಲು ಉಪಯೋಗಿಸಲಾಗಿದೆ. The Act provides for making use of the money that is being provided to those beneficiaries and nobody else. ಇದನ್ನು ಇವರುಗಳು ಯಾವ ರೀತಿಯಾಗಿ ತಿಳಿದುಕೊಳ್ಳುತ್ತಿದ್ದಾರೆಯೋ ಅಥವಾ ಇರುವುದನ್ನೆಲ್ಲಾ ನೀಡುತ್ತಿದ್ದಾರೆ ಎಂದು ತಿಳಿದುಕೊಳ್ಳುತ್ತಿದ್ದಾರೆಯೋ ಗೊತ್ತಿಲ್ಲ. ತಮಗೆ ತಿಳಿದಿರುವಂತೆ, by and large, ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಕುಟುಂಬಗಳು ನಿರ್ದಿಷ್ಟವಾದ ಮಾಸಿಕ ಆದಾಯವನ್ನು ಹೊಂದಿರದೇ ಬದುಕುತ್ತಿದ್ದಾರೆ. They are going to field and working and getting hand to mouth everyday. ನಾವು ಸಂವಿಧಾನದ ಪೀಠಿಕೆಯನ್ನು ಓದುತ್ತಿದ್ದೇವೆ; ಅದರಲ್ಲಿ ಅವರಿಗೆ ಸ್ಥಾನಮಾನ, ಘನತೆ, ಅವಕಾಶ ಮತ್ತು ಸಮಾನತೆಗಳನ್ನು ನೀಡುವಂತೆ ತಿಳಿಸಲಾಗಿದೆ. Why is this Act brought into effect? It is based on the Constitutional provisions. ನಮ್ಮ ದೇಶದ ಸಂಪತ್ತನ್ನು ಎಲ್ಲರಿಗೂ ಹಂಚಬೇಕೆಂದು ಸಂವಿಧಾನದಲ್ಲಿ ತಿಳಿಸಲಾಗಿದೆ. Based on that, this Act is being enacted. ಈ ರೀತಿಯಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಂಡ ಮೇಲೆ, ಸದರಿ ಹಣವನ್ನು ಅನ್ಯರಿಗೆ ಅನ್ಯ ಉದ್ದೇಶಕ್ಕೆ ಬಳಸುವ ಪ್ರಮೇಯವು ಇಲ್ಲವೇ ಇಲ್ಲ; ಆ ರೀತಿಯಾಗಿ ಹಣ ಬಳಸುವುದೂ ಇಲ್ಲ ಹಾಗೂ ಬಳಸಲು ಬಿಡುವುದಿಲ್ಲ. ಈ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಿ, ಎರಡೂ ಸದನದ ಸದಸ್ಯರುಗಳು ಒಪ್ಪಿಕೊಂಡು ಅಂಗೀಕಾರ ನೀಡಿದ ಕಾಯ್ದೆಯು ಇದಾಗಿದೆ. ಈ ಕಾಯ್ದೆಯ ಉದ್ದೇಶದ ವಿರುದ್ಧವಾಗಿ ಒಂದು ನಯಾ ಪೈಸೆಯೂ ಸಹ ಎಸ್‌ಸಿ ಮತ್ತು ಎಸ್‌ಟಿ ಫಲಾನುಭವಿಗಳನ್ನು

ಹೊರತುಪಡಿಸಿ, ಅನ್ಯರಿಗೆ ಉಪಯೋಗಿಸಲು ಸಾಧ್ಯವೇ ಇಲ್ಲ ಹಾಗೂ ಆ ರೀತಿಯಾಗಿ ಉಪಯೋಗಿಸಲು ಬಿಡುವುದಿಲ್ಲ. ಈ ಸ್ಪಷ್ಟತೆಯನ್ನು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕೆಂದು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ...

**ಉಪ ಸಭಾಪತಿಯವರು:-** ಇದು ಗಮನ ಸೆಳೆಯುವ ಸೂಚನೆಯಾಗಿರುವುದರಿಂದ ಕೇವಲ ಸ್ಪಷ್ಟೀಕರಣಗಳನ್ನು ಮಾತ್ರವೇ ಕೇಳಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಗಮನ ಸೆಳೆಯುವ ಸೂಚನೆಗೆ, ಸಚಿವರು ಉತ್ತರವನ್ನು ನೀಡಿದ್ದಾರೆ. ಸಚಿವರು ಸದನವನ್ನು ಮನವರಿಕೆ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದರು. ತಮ್ಮ ಮೂಲಕ ಸಚಿವರಿಗೆ ಕೇಳಬಯಸುವುದೇನೆಂದರೆ, ಈ ಗ್ಯಾರಂಟಿ ಯೋಜನೆಯು ಸಾಮಾನ್ಯ ಯೋಜನೆಯಾಗಿದೆ. ಎಸ್‌ಸಿಪಿ/ಟಿಎಸ್‌ಪಿ ಇದು ಕೇವಲ ಆ ವರ್ಗದ ಜನರಿಗೆ ಮಾತ್ರವೇ ಉಪಯೋಗಿಸಿಕೊಳ್ಳುವಂತಹ ಯೋಜನೆಯಾಗಿದೆ. ಎಸ್.ಸಿ. ವರ್ಗದಡಿ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿದವರು ಸಾಮಾನ್ಯ ಅಭ್ಯರ್ಥಿಗಿಂತಲೂ ಹೆಚ್ಚಿನ ಮತಗಳನ್ನು ಪಡೆದುಕೊಂಡರೆ ಅವರು ಸಾಮಾನ್ಯ ವರ್ಗಕ್ಕೊಳಪಡುತ್ತಾರೆ. ಇದು ಸಾಮಾನ್ಯ ಯೋಜನೆಯಾಗಿದೆ. ಅದರಿಂದಾದ ಅಡ್ಡ ಪರಿಣಾಮಗಳ ಬಗ್ಗೆ ಅವರಿಗೆ ಅರಿವು ಇದೆಯೋ ಅಥವಾ ಇಲ್ಲವೋ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಇದರಿಂದಾಗಿ ಗಂಗಾ ಕಲ್ಯಾಣ ಯೋಜನೆಯಡಿ ನೀಡಲಾಗುತ್ತಿದ್ದ ಕೋಟಾ ಕಡಿಮೆಯಾಗಿದೆ. ಅದೇ ರೀತಿಯಾಗಿ ಭೂ ಒಡೆತನದ ಕೋಟಾಗಳೂ ಸಹ ಕಡಿಮೆಯಾಗಿವೆ. ಎಸ್.ಸಿ. ಸಮುದಾಯದವರಿಗೆ ವಿದೇಶಿ ವ್ಯಾಸಂಗಕ್ಕಾಗಿ ನೀಡಲಾಗುತ್ತಿದ್ದ ಹಣದ ಮೊತ್ತವನ್ನು ಕಡಿತಗೊಳಿಸಲಾಗಿದೆ. ಇವರಿಗೆ ನೀಡಲಾಗುತ್ತಿದ್ದ ವಿದ್ಯಾರ್ಥಿ ವೇತನವನ್ನು ಕಡಿತಗೊಳಿಸುವ ಕೆಲಸಗಳನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಈ ಸಮುದಾಯದವರ ವಾಹನ ಖರೀದಿಯ ಟಾರ್ಗೆಟ್ ಅನ್ನು ಕಡಿಮೆ ಮಾಡಿದ್ದಾರೆ. ಸ್ವಯಂ ಉದ್ಯೋಗಕ್ಕಾಗಿ ನೀಡಲಾಗುತ್ತಿದ್ದ ಸಾಲದ ಟಾರ್ಗೆಟ್ ಅನ್ನೂ ಸಹ ಕಡಿಮೆ ಮಾಡಿದ್ದಾರೆ. ಈ ವರ್ಗದ ಜನರಿಗೆ ಮೀಸಲಾಗಿಡುವ ಅನುದಾನವನ್ನು ಅವರಿಗೇ ನೀಡುತ್ತಿದ್ದೇವೆ ಎಂದು ಸಚಿವರು ಹೇಳುತ್ತಿದ್ದಾರೆ. ಇದು ಸರಿಯಾದುದು. ಆದರೆ, ಗ್ಯಾರಂಟಿ ಯೋಜನೆ ಎಸ್.ಸಿ. ಮತ್ತು ಎಸ್.ಟಿ. ಜನರಿಗೆ ಮಾತ್ರವೇ ಮೀಸಲಿಟ್ಟ ಯೋಜನೆಯಲ್ಲ. ಅದು ಸಾರ್ವತ್ರಿಕ ಹಾಗೂ ಸಾಮಾನ್ಯ ಯೋಜನೆಯಾಗಿದೆ. ಇದನ್ನು ಘೋಷಣೆ ಮಾಡಬೇಕಾದ ಸಂದರ್ಭದಲ್ಲಿಯೇ ತಿಳಿಸಿದ್ದರು. ಆಗ "ಕಾಕಾ ಪಾಟೀಲ್ ನಿನಗೂ ಫ್ರೀ, ಝಮೀರ್ ಅಹಮದ್ ನಿನಗೂ ಫ್ರೀ, ಸಿ.ಟಿ.ರವಿ ನಿನಗೂ ಫ್ರೀ; ಮಹದೇವಪ್ಪ ನಿನಗೂ ಫ್ರೀ" ಎಂದು ಹೇಳಿದ್ದರು. ಆದರೆ, ಈ ಯೋಜನೆಯಡಿ ನನಗೇನೂ ಉಚಿತವಾಗಿ ನೀಡಿಲ್ಲ. ಇದನ್ನು ನಾನು ನಿರೀಕ್ಷೆ ಮಾಡುತ್ತಿದ್ದೆನು. ಆದರೆ, ನನಗೇನೂ ನೀಡಿಲ್ಲ. ಮಹದೇವಪ್ಪನವರಿಗೂ ಉಚಿತ ಎಂದು ಹೇಳಿದ ಮೇಲೆ,

(ಮುಂದು)

(598)22-07-2024/4-20/bkp **ಉಪ ಸಭಾಪತಿಯವರ ಉಪಸ್ಥಿತಿ**

**ಶ್ರೀ ಸಿ.ಟಿ.ರವಿ(ಮುಂದು..):**

Exclusive ಆಗಿ ಖರ್ಚು ಮಾಡಬೇಕಾದ ಹಣ SCSP/TSP (Scheduled Caste Sub-Plan/Tribal Sub-Plan) ಹಣ. ತಾವು ಸಚಿವರಾಗಿರುವಂತಹ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳಿಗೆ ಇದನ್ನು ಬಳಕೆ ಮಾಡಲಿಕ್ಕೆ ಬಿಡದೇ ಇದ್ದಿದ್ದರೆ, ಅಷ್ಟೂ ಹಣ ಕೇವಲ S.C./S.T. (Scheduled Caste/ Scheduled Tribe) ಸಮುದಾಯದ ಇತರೆ ಕಲ್ಯಾಣದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಕೆಯಾಗುತ್ತಿತ್ತು. ನೀವು ಗಂಗಾ ಕಲ್ಯಾಣ ಯೋಜನೆಯಲ್ಲಿ 4 ಉದ್ಯೋಗಗಳನ್ನು ಕೊಡುವ ಬದಲು 40 ಉದ್ಯೋಗಗಳನ್ನು ಕೊಡಬಹುದಿತ್ತು. ಸ್ವಯಂ ಉದ್ಯೋಗ 4 ಕೊಡುವುದನ್ನು 40 ಕೊಡಬಹುದು, ಭೂ ಒಡೆತನ ಯೋಜನೆಯಲ್ಲಿ 2 ಉದ್ಯೋಗ ಕೊಡುವ ಬದಲು 10 ಉದ್ಯೋಗಗಳನ್ನು ಕೊಡಬಹುದಿತ್ತು. ಜನರ ಸಾರ್ವತ್ರಿಕ ಉದ್ಧಾರ ಬೇಕೇ ಅಥವಾ ಅವರನ್ನು ಯಾವಾಗಲೂ ಬೇಡುವಂತಹ ಸ್ಥಿತಿಯಲ್ಲಿಡಬೇಕೇ? ಸಾರ್ವತ್ರಿಕ ಉದ್ಧಾರಕ್ಕೆ ಬಳಕೆಯಾಗಬೇಕಾಗಿರುವ ಅನುದಾನವನ್ನು ನೀವು ಸಾಮಾನ್ಯ ಯೋಜನೆಗೆ ಬಳಕೆ ಮಾಡಿರುವಂತಹದ್ದು ತಮ್ಮ ಕಾಲದಲ್ಲಿ ತಾವು ಇದನ್ನು ಪ್ರತಿಭಟಿಸದೇ ಇರತಕ್ಕಂತಹದ್ದು, ನನಗೆ ಎಲ್ಲಿಯೋ ನೋವು ತಂದಿದೆ. ನೀವು ಯಾವಾಗಲೂ ಧ್ವನಿ ಎತ್ತುವಂತಹವರು ಇಂತಹ ಸಂದರ್ಭದಲ್ಲಿ ನೀವು ಏತಕ್ಕೆ ಧ್ವನಿ ಎತ್ತಲಿಲ್ಲ? ಅಷ್ಟು ಅನುದಾನ ಆ ಸಮಾಜದ ಕಲ್ಯಾಣದ ಇತರೆ ಯೋಜನೆಗಳಿಗೆ ಬಳಕೆ ಆಗುತ್ತಿರಲಿಲ್ಲವೇ?

**ಉಪ ಸಭಾಪತಿಯವರು:-** ನೀವು ಕೇಳಿದ್ದೀರಿ, ಅದಕ್ಕೆ ಅವರು ಉತ್ತರ ಕೊಡುತ್ತಾರೆ. ಇನ್ನೂ ಕೆಲವು ಮಾನ್ಯ ಸದಸ್ಯರು ಮಾತನಾಡಿದ ಮೇಲೆ ಸಚಿವರು ಉತ್ತರವನ್ನು ಕೊಡುತ್ತಾರೆ. ಮಾನ್ಯ ಸದಸ್ಯರು ಬರಿ clarification ಅನ್ನು ಕೇಳಬೇಕು. ನೀವು ಇದರಲ್ಲಿ ಭಾಷಣ ಮಾಡುವುದು ಅಥವಾ ಬೇರೆ ಬೇರೆ ವಿಚಾರವನ್ನು ಪ್ರಸ್ತಾಪ ಮಾಡುವುದು ಬೇಡ. ನೀವು ಅವರು ಹೇಳಿರುವಂತಹ ವಿಚಾರಗಳಲ್ಲಿ ಏನಾದರೂ ಗೊಂದಲಗಳು ಇದ್ದರೆ ಅದರ ಬಗ್ಗೆ ಕೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದಕ್ಕೆ ತಮಗೆ ನಾನು ಮಾತನಾಡಲು ಸಮಯ ಬೇಕೆಂದು ಕೇಳಿದ್ದು, ಸದಸ್ಯರುಗಳಿಗೆ ವಿಷಯವನ್ನೇ ಮುಟ್ಟಿಸದೇ ಹೇಗೆ ಬೇಗ ಮುಗಿಸಲಿಕ್ಕೆ ಸಾಧ್ಯ?

**ಉಪ ಸಭಾಪತಿಯವರು:-** ನಿಮಗೆ ಸಮಯ ಸಾಕಾಗದಿದ್ದರೆ , ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ನೀಡಬೇಕಾದರೆ, ಅದನ್ನು ನಿಯಮ 72ಕ್ಕೆ convert ಮಾಡಬೇಕಾಗುತ್ತದೆ. ಇದು ತಮಗೆ ಗೊತ್ತಿರುವಂತೆ ಗಮನಸೆಳೆಯುವ ಸೂಚನೆಯಾಗಿದೆ. ಈ ಕೆಲಸವನ್ನು ನೀವು ಮಾಡಬೇಕಾಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಇದನ್ನು ಒಪ್ಪುತ್ತೇನೆ. ಇಲ್ಲಿ ಸಚಿವರು ಹೇಳಿರುವಂತಹದ್ದು ದಲಿತರಿಗೆ ಮೀಸಲಿಟ್ಟ ಹಣ ದಲಿತರಿಗೇಯೇ ಖರ್ಚು ಮಾಡುತ್ತಿದ್ದೇವೆಂದು

ಹೇಳುತ್ತಿದ್ದಾರೆ. ಇವರು ಬಹಳ ಸುಂದರವಾದ ಉತ್ತರವನ್ನು ಕೊಟ್ಟಿದ್ದಾರೆ. ನಾವು ಯಾರಿಗಾದರೂ ಅಂದರೆ, ಇದರಲ್ಲಿ ಶ್ರೀಯುತ ಸಿ.ಟಿ.ರವಿ.ಗೆ ಕೊಡಿ ಎಂದು ಹೇಳಿದ್ದೇವೆಯೇ, ಸಿದ್ದರಾಮಯ್ಯನವರಿಗೂ ಸ್ವಲ್ಪ ಕೊಡಿ ಎಂದು ನಾವು ಹೇಳಿದ್ದೇವೆಯೇ? ನೀವು ಹೇಳಿದ್ದೀರಿ, ಸರಿ. ಆದರೆ, 52,000 ಕೋಟಿ ರೂಪಾಯಿಗಳನ್ನು ಗ್ಯಾರಂಟಿಗೆ ನಾವು ಇಟ್ಟಿದ್ದೇವೆ ಎಂದು ಹೇಳಿದ್ದೇವೆ. ಆ ಗ್ಯಾರಂಟಿಗಳನ್ನು ನೀವು ಇಟ್ಟಿದ್ದಿರಲ್ಲಾ, ಅದಕ್ಕೆ ದಲಿತರು ಬಾಧ್ಯರು ಅಲ್ಲವಾ? ಬಾಧ್ಯರಾದ ಮೇಲೆ ನೀವು 52,000 ಕೋಟಿ ರೂಪಾಯಿಗಳಲ್ಲಿ ಕೊಡಬೇಕಾಗಿತ್ತು. SCSP/TSP ಹಣವನ್ನು ನೀವು ಏತಕ್ಕೆ ಇಟ್ಟಿದ್ದೀರಿ, ಆ ಸಮುದಾಯಗಳನ್ನು ನೀವು ಮೇಲೆ ಎತ್ತಬೇಕು. ಎಲ್ಲರ ಜೊತೆಯಲ್ಲಿ ಅವರು ಬೆರೆಯಬೇಕು, ಅವರಿಗೆ ವಿದ್ಯಾಬ್ಯಾಸ ಸಿಗಬೇಕು. ಆರೋಗ್ಯ ಸಿಗಬೇಕು. ಇದಕ್ಕೆಲ್ಲಾ ಹಣ ಇರಬೇಕು. ಆದರೆ, ತಾವು ಏನು ಹೇಳುತ್ತಿದ್ದೀರಿ ಎಂದರೆ ನಮಗೆ ಇನ್ನೂ ಕಾಗಕ್ಕಾ, ಗುಬ್ಬಕ್ಕಾ ಕತೆ ಹೇಳುತ್ತಿದ್ದೀರಿ. ನಾವು ಮಕ್ಕಳಲ್ಲಾ, ನಮಗೆ ಅರಿವು ಇದೆ. ನನಗೆ ಬೇಕಾಗಿರುವುದು ಏನೆಂದರೆ ನೀವು ರೂ. 11,114 ಕೋಟಿಗಳನ್ನು ಪ್ರಥಮ ವರ್ಷದಲ್ಲಿ ತೆಗೆದಿದ್ದೀರಿ. ನಾವು ಅಂದೂ ಸಹ ಕೇಳಿದೆವು. ಬೇಡವೆಂದು ಹೇಳಿದೆವು. ಈಗ ರೂ. 14,282 ಕೋಟಿಗಳನ್ನು ತೆಗೆದಿದ್ದೀರಿ. ಇದು SCSP/TSP ಯ ಮೂಲ ಆಶಯಗಳಿಗೆ ವಿರುದ್ಧವಾಗಿದೆ. ಏಕೆಂದರೆ, ಇದು ಅವರ ಅಭಿವೃದ್ಧಿಗೆ ಬಳಕೆ ಮಾಡಬೇಕೇ ಹೊರತು ಗ್ಯಾರಂಟಿಗಳಿಗೆ ಅಲ್ಲ. ಇಲ್ಲವೆಂದರೆ ಗ್ಯಾರಂಟಿಗಳನ್ನು ನಾವು ದಲಿತರಿಗೆ ಕೊಟ್ಟಿಲ್ಲವೆಂದು ನೀವು ಹೇಳಿ. ಅದು ತೀರ್ಮಾನವಾಗಲಿ. ಇಲ್ಲವೆಂದರೆ, ನಮ್ಮ ಈ ಜೇಬಿನಿಂದ ತೆಗೆದು ಆ ಜೇಬಿಗೆ ಕೊಟ್ಟರೆ, ನೀವು ಕೊಡುವಂತಹ ಗ್ಯಾರಂಟಿ ಎಂತಹದ್ದು? ಈ ರೀತಿ ಬಹಳಷ್ಟು ವಿಷಯಗಳಿದೆ.

(ಗೊಂದಲ)

**ಉಪ ಸಭಾಪತಿಯವರು;-** ಎಲ್ಲರಿಗೂ ಮಾತನಾಡಲಿಕ್ಕೂ 2 ನಿಮಿಷಗಳ ಕಾಲ ಅವಕಾಶ ಕೊಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅನೇಕ ಯೋಜನೆಗಳಲ್ಲಿ... ನೋಡಿ ಇಲ್ಲಿ. 39,121 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ನಮಗಾಗಿ ಎಂದು ಇಟ್ಟಿದ್ದೀರಿ. ಅದರಲ್ಲಿ 50% ಹಣ ಬೇರೆ ಬೇರೆ ಯೋಜನೆಗಳಿಗೆ ಹೊರಟು ಹೋಗುತ್ತದೆ. 50% ಮಾತ್ರ ಹಣ ಉಳಿಯುತ್ತದೆ. ಅದರಲ್ಲಿ ನೀವು ಗ್ಯಾರಂಟಿಗಳಿಗೆ 14,000 ಕೋಟಿ ರೂಪಾಯಿಗಳನ್ನು ನೀವು ತೆಗೆದ ಮೇಲೆ ಕನಿಷ್ಠ ನಿಮಗೆ ಉಳಿಯುವಂತಹದ್ದು 3 ಅಥವಾ 3.50 ಕೋಟಿ ರೂಪಾಯಿಗಳು ಮಾತ್ರ. ಇದರಿಂದಾಗಿ ಈ ಜನಾಂಗಗಳಿಗೆ ಸಂಪೂರ್ಣವಾಗಿ ಅನ್ಯಾಯವಾಗುತ್ತದೆ. ನನಗೆ ಅನಿಸುವುದೇನೆಂದರೆ, ಇದು ಗ್ಯಾರಂಟಿ ಯೋಜನೆಗಳು ನಾಡಿನ ಒಟ್ಟಾರೆ, ಜನಾಂಗಗಳಿಗೆ ಕೊಟ್ಟಿರುವುದೇ ಹೊರತು ಇದು ಪರಿಶಿಷ್ಟ ಜಾತಿಗಳಿಗಲ್ಲ. ಆದ್ದರಿಂದ ನನಗೆ ಇವತ್ತು ಇದು ಸಾಮಾಜಿಕ ನ್ಯಾಯದ ಅಡಿಯಲ್ಲಿ SCSP/TSP ಅನ್ನು ಇಟ್ಟಿರುವುದಾಗಿದೆ. ಆದರೆ, ಅದರ ಬದಲಿಗೆ ಈ ಸಮುದಾಯಗಳಿಗೆ ಈಗ ಸಾಮಾಜಿಕ ಅನ್ಯಾಯವಾಗುತ್ತಿದೆ.

**ಉಪ ಸಭಾಪತಿಯವರು:-** ಶ್ರೀಯುತ ನಾರಾಯಣಸ್ವಾಮಿಯವರೆ, ಉಳಿದವರು ಮಾತನಾಡಬೇಕು, ತಾವು ಕುಳಿತುಕೊಳ್ಳಿ. ಇದು ಗಮನಸೆಳೆಯುವ ಸೂಚನೆಯ ವಿಚಾರ ಎನ್ನುವುದನ್ನು ತಿಳಿದುಕೊಂಡು 2-2 ನಿಮಿಷದಲ್ಲಿ ಮಾತನಾಡಿ ಮುಗಿಸಿ. ಇದಕ್ಕೆ ಸಮಯವನ್ನು ಧೀರ್ಘವಾಗಿ ಕೊಡಲಿಕ್ಕೆ ಆಗುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಯಾವುದೇ ಕಾರಣಕ್ಕೂ ಈ ಗ್ಯಾರಂಟಿ ಯೋಜನೆಗಳಿಗೆ SCSP/TSP ಹಣವನ್ನು ಬಳಕೆ ಮಾಡಬಾರದು. ಇದು ಕಾನೂನಿಗೆ ವಿರುದ್ಧವಾಗುತ್ತದೆ. ಇದಕ್ಕೆ ರಾಷ್ಟ್ರೀಯ S.C./S.T. ಮೋರ್ಚಾದ ಕಮಿಷನ್ ಕೂಡ ಸರ್ಕಾರಕ್ಕೆ ಒಂದು ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ, ಇದು ಕಾನೂನು ಬಾಹೀರ ಮತ್ತು ಈ ಜನಾಂಗಕ್ಕೆ ಮಾಡುತ್ತಿರುವಂತಹ ದೊಡ್ಡ ಮಹಾ ದ್ರೋಹ ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈ SCSP/TSP ಹಣವನ್ನು ಸಾಮಾನ್ಯವಾಗಿ ಏತಕ್ಕೆ ಕೊಡಬೇಕು ಎನ್ನುವುದರ ಬಗ್ಗೆ ಇಲಾಖೆಯಲ್ಲಿ ನಿಖರವಾಗಿದೆ. ನೋಡಿ, ನನ್ನ ಕಾಲ ಮೇಲೆ ನಾನು ನಿಂತುಕೊಳ್ಳಬೇಕು, ಉದ್ಯೋಗ ಸೃಷ್ಟಿ ಮಾಡಬೇಕು, ಬೇರೆಯವರಿಗೂ ಉದ್ಯೋಗ ಕೊಡಬೇಕು, ಎನ್ನುವಂತಹದ್ದು ಈ ಯೋಜನೆಯ ಮೂಲ ಆಶಯವಾಗಿತ್ತು. ಅದರಲ್ಲಿ ಇರುವಂತಹದ್ದನ್ನೇ ನಾನು ಹೇಳುತ್ತೇನೆ. Screen printing. Data Processing, ಅಗರಬತ್ತಿ, ವಾಶೀಂಗ್ ಪೌಡರ್, Packaging Service, ಟೈಲರಿಂಗ್ , ಮುದ್ರಣ, ತ್ಯಾಜ್ಯ ವಸ್ತುಗಳ ವಿಲೇವಾರಿಯ ಸೇವೆ, General Engineering Steel Furniture, Wristwatch, Fabrication, Motor winding, Automobile service ಮತ್ತು ದುರಸ್ತಿ, Material Testing Centre, Technical Testing and Analysis Service, R & D (Research and Development) Centre, Maintenance and Equipment ನ ದುರಸ್ತಿ, ಜವಳಿ ಆಧಾರಿತ ಕೈಗಾರಿಕೆಗಳು ಮತ್ತು ಸಿದ್ಧ ಉಡುಪು, Spoken English class, Travel agent, ವೈಯಕ್ತಿಕ fitness ತರಬೇತುದಾರ, ಛಾಯಾಗ್ರಾಹಕರಾಗಿ venture ಅನ್ನು ಪ್ರಾರಂಭಿಸಿ, ಸಣ್ಣ ಆಟಿಕೆಗಳನ್ನು ತಯಾರಿಸಲು , ಇದರ ಜೊತೆಗೆ Beauty Parlour ಗಳು, ಇದರ ಜೊತೆ ಇನ್ನು ಕೆಲವು ಇವೆ, ನಾನು ಅದನ್ನು ಓದಲಿಕ್ಕೆ ಹೋಗುವುದಿಲ್ಲ. ನಾನು ಹೇಳುವಂತಹದ್ದು ಒಬ್ಬ ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಂತುಕೊಂಡು ಇನ್ನುಷ್ಟು ಉದ್ಯೋಗಗಳನ್ನು ಸೃಷ್ಟಿ ಮಾಡುವಂತಹ ಸಾಮರ್ಥ ಇರುವಂತಹದ್ದಕ್ಕೆ ಈ ಹಣವನ್ನು ಬಳಸಬೇಕಾಗಿತ್ತು. SCSP/TSP ಎಂದು ಹೇಳಿದರೆ ಸದಾ ಕಾಲಕ್ಕೂ ನಾನು ಬೇಡುವಂತಹವನು ಸರ್ಕಾರ ನನಗೆ ನೀನು 2000 ರೂಪಾಯಿಗಳನ್ನು ತೆಗೆದುಕೊ, ಅದರಲ್ಲಿ ನೀನು ಜೀವನ ಮಾಡು ಎನ್ನುವುದಲ್ಲ. ನಾನು ತಿಂಗಳಿಗೆ 20-25ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡಿ, ನನ್ನ ಮನೆಯಲ್ಲಿರುವ 5-6 ಮಂದಿಯನ್ನು ಸಾಕುತ್ತೇನೆ, ನಾನೇ ಒಂದಿಬ್ಬರಿಗೆ ಉದ್ಯೋಗವನ್ನು ಕೊಡುತ್ತೇನೆ

ಎನ್ನುವಂತಹ ಯೊಜನೆಗಳು. ಈ ಯೋಜನೆಗಳಿಗೆ ಹಣ ವಿಲೇವಾರಿ ಆಗಿದ್ದಿದ್ದರೆ ತುಂಬಾ ಲಾಭವಾಗುತ್ತಿತ್ತು. ಈ ಯೋಜನೆ ಬಂದ ತಕ್ಷಣವೇ ಪ್ರಾರಂಭದಲ್ಲಿ ಡಾ॥ ಹೆಚ್.ಸಿ. ಮಹದೇವಪ್ಪನವರು ಧ್ವನಿ ಎತ್ತಿದರು. ಅವರ ಧ್ವನಿಗೆ ಶ್ರೀಮಾನ್ ಮುನಿಯಪ್ಪನವರು, ಮಾನ್ಯ ಪ್ರಿಯಾಂಕ್ ಖರ್ಗೆಯವರು ಧ್ವನಿಗೂಡಿಸಲಿಲ್ಲ. ಆಗ ಅವರ ಧ್ವನಿ ಅಡಗಿ ಹೋಯಿತು. ಇದರ ಬಗ್ಗೆ ಏನಾದರೂ ಧ್ವನಿ ಎತ್ತಿ ಸರಿಯಾಗಿ ಮಾತನಾಡಿದ್ದರೆ ಈ ಯೋಜನೆಗಳನ್ನು ತಂದಿದ್ದು ಸರ್ಕಾರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಚುನಾವಣೆಯನ್ನು ಗೆಲ್ಲಬೇಕೆಂದು ಹೇಳಿ, ಚುನಾವಣೆಯನ್ನು ಗೆಲ್ಲುವುದು ಮುಖ್ಯವಾಗಿತ್ತೇ ಹೊರತು, SC/ST ಗಳನ್ನು ಅಮೂಲಾಗ್ರವಾಗಿ ಅಭಿವೃದ್ಧಿಗೊಳಿಸಿ, ಅವರ ಕಾಲಿನ ಮೇಲೆ ಅವರನ್ನು ನಿಲ್ಲಿಸಿ, ಅವರನ್ನು ಸಮರ್ಥ ಸಮಾಜದೆಡೆಗೆ ತೆಗೆದುಕೊಂಡು ಹೋಗುವಂತಹ ಸಮಾಜವನ್ನು ನಿರ್ಮಾಣ ಮಾಡುವಂತಹ ಕೆಲಸವನ್ನು ಮಾಡಲಿಲ್ಲ.

**ಉಪ ಸಭಾಪತಿಯವರು:-** ಅವರಿಬ್ಬರು ಏತಕ್ಕೆ ಧ್ವನಿಗೂಡಿಸಲಿಲ್ಲವೆಂದು ಅಮೇಲೆ ಕೇಳಬಹುದು. ತಾವು ಕುಳಿತುಕೊಳ್ಳಿ. ಶ್ರೀಯುತ ರವಿಕುಮಾರ್‌ರವರೆ, ತಾವು ಮಾತನಾಡಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಶ್ರೀಮಾನ್ ಗೋವಿಂದ ಕಾರಜೋಳರವರು ಆಗ....

**ಉಪ ಸಭಾಪತಿಯವರು:-** ತಮಗೆ ನಂತರ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು, ಸಚಿವರು ಸದನದಲ್ಲಿದ್ದು, ಅವರುಗಳೇ ಸುಮ್ಮನೆ ಕುಳಿತಿದ್ದು, ನೀವು ಸುಮ್ಮನೆ ಏತಕ್ಕೆ ಎದ್ದು ನಿಲ್ಲುತ್ತೀರಿ?

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಡಾ॥ ಹೆಚ್.ಸಿ. ಮಹದೇವಪ್ಪನವರು ಅನ್ಯ ಉದ್ದೇಶಗಳಿಗೆ ಹಣ ಖರ್ಚಾಗಿಲ್ಲ, SCSP/TSP ಮತ್ತು SC/ST ಗಳಿಗೆ ಬಳಕೆಯಾಗಿದೆ ಎಂದು ಹೇಳಿದರು. ಅಂಕಿ-ಅಂಶಗಳೇ ಹೇಳುತ್ತವೆ. ಈ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಆ ಪ್ರಕಾರವಾಗಿ 2023-24 ರಲ್ಲಿ 11,114 ಕೋಟಿ ರೂಪಾಯಿಗಳು ಅನ್ಯ ಉದ್ದೇಶಕ್ಕೆ ಖರ್ಚಾಗಿದೆ. ಪ್ರಸ್ತುತ ವರ್ಷದಲ್ಲಿ ರೂ. 14,282.58 ಖರ್ಚಾಗಿದೆ. ಒಟ್ಟಿಗೆ ಹೇಳುವುದಾದರೆ ಅನ್ಯ ಉದ್ದೇಶಗಳಿಗೆ ಖರ್ಚಾಗಿರುವಂತಹ ಹಣ ರೂ. 25,396 ಕೋಟಿ ಗಳು. ನಾನು ಈ ವಿಚಾರವಾಗಿ ಡಾ॥ ಹೆಚ್.ಸಿ. ಮಹದೇವಪ್ಪನವರು ಕೇಳಲಿಕ್ಕೆ ಬಯಸುತ್ತೇನೆ, ಇಷ್ಟು ಹಣ ಅನ್ಯ ಉದ್ದೇಶಗಳಿಗೆ ಖರ್ಚಾಗಿದೆಯಲ್ಲಾ, ಮೀಸಲಾಗಿಟ್ಟಿರುವಂತಹ ಹಣ ಎಷ್ಟು? ಬೆಳಗ್ಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. 39,191 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ನಾನು ಒಪ್ಪಿಕೊಂಡೆ. ನಮ್ಮ ಸರ್ಕಾರದಲ್ಲಿ ಕಡಿಮೆ ಇತ್ತು, ಮಾನ್ಯ ಸಿದ್ದರಾಮಯ್ಯನವರು ಬಂದ ಮೇಲೆ ಬಜೆಟ್ ಜಾಸ್ತಿಯಾಯಿತು, automatically ಅದರ ಪ್ರಮಾಣ ಜಾಸ್ತಿಯಾಗುತ್ತದೆ ನಮ್ಮ ಸರ್ಕಾರ ಇದ್ದಾಗ ನಮ್ಮ ಬಜೆಟ್ ಕಡಿಮೆ

ಇತ್ತು, ಇದೂ ಸಹ ಕಡಿಮೆ ಇರುತ್ತದೆ. ಈ ಸರ್ಕಾರ ಬಂದ ಮೇಲೆ ಬಜೆಟ್ ಜಾಸ್ತಿ ಇದೆ, ಅದರ ಪ್ರಮಾಣ ಜಾಸ್ತಿಯಾಗುತ್ತದೆ. ನಮ್ಮ ಸರ್ಕಾರ ಬಹಳ ಕಡಿಮೆ ಹಣವನ್ನು SC/ST ಗಳಿಗೆ ಕೊಟ್ಟಿದೆ, ಈ ಸರ್ಕಾರ ಬಹಳ ಜಾಸ್ತಿ ಎಂದು ಹೇಳುವಂತಿಲ್ಲ.

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೆ,

**ಶ್ರೀ ಎನ್. ರವಿಕುಮಾರ್:-** ಸರ್, ಒಂದು ನಿಮಿಷ ನಾನು ಹೇಳಲಿಕ್ಕೆ ಅವಕಾಶ ಕೊಡಿ. ತಮಗೆ ಸ್ವಲ್ಪ ಸಹನೆ ಇರಲಿ. ಶೇಕಡ 24.1%...

**ಉಪ ಸಭಾಪತಿಯವರು:-** ಸಚಿವರು ಇಲ್ಲಿಯೇ ಇದ್ದಾರೆ. ಏನಾದರೂ ಇದ್ದರೆ ಅವರು ಉತ್ತರವನ್ನು ಕೊಡುತ್ತಾರೆ. ನೀವು ಅವರಿಗೆ ಕೇಳುತ್ತಿರುವಂತಹ ಪ್ರಶ್ನೆಗಳು, ನೇರವಾಗಿ ಅವರಿಗೆ clarification ಕೇಳುತ್ತಿದ್ದೀರಿ. ಸಚಿವರು ಇದ್ದಾರೆ, ಸಚಿವರು ಇಲ್ಲದಿದ್ದಾಗ ನೀವು ಹೇಳಿದರೆ ಸರಿ. ಬಜೆಟ್ ಮಂಡಿಸಿದಂತಹ ಮುಖ್ಯಮಂತ್ರಿಗಳು ಸಹ ಇಲ್ಲಿಯೇ ಇದ್ದಾರೆ. ಅವರು ಮಾತನಾಡುತ್ತಾರೆ, ನೀವು ಕುಳಿತುಕೊಳ್ಳಿ. ಎರಡು ನಮಿಷದಲ್ಲಿ ಮುಗಿಸಿ. ಇದು ಗಮನಸೆಳೆಯುವ ಸೂಚನೆಯಾಗಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಶೇಕಡ 24.1% ರಷ್ಟು ಬಜೆಟ್ ನಲ್ಲಿ ನಿಮ್ಮ ಸರ್ಕಾರ ಇದ್ದಾಗಲೂ ಕೊಡಬೇಕು ಹಾಗೂ ಬಿಜೆಪಿ ಸರ್ಕಾರ ಇದ್ದಾಗಲೂ ಕೊಡಬೇಕು.

ಮುಂದು...

(599) 22.07.2024 04.30 ಎಸ್‌ವಿ-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):-**

ಆ ಪ್ರಕಾರ ನಾವು ಕೊಟ್ಟಿದ್ದೇವೆ, ಇವರೂ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಗ್ಯಾರಂಟಿಗಳಿಗೆ ರೂ.25,396 ಕೋಟಿ ಕೊಟ್ಟಿಲ್ಲ. ಆ ಹಣ ಸಂಪೂರ್ಣವಾಗಿ ಎಸ್.ಸಿ./ಎಸ್.ಟಿ.ಗಳಿಗೆ ಸದುಪಯೋಗವಾಗಿದೆ. ಇಲ್ಲಿ ಮಾನ್ಯ ಕೇಶವ ಪ್ರಸಾದ್ ಅವರು ಹೇಳಿದಂತೆ ಈ ಹಣ ಸಂಪೂರ್ಣವಾಗಿ ಎಸ್.ಸಿ./ಎಸ್.ಟಿ..ಗಳಿಗೆ ಬಳಕೆಯಾಗಿದ್ದರೆ ಇನ್ನೊಂದಿಷ್ಟು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಎಸ್.ಸಿ./ಎಸ್‌ಟಿ. ಸಮುದಾಯದವರು ಮೇಲೆ ಬರುತ್ತಿದ್ದರು. ಎಸ್.ಸಿ./ಎಸ್.ಟಿ. ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳು ಸಿಗುತ್ತಿದ್ದವು. ಆ ಸಮುದಾಯ ಜಾಸ್ತಿ ಇರತಕ್ಕಂತಹ ಕಾಲೋನಿಗಳಿಗೆ ಸಾಮಾಜಿಕವಾಗಿರತಕ್ಕಂತಹ ಸೌಲಭ್ಯ, ಶೈಕ್ಷಣಿಕವಾಗಿರತಕ್ಕಂತಹ ಸೌಲಭ್ಯ ಆ ಸಮುದಾಯಗಳಿಗೆ

ಹೇಗಿದೆಯೋ ಆ ಒಂದು ಸ್ಥಾನಕ್ಕೆ ತರಬಹುದಾಗಿತ್ತು. ಅಲ್ಲಿ ರೂ.25,396 ಕೋಟಿಗಳು ಕಡಿಮೆಯಾಗಿದ್ದರಿಂದ ನಮ್ಮ ಎಸ್.ಸಿ./ಎಸ್.ಟಿ.ಗಳಿಗೆ ಅನ್ಯಾಯವಾಗಿದೆ. ದ್ರೋಹ ಆಗಿದೆ.

**ಶ್ರೀ ನಜೀರ್ ಅಹಮದ್:-** ಮಾನ್ಯ ಸಭಾಪತಿಯವರೆ, ಇದು ಸ್ಪಷ್ಟೀಕರಣವೇ ಅಥವಾ ಭಾಷಣವೇ?

**ಶ್ರೀ ಎನ್.ರವಿಕುಮಾರ್:-** ಆದ್ದರಿಂದ ಈ ಸರ್ಕಾರ ಸುಳ್ಳು ಹೇಳುತ್ತಿದೆ. ರೂ.39,000 ಕೋಟಿ ಅವರಿಗೆ ಬಳಕೆ ಮಾಡಿಲ್ಲ. ರೂ.25,000 ಕೋಟಿ ಅನ್ಯ ಉದ್ದೇಶಗಳಿಗೆ ಬಳಕೆಯಾಗಿದೆ ಎನ್ನುವುದನ್ನು ನಾನು ಹೇಳುತ್ತೇನೆ. ಸೆಕ್ಷನ್ 7ಎ, 7ಬಿ, 7ಸಿ ಮತ್ತು 7ಡಿ ಇವುಗಳಲ್ಲಿ, ಸೆಕ್ಷನ್ 7ಎ, 7ಬಿ ಏನೂ ಅನ್ಯಾಯವಾಗಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸೆಕ್ಷನ್ 7ಸಿ ಮತ್ತು 7ಡಿ ಇದರೊಳಗೆ ಅನ್ಯಾಯವಾಗಿದೆ. ಅನ್ಯ ಉದ್ದೇಶಕ್ಕೆ ಬಳಕೆಯಾಗಬಾರದು ಎಂದು ಹೇಳುತ್ತದೆ. ಸೆಕ್ಷನ್ 7ಡಿ ರದ್ದು ಮಾಡಿದ್ದೇವೆ ಎಂದು ಹೇಳುತ್ತಾರೆ. ಸೆಕ್ಷನ್ 7ಡಿ ರದ್ದು ಮಾಡಿದ ಮೇಲೆ ಅನ್ಯ ಉದ್ದೇಶಗಳಿಗೆ ಅದು ಹೇಗೆ ಹೋಯಿತು? ಸೆಕ್ಷನ್ 7ಡಿ ರದ್ದು ಮಾಡಿದ ಮೇಲೆ ರೂ.15,000 ಕೋಟಿಗಳನ್ನು ಏನು ಮಾಡಿದರು?

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದನ್ನೇ ಎರಡೆರಡು, ಮೂರು-ಮೂರು ಸಲ ಹೇಳುತ್ತಿದ್ದಾರೆ. ಅವರಿಗೆ ನೀವು ಹೇಳಬೇಕಲ್ಲವೆ?

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಎರಡೆರಡು ನಿಮಿಷಗಳಲ್ಲಿ ಮುಗಿಸಬೇಕು. ಇದು ಗಮನ ಸೆಳೆಯುವ ಸೂಚನೆ. ಇಷ್ಟು ಜನರಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಅರ್ಥ ಮಾಡಿಕೊಳ್ಳಿ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತಹ ಒಂದು ವರದಿಯನ್ನು ನಾನು ಮಾನ್ಯ ಮಂತ್ರಿಯವರ ಬಳಿ ಉಲ್ಲೇಖ ಮಾಡಬಯಸುತ್ತೇನೆ. "ಪರಿಶಿಷ್ಟ ಜಾತಿ ಮಕ್ಕಳ ಪ್ರೋತ್ಸಾಹ ಧನಕ್ಕೂ ಕತ್ತರಿ"

**ಡಾ:ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಕನ್ನ.. ಕನ್ನ..

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಚಿವರೆ, ಕತ್ತರಿ ಸರ್.. ಕನ್ನ ಅಲ್ಲ. ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನಾನು ಓದುತ್ತಿದ್ದೇನೆ. ನೀವು ಅದನ್ನು ಕನ್ನ ಎಂದು ತಿಳಿದುಕೊಂಡರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಅದು ಇನ್ನೂ ದೊಡ್ಡ ಪದ. ಇಲ್ಲಿ ವಿಶೇಷವಾಗಿ ಅರ್ಥಪುಟದ ವರದಿ ಏನೆಂದು ಹೇಳುತ್ತದೆಯೆಂದರೆ...

**ಶ್ರೀ ಸಿ.ಟಿ.ರವಿ:-** ಮಾನ್ಯ ಸಚಿವರೆ, ನಾವು ಕತ್ತರಿ ಎಂದು ಹೇಳದೆವು. ನೀವು ಕನ್ನ ಎಂದು ಹೇಳದಿರಿ. ಕತ್ತರಿ ಪಿಕ್‌ಪಾಕೆಟ್ ಅವರು ಮಾಡುವುದು, ಕನ್ನ ಕಳ್ಳರು ಮಾಡುವುದು. ನೀವು ಯಾವುದಾಗಬೇಕೆಂದು ಬಯಸುತ್ತೀರಿ ಅದು ನಿಮಗೆ ಬಿಟ್ಟದ್ದು.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ನಾನು "ಪ್ರಜಾವಾಣಿ" ದಿನಪತ್ರಿಕೆಯ ವರದಿ ಓದಿದೆ. Prajavani newspaper is a highly reputed and credible daily newspaper. ನಾನು ಹೇಳುತ್ತಿದ್ದೇನೆ. ನಾನು ಓದಿದ್ದೀನಿ. ಅದಕ್ಕೆ ನೀವು ಹೇಳದಾಗ ನಾನು ಮಾತನಾಡುತ್ತಿದ್ದೇನೆ. ಓದಿದ ಮೇಲೆ ತಕ್ಷಣ ನಾನು ಅವರಿಗೆ social media ದಲ್ಲಿ ಬರೆದೆ. ಒಂದು highly credible newspaper ಈ ರೀತಿ 'ಕತ್ತರಿ' ಎಂದು ಹಾಕಿರುವುದು ಸರಿಯಲ್ಲ. ಯೋಜನೆಗಳಿಗೆ SCSP/TSP (Scheduled Caste Sub-Plan/Tribal Sub-Plan) ಹಣ ಅಲ್ಲಿರತಕ್ಕಂಥ ಎಸ್.ಸಿ./ಎಸ್.ಟಿ.ಗಳಿಗೆ ಬಿಟ್ಟು ಬೇರೆ ಯಾರಿಗೂ ತಲುಪುವುದಿಲ್ಲ. ಅದು ಸರಿಯಲ್ಲ ಎಂದು ಹೇಳ clarification ಕೊಟ್ಟಿದ್ದೇನೆ. I wanted to make that clear. I have gone through the newspaper.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಕತ್ತರಿ ಎನ್ನುವುದಕ್ಕೆ ಎರಡು ಅರ್ಥ ಬರುತ್ತದೆ. ಕಡಿತ ಮಾಡುವುದಕ್ಕೂ ಕತ್ತರಿ ಎನ್ನುವ ಪದ ಬಳಕೆಯಾಗುತ್ತದೆ.

**Dr H.C. MAHADEVAPPA:-** Hon'ble Chairman sir, whether it is 'ಕತ್ತರಿ' or 'ಕನ್ನ', both have not happened. ಈ ಬಗ್ಗೆ newspaper ನಲ್ಲ article ಬಂದಿತ್ತು. ನಾವು ತುಂಬಾ ಇಷ್ಟಪಟ್ಟು ಬಾಲ್ಯದಿಂದಲೂ ಓದುವಂತಹ credible newspaper. ಅದಕ್ಕೆ ನಾನು clarify ಮಾಡಿ, social media ದಲ್ಲಿ ಇದು ಸರಿಯಲ್ಲ ಎಂದು request ಮಾಡಿದ್ದೇನೆ.

ಮಾನ್ಯ ಸಭಾಪತಿಯವರೆ, the word 'Dalit' is not an unparliamentary word. "ದಲಿತ" ಎನ್ನುವ ಪದ ಮಹಾರಾಷ್ಟ್ರದಲ್ಲಿ ಹುಟ್ಟಿತು. ಮಹಾತ್ಮ ಫುಲೆಯವರು ಶೋಷಿತ ವರ್ಗಗಳಿಗೆ, it is unorganized, broken or divided ಎಂದು ಇಂತಹ ಸಮುದಾಯಗಳಿಗೆ "ದಲಿತ" ಎನ್ನುವ ಪದ ಬಳಕೆಯಾಯಿತು. The word 'Dalit' is not an unparliamentary word. ಸಂವಿಧಾನದಲ್ಲಿರುವುದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ. ಅದನ್ನು ನಾವು ಪ್ರಾಕ್ಟಿಸ್ ಮಾಡಬೇಕು. ಬಹಳಷ್ಟು ಸಾರಿ ಜಾತಿ ವ್ಯವಸ್ಥೆಯಲ್ಲಿ ಮೇಲ್ಜಾತಿಯವರು, ಕೀಳುಜಾತಿಯವರು ಎಂದು ಇದೆ. ಅದರಲ್ಲಿ ಮೇಲು, ಕೀಳು ಎಂದು ಇಲ್ಲ. ಕೇವಲ ಮುಂದುವರೆದವರು,

ಹಿಂದುಳಿದವರು. **XXX XXX** ಎನ್ನುತ್ತಾರೆ. ಅದು unparliamentary word. ಹಾಗಾಗಿ ನಾವು ಸ್ವಲ್ಪ ಸರಿಯಾಗಿ practice ಮಾಡಬೇಕು. This House is a House of Lords. ನನಗೂ ಬೇಕಾದಷ್ಟು ಗೊತ್ತಿಲ್ಲ. ತಿಳಿದುಕೊಂಡು ಮಾತನಾಡಬೇಕು. ಅಷ್ಟೇ ನನ್ನ ಮನವಿ.

ಅವರು quote ಮಾಡುತ್ತಿರುವ ವರದಿಯನ್ನು ನಾನು ತಕ್ಷಣ ಓದಿದೆ. Every day, I go through the newspaper. ಇದು ಸರಿಯಿಲ್ಲ ಎಂದು ಹೇಳಿ ನಾನು react ಮಾಡಿದೆ. ಈ ಗ್ಯಾರಂಟಿಗಳ ಬಗ್ಗೆ ಮಾನ್ಯ ಸದಸ್ಯರು ಇಟ್ಟಿರತಕ್ಕಂಥ ಭಾವನೆಯು ಸತ್ಯಕ್ಕೆ ದೂರವಾದುದು. ಏಕೆಂದರೆ ವರ್ಷಗಟ್ಟಲೆ ಇದೇ ಚರ್ಚೆ ನಡೆಯುತ್ತಿದೆ. ನಮ್ಮ ಮುಖ್ಯಮಂತ್ರಿಗಳು ಹೇಳಿದರು. ನಾವು ಹೇಳಿದ್ದೇವೆ. Time and again, the question is being raised and the answer is given repeatedly. We have to go through the Act and its provisions. ನೀವು ಎಷ್ಟು ಸರಿ ಬೇಕಾದರೂ ಮಾತನಾಡಿ. I have no objection for it.

**ಉಪ ಸಭಾಪತಿಯವರು:-** ಅಜೆಂಡಾದಲ್ಲಿ ಅವಕಾಶ ಮಾಡಬೇಕಾಗುತ್ತದೆ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ, ಕುಳಿತುಕೊಳ್ಳಿ. ನಿಮಗೆ ಈಗಾಗಲೇ ಅವಕಾಶ ಕೊಟ್ಟಾಗಿದೆ. ನೀವು ಮಾತನಾಡಿದ್ದೀರಿ. ನೋಡಿ... ನಿಮಗೆ ಈಗಾಗಲೇ clarification ಎಂದು ಹೇಳಿ ಜಾಸ್ತಿ ಅವಕಾಶವನ್ನು ಕೊಡಲಾಗಿದೆ. ಅದನ್ನು ಮೀರಿ ನೀವು ಮಾತನಾಡಿದರೆ ಏನು ಅರ್ಥ? ಬೇಡ.. ಬೇಡ.. ಕುಳಿತುಕೊಳ್ಳಿ.

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಇವರೆಲ್ಲ ಬಹಳ ಕಾಳಜಿ ಇಟ್ಟಿದ್ದಾರೆ. 2018-19 deemed expenditure ನಲ್ಲಿ 6%, 2020-21 ರಲ್ಲಿ 8%, 2021-22 ರಲ್ಲಿ 10%, 2022-23ರಲ್ಲಿ 8% ಈ ದುಡ್ಡು ದಲಿತರದ್ದು ಹೋಗುತ್ತದೆ ಎನ್ನುವುದು ಗೊತ್ತಿರಲಿಲ್ಲವೆ? ಇವರ ಸರ್ಕಾರ ಇದ್ದಾಗ ಮಾಡಿದ್ದರಲ್ಲ... **(ಗೊಂದಲ)** Why have they not raised it? Why were they mum?

**(ಗೊಂದಲ)**

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಉಪ ಸಭಾಪತಿಯವರು:-** ಮಾನ್ಯ ಮಹದೇವಪ್ಪನವರೆ, ನೀವು ಕೊನೆಯಲ್ಲಿ ಉತ್ತರ ಕೊಡಿ. ಈಗ ಕುಳಿತುಕೊಳ್ಳಿ.

**ಶ್ರೀ ಸಿ.ಟಿ.ರವಿ:-** ನೀವು ಅದನ್ನು endorse ಮಾಡುತ್ತೀರಾ? ನೀವು ಇದನ್ನು ಬಳಕೆ ಮಾಡಿಕೊಳ್ಳುವುದು ತಪ್ಪು ಎನ್ನುವಿರೋ, ಸರಿ ಎನ್ನುವಿರೋ? ಯಾರು ಮಾಡಿದರೂ ಸರಿಯಲ್ಲ. ತಪ್ಪು ಎಂದು ಹೇಳಿ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ನೋಡಿ, ಹೀಗೆ ಮಾತನಾಡುತ್ತಾ ಹೋದರೆ ಸಮಯ ವ್ಯರ್ಥವಾಗುತ್ತದೆ. ಕೊನೆಯಲ್ಲಿ ನೀವು ಉತ್ತರ ಕೊಡುವ ವೇಳೆಯಲ್ಲಿ ನಾನು ಅವರಿಗೆ ಅವಕಾಶ ಕೊಡುವುದಿಲ್ಲ. ನೀವು ಕೊನೆಯಲ್ಲಿ conclude ಮಾಡಿ...

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ, ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದು ಬೇಡ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಮಾನ್ಯ ಛಲವಾದಿ ಟಿ ನಾರಾಯಣಸ್ವಾಮಿಯವರು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ನಾನು ಸಚಿವರಲ್ಲಿ ಬಹಳ ಸ್ಪಷ್ಟವಾದಂತಹ clarification ಗಳನ್ನು ಕೇಳುತ್ತಿದ್ದೇನೆ.

ಮಾನ್ಯ ಸಚಿವರೆ, ದಿನಾಂಕ 11.07.2024ಕ್ಕೆ ತಮ್ಮ ಸರ್ಕಾರ ಯೋಜನಾ ಇಲಾಖೆಯ ವ್ಯಾಪ್ತಿಗೆ ಪ್ರದೇಶಾಭಿವೃದ್ಧಿ ಮಂಡಳಿಗಳಲ್ಲಿ ಯಾವ ರೀತಿಯಾಗಿ ಹಣ ವೆಚ್ಚ ಆಗಬೇಕು ಎನ್ನುವ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದು, SCSP/TSP ಹಣವನ್ನು asset creation ಗಾಗಿ ಖರ್ಚು ಮಾಡಬೇಕು. ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಸೆಕ್ಷನ್ 7 ಎ ಮತ್ತು 7 ಬಿ ಅಡಿಯಲ್ಲಿ ವೆಚ್ಚವನ್ನು ಮಾಡಬೇಕೆಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ತಾವು ಅದನ್ನು social welfare schemes ಎಂದು ಕರೆಯುತ್ತೀರೋ ಏನೋ ನನಗೆ ಗೊತ್ತಿಲ್ಲ. ಆದರೆ ಜನಜನಿತವಾಗಿರುವ ಪದ ಏನೆಂದರೆ ಗ್ಯಾರಂಟಿ. ತಾವು ತಮ್ಮ ಅನುಕೂಲಕ್ಕೆ ಸರಿಯಾಗಿ social welfare schemes ಎಂಬ ಹೆಸರಿನಲ್ಲಿ ಆ ಹಣವನ್ನು ಯಾವುದಕ್ಕೆ ಬಳಕೆ ಮಾಡಿದರೂ ಅದು ಎಸ್.ಸಿ./ಎಸ್.ಟಿ.ಗಳಿಗೆ ಬಳಕೆಯಾಗುವ ಹಣ ಎಂದು ನೀವು ನಿಮ್ಮ ಪರಿಭಾಷೆಯಲ್ಲಿ justification ಕೊಡಬಹುದು. ಏಕೆಂದರೆ ಇಲ್ಲಿಯವರೆವಿಗೂ ಅದನ್ನೇ ಮಾಡಿದ್ದೀರಿ.

ಪತ್ರಿಕೆಯ ವರದಿಯಲ್ಲಿ ಬಹಳ ಸ್ಪಷ್ಟವಾಗಿರುವುದು ಏನೆಂದರೆ ಗೃಹಲಕ್ಷ್ಮಿ ಯೋಜನೆಗೆ SCSP/TSP ಯ ರೂ.7,891 ಕೋಟಿಗಳ ಹಣ ಬಳಕೆ. ಗೃಹಜ್ಯೋತಿ ಯೋಜನೆಗೆ SCSP/TSP ಯ ರೂ 2,585.93 ಕೋಟಿಗಳ ಬಳಕೆ, ಅನ್ನಭಾಗ್ಯ ಯೋಜನೆಗೆ SCSP/TSP ರೂ.448.15 ಕೋಟಿಗಳ ಬಳಕೆ, ಅನ್ನಭಾಗ್ಯ ಯೋಜನೆ DBT (Direct Benefit Transfer)ಗಾಗಿ ಹೆಚ್ಚುವರಿ ಅಕ್ಕಿಯನ್ನು ಕೊಡುವುದಕ್ಕೋಸ್ಕರ ರೂ.2,187 ಕೋಟಿಗಳ ಬಳಕೆಯಾಗಿದೆ.

(ಮುಂದು)

(600) 22-07-2024 (4.40) ಕೆಜಿ ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):-**

ಶಕ್ತಿ ಯೋಜನೆಗೆ SCP-TSP (Special Component Plan and Tribal Sub Plan) ಯ ರೂ.1,451.45 ಕೋಟಿಗಳ ಬಳಕೆ, ಯುವನಿಧಿ ಯೋಜನೆಗೆ SCP-TSP ಯ ರೂ.175.50 ಕೋಟಿಗಳ ಬಳಕೆ. ಒಟ್ಟು ಇಷ್ಟು ಹಣವನ್ನು SCP-TSP ಯಲ್ಲಿ ಅವರದ್ದೇ ನಿಬಂಧನೆ ಸುತ್ತೋಲೆಗಳಲ್ಲಿ ಕೊಟ್ಟಿರುವಂತಹದ್ದು, ಹಿಂದುಳಿದ ಪಂಗಡಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಟ್ಟು asset creation ಗೆ, ಅವರ ಶಿಕ್ಷಣಕ್ಕೆ, ಗಂಗಾ ಕಲ್ಯಾಣ ಯೋಜನೆ ಇತ್ಯಾದಿಗಳಿಗೆ ನಾವು ಬಳಸಬೇಕೆಂದು ಇದ್ದಂತಹ ಷರತ್ತನ್ನು Social Welfare Scheme ಗಳಿಗೆ ಅವರು ಗ್ಯಾರಂಟಿ ಎಂದು ಏನು ಕರೆಯುತ್ತಾರೆ, ಅದಕ್ಕೆ ಇಷ್ಟು ಹಣವನ್ನು ಬಳಕೆ ಮಾಡಿರುವಂತಹದ್ದು, ನಾವೇ ಮಾಡಿರುವಂತಹ ಕಾನೂನು. ಯಾವುದಕೋಸ್ಕರ ಬಳಕೆ ಮಾಡಬೇಕೆಂದು ಮಾಡಿರುವಂತಹ ಕಾನೂನಿನಲ್ಲಿ **(ಗೊಂದಲ)** ಉಲ್ಲಂಘನೆಯಾಗಿದೆಯೋ ಅಥವಾ ಆಗಿಲ್ಲವೋ.,

**ಉಪ ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೇ, ಈಗ ತಾವು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ಮಾನ್ಯ ಸಚಿವರಿಂದ ಏಕೆ ಉಪಯೋಗ ಮಾಡಿದ್ದೀರಿ ಎಂದು ಉತ್ತರ ಕೇಳೋಣ. ಈಗ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ತಾವು ಮಾತನಾಡಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಇಷ್ಟು ಹಣ ಎನ್ನುವಂಥದ್ದನ್ನು ಮಾನ್ಯ ಸಚಿವರು ವಿವರಣೆ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ ಸರ್ಕಾರ ತಂದಿರುವಂತಹ Karnataka Scheduled Castes Sub-Allocation & Tribal-Sub Allocation Act 2013 ರಲ್ಲಿ ಪ್ರಮುಖವಾಗಿ **(ಗೊಂದಲ)** ಎರಡು ಸೆಕ್ಷನ್‌ಗಳು ಮುಖ್ಯವಾಗಿವೆ. ಒಂದು ಸೆಕ್ಷನ್ 7 ಹಾಗೂ ಇನ್ನೊಂದು ಸೆಕ್ಷನ್ 13. ಸೆಕ್ಷನ್ 7 ರಲ್ಲಿ, Section 7 (a), 7(b), 7(c) and 7(d) ಎಂದು ಇದೆ. **(ಗೊಂದಲ)**

ಅದರಲ್ಲಿ ಇತ್ತಿಚೆಗೆ section 7(d) ರಲ್ಲಿ deemed expenditure ಏನಿತ್ತು, ಅದಕ್ಕೆ ಸಂಬಂಧಪಟ್ಟಂತೆ ಸ್ವತಃ section 7(d) ಅನ್ನು delete ಮಾಡಿದ್ದಾರೆ. ಇನ್ನು section 7 (a) ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ವ್ಯಕ್ತಿಯಾಗಬಹುದು ಅಥವಾ ಅವರ ಕುಟುಂಬಕ್ಕೆ ಸಂಬಂಧಪಟ್ಟಂತೆ, ವೈಯಕ್ತಿಕ ಅಭಿವೃದ್ಧಿಗೂ ಸಂಬಂಧಪಟ್ಟಂತೆಯೂ ಸಹ ಹಣವನ್ನು ಬಳಕೆ ಮಾಡಬಹುದು ಎಂದು ಹೇಳುತ್ತದೆ. section 7 (b) ನಲ್ಲಿ ಕಾಲೋನಿಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ, ಅಭಿವೃದ್ಧಿಮಾಡಬೇಕೆಂದು ಹೇಳುತ್ತದೆ. section 7 (ಸಿ) ನಲ್ಲಿ ಸಮಾಜಿಕ ವಲಯದಲ್ಲಿ ಅಭಿವೃದ್ಧಿ ಕೈಗೊಳ್ಳಬೇಕೆಂದು ಇದೆ. ಇದೇರೀತಿಯಾಗಿ ಕೇಂದ್ರ ಸರ್ಕಾರ ಸಹ Ministry of Social Justice and Empowerment ನಲ್ಲಿಯೂ ಸಹ ಸಾಕಷ್ಟು ರೀತಿಯಲ್ಲಿ ಶೈಕ್ಷಣಿಕ ಯೋಜನೆಗೆ ಸಂಬಂಧಪಟ್ಟಂತೆ, ಅದು ರಾಷ್ಟ್ರೀಯ ವಿದ್ಯಾರ್ಥಿ ವೇತನ ಇರಬಹುದು, pre and post metric hostels ಇರಬಹುದು, ಹಾಸ್ಟೆಲ್‌ಗಳ ನಿರ್ಮಾಣ ಇರಬಹುದು, ಅದೇರೀತಿಯ ಆರ್ಥಿಕ ಚೇತನ ಯೋಜನೆಯ SC-ST ಗೆ *National* Scheduled Castes *Finance and Development Corporation (NSFDC*) ಇರಬಹುದು, National *Safai Karamcharis Finance & Development Corporation* (NSKFDC) ಇರಬಹುದು, ಇದಕ್ಕೆಲ್ಲಾ ಸಂಬಂಧಪಟ್ಟಂತೆ, ಸಾಕಷ್ಟು ರೀತಿಯಲ್ಲಿ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯದಲ್ಲಿಯೂ ಸಹ ಸಾಕಷ್ಟು ಅನುದಾನ ಸರ್ಕಾರಕ್ಕೆ ಬರುತ್ತದೆ. ಇದನ್ನೆಲ್ಲಾ ಸೇರಿಯೇ ಅವರು ಮಾಡತಕ್ಕಂತಹದ್ದು, ಈ ರೀತಿ ಮಾಡಿದಂತಹ ಹಣ ಏನಿದೆ, ತಾವು ಯಾವ ರೀತಿಯಾಗಿ Section 7(a), 7(b) and 7(c) ಕೂಡ 5 ಗ್ಯಾರಂಟಿಗಳಗೆ ರೂ.14,000/- ಕೋಟಿಗಳನ್ನು ವರ್ಗಾವಣೆ ಮಾಡುತ್ತಾರೆ, ಅದನ್ನು ಯಾವ ರೀತಿ justify ಮಾಡುತ್ತಾರೆ? ಇದು ಕಾನೂನು ಅಡಿಯಲ್ಲಿ ಆಗಿರುವಂತಹದ್ದು, ಇದು ಕಾನೂನಿನ ಒಂದು ಆಕ್ಟ್‌ನ ಅಡಿಯಲ್ಲಿ ಆಗಿರುವಂತಹದ್ದನ್ನು ಯಾವ ರೀತಿ ಮಾಡುತ್ತಾರೆ? ಈಗ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್ ರವರು ಹೇಳದಂತೆ, ಎಷ್ಟೋ ಜನರು ಗಂಗಾ ಕಲ್ಯಾಣದ ಯೋಜನೆಯದ್ದು ಇರಬಹುದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಕೊಂಡುಕೊಳ್ಳುವಂತಹ ಜಮೀನು ಇರಬಹುದು, ಎಲ್ಲದಕ್ಕೂ ಸಹ ಸಾಕಷ್ಟು ಸಂಖ್ಯೆಯಲ್ಲಿ ಸಂಖ್ಯೆ ಕಡಿಮೆಯಾಗಿದೆ. ಫಲಾನುಭವಿಗಳ ಆಯ್ಕೆ ಸಹ ಕಷ್ಟವಾಗುತ್ತದೆ. ಈ ರೀತಿ ಇದ್ದಾಗ, ಸರ್ಕಾರ ಮಾಡುವುದು ಸರಿಯೇ? ಮಾನ್ಯ ಮುಖ್ಯ ಮಂತ್ರಿಯರು ಸದನದಲ್ಲಿ ಇದ್ದಾರೆ, ಅವರ ಗಮನಕ್ಕೆ ತರುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ತಾವು ಇನ್ನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಮುಖ್ಯಮಂತ್ರಿಯವರು ಕಳೆದ ಬಜೆಟ್‌ನಲ್ಲಿ ಮಕ್ಕಳ ಏಳಗೆಗಾಗಿ Child Budget ಎಂದು ಮಾಡಿದ್ದರು. ಮಹಿಳಾ ಸಬಲೀಕರಣಕ್ಕೆ Gender Budget ಎಂದು ಮಾಡಿದ್ದರು. ಪ್ರತ್ಯೇಕವಾಗಿ ತೆಗೆದು ಇಟ್ಟಿರುವಂತಹ ಹಣವನ್ನು ಯಾವ ರೀತಿಯಾಗಿ ಅದನ್ನು ಬೇರೆ ರೀತಿಯಲ್ಲಿ ವರ್ಗಾವಣೆ ಮಾಡುತ್ತಾರೆ? Non-lapsable, non-transferable ಇರುವಂತಹದ್ದನ್ನು

ಸರ್ಕಾರ ಎಲ್ಲೋ ಒಂದು ಕಡೆ ಉಲ್ಲಂಘನೆ ಮಾಡಿ, ಈ ಹಣವನ್ನು ಬಹುಶಃ ದುರುಪಯೋಗ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆ ಹಣವನ್ನು ಬೇರೆ ರೀತಿಯಲ್ಲಿ ಉಪಯೋಗ ಮಾಡಿ asset creation ಗೆ ಎಷ್ಟು ಇರಬೇಕಾಗಿತ್ತೋ ಅಷ್ಟನ್ನು ಸಹ ಮಾಡಲಿಲ್ಲ. ಪ್ರತ್ಯೇಕವಾಗಿ ಅದಕ್ಕೆ ಕೊಡಬಹುದಾಗಿತ್ತೋ ಏನೋ ಎನ್ನುವುದು ನನ್ನ ಭಾವನೆ. ಈ ದೃಷ್ಟಿಯಲ್ಲಿ ವರ್ಗಾವಣೆ ಮಾಡಿರುವಂತಹದ್ದು ಸರಿಯಲ್ಲ ಎನ್ನುವುದು ನನ್ನ ಭಾವನೆ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರಾದ ಡಾ॥ ಹೆಚ್.ಸಿ.ಮಹದೇವಪ್ಪನವರು Karnataka Scheduled Castes Sub-Allocation & Tribal-Sub Allocation Act ನ Section 7(a), 7(b), 7(c) and 7(d) ಗಳ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ನಾವು Section 7(d) deemed expenditure ಅನ್ನು ತೆಗೆದುಹಾಕಿದ್ದೇವೆಂದು ಹೇಳಿದ್ದಾರೆ. ಸರಿ. ಆದರೆ, ರೂ.39,000 ಕೋಟಿಗಳು SCP-TSP ಗೆ ಮೀಸಲಾಗಿರುವಂತಹ ಹಣ. ಇದರಲ್ಲಿ ಬರಿ ರೂ.14,000 ಕೋಟಿಗಳನ್ನು SCP-TSP ರವರಿಗೆ ಗ್ಯಾರಂಟಿಯಲ್ಲಿ ಖರ್ಚು ಮಾಡಲಾಗಿದೆ. ಅವರು ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದಾರೆ. ಅವರು ಗ್ಯಾರಂಟಿಗಳನ್ನು ಕೊಡಲಿ, ಅದು ಬೇರೆ ವಿಷಯ. ಆದರೆ, ಇವತ್ತು ಎಸ್‌ಸಿ/ಎಸ್‌ಟಿಯವರಿಗೆ ಅನ್ಯಾಯವಾಗುತ್ತಿದೆ. ರೂ.39,000 ಕೋಟಿಗಳ ಪೂರ್ತಿ ಹಣ ಸೇರಬೇಕಾಗಿರುವಂತಹ SCP-TSP ಯೋಜನೆಯಡಿಯಲ್ಲಿ, ಇದು ಬರಿ ರೂ.12,000 ಕೋಟಿಗಳು ಗ್ಯಾರಂಟಿಗಳ ಯೋಜನೆಗಳಿಗೆ ಖರ್ಚು ಮಾಡಿದ್ದಾರೆ. ಉಳಿದ ರೂ.12,000 ಕೋಟಿ ರೂಪಾಯಿಗಳು ಖರ್ಚು ಮಾಡಿದರೆ, 39 ಸಾವಿರ ಕೋಟಿ ರೂಪಾಯಿಗಳು ಅನ್ಯಾಯ ಮಾಡಿದಂತೆ ಆಯಿತು ಅಲ್ಲವೇ; ಇದರ ಜೊತೆಯಲ್ಲಿ ಗಂಗಾ ಕಲ್ಯಾಣ ಯೋಜನೆ. ಇವತ್ತು ನಿಗಮಗಳಲ್ಲಿ ಭೋವಿ ಅಭಿವೃದ್ಧಿ ನಿಗಮ ಇರಬಹುದು, ಬಂಜಾರ ಅಭಿವೃದ್ಧಿ ನಿಗಮ ಇರಬಹುದು, ವಾಲ್ಮೀಕಿ ಅಭಿವೃದ್ಧಿ ನಿಗಮ ಇರಬಹುದು ಹಾಗೂ ಇನ್ನಿತರೆ SC-ST ನಲ್ಲಿ ಬರತಕ್ಕಂತಹ ನಿಗಮಗಳು ಇರಬಹುದು. ಅಲ್ಲಿಯೂ ಸಹ ಯಾವ ಯೋಜನೆಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಕೊಡಬೇಕಾಗಿತ್ತೋ, ಅಷ್ಟು ಫಲಾನುಭವಿಗಳಿಗೆ ಕೊಡುವುದಕ್ಕೆ ಸರ್ಕಾರದಿಂದ ಆಗುತ್ತಿಲ್ಲ. ಇದು ಒಂದು.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಇವತ್ತು ಮಕ್ಕಳ scholarship, ಮಕ್ಕಳ ಶಿಕ್ಷಣ ಮುಖ್ಯ. ಸರ್ಕಾರ ಮಕ್ಕಳಿಗೆ scholarship ಅನ್ನು ಸಹ ಸರಿಯಾದ ರೀತಿಯಲ್ಲಿ ಕೊಡುವುದಕ್ಕೆ ಆಗುತ್ತಿಲ್ಲ. Monthly ಕೊಡಬೇಕಾಗಿತ್ತು. ಅದು ತಡವಾಗಿ ಆ ಕಡೆಯಿಂದ, ಈ ಕಡೆಯಿಂದ ಹೋಗಿ ಮಕ್ಕಳು ಒದ್ದಾಡುತ್ತಿದ್ದಾರೆ. ಈ ರೀತಿಯಾಗಿ ಇವತ್ತಿನ ದಿವಸ ಎಸ್‌ಸಿ/ಎಸ್‌ಟಿಯವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ ಎಂದು ನಾನು clarification ಕೊಡುತ್ತೇನೆ. ನಾನು ಇದನ್ನು ಹೇಳಿ, ಇವತ್ತು ನಮ್ಮ ಪಕ್ಷದ ಕಡೆಯಿಂದ, ನಮ್ಮ ಸದಸ್ಯರ ಕಡೆಯಿಂದ ನಾನು ಇವತ್ತು boycott ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಈಗ ನಾವು ಚರ್ಚೆ ಮಾಡುತ್ತಿದ್ದೇವೆ. ಇವತ್ತು ನಾವು ನಮ್ಮ ಗ್ಯಾರಂಟಿಗಳಲ್ಲಿ ಏನು ಹೇಳಿದ್ದೇವೆ.,

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಉತ್ತರ ಕೊಡಬಾರದು. ತಾವು ಮಾನ್ಯ ಸಚಿವರಿಂದ clarification ಕೇಳಬಹುದಷ್ಟೇ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು clarification ಕೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು clarification ಕೇಳಿ. ತಾವು ಅವರಿಗೆ counter ಆಗಬಾರದು.

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾವು ಗ್ಯಾರಂಟಿಗಳನ್ನು ದುರಪಯೋಗ ಮಾಡುತ್ತಿದ್ದೇವೆಂದು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ನೀತಿ ಆಯೋಗ guidelines ಏನಿದೆ, ಆ guidelines ಪ್ರಕಾರ, ಅದರ ಭಾಗವನ್ನು ಸದನಕ್ಕೆ ಓದಿ ತಿಳಿಸುತ್ತೇನೆ.

***"Earmarking against overall allocation of CSSs and CSs and not against total budget of the Ministries/Departments***

*Earmarking should be against the overall allocation for schemes of the Ministries/Departments and not against the total budget of the concerned Ministries/Departments over and above the overall allocation for the schemes. However, the Ministries/Departments will have flexibility to allocate funds for SCs and STs for specific activities within their overall budget, in case their existing schemes are not amenable to or do not have the scope for any such activities for SCs and STs."*

ಇದು ನೀತಿ ಆಯೋಗದ guidelines ಪ್ರಕಾರ,

ಮಾನ್ಯ ಸಭಾಪತಿಯವರೇ, ಇನ್ನೊಂದು

*"(iii) All the Ministries/Departments which fall in the category II (Identified by the Task Force) i.e. earmarking of funds in the range of 0-15% for SCSP and 0-7.5% for TSP should earmark at least minimum of 8.3% for DAPSC and 4.3% for DAPST (as per 2011 Census).*

*(iv) Ministries/Departments which are earmarking funds only for SCs at present should also earmark funds for STs and vice versa except the nodal Ministries...."*

ಇದು ಕೇಂದ್ರ ಸರ್ಕಾರದ ನೀತಿ ಆಯೋಗದ guidelines. ಈ guidelines ಪ್ರಕಾರ, ನಾವು ಗ್ಯಾರಂಟಿಗಳನ್ನಾದರೂ ಕೊಡುತ್ತೇವೆ, ಸ್ಕೀಮ್‌ಗಳನ್ನಾದರೂ ಕೊಡುತ್ತೇವೆ, ಎಸ್‌ಸಿ/ಎಸ್‌ಟಿಯವರಿಗೆ ಉಪಯೋಗವಾಗುವಂತಹ funds ಏನಿದೆ, ಅದನ್ನು ಉಪಯೋಗ ಮಾಡುತ್ತೇವೆ. ಅವರು ಇದನ್ನು ದುರುಪಯೋಗ ಮಾಡುತ್ತಿದ್ದೇವೆ, ಎಸ್‌ಸಿ/ಎಸ್‌ಟಿಯವರಿಗೆ ಕಡಿಮೆ ಕೊಡುತ್ತಿದ್ದೇವೆಂದು ಹೇಳಿದರೆ ಹೇಗೆ? ಇದು ನೀತಿ ಆಯೋಗ guidelines.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ನೀತಿ ಆಯೋಗವನ್ನು ಪ್ರಶ್ನೆ ಮಾಡಿಲ್ಲ. **(ಗೊಂದಲ)** ಅವರು ಅದನ್ನೇ ಕೊಡುತ್ತಿದ್ದಾರೆ. ಅವರಿಗೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ, ಅದು ನಮ್ಮ ಪ್ರಶ್ನೆಯಲ್ಲ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಗ್ಯಾರಂಟಿಗಳಿಗೆ ಎಸ್‌ಸಿ/ಎಸ್‌ಟಿ ಹಣ **(ಗೊಂದಲ)** ಬಳಸಿದ್ದಾರೆಯೇ ಅಥವಾ ಇಲ್ಲವೇ ಅದನ್ನು ಹೇಳಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ತಾವು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪೂರ್ ಹಾಗೂ ಛಲವಾದಿ ಟಿ. ನಾರಾಯಣಸ್ವಾಮಿಯವರು ಒಟ್ಟಿಗೆ ಎದ್ದು ನಿಂತು ಮಾತನಾಡತೊಡಗಿದರು)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದು ಸುಳ್ಳು.,

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸುಳ್ಳನ್ನು ತೆಗೆದು.

**(ಗೊಂದಲ)**

**ಶ್ರೀ ಎನ್‌ಎಸ್.ಬೋಸರಾಜ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು 5-6 ಜನ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರುಗಳು ಮಾತನಾಡುವಾಗ ನಾವು ಯಾರು ಮಾತನಾಡಲಿಲ್ಲ. ಈಗ ನಮ್ಮ ಕಡೆಯ ಸದಸ್ಯರು ಮಾತನಾಡುತ್ತಿದ್ದಾರೆ. ಆ ಕಡೆ ಎಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. ಬಿಜೆಪಿಯವರು ಯಾವಾಗಲೂ ಇದೇರೀತಿ ಮಾಡುವುದು.,

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ತಾಳ್ಮೆಯಿಂದ ಕೇಳಿ. ನಂತರ ಏನಾದರೂ clarifications ಇದ್ದರೆ, ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ಮಧ್ಯದಲ್ಲಿ ಕೇಳಿ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು boycott ಮಾಡುತ್ತೇವೆಂದು ಹೇಳಿದರು. ಇನ್ನು ಇಲ್ಲಿಯೇ ಕುಳಿತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರಿಗೆ ಅನ್ಯಾಯವಾಗುತ್ತಿಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಈ ವಿಷಯವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಏಕೆಂದರೆ, ತಾವು ಏನು ಕೇಳಿದ್ದೀರಿ ಹೇಳಿ? ತಾವು ಓದಬೇಕು, ಅವರು ಉತ್ತರ ಕೊಡಬೇಕು ಅನ್ನುವಂತಹದ್ದು ಅಷ್ಟೇ, ಅದರೆ, ಇದು ಸ್ವಲ್ಪ ವಿಚಾರ ಚರ್ಚೆಯಾಗಲಿ ಎನ್ನುವ ಉದ್ದೇಶಕ್ಕೆ ತಮಗೆ ಅವಕಾಶ ಕೊಟ್ಟಿದ್ದೆ. ತಾವು ಇದನ್ನು ಉಪಯೋಗ ಮಾಡಿಕೊಳ್ಳಿ, ಯಾರು ದುರುಪಯೋಗ ಮಾಡಿಕೊಳ್ಳಬೇಡಿ. ಉಪಯೋಗ ಮಾಡಿಕೊಳ್ಳಿ. ಎಲ್ಲರಿಗೂ ಒಳ್ಳೆಯದು ಆಗಬೇಕು. ಎಸ್‌ಸಿ ಮತ್ತು ಎಸ್‌ಟಿಯವರಿಗೆ ಒಳ್ಳೆಯದು ಆಗಬೇಕು ಎನ್ನುವ ದೃಷ್ಟಿಯಲ್ಲಿ ಒಂದು ಸಣ್ಣ ಚರ್ಚೆಗೆ ಅವಕಾಶ ಕೊಟ್ಟಿದ್ದೆ. ತಾವು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

(ಮುಂದು)

(601) 22-07-2024 (5.00) ಎಂವಿ-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಾನು Government of India ದ ನೀತಿ ಆಯೋಗದ guidelines ಏನಿದೆ ಅದನ್ನು ನಾನು ಓದಿದ್ದೇನೆ. ಆ guidelines ಪ್ರಕಾರವೇ ರಾಜ್ಯ ಸರ್ಕಾರದಲ್ಲಿ ಎಸ್.ಸಿ./ಎಸ್.ಟಿ.ಯವರಿಗೆ ಯೋಜನೆಗಳಿವೆ. ನಾವು ಚುನಾವಣೆಯಲ್ಲಿ ಗ್ಯಾರಂಟಿ ಕೊಡುತ್ತೇವೆಂದು ಹೇಳಿದ್ದೇವೆ. 'Guarantee Schemes' is also a Programme. ಆಮೇಲೆ ರಾಜಸ್ಥಾನ, ಮಧ್ಯಪ್ರದೇಶ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಉತ್ತರ ಪ್ರದೇಶದ ರಾಜ್ಯಗಳಲ್ಲಿ ಇವುಗಳನ್ನೇ ಉಪಯೋಗಿಸುತ್ತಿವೆ. ಆ ರಾಜ್ಯಗಳು ಇದೇ ರೀತಿ ಮಾಡುತ್ತಿವೆ. Actually, ಅವರು ಏನಾದರೂ object ಮಾಡಬೇಕಾದರೆ, ಅವರು

Government of India ದ ವಿರುದ್ಧ ಪ್ರತಿಭಟನೆ ಮಾಡಬೇಕು. ಉತ್ತರ ಪ್ರದೇಶದಲ್ಲಿ, ಮಧ್ಯಪ್ರದೇಶದಲ್ಲಿ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಅವರ ಸರ್ಕಾರವಿದೆ. ಇವರು ಅವರ ವಿರುದ್ಧ ಪ್ರತಿಭಟನೆ ಮಾಡಬೇಕು. ಇವರು walkout ಮಾಡುವುದಕ್ಕೆ ಹೋಗುತ್ತಿದ್ದಾರೆ. ಏಕೆಂದರೆ, ಅವರಿಗೆ ಉತ್ತರ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರಿಗೆ ನೈತಿಕತೆ ಇಲ್ಲ. ಅವರು walkout ಮಾಡುವುದಾದರೆ, Government of India ದ ವಿರುದ್ಧ walkout ಮಾಡಲಿ.

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ಇದು ಚರ್ಚೆಯಲ್ಲ, ತಾವು ಇದನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಹೆಚ್.ಪಿ.ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ದಿನಾಂಕ: 16.07.2024ರ 'ದಿ ಹಿಂದು' ಪತ್ರಿಕೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳು ಮತ್ತು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಪಡೆಯುವ ಪ್ರೋತ್ಸಾಹ ಧನದ ಅರ್ಹತೆಯನ್ನು ಶೇಕಡಾ 60ರಿಂದ ಶೇಕಡಾ 70ರವರೆಗೆ ಏರಿಸಲಾಗಿದೆ ಎಂದು ವರದಿಯಾಗಿದೆ. ಇದು ನಿಜಕ್ಕೂ ವಿಷಾಧಕರ ಕ್ರಮ. ಏಕೆಂದರೆ, ನನ್ನ ನಂಬಿಕೆಗೆ ಅನಿಸುವ ಪ್ರಕಾರ ಇದು ಮಾನ್ಯ ಸಚಿವರ ಗಮನಕ್ಕೆ ಬಂದಿರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಮಾನ್ಯ ಸಚಿವರು ಎಂ.ಬಿ.ಬಿ.ಎಸ್. ಮಾಡಿದ್ದಾರೆಂದರೆ, ಅವರು ಎಸ್.ಎಸ್.ಎಲ್.ಸಿ.ಯಲ್ಲಿ First Class ನಲ್ಲಿ ಪಾಸ್ ಆಗಿರುತ್ತಾರೆ. ಅವರು ಎಸ್.ಎಸ್.ಎಲ್.ಸಿ.ಯಲ್ಲಿ ಪ್ರೋತ್ಸಾಹ ಧನವನ್ನು ಸಹ ಪಡೆದಿರುತ್ತಾರೆ. ನಾನೂ ಸಹ ಪ್ರೋತ್ಸಾಹ ಧನ ಪಡೆದಿದ್ದೇನೆ. ನಮ್ಮ ಮುಂದಿನ ಪೀಳಿಗೆಯವರು ಅದಕ್ಕೋಸ್ಕರ ಶೇಕಡಾ 75ರವರೆಗೂ ಅಂಕಗಳನ್ನು ತೆಗೆದುಕೊಳ್ಳಬೇಕು ಎಂಬುದು. ಅದರ ಜೊತೆಗೆ ಅದಕ್ಕೆ income limit ಅನ್ನು ಹಾಕಿಬಿಟ್ಟಿದ್ದಾರೆ. ಈಗ EWS (Economically Weaker Section) ನವರಿಗೆ ರೂ.8 ಲಕ್ಷಗಳನ್ನು ಮಾಡಿದ್ದರೆ, ಎಸ್.ಸಿ/ಎಸ್.ಟಿ.ಯವರು ಪ್ರೋತ್ಸಾಹ ಧನ ಪಡೆಯುವುದಕ್ಕೆ ಕೇವಲ ರೂ.6 ಲಕ್ಷವನ್ನು ನಿಗದಿಪಡಿಸಿದ್ದಾರೆ. ಈಗ ಏಳನೇ ವೇತನ ಆಯೋಗ ಜಾರಿಗೆ ಬಂದ ಮೇಲೆ ಅಟೆಂಡರ್‌ಗಳಿಗೂ ಸಹ ವಾರ್ಷಿಕ ರೂ.6 ಲಕ್ಷ ವೇತನ ಬಂದು ಬಿಡುತ್ತದೆ. ಅಂದರೆ, ಅಟೆಂಡರ್‌ಗಳ ಮಕ್ಕಳು ಸಹ ಈ ಪ್ರೋತ್ಸಾಹ ಧನವನ್ನು ಪಡೆಯುವುದಕ್ಕೆ ಆಗುವುದಿಲ್ಲ. ಇದು ಖಂಡಿತವಾಗಿ ಸಮರ್ಥನಿಯವಲ್ಲ. ಇದನ್ನು ದಯವಿಟ್ಟು ಮಾನ್ಯ ಸಮಾಜ ಕಲ್ಯಾಣ ಸಚಿವರು ಕೂಡಲೇ revise ಮಾಡಬೇಕು.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ಮಾತನಾಡಿದ್ದನ್ನು ಮುಂದುವರೆಸುತ್ತಾ, ಈಗ ಏನು ಗೃಹಲಕ್ಷ್ಮಿ ಯೋಜನೆಗೆ ರೂ.7,881 ಕೋಟಿಯಂತೆ ಬೇರೆ ಬೇರೆ ಯೋಜನೆಗಳಿಗೆ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ.ಯಿಂದ ಕೊಟ್ಟಿರುವಂತಹ ಹಣವೆಂದು ಬಹಳ clear ಆಗಿ ಇರುವಂಥದ್ದು. ನನ್ನ ಅನಿಸಿಕೆ ಏನೆಂದರೆ, ಈಗ ಶಕ್ತಿ ಯೋಜನೆಯಲ್ಲಿ ಓಡಾಡುವಂತಹವರು ಎಸ್.ಸಿ./ಎಸ್.ಟಿ.ಗಳೆಂದು mapping ಆಗುತ್ತದೆಯೇ? ಗೃಹಲಕ್ಷ್ಮಿಗೆ ಯಾರು ಯೋಜನೆಯನ್ನು ಉಪಯೋಗ ಮಾಡುತ್ತಿದ್ದಾರೆ. ಅವರ ಜಾತಿ ಪ್ರಮಾಣಪತ್ರವನ್ನು ಕೊಟ್ಟು ಏನಾದರೂ ಉಪಯೋಗ ಮಾಡುವುದಕ್ಕೆ ಆಗುತ್ತದೆಯೇ? ಗೃಹಜ್ಯೋತಿಗೆ ಕೊಟ್ಟಿರುವಂತಹ ಹಣ ಏನಿದೆ, ಅದಕ್ಕೆ ಅವರ mapping ಆಗಿದೆಯೇ? ಈ ಗೃಹಜ್ಯೋತಿಗೆ ನಮ್ಮ

ಸರ್ಕಾರ ಇದ್ದಾಗ, ಈಗಾಗಲೇ ಮುಂಚೆ ಎಷ್ಟು ಮನೆಗಳಿಗೆ ಕೊಡುತ್ತಿತ್ತು ಮತ್ತು additional ಎಷ್ಟಾಗಿದೆ ಎಂಬುದನ್ನು ಮಾನ್ಯ ಸಚಿವರು ಹೇಳುವಂಥದ್ದು ಆಗಬೇಕು.

**ಉಪ ಸಭಾಪತಿಯವರು:–** ಡಾ: ತಳವಾರ್ ಸಾಬಣ್ಣನವರು ಮೊದಲಿನಿಂದ ಮಾತನಾಡುವುದಕ್ಕೆ ಅವಕಾಶ ಕೇಳುತ್ತಿದ್ದಾರೆ. ತಾವು ತಮ್ಮ ಮಾತನ್ನು ಒಂದು ನಿಮಿಷದಲ್ಲಿ ಮುಗಿಸಿ. ಅದೇ ರೀತಿ clarifications ಕೇಳಿ.

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಸಂವಿಧಾನದಲ್ಲಿ ದುರ್ಬಲ ವರ್ಗಗಳಾದ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸುವುದು ಹಾಗೂ ಸಾಮಾಜಿಕ ಅನ್ಯಾಯ ಮತ್ತು ಶೋಷಣೆಯಿಂದ ಸಂರಕ್ಷಿಸುವುದು ರಾಜ್ಯಗಳ ಜವಾಬ್ದಾರಿ ಎಂದು ಅನುಚ್ಛೇಧ 46ರಲ್ಲಿ ಹೇಳಲಾಗಿದೆ. ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಂವಿಧಾನದ ಮೂಲ ಒಂದು ಸಂವೇದನೆ ಏನೆಂದರೆ, ತುಳಿತಕ್ಕೆ ಒಳಗಾಗಿರುವಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಾವು ವಿಶೇಷವಾಗಿರುವಂತಹ ಮಾನ್ಯತೆ ಕೊಡಬೇಕೆಂದು ಅವರು ಹಲವಾರು Article ಗಳಲ್ಲಿ ಸವಲತ್ತುಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಅನುಸಾರವಾಗಿಯೇ ಮೀಸಲಾತಿಯ ಮೂಲ ತಿರುಳು. ಮಾನ್ಯ ಮುಖ್ಯಮಂತ್ರಿಗಳು ಬೆಳಗ್ಗೆ ಏನು ಹೇಳಿದರು ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹೆಚ್ಚಿನ ಉತ್ತೇಜನ ಕೊಡುವುದಕ್ಕಾಗಿ, ಶೇಕಡಾ 24ರಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದರು. ಹೀಗಾಗಿ, ಗ್ಯಾರಂಟಿಗಳಿಗೆ ಖರ್ಚು ಮಾಡುವಂಥದ್ದು ಸುಮಾರು ರೂ.52,000 ಕೋಟಿಗಳು. ಅದರ ಜೊತೆಗೆ ಅವರು ಏನು ರೂ.39,000 ಕೋಟಿಗಳು ಎಂದು ಹೇಳುತ್ತಿದ್ದಾರೆ, ಇದು over and above expenditure on SC and ST's. ದಯವಿಟ್ಟು ಅವರು ಇದನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗ್ಯಾರಂಟಿಗಳನ್ನು extend ಮಾಡುವುದಕ್ಕಾಗಿ ಉಪಯೋಗ ಮಾಡುವುದು ಅಷ್ಟು ಸಮಂಜಸವಲ್ಲ. ಮತ್ತೆ ಸಂವಿಧಾನದ ಆಶಯಗಳಿಗೆ ವಿರೋಧವಾಗಿದೆ ಎಂದು ಅನಿಸುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

**ಡಾ: ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, Calling Attention ಆದರೂ ಕೂಡ, ಈ ವಿಷಯದ ಗಾಂಭೀರ್ಯತೆಯಿಂದ ತಾವು ಮಾನ್ಯ ಎಲ್ಲಾ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಿದ್ದೀರಿ. ನಾನು ಕೂಡ ಅವರ ಅಭಿಪ್ರಾಯಗಳನ್ನು ಕೇಳಿಸಿಕೊಂಡಿದ್ದೇನೆ. ಮಾನ್ಯ ಸದಸ್ಯರ ಉದ್ದೇಶ ಎಸ್.ಸಿ./ಎಸ್.ಟಿ. ಜನರಿಗೆ ಹೆಚ್ಚು ಅನುಕೂಲವಾಗಬೇಕು ಎಂಬುದು. ನಮ್ಮ ಸರ್ಕಾರದ ಉದೇಶ ಮತ್ತು ಅದಕ್ಕಾಗಿಯೇ ಕಾಯಿದೆ ತಂದಿರುವುದು. Because, the Government headed by Sri Siddarmaiah is committed to the principles of the Constitution and we are committed for the Social Justice. ಕಾಂಗ್ರೆಸ್ ಸರ್ಕಾರ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಸಂವಿಧಾನಕ್ಕೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ. ಆ ಹಿನ್ನೆಲೆಯಲ್ಲಿ ಈ ಕಾಯಿದೆಯನ್ನು ಜಾರಿಗೆ ತಂದಿದ್ದೇವೆ. ಮಾನ್ಯ ಸದಸ್ಯರುಗಳ ಉದ್ದೇಶ ಗ್ಯಾರಂಟಿಗಳಿಗೆ ಈ ಹಣವನ್ನು ಬಳಕೆ ಮಾಡುವುದರಿಂದ, ಈ

ವರ್ಗಗಳ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದು. ಆ ರೀತಿಯ ಗ್ಯಾರಂಟಿಗಳನ್ನು ಕೊಡಬೇಡಿ. ಈ ಕಡೆ ಅವರ ಒಟ್ಟಾರೆ ಹಣವನ್ನು ಅವರ ಅಭಿವೃದ್ಧಿಗೆ ಬಳಸಿ ಎನ್ನುವಂತಹ ಅಭಿಪ್ರಾಯ ಅವರ ಮನಸ್ಸಿನಲ್ಲಿ ಮೂಡಿರುವಂಥದ್ದು. ಈ ಗ್ಯಾರಂಟಿಗಳನ್ನು ಕೊಡುವಾಗ, ಮಾನ್ಯ ಸದಸ್ಯರು ಏನು ಹೇಳಿದರು ಎಂದರೆ, asset create ಮಾಡಬೇಕು. ಬೇರೆ ಬೇರೆ ರೀತಿಯ ಕೌಶಲ್ಯಾ ತರಬೇತಿಗಳನ್ನು ಕೊಡಬೇಕು ಎಂದು ಅನೇಕ ರೀತಿಯ ಸಲಹೆಗಳನ್ನು ಮಾನ್ಯ ಸದಸ್ಯರು ನೀಡಿದ್ದಾರೆ. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಬಜೆಟ್‌ನಲ್ಲಿ 2014ರಲ್ಲಿ, if my memory is correct, ಅವರು ಕೌಶಲ್ಯಾ ತರಬೇತಿಗೆ ಎಂದು ಒಂದು budgetary provision ಮಾಡಿದ್ದರು. ಕೌಶಲ್ಯಾ ತರಬೇತಿಗೋಸ್ಕರವೇ ಮಾಡಿ, ಇವತ್ತು ಕರ್ನಾಟಕ ಸರ್ಕಾರ ಕೌಶಲ್ಯಾ ತರಬೇತಿಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ, ಈ ವರ್ಗದ ಜನರಿಗೆ, ಯುವಕ ಮತ್ತು ಯುವತಿಯರಿಗೆ ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯಾ ತರಬೇತಿಯನ್ನು ಕೊಡುತ್ತಿದ್ದೇವೆ. ಈಗ ಒಂದು There is social expenditure and investment. Capital investment ಆದರೆ asset create ಆಗುತ್ತದೆ. Social expenditure ಆದರೆ ಅದರಲ್ಲಿ revenue expenditure ಆಗುತ್ತದೆ. ಬೇರೆ ರಾಜ್ಯದ ಯೋಜನೆಗಳು ಇದೇ ರೀತಿಯಲ್ಲಿ ಇವೆ. ದೇಶದ ನೀತಿ ಆಯೋಗದ ವಿಷಯವನ್ನು ನಾನೂ ಪ್ರಸ್ತಾಪ ಮಾಡಿದೆ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಸಹ clear ಆಗಿ ಹೇಳಿದ್ದಾರೆ. ಇದು ಮಧ್ಯಪ್ರದೇಶದಲ್ಲಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ಯೋಜನೆಗೆ ಕೊಟ್ಟಂತಹ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ.ಗೆ ಬಜೆಟ್‌ನಲ್ಲಿ ಏನು ಹಣವನ್ನು ನಿಗದಿ ಮಾಡಿರುತ್ತಾರೆ. ಆ ಯೋಜನೆಗಳನ್ನು ಮಾಡುವಾಗ, ಆ ವರ್ಗಗಳ ಜನರಿಗೆ ಅಲ್ಲಿರುವಂತಹ ಯೋಜನೆಗಳನ್ನೇ ಈಗ ಗಂಗಾಕಲ್ಯಾಣ ಯೋಜನೆಯನ್ನು ನೀರಾವರಿಯಲ್ಲಿ ಕೊಡುತ್ತೇವೆ. ಸಣ್ಣ ನೀರಾವರಿಯಲ್ಲಿ ಕೊಡುತ್ತೇವೆ. ಅಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನೇ ಬಳಕೆ ಮಾಡುವುದು. ಅವರು ಅದನ್ನೇ ಬಳಕೆ ಮಾಡುವುದು. ನಾವು asset create ಮಾಡಬೇಕೆಂದು ಇದ್ದೇವೆ. ಈಗ MGNREGA (Mahatma Gandhi National Rural Employment Guarantee Act) ದಲ್ಲಿ asset ಅನ್ನು ಸಹ create ಮಾಡಬೇಕು. ಮತ್ತೆ ಅವರಿಗೆ labour ಅನ್ನು ಸಹ ಕೊಡಬೇಕು. Human resources ಕೂಡ ವೆಚ್ಚ ಮಾಡಬೇಕು. That is the Government of India Programme. UPA Government ಮಾಡಿದಂತಹ ಒಂದು ಯೋಜನೆ. ಹಿಂದಿನ ಸರ್ಕಾರವಿದ್ದಾಗ ಸುಮಾರು 24 ಯೋಜನೆಗಳಿಗೆ ಸುಮಾರು ರೂ.23,000 ಕೋಟಿಗೂ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ಅದು ಇದೇ ಯೋಜನೆಯಲ್ಲಿ. ಅದು ನೀರಾವರಿ ಇರಬಹುದು ಮತ್ತೆ ಬೇರೆ ಬೇರೆ ಇಲಾಖೆಗಳು ಇರಬಹುದು. ಕಂದಾಯ ಇಲಾಖೆಯಲ್ಲಿ ಮೂಲ ವೃದ್ಧಾಪ್ಯ ವೇತನ, ವಿಧವಾ ವೇತನ ಮತ್ತು ಪಿಂಚಣಿಗಳನ್ನು ಎಲ್ಲಿಂದ ಕೊಡುವುದು? ಇವುಗಳಿಗೆ ಯಾರಿಂದ ಕೊಡುವುದು? ಅನ್ನಭಾಗ್ಯ ಯೋಜನೆಯನ್ನು ಎಲ್ಲಿಂದ ಕೊಡುವುದು? ಇಲ್ಲಿರತಕ್ಕಂತಹ ಹಣವನ್ನು ಆ ಸಮುದಾಯದ ಫಲಾನುಭವಿಗಳಿಗೆ ಕೊಡುತ್ತೇವೆಯೇ ವಿನಃ, ಅದನ್ನು ಬೇರೆಯವರಿಗೆ ಕೊಡುವುದಿಲ್ಲ. ಮಾನ್ಯ ಸದಸ್ಯರಾದ ಸಿ.ಟಿ.ರವಿಯವರು ಏನು ಹೇಳಿದರು ಎಂದರೆ, ಗಂಗಾಕಲ್ಯಾಣ ಯೋಜನೆಗೆ

ಹೆಚ್ಚು ಲೋನ್ ಕೊಡಬಹುದಾಗಿತ್ತು ಎಂದು. That is also a part of the argument. ಇನ್ನು ಹೆಚ್ಚು ಹೆಚ್ಚು ಅನುಕೂಲಗಳನ್ನು ಮಾಡುವುದು. That we should look into the separate budget. ಹೆಚ್ಚು allocation ಮಾಡಿಕೊಡುವುದು. ನಮ್ಮ ಆಯವ್ಯಯವನ್ನು ಮತ್ತು ಸಂಪನ್ಮೂಲವನ್ನು ನೋಡಿಕೊಂಡು, ಆ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಕೊಡುವುದಕ್ಕೆ ಸಾಧ್ಯವಿದೆಯೇ ಎಂದು, that also we will examine. Our commitment is to uplift the downtrodden sections like SC-ST's, Backward Classes and Minorities. ಆದರೆ, ಇಲ್ಲಿ ಯೋಜನೆಗಳಿಗೆ ಬಳಸಿಕೊಳ್ಳುವಂತಹ ಹಣವಿದೆಯಲ್ಲಾ ಅದು ಎಸ್.ಸಿ./ಎಸ್.ಟಿ. ಫಲಾನುಭವಿಗಳಿಗೆ ಮಾಸಿಕವಾಗಿ ನಾಲ್ಕರಿಂದ ಐದು ಸಾವಿರ ರೂಪಾಯಿಗಳ ನಿರ್ದಿಷ್ಟವಾದಂತಹ ಒಂದು ಆರ್ಥಿಕ ನೆರವು ಸಿಗುತ್ತದೆ.

(ಮುಂದು)

(602) 22.07.2024 05.00 LL-AK (ಉಪ ಸಭಾಪತಿಯವರ ಉಪಸ್ಥಿತಿ)

**ಡಾ: ಹೆಚ್.ಸಿ. ಮಹದೇವಪ್ಪ(ಮುಂದು):-**

ಈ ಜನರಿಗೆ ನಿರ್ದಿಷ್ಟವಾದಂತಹ ಮಾಸಿಕ ಆದಾಯ ಇಲ್ಲ. ಅವರು ಪ್ರತಿನಿತ್ಯ ಕೂಲಿ ಕೆಲಸಕ್ಕೆ ಹೋಗಬೇಕು. ಆ ಕೂಲಿಯಲ್ಲಿ ದುಡಿದು ಬಂದಂತಹ ಹಣದಿಂದ ಸಂಜೆ ಅಂಗಡಿಗೆ ಅಕ್ಕಿ, ಬೇಳೆ, ತರಕಾರಿ, ಸೊಪ್ಪು ಮತ್ತು ಕಾಳುಗಳನ್ನು ತಂದು ಅಡುಗೆ ಮಾಡಿ ಊಟ ಮಾಡಬೇಕು. ಈ ಸ್ವಾವಲಂಬನೆ ಬದುಕಿಗೆ, ಸ್ವಾಭಿಮಾನಿ ಬದುಕಿಗೆ ಪ್ರೇರಣೆಯಾಗುವಂತಹ ಯೋಜನೆಗಳು ಇವು. ಇದು ಎಲ್ಲಾ ಜನರಿಗೆ in general and SC/ST in particular. ಅಂತಹ ಒಂದು ಯೋಜನೆ ಇದು. ಆದರೆ, ಈ ಹಣವನ್ನು ಸದರಿ ಗ್ಯಾರಂಟಿ ಯೋಜನೆಗಳ ಮುಖಾಂತರ ನಾವು 14 ಸಾವಿರ ಎಸ್.ಸಿ./ಎಸ್.ಟಿ. ವರ್ಗಗಳಿಗೆ ಮಾತ್ರ ಅಂದರೆ, ಶೇಕಡ 24.1 ರಷ್ಟು ಜನರಿಗೆ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಈ ವರ್ಗಗಳನ್ನು enumerate ಮಾಡಿದ್ದೀರೋ, ಆ ಸಂಖ್ಯೆ ಸಿಗುತ್ತದೆಯೇ ಎಂದು ಕೇಳಿದ್ದಾರೆ. That's a good point. ನಾವು ಅಧಿಕಾರಕ್ಕೆ ಬಂದ ನಂತರ, ನಾವು evaluation ಶುರು ಮಾಡಿದ್ದೇವೆ. ಈ ಫಲಾನುಭವಿಗಳಲ್ಲಿ ಎಸ್.ಸಿ./ಎಸ್.ಟಿ. ಸಂಖ್ಯೆ ಎಷ್ಟು ಇದ್ದಾರೆ. ನಿಜವಾಗಿಯೂ ಅಷ್ಟು ಸಂಖ್ಯೆಯಲ್ಲಿ ಕೊಟ್ಟಿದ್ದೇವೆ. Over and above ಏನಾದರು ಆಗಿದ್ದರೆ, we will withdraw that money. If the population is less than 24.1%, we will never allow this budget to be given to the over and above population, which is not there. ಕೊಡುವುದೇ ಇಲ್ಲ. ಕೊಡುವುದಕ್ಕೆ ಸಾಧ್ಯವೂ ಇಲ್ಲ. ಸ್ವತಃ ಮಾನ್ಯ ಮುಖ್ಯಮಂತ್ರಿಗಳೆ ಇದನ್ನು ರಿವ್ಯೂ ಮಾಡಿದ್ದಾರೆ.

**Sri SHASHIL G. NAMOSHI:** How is the minister able to see that?

**ಡಾ: ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ಸೆನ್ಸಸ್ ಇದೆ. We have asked the department to give a report.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ...

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸುತ್ತೇನೆ. ಆ ನಂತರ, ವಿರೋಧ ಪಕ್ಷದ ಎಲ್ಲಾ ಸದಸ್ಯರು ಮಾತನಾಡಲಿ. I will listen to them. We will not run away. I will listen to all of them. Let the members tell me how to streamline it. But, never ever this money will be used by groups other than SC/ST groups and beneficiaries. It will never happen. Don't be under the impression or delusion that we are giving this allocation to the general public or general population. ನಮ್ಮ ಮಾನ್ಯ ಸದಸ್ಯರ ತಲೆ ಒಳಗಡೆ ಏನಿದೆಯೆಂದರೆ, ಈ ಹಣ ಬೇರೆ ಉದ್ದೇಶಕ್ಕೆ ಹೋಗುತ್ತಿರುವುದು ಸರಿಯಲ್ಲ ಎನ್ನುವುದಾಗಿದೆ. I appeal to all my good friends and hon. Members to please appeal to the Union Government. They are going to place the Budget tomorrow. Depending upon the population of the country, let them earmark the money in the Budget proportionate to the Scheduled Caste and Scheduled Tribes population and distribute it to the States in the country, so that all of us together, in a federal structure, can uplift the downtrodden sections. As the hon. Member said, the Constitution prefers and commits to uplift this category of population. Let us together in general and you people in particular, appeal to the Union Government.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಮಾನ್ಯ ಸಚಿವರ ಮಾತಿಗೆ ಬೆಂಬಲ ಸೂಚಿಸಿದರು)**

ಮಾನ್ಯ ಸದಸ್ಯರಿಗೆ ಎಸ್‌ಸಿಪಿ/ಟಿಎಸ್‌ಪಿ ಹಣದ ಬಗ್ಗೆ ಇಷ್ಟೊಂದು ಕಾಳಜಿ ಇರುವುದನ್ನು ಅವರ ಮಾತಿನಲ್ಲಿ ನೋಡಿದಾಗ ನನಗೆ ಸಂತೋಷವಾಗುತ್ತದೆ. ಈ ವಿಷಯದಲ್ಲಿ ಅವರೆಲ್ಲರೂ ಒಂದು ಕಾಯಿದೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಾರೆ ಎಂದು ನಾನು ಭಾವಿಸಿದ್ದೇನೆ. ಜೊತೆಗೆ, ನಮ್ಮ ಸದಸ್ಯರಾದ ಶ್ರೀ ಹೆಚ್.ಸಿ. ಸುಧಾಮ್ ದಾಸ್ ರವರು ಹೇಳಿರುವ ವಿಷಯವನ್ನು ನಾವು ಪರಿಶೀಲಿಸುತ್ತೇವೆಂದು ಹೇಳಿ, ಹಣವನ್ನು ದುರುಪಯೋಗ ಮಾಡದೇ, ದುರ್ಬಳಕೆ ಮಾಡದೇ...,

**ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಮಾನ್ಯ ಸಚಿವರು ನೀಡಿರುವ ಉತ್ತರ ಸಮರ್ಥನೀಯವಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರು ನೀಡಿರುವ ಉತ್ತರ ಸಮರ್ಥನೀಯವಲ್ಲ ಎಂದರೆ, ಏನು ಮಾಡಬೇಕು?

**(ಗೊಂದಲ)**

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ...ಇದರಿಂದಾಗಿ ಯಾರೂ ಕೂಡ ಇನ್ನು ಮುಂದೆ ದಲಿತರ ವಿಷಯದಲ್ಲಿ ರಾಜಕೀಯ ಮಾಡದೇ, ರಾಜಕೀಯ ಬೆಳಸದೇ ಅಭಿವೃದ್ಧಿಗೆ ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣವೆಂದು ಹೇಳಿ, ಈ ಎಲ್ಲಾ ಮಾನ್ಯ ಸದಸ್ಯರಿಗೆ ನಾನು ಮನವಿ ಮಾಡುತ್ತೇನೆ. The Siddaramaiah Government is committed to social justice and upliftment of SC/STs.

**(ಗೊಂದಲ)**

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಹೇಳಿರುವಂತಹ ವಿಚಾರವೇ ಬೇರೆ. ಮಾನ್ಯ ಸಚಿವರು ನೀಡುತ್ತಿರುವ ಉತ್ತರವೇ ಬೇರೆ.

**(ಗೊಂದಲ)**

**ಉಪ ಸಭಾಪತಿಯವರು:-** ಆಯಿತು. ಈಗ ಎಲ್ಲರೂ ಕುಳಿತುಕೊಳ್ಳಿ. ಮುಂದಿನ ವಿಷಯ ಶ್ರೀ ಗೋವಿಂದರಾಜುರವರದ್ದು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ವಿಷಯಕ್ಕೆ ಮಾನ್ಯ ಸಚಿವರು ಸರ್ಕಾರದ ಪರವಾಗಿ ಉತ್ತರ ನೀಡಿರುತ್ತಾರೆ. ಹಾಗಾಗಿ, ಈ ವಿಷಯ ಇಲ್ಲಿಗೆ ಮುಗಿದಿದೆ. ಈಗ ಮುಂದಿನ ವಿಷಯ ಶ್ರೀ ಗೋವಿಂದರಾಜುರವರದ್ದು.

**(ಗೊಂದಲ)**

**(ಈ ಹಂತದಲ್ಲಿ ಸರ್ಕಾರದ ಉತ್ತರವನ್ನು ಖಂಡಿಸಿ ಬಿ.ಜೆ.ಪಿ. ಹಾಗೂ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)**

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸಭಾತ್ಯಾಗವನ್ನು ಖಂಡಿಸಿ, ಆಡಳಿತ ಪಕ್ಷದ ಸದಸ್ಯರು ವಿರೋಧ ಪಕ್ಷದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಉಪ ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರದ್ದು. The discussion on this subject is closed. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದ್ದಾರೆ. ತಾವು ತಮ್ಮ ಮುಂದಿನ ವಿಷಯ ಮಾತನಾಡಿ. Once the Minister has given the answer, ಪುನಃ ಅದನ್ನು ಮುಂದುವರೆಸುವುದು ಅಷ್ಟು ಸರಿಯಲ್ಲ ಎಂದು ನನಗನ್ನಿಸುತ್ತಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಿಜೆಪಿ ಪಕ್ಷದವರು ಕೇಂದ್ರ ಸರ್ಕಾರದ ವಿರುದ್ಧ ವಾಕ್‌ಔಟ್ ಮಾಡಿದ್ದಾರೆಯೇ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡಲು ನನಗೆ ಅವಕಾಶ ನೀಡಿ.

**ಉಪ ಸಭಾಪತಿಯವರು:-** ಆಯಿತು. ಹೇಳಿ. ಆದಾಗ್ಯೂ, ಈ ವಿಷಯದ ಮೇಲೆ ಮಾನ್ಯ ಸಚಿವರು ಸರ್ಕಾರದ ಪರವಾಗಿ ಉತ್ತರ ನೀಡಿದ ನಂತರವೂ ಪುನಃ ಅದರ ಮೇಲೆ ಚರ್ಚೆ ಏತಕ್ಕೆ ಎಂದು ನನಗನ್ನಿಸುತ್ತಿದೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಏಕೆಂದರೆ, ಈ ಸದನದಲ್ಲಿ ನಮ್ಮ ಮಾಧ್ಯಮ ಮಿತ್ರರು ಇದ್ದಾರೆ. ಅವರಿಗೆ ತಪ್ಪು ಸಂದೇಶ ಹೋಗಬಾರದೆಂದು ನಾನು ತಮ್ಮಲ್ಲಿ ಅವಕಾಶ ಕೋರುತ್ತಿದ್ದೇನೆಯೇ ವಿನಃ, ಇದರಲ್ಲಿ ಯಾರ ಮೇಲೂ ನನ್ನ ಆರೋಪವಿಲ್ಲ.

**ಉಪ ಸಭಾಪತಿಯವರು:-** ಆಯಿತು, ಮಾತನಾಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಕೂಡ ತಮ್ಮ ಮುಂದೆ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದೆನು. ಎಸ್‌ಸಿಪಿ/ಟಿಎಸ್‌ಪಿ ಯೋಜನೆಯನ್ನು ನಾವು ಅನುಷ್ಠಾನಕ್ಕೆ ತರಬೇಕಾದರೆ ಅದಕ್ಕೆ ಮೂರು ವಿಧಾನಗಳಿವೆ. ಅವುಗಳೆಂದರೆ, 7 ಎ, ಬಿ ಮತ್ತು ಸಿ. ವಿರೋಧ ಪಕ್ಷದವರಿಗೆ ನಾನು ಬಹಳ ಸ್ಪಷ್ಟವಾಗಿ ಪ್ರಶ್ನೆ ಕೇಳುವುದೇನೆಂದರೆ, ಈ ಮೂರು ಕಾಯಿದೆಯಡಿಯಲ್ಲಿ ಯಾವುದನ್ನು ಉಲ್ಲಂಘನೆ ಮಾಡಲಾಗಿದೆ. ಎನ್ನುವುದನ್ನು ಅವರು ಕೊಟ್ಟರೆ, ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಆದರೆ, ಇವರು ಕೇವಲ ಮೊಸಳೆ ಕಣ್ಣೀರು ಹಾಕಿ, ಈ ರೀತಿ ಸಭಾತ್ಯಾಗ ಮಾಡಿದರೆ ಹೇಗೆ? ಯಾರಿಗಾದರೂ, ಯಾವುದಾದರೂ ವಿಷಯವನ್ನು ಹೇಳುವುದಕ್ಕೆ ಶಕ್ತಿ ಇದ್ದರೆ, ಅದನ್ನು ಕೇಳುವುದಕ್ಕೂ ಕೂಡ ಶಕ್ತಿ ಇರಬೇಕು. ಅದರಂತೆ, ಅವರು ಏನು ಹೇಳುತ್ತಿದ್ದಾರೆಂದರೆ, ಸೆಕ್ಷನ್ 7 ಸಿ ಯಲ್ಲಿ ಬೇರೆ ಯೋಜನೆಗಳಿಗೆಲ್ಲಾ ಎಸ್‌ಸಿಪಿ/ಟಿಎಸ್‌ಪಿ ಹಣ ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಅವರ ಕಾಲದಲ್ಲಿ ಕೃಷಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಎಂದು ಇತ್ತು. ಆ ಯೋಜನೆಗೆ 6 ಸಾವಿರ ಕೇಂದ್ರ ಸರ್ಕಾರದಿಂದ ಬರುತ್ತಿತ್ತು. ಮಾನ್ಯ ಯಡಿಯೂರಪ್ಪ ಸಾಹೇಬರು ಮುಖ್ಯಮಂತ್ರಿಯಾಗಿದ್ದಾಗ, ಅದಕ್ಕೆ ರಾಜ್ಯದ 4 ಸಾವಿರ ರೂಪಾಯಿ ಸೇರಿಸಿ ಒಟ್ಟು 10 ಸಾವಿರ ರೂಪಾಯಿ

ಮಾಡಿದರು. ಅದು ಕೂಡ ಅವರು ಹೇಳಿದ ಹಾಗೆ, it is a general scheme like guarantee. ಎಸ್.ಸಿ./ಎಸ್.ಟಿ. ರೈತರಿಗೆ ಇನ್ನು 4 ಸಾವಿರ ರೂಪಾಯಿ ಹಣ ಹೇಗೆ ಬಂತು, ಎಲ್ಲಿಂದ ಬಂತು? ಅದು ಕೂಡ ಇದೇ ರೀತಿ 7 ಸಿ ಕಾಯಿದೆಯಡಿಯಲ್ಲಿ, ಎಸ್‌ಸಿಪಿ/ಟಿಎಸ್‌ಪಿ ನಲ್ಲಿ ಬಂದಿರುತ್ತದೆ. ಸಹಕಾರ ಇಲಾಖೆಯಲ್ಲಿ interest subsidy for crop loan ಕೊಟ್ಟರು. ಅದಕ್ಕೆ ಹಣ ಎಲ್ಲಿಂದ ಬಂದಿರುತ್ತದೆ? ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ ಯೋಜನೆಗೆ ಎಲ್ಲಿಂದ ಹಣ ಬಂದಿರುತ್ತದೆ? ಅದು ಎಲ್ಲರಿಗೂ ಸಿಗುತ್ತಿದೆ. ಅಂದರೆ, ಯಾರ್ಯಾರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ, ಅವರಿಗೆ ಸದರಿ ಯೋಜನೆಯನ್ನು ಜಾರಿಗೆ ತರಲು ಎಸ್.ಸಿ./ಎಸ್.ಟಿ. ಹಣವನ್ನು ಅದಕ್ಕೆ ಬಳಸಿರುತ್ತಾರೆ. ಜೊತೆಗೆ, ಅಮೃತ್ ನಗರೋತ್ಥಾನ ಯೋಜನೆ, ಭಾಗ್ಯಲಕ್ಷ್ಮೀ ಯೋಜನೆ, ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಲ್ಲಿಯೂ ಸಹ ಎಸ್‌ಸಿಪಿ/ಟಿಎಸ್‌ಪಿ ಹಣವನ್ನು ಬಳಕೆ ಮಾಡಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಆಯಿತು. ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಉತ್ತರ ನೀಡಿರುತ್ತಾರೆ. ಪುನಃ ಅದೇ ವಿಷಯದ ಬಗ್ಗೆ ಏತಕ್ಕೆ? ಈಗ ಮುಂದಿನ ವಿಷಯಕ್ಕೆ ಹೋಗೋಣ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಇವರು ನಿಜವಾಗಿಯೂ ದಲಿತರ ಪರವಾಗಿ ಇದ್ದರೆ, ನಾಳೆಯ ದಿವಸ ಕೇಂದ್ರದಲ್ಲಿ ಬಜೆಟ್ ಮಂಡನೆ ಇದೆ. ಈ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಯವರಿಗೆ ಒತ್ತಾಯ ಮಾಡಲಿ. ಶ್ರೀಮತಿ ನಿರ್ಮಲಾ ಸೀತರಾಮನ್‌ರವರು ಕರ್ನಾಟಕ ರಾಜ್ಯದಿಂದ ಆಯ್ಕೆಯಾಗಿ ಹೋಗಿರುತ್ತಾರೆ. ನಾವು ಒಂದು ಮಾದರಿ ಕಾನೂನನ್ನು ತಂದಿದ್ದೇವೆ. ಅದನ್ನು ಕೇಂದ್ರ ಸರ್ಕಾರದಲ್ಲಿ ತೆಗೆದುಕೊಂಡು ಬರಲಿ. ಆ ಕಾಯಿದೆಯನ್ನು ಗುಜರಾತ್‌ನಲ್ಲಿ, ಮಧ್ಯಪ್ರದೇಶದಲ್ಲಿ ಮತ್ತು ಉತ್ತರಪ್ರದೇಶದಲ್ಲಿ ಜಾರಿಗೆ ತರಲಿ. ಅದನ್ನು ಯಾರು ಬೇಡವೆಂದು ಹೇಳಿದ್ದಾರೆ. ಈ ರೀತಿ ಮೊಸಳೆ ಕಣ್ಣೀರು ಹಾಕುವುದನ್ನು ಅವರು ನಿಲ್ಲಿಸಬೇಕು.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಆಯಿತು ಸಾಕು. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಸೂಚನೆಗೆ ಮಾನ್ಯ ಸಚಿವರು ಪೂರಕವಾಗಿ ಸ್ಪಂದಿಸಿರುತ್ತಾರೆ. ಅವರ ಹೇಳಿಕೆಗೆ ಈ ವಿಘ್ನ ಸಂತೋಷಿ ಬಿಜೆಪಿಗರು ಅವಕಾಶ ಕೊಡಲಿಲ್ಲ. ಹಾಗಾಗಿ, ಇನ್ನೊಂದು ಬಾರಿ ಮಾನ್ಯ ಸಚಿವರು ಅನೌನ್ಸ್ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಉಪ ಸಭಾಪತಿಯವರು:-** ಅದು ತಾವು ಹೇಳಿದ ಹಾಗೆ ಆಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ.

**ಆ) ವಿಷಯ:- ಈಗಿರುವ ಪಂಚಾಯತ್ ರಾಜ್ ಕಾನೂನನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ ಸಂವಿಧಾನದ ಅಮೃತ ಮಹೋತ್ಸವ ಆಚರಿಸುವ ಈ ಪ್ರಸಂಗದಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಗ್ರಾಮ ಪಂಚಾಯತಿಗಳು ಗ್ರಾಮ ಸರ್ಕಾರಗಳಾಗಿ, ತಾಲ್ಲೂಕು ಪಂಚಾಯತಿಗಳು ತಾಲ್ಲೂಕು ಸರ್ಕಾರಗಳಾಗಿ, ಜಿಲ್ಲಾ ಪಂಚಾಯತಿಗಳು ಜಿಲ್ಲಾ ಸರ್ಕಾರಗಳಾಗಿ, ಜವಾಬ್ದಾರಿ ನಿರ್ವಹಿಸಲು ಎಲ್ಲಾ ಅಧಿಕಾರ ಹಣಕಾಸು ಮತ್ತು ಅಧಿಕಾರಿಗಳನ್ನು ಹಸ್ತಾಂತರಗೊಳಿಸಿ ಸಂವಿಧಾನದ ಆಶಯಗಳನ್ನು ಈಡೇರಿಸುವ ಬಗ್ಗೆ**

-- -

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗಿರುವ ಪಂಚಾಯತ್ ರಾಜ್ ಕಾನೂನನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ ಸಂವಿಧಾನದ ಅಮೃತ ಮಹೋತ್ಸವ ಆಚರಿಸುವ ಈ ಪ್ರಸಂಗದಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಗ್ರಾಮ ಪಂಚಾಯತಿಗಳು ಗ್ರಾಮ ಸರ್ಕಾರಗಳಾಗಿ, ತಾಲ್ಲೂಕು ಪಂಚಾಯತಿಗಳು ತಾಲ್ಲೂಕು ಸರ್ಕಾರಗಳಾಗಿ, ಜಿಲ್ಲಾ ಪಂಚಾಯತಿಗಳು ಜಿಲ್ಲಾ ಸರ್ಕಾರಗಳಾಗಿ, ಜವಾಬ್ದಾರಿ ನಿರ್ವಹಿಸಲು ಎಲ್ಲಾ ಅಧಿಕಾರ ಹಣಕಾಸು ಮತ್ತು ಅಧಿಕಾರಿಗಳನ್ನು ಹಸ್ತಾಂತರಗೊಳಿಸಿ ಸಂವಿಧಾನದ ಆಶಯಗಳನ್ನು ಈಡೇರಿಸುವ ಬಗ್ಗೆ ನಿಯಮ 72 ರಡಿಯಲ್ಲಿ ಮಾನ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

ಬಹಳ ಸುದೀರ್ಘವಾದಂತಹ ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ. 'Responsibility Mapping' ಎಂದು ಏನು ನಾವು ಕಳೆದ ಬಜೆಟ್ ನಲ್ಲಿ ಘೋಷಣೆ ಮಾಡಿದ ನಂತರ, ಪ್ರಾಮಾಣಿಕವಾಗಿ ಹಲವಾರು ಇಲಾಖೆಗಳನ್ನು ನಾವು ಸಂಪರ್ಕಿಸಿ, ಅವರ ಜೊತೆ ಸಭೆಗಳನ್ನು ನಡೆಸಿ, ಸಾಕಷ್ಟು decentralization ಅನ್ನು ನಾವು ಮಾಡಿದ್ದೇವೆ. ಅವರಿಗೆ ಯಾವುದಾದರೂ ನಿರ್ದಿಷ್ಟವಾದಂತಹ ಇಲಾಖೆಯ ಅಥವಾ ನಿರ್ದಿಷ್ಟವಾದಂತಹ ಉತ್ತರ ಕೊಡುವುದಕ್ಕೆ ನಾನು ತಯಾರಿದ್ದೇನೆ. ಏಕೆಂದರೆ, ಇದರ ವ್ಯಾಪ್ತಿ ಇಡೀ ಸರ್ಕಾರಕ್ಕೆ ಬರುತ್ತಿದ್ದು, ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿರುವುದಾಗಿದೆ. ಆದರೆ, ಮಾನ್ಯ ಸದಸ್ಯರು ಬಹಳ ಪ್ರಮುಖವಾದಂತಹ ವಿಷಯವನ್ನು ಎತ್ತಿದ್ದಾರೆ. ಅವರಿಗೆ ನಾನು ವಂದನೆಗಳನ್ನು ತಿಳಿಸುತ್ತೇನೆ. ಇದಕ್ಕೆ ಸರ್ಕಾರದ ಬದ್ಧತೆ ಇದೆ. It's a budget announcement.

(ಮುಂದು)

(603) 22-07-2024 (5.10) ವೈಎಲ್-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

ಆದರೆ, ಸುಮಾರು 20 ರಿಂದ 30 ವರ್ಷಗಳಾಗಿರುವುದರಿಂದ ಸಂವಿಧಾನದ 73ನೇ ತಿದ್ದುಪಡಿಯನ್ನು ಏತಕ್ಕಾಗಿ ಮಾಡಿದೆವು, ಹೇಗೆ ವಿಕೇಂದ್ರೀಕರಣ ಮಾಡಿದೆವು ಎಂಬುದು ಮರೆತು ಹೋಗಿದೆ. ಹಾಗಾಗಿ, ಅದನ್ನು ಪುನರ್ ನೆನಪು ಮಾಡಿಸಿ, ಅನುಷ್ಠಾನಗೊಳಿಸಲು ಸ್ವಲ್ಪ ವಿಳಂಬವಾಗುತ್ತಿದೆ. ನಾವು ಕೂಡಾ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಸಲಹೆ ಏನಾದರೂ ಇದ್ದರೆ ಖಂಡಿತವಾಗಿ ನಾವು ಅದನ್ನು ಗಣನೆಗೆ ತೆಗೆದುಕೊಂಡು ಮಾಡುವಂಥ ಪ್ರಯತ್ನ ಮಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, do you want any clarification?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳಷ್ಟು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದಾಗ್ಯೂ ಮಾನ್ಯ ಸಚಿವರಿಗೆ ಹೇಳಬಯಸುವುದೇನೆಂದರೆ, ಪಂಚಾಯಿತಿಗಳಿಗೆ ಜವಾಬ್ದಾರಿ ನಕ್ಷೆ, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ಹಾಗೂ ವೈಸ್ ಪ್ರೆಸಿಡೆಂಟ್‌ರವರಾದ ಶ್ರೀ ಪ್ರಮೋದ್ ಹೆಗಡೆಯವರು, ಆರ್.ಡಿ.ಪಿ.ಆರ್. ಸಚಿವರು, ನಗರಾಭಿವೃದ್ಧಿ ಸಚಿವರು, ಯೋಜನಾ ಸಚಿವರು, ಹಣಕಾಸು ಸಚಿವರೆಲ್ಲರನ್ನೂ ಒಳಗೊಂಡಂತೆ ಒಂದು ನಕ್ಷೆಯನ್ನು ಮಾಡಿದ್ದರು. ದಿನಾಂಕ: 16.11.2023 ರಂದು ವರದಿ ನೀಡಲಾಗಿತ್ತು. ಆದರೆ, ಇದು ಸಂಪೂರ್ಣವಾಗಿ ಅನುಷ್ಠಾನವಾಗಬೇಕೆಂಬುದು ನನ್ನ ಆಸೆಯಾಗಿದೆ. ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಯನ್ನು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರು

ಮಂಡನೆ ಮಾಡಿದ್ದರು. ದಿವಂಗತ ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವಂಥ ಸಂವಿಧಾನವನ್ನು ಆ ಸಮಯದಲ್ಲಿ ವಿರೋಧ ಪಕ್ಷದವರು ವಿರೋಧಿಸಿದ ಪ್ರಯುಕ್ತ ಆ ವಿಧೇಯಕವು ಒಂದು ಓಟ್‌ನಲ್ಲಿ ಬಿದ್ದು ಹೋಗಿತ್ತು. ಆದರೂ ಸಹ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರು ಗೋಳೋ ಎಂದು ಕಣ್ಣೀರಿಟ್ಟು, ಇದನ್ನು ಮತ್ತೆ ಅನುಷ್ಠಾನಕ್ಕೆ ತಂದರು. ಹಾಗಾಗಿ, ಇದಕ್ಕೆ ನಾವು ಬದ್ಧರಾಗಿ, ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಹಲವಾರು ಬಾರಿ ಚರ್ಚೆ ಸಹ ಆಗಿದೆ. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪಂಚಾಯಿತಿಗಳಿಗೆ ಜವಾಬ್ದಾರಿ ನಕ್ಷೆಯನ್ನು ಈಗಾಗಲೇ ಸರ್ಕಾರ ಕೊಟ್ಟಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಂದ ಬಯಸುವ ಒಂದೇ ಒಂದು ಉತ್ತರವೇನೆಂದರೆ, ಇದನ್ನು ಸಂಪೂರ್ಣವಾಗಿ ಯಾವಾಗ ಅನುಷ್ಠಾನಕ್ಕೆ ತರುತ್ತಾರೆ? ಆಗಸ್ಟ್ 9 ರಂದು ಕ್ವಿಟ್ ಇಂಡಿಯಾ ಚಳುವಳಿ ಇರುವ ದಿನ, ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯಂದು ಅಥವಾ ಆಗಸ್ಟ್ 20 ರಂದು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರ ಹುಟ್ಟು ಹಬ್ಬದ ಪ್ರಯುಕ್ತ ಇರುವ ಕಾರಣ ಆವೊತ್ತಿನ ದಿನವಾದರೂ ಅನುಷ್ಠಾನಗೊಳಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ದಿನದಂದು ಇದನ್ನು ಅನುಷ್ಠಾನಕ್ಕೆ ತರುತ್ತೇವೆ ಎಂದು ಪ್ರಸ್ತಾಪ ಮಾಡಿದ್ದಾರೆ ಮತ್ತು ಮಾನ್ಯ ಸಚಿವರು ಕೂಡಾ ಇದರ ಮೇಲೆ ಬದ್ಧತೆ ಇದೆ ಎಂದು ಹೇಳಿದ್ದಾರೆ. ಈ ವಿಚಾರವಾಗಿ ನಾನು ಹೇಳುವುದೇನೆಂದರೆ, ಈಗಾಗಲೇ ಅಪರ ಮುಖ್ಯ ಕಾರ್ಯದರ್ಶಿಯವರು ಪದೇ ಪದೇ ಇದರ ಬಗ್ಗೆ ಪ್ರತಿ ಇಲಾಖೆಯವರಿಂದ ಮಾಹಿತಿಯನ್ನು ಕೇಳುತ್ತಿದ್ದಾರೆ. ಹಾಗಾಗಿ, ಪ್ರತಿ ಸಲ ಮಾಹಿತಿಯನ್ನು ಕೊಡುವುದರ ಬದಲು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಪಂಚಾಯಿತಿಗಳಿಗೆ ಜವಾಬ್ದಾರಿ ನಕ್ಷೆಯನ್ನು ತಯಾರು ಮಾಡಿರುವುದರಿಂದ ಇದನ್ನು ಅನುಷ್ಠಾನ ಮಾಡಿದರೆ, ಸಮಸ್ಯೆ ಬಗೆಹರಿಯುತ್ತದೆ. ಹಣಕಾಸಿನ ಜವಾಬ್ದಾರಿ ಏನಿದೆ, ಅದು ಗ್ರಾಮ ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಹೋಗಿಲ್ಲ. ಆದರೆ, ರಾಜ್ಯ ಸರ್ಕಾರದಲ್ಲಿ ಅಧಿಕಾರಿಗಳು ಸಭೆ ನಡೆಸುತ್ತಾರೆ. ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿ ತಂದಿರುವ ಉದ್ದೇಶವೇನೆಂದರೆ, ಪ್ರತಿ ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ಮಾಡಿ, ಅಲ್ಲಿಗೆ ಬೇಕಾಗಿರುವಂಥ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು ಮತ್ತು ಹಣಕಾಸಿನ ಜವಾಬ್ದಾರಿಯನ್ನು ಕೂಡಾ ಅವರಿಗೆ ಕೊಡಬೇಕು ಎಂಬುದಾಗಿದೆ. ಇದರಲ್ಲಿ ಏನಾಗಿದೆ ಎಂದರೆ, ಸರ್ಕಾರ ಇದನ್ನು ಜಾರಿಗೆ ತರಲು ಘೋಷಣೆ ಮಾಡಿದ್ದು, ಅಧಿಕಾರಿಗಳು ಅನಷ್ಠಾನಕ್ಕೆ ತರಲು ಹಿಂದೆ-ಮುಂದೆ ನೋಡುತ್ತಿದ್ದಾರೆ. ಈಗಾಗಲೇ ಕಾಯಿದೆ ಆಗಿ ಸುಮಾರು 8 ವರ್ಷಗಳಾಗಿವೆ.

ದಿನಾಂಕ: 16.11.2023 ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿಯೇ ವರದಿಯನ್ನು ಸಲ್ಲಿಸಲಾಗಿದೆ. ಅದಕ್ಕಾಗಿ ಮಾನ್ಯ ಸಚಿವರು "ಆಗಸ್ಟ್ 9, ಆಗಸ್ಟ್ 15 ಅಥವಾ ಆಗಸ್ಟ್ 20 ರಂದು accept ಮಾಡುತ್ತೇವೆ, ಅನುಷ್ಠಾನಕ್ಕೆ ತರುತ್ತೇವೆ" ಎಂದು ಆಶ್ವಾಸನೆ ಕೊಡಬೇಕು. ಆದ್ದರಿಂದ ಇದನ್ನು ಅನುಷ್ಠಾನಕ್ಕೆ

ತರುತ್ತೇವೆ ಎಂದು ಆದೇಶ ಮಾಡಿದರೆ, ನನ್ನ ಮುಂದಿನ ಪ್ರಶ್ನೆ ಏನು ಇಲ್ಲ ಮತ್ತು ತಾವು ಕೂಡಾ ಈ ವಿಚಾರವಾಗಿ ನಮ್ಮ ರಕ್ಷಣೆಗೆ ಬರಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ತಮಗೂ ಕೂಡಾ ಇದರ ಬಗ್ಗೆ ಬಹಳ ಸವಿಸ್ತಾರವಾಗಿ ಗೊತ್ತಿದೆ. ಮಾನ್ಯ ಸದಸ್ಯರು ಉಲ್ಲೇಖಿಸಿದಂತೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹಳ ಪ್ರಾಮಾಣಿಕತೆಯಿಂದ ಈ ಜವಾಬ್ದಾರಿ ನಕ್ಷೆಯನ್ನು ಮಾಡಿದ್ದೇವೆ. ಪ್ರತಿ ಇಲಾಖೆಯವರಿಗೂ ಡಿವಿಷನಲ್ ಕಮಿಷನರ್‌ರವರೊಂದಿಗೆ ಚರ್ಚಿಸಿ, ಏನೇನು ಮಾಡಬಹುದು, ಯಾವ್ಯಾವ ಅಧಿಕಾರ ವಿಕೇಂದ್ರೀಕರಣ ಮಾಡಬಹುದು ಎಂಬುದರ ಕುರಿತು ನೀಲಿ ನಕ್ಷೆಯನ್ನು ಹಾಕಿದ್ದೇವೆ. ಮಾನ್ಯ ಸದಸ್ಯರಿಗೂ ಅದರ ಬಗ್ಗೆ ಎಲ್ಲಾ ರೀತಿಯ ಮಾಹಿತಿ ಇದೆ. ಜೊತೆಗೆ 3 ದಿನಾಂಕದ ಡೆಡ್‌ಲೈನ್ ಅನ್ನು ಕೊಟ್ಟಿದ್ದು, ಆ 3 ದಿನಾಂಕದ ಡೆಡ್‌ಲೈನ್ ಅನ್ನು ನಾನು ಕೊಡಲು ಆಗುವುದಿಲ್ಲ.

**ಶ್ರೀ ಸಲೀಂ ಅಹ್ಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 20 ಆಗಸ್ಟ್ 2024 ರಂದು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರ ಹುಟ್ಟು ಹಬ್ಬ ಇರುವ ಪ್ರಯುಕ್ತ ಅಂದಿನ ದಿವಸ ಮಾಡಬಹುದಾಗಿತ್ತು.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಇನ್ನು ಕೆಲವೊಂದು ಇಲಾಖೆ ವತಿಯಿಂದ ಅನುಪಾಲನಾ ವರದಿ ಬರಬೇಕಾಗಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅಧ್ಯಕ್ಷರಾಗಿದ್ದು, ಅವರ ನೇತೃತ್ವದಲ್ಲಿಯೇ ಸಭೆಯನ್ನು ಏರ್ಪಡಿಸಿ, ಎಲ್ಲಾ ಸಚಿವರನ್ನು ಒಳಗೊಂಡಂತೆ ಒಂದು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಮಾಡಲು ಕೇವಲ 01 ತಿಂಗಳು ಮಾತ್ರ ಸಮಯ ಇದೆ. ಇದರ ವಿಸ್ತರಣೆ ಬಗ್ಗೆ ತಮಗೂ ಕೂಡಾ ಗೊತ್ತಿದೆ.

**ಸಭಾಪತಿಯವರು:–** ನಾನು ಇದ್ದಾಗ ಸಹ ಆಗಿತ್ತು.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ತಾವು ಕೂಡಾ ಸಾಕಷ್ಟು progress ಮಾಡಿದ್ದೀರಿ. ಜೊತೆಗೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಸಹ ಸಾಕಷ್ಟು ಆಸಕ್ತಿ ವಹಿಸಿದ್ದರು. ತಾವು ಹಾಕಿದ ಮಾರ್ಗದಲ್ಲಿಯೇ ನಾವು ನಡೆಯುತ್ತಿರುವುದು. ಇದರ ವಿಸ್ತರಣೆ, ಗಾಂಭೀರ್ಯತೆ, ಆಳ, ಅಗಲ ಎಲ್ಲವೂ ತಮಗೂ ಗೊತ್ತಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಯನ್ನು "ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಅಧಿಕಾರ ವಿಕೇಂದ್ರೀಕರಣಗೊಳಿಸಬೇಕೆಂದು" ತಂದಿದ್ದು, ಅದರಂತೆ ತಿದ್ದುಪಡಿಯಾಗಿದೆ. ಆದರೆ, ಇವತ್ತು ಅದನ್ನು ಅನುಷ್ಠಾನಕ್ಕೆ ತರಲು ಶ್ರೀ ಚಿರಂಜೀವಿ ಸಿಂಗ್ ನೇತೃತ್ವದಲ್ಲಿ 2004 ರಲ್ಲಿ ಆದೇಶ ಹೊರಡಿಸಿದ್ದಾರೆ ಮತ್ತು ಶ್ರೀ ಡಿ.ಆರ್.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಭರವಸೆ ಸಮಿತಿಯಲ್ಲಿ ಕೂಡಾ ಚರ್ಚೆಯಾಗಿದೆ. ಆದಾಗ್ಯೂ

ಇದನ್ನು ಅನುಷ್ಠಾನಗೊಳಿಸಲು ಏತಕ್ಕೆ ಹಿಂದೆ-ಮುಂದೆ ನೋಡುತ್ತಿದ್ದಾರೆ? ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸದನದಲ್ಲಿಯೇ ಇದ್ದಾರೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅನುಷ್ಠಾನಗೊಳಿಸಲು ಯಾವುದೇ ಅಂಜಿಕೆ ಇಲ್ಲ. ಈ ವಿಚಾರವಾಗಿ ಬಜೆಟ್‌ನಲ್ಲಿಯೂ ತಿಳಿಸಿದ್ದೇವೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳೇ ಇದು ಬಹಳ ಮುಖ್ಯವಾದ ವಿಚಾರವಾಗಿದೆ. ಗ್ರಾಮ ಸ್ವರಾಜ್‌ನ ಅಧಿಕಾರ ವಿಕೇಂದ್ರೀಕರಣವನ್ನು ಎಲ್ಲಾ ಪಂಚಾಯಿತಿಗಳಿಗೆ ಕೊಡಬೇಕೆಂದು ತಿದ್ದುಪಡಿ ತರಲಾಗಿತ್ತು. ಈ ಸಂಬಂಧ ತಮ್ಮ ಅಧ್ಯಕ್ಷತೆಯಲ್ಲಿ ಸಭೆಯಾಗಿ ಅಧಿಕಾರ ವಿಕೇಂದ್ರೀಕರಣ ಎಂದು ಸರ್ಕಾರ ಮಾಡಿದ್ದು, ಇಲಾಖೆಯವರು ಅನುಷ್ಠಾನ ಮಾಡಿಲ್ಲ. ಹಾಗಾಗಿ, ಇದೇ ಆಗಸ್ಟ್ 15 ರಂದು ಅನುಷ್ಠಾನ ಮಾಡಬೇಕೆಂದು ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಕೇಳುತ್ತಿದ್ದಾರೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಕೇಳಿರುವಂಥ ವಿಚಾರದ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, we will take an appropriate decision.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ತಮಗೆ ವಿನಂತಿಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿಯೇ ಸಭೆ ನಡೆದಿದೆ.

**ಶ್ರೀ ಸಿದ್ಧರಾಮಯ್ಯ:-** ಮಾಡೋಣಪ್ಪಾ!

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಶಿಫಾರಸ್ಸು ಮಾಡಬೇಕು. ಮತ್ತೆ ಈ ಪ್ರಸ್ತಾವನೆ ಸಚಿವ ಸಂಪುಟ ಸಭೆಯ ಮುಂದೆ ಬರುವ ಅವಶ್ಯಕತೆ ಇಲ್ಲ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ್ದು, ಅನುಷ್ಟಾನ ಮಾಡಲಿ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, we are for decentralization.

**ಸಭಾಪತಿಯವರು:-** ಈಗಾಗಲೇ ಎಲ್ಲಾ ಆಗಿದೆ. ಆಗಸ್ಟ್ 15 ರೊಳಗೆ ಕಾರ್ಯಗತಗೊಳಿಸಿ ಎಂದು ಹೇಳುತ್ತಿದ್ದಾರೆ, ಮಾಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, we will take necessary action.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಈಗಾಗಲೇ ಮಾಡಿದ್ದು, ಅದನ್ನು ಅನುಷ್ಠಾನಕ್ಕೆ ತರಬೇಕು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ರಾಹುಕಾಲ, ಗುಳಿಕಕಾಲ ನಂಬುವವರಲ್ಲ! ಆಷಾಡ ಮಾಸ ಬೇಡ ಎಂದು ಕಾಲಕ್ಕೆ ಏನಾದರೂ ಕಾಯುತ್ತಿದ್ದಾರೆಯೇ?

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, we will take appropriate action.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾವಾದರೆ ಶ್ರಾವಣ ಮಾಸದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೆವು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾವು ಮಾಡುವುದೆಲ್ಲಾ ಒಳ್ಳೆಯ ಕೆಲಸ. ನಿಮ್ಮ ತರಹ ಕೆಟ್ಟ ಕೆಲಸ ಮಾಡಿಲ್ಲ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಅನುಷ್ಠಾನಕ್ಕೆ ತನ್ನಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಏತಕ್ಕೆ ಕಾಯಬೇಕು? ಅನುಷ್ಠಾನ ಮಾಡಲಿ.

**ಶ್ರೀ ಸಿದ್ಧರಾಮಯ್ಯ:-** ಮಾಡೋಣ, ಮಾಡೋಣ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳಿಬಿಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, we will take necessary action.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಈಗಾಗಲೇ ಎಲ್ಲವೂ ಆಗಿದೆ. ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳಿಬಿಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, 'we will take appropriate action' ಎಂದು ಹೇಳಿದ್ದೇನೆ ಅಲ್ಲವೇ?

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಬಾರಿ ಮೊಂಡುತನ ಮಾಡುತ್ತೀರಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಇಚ್ಛಾಶಕ್ತಿ ಕೊರತೆ ಇದೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 'ಮೊಂಡುತನ' ಎನ್ನುವ ಪದ ರೆಕಾರ್ಡ್‌ಗೆ ಹೋಗುತ್ತದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, 'ಮೊಂಡುತನ' ಎನ್ನುವುದು ಇದೆ ಎಂದು ಹೇಳಿರುವುದರಲ್ಲಿ ತಪ್ಪೇನಿದೆ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ ಅಲ್ಲವೇ?

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾನಾಯಕರೇ, ಸ್ನೇಹಭಾವದಲ್ಲಿ ಹೇಳಿರುತ್ತಾರೆ ಬಿಡಿ.

(ಮುಂದು)

(604) 22.07.2024/5.20/ಎಸ್‌ಕೆ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ನನಗೆ ಉತ್ತರ ಬಂದಿಲ್ಲ. ಕಳೆದ ನಾಲ್ಕು ದಿನಗಳಾಯಿತು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಅರುಣ್‌ರವರಿಗೆ ಉತ್ತರವನ್ನು ತರಸಿಕೊಡಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ತರಸುವುದಕ್ಕೆ ಹೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾಳೆ ಇದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ, ನನಗೆ ಉತ್ತರ ಬಂದಿಲ್ಲ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಕುಳಿತುಕೊಳ್ಳಿ. ನಾನು ಮಾನ್ಯ ಗೋವಿಂದರಾಜುರವರನ್ನು ಮಾತನಾಡುವುದಕ್ಕೆ ಹೇಳಿದ್ದೇನೆ.

**ಇ) ಕೋಲಾರ ನಗರದ ಅಂತರಗಂಗೆ ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವು ಸುಮಾರು 60 ವರ್ಷಗಳ ಹಳೆಯದಾಗಿರುವುದರಿಂದ ಸದರಿ ಶಾಲಾ ಕಟ್ಟಡವನ್ನು ಪುನಃಶ್ಚೇತನಗೊಳಿಸಲು ಅನುದಾನ ಮಂಜೂರು ಆಗಿದ್ದರು ಅನುದಾನ ಬಿಡುಗಡೆ ಮಾಡದಿರುವ ಕುರಿತು**

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋಲಾರ ನಗರದ ಅಂತರಗಂಗೆ ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವು ಸುಮಾರು 60 ವರ್ಷಗಳ ಹಳೆಯದಾಗಿರುವುದರಿಂದ ಸದರಿ ಶಾಲಾ ಕಟ್ಟಡವನ್ನು ಪುನಃಶ್ಚೇತನಗೊಳಿಸಲು ಅನುದಾನ ಮಂಜೂರು ಆಗಿದ್ದರೂ ಅನುದಾನ ಬಿಡುಗಡೆ ಮಾಡದಿರುವ ಕುರಿತು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಡಿ. ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು):-** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆ ಪ್ರತಿಯನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನೀಡಿರುವ ಉತ್ತರವನ್ನು ಮಾನ್ಯ ಸದಸ್ಯರು ಓದಿಕೊಂಡಿದ್ದಾರೆ. ತಾವು ಉತ್ತರವನ್ನು ಓದುವುದು ಬೇಡ. ಮಾನ್ಯ ಗೋವಿಂದ ರಾಜುರವರೇ, ತಮ್ಮ ಪ್ರಶ್ನೆ ಕೇಳಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಕ್ರಿಯಾ ಯೋಜನೆಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಲಿಖಿತ ಉತ್ತರದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ಕ್ರಿಯಾ ಯೋಜನೆಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ. ಎಲ್ಲರಿಗೂ ಕೊಟ್ಟಿರವ ಹಾಗೇ, ಕ್ರಿಯಾ ಯೋಜನೆಗೆ ಒಂದು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿದೆ. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯವರೇ, ನನಗೆ ಫೋನ್ ಮಾಡಿ, ನಮ್ಮಲ್ಲಿ ಹಣವಿದೆ, ಈ ಸರ್ಕಾರಿ ಶಾಲೆಗಳಿಗೆ ಕಟ್ಟಡ ಕಟ್ಟುವುಗಿದ್ದರೆ, ಇನ್ನೊಂದು ಕೋಟಿ ರೂಪಾಯಿಗಳ ಕ್ರಿಯಾ ಯೋಜನೆ ಕೊಡಿ ಎಂದು ಕೇಳಿದಂತಹ ಸಮಯದಲ್ಲಿ, ಕೋಲಾರ ಜಿಲ್ಲೆಯಲ್ಲಿ ನಾನು ಓದಿದಂತಹ ಸರ್ಕಾರಿ ಪ್ರೌಢ ಶಾಲೆ. ಅದರ ಫೋಟೋಗಳನ್ನು ಮಾನ್ಯ ಸಚಿವರಿಗೆ ನೀಡಿದ್ದೇನೆ. ಕೋಲಾರ ನಗರದ ಮಧ್ಯ ಭಾಗದಲ್ಲಿ, ಅಲ್ಪಸಂಖ್ಯಾತರೇ ಹೆಚ್ಚಾಗಿ ವಾಸಿಸುವಂತಹ ಏರಿಯಾದಲ್ಲಿ ಆ ಶಾಲೆ ಇದೆ. ಆ ಶಾಲಾ ಕಟ್ಟಡ ಬಿದ್ದು ಹೋಗುವ ಹಂತದಲ್ಲಿರುವುದರಿಂದ, ಅದಕ್ಕೆ ಕ್ರಿಯಾ ಯೋಜನೆಯನ್ನು ತಯಾರು ಮಾಡಿ, ನಾನು ಸಲ್ಲಿಕೆ ಮಾಡಿದಂತಹ ಸಮಯದಲ್ಲಿ, ದಿನಾಂಕ 02.11.2022 ರಂದು ಮಾನ್ಯ ಕಾರ್ಯದರ್ಶಿಯವರು ಒಂದು ಕೋಟಿ ರೂಪಾಯಿಗಳಿಗೆ ನಮಗೆ ಕ್ರಿಯಾ ಯೋಜನೆ ತಯಾರು ಮಾಡಿಕೊಡಿ ಎಂದು ಕೇಳಿದಾಗ, ಎಂಟು ರೂಂಗಳನ್ನು demolish ಮಾಡಿ, ಆರು ರೂಂಗಳನ್ನು ಕಟ್ಟುವುದಕ್ಕೆ ಕ್ರಿಯಾ ಯೋಜನೆ ಕೊಟ್ಟಿದ್ದೇನೆ. ದಿನಾಂಕ 08.11.2022ರಂದು ಒಂದು ಕೋಟಿ ರೂಪಾಯಿಗಳಿಗೆ PRED (Panchyath Raj Engineering Department) ಯಿಂದ ಒಂದು estimate ತಯಾರು ಮಾಡಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕೊಟ್ಟಿದ್ದರು. ದಿನಾಂಕ 03.12.2022ರಂದು ಮಾನ್ಯ ಕಾರ್ಯದರ್ಶಿಯವರು ಆ ಕ್ರಿಯಾ ಯೋಜನೆಯನ್ನು approve ಮಾಡಿ, ನಮ್ಮ ಜಿಲ್ಲಾ ಪಂಚಾಯತ್‌ಗೆ ಕಳುಹಿಸಿಕೊಟ್ಟಿದ್ದಾರೆ. ಅದರ ನಂತರ ದಿನಾಂಕ 07.02.2023 ರಂದು ಒಂದು ಕೋಟಿ ರೂಪಾಯಿಗಳ ಪೈಕಿ ನಲವತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಮಾತ್ರ ಬಿಡುಗಡೆ ಮಾಡಿರುವ ಬಗ್ಗೆ ಆದೇಶ ಪತ್ರವನ್ನು ನಮ್ಮ ವಿಳಾಸಕ್ಕೆ ಕಳುಹಿಸಿಕೊಟ್ಟಿದ್ದಾರೆ. ಎಲ್ಲಾ ಪತ್ರಗಳು ನಮ್ಮ ಬಳಿ ಇದೆ.

ಬಯಲುಸೀಮೆಯ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಮ್ಮದೇನು transactions ಆಗಿತ್ತು, ಆ paperwork ಆಗಿರುವ ಬಗ್ಗೆ ಎಲ್ಲವನ್ನು enclose ಮಾಡಿ, ಕಳೆದ ಅಧಿವೇಶನದಲ್ಲಿ ಮಾನ್ಯ ಸಚಿವರಿಗೆ ನಾನು ಒಂದು ಪತ್ರವನ್ನು ಕೊಟ್ಟಿದ್ದೆ. ನಾನು ಕೋಲಾರ ನಗರದ ಶಾಸಕ. ಬಿದ್ದು ಹೋಗುವಂತಹ ಪರಿಸ್ಥಿತಿಯಲ್ಲಿರುವಂತಹ

ಸರ್ಕಾರಿ ಶಾಲೆಯ ಬಗ್ಗೆ ಹಣ ಕೇಳಿದರೂ ಕೂಡ ಮಾನ್ಯ ಸಚಿವರು ಸೌಜನ್ಯಕ್ಕಾದರೂ ನನ್ನ ಪತ್ರಕ್ಕೆ reply ಮಾಡಲಿಲ್ಲ. ಇದು ಅವರ ಅಸಹಕಾರ ಮತ್ತು ಧೋರಣೆ ಏನೆಂಬುದು ಅರ್ಥವಾಗುತ್ತದೆ. ದಿನಾಂಕ 30.06.2023 ರಂದು ನಲವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ apply ಮಾಡಿ, ಆ ಕಟ್ಟಡವನ್ನು demolish ಮಾಡುವುದಕ್ಕೆ ಆದೇಶ ಮಾಡಿದ್ದಾರೆ. ಒಂದು ಕಡೆ ಮಕ್ಕಳು ಶಾಲೆಗೆ ಹೋಗುವುದಕ್ಕಾಗುವುದರಿಂದ ಕಟ್ಟಡವನ್ನು demolish ಮಾಡುವಾಗಿಲ್ಲ. ಸರ್ಕಾರದಿಂದ ಅದಕ್ಕೆ ಬೇರೆ ಪರಿಹಾರ ಕೊಡುವುದಕ್ಕೆ ಸೂಚನೆ ಮಾಡಲಿಲ್ಲ. ಅದರ ನಂತರ ದಿನಾಂಕ 07.02.2024 ರಂದು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಲವತ್ತು ಲಕ್ಷ ರೂಪಾಯಿಗಳಷ್ಟು ಹಣ ಬಿಡುಗಡೆಯಾಗುತ್ತದೆ. ದಿನಾಂಕ 03.03.2023ಕ್ಕೆ ಟೆಂಡರ್ ಆಗಿ, ಎಂಭತ್ತೆರಡು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳಿಗೆ ಅವರು below ಹೋಗಿರುತ್ತಾರೆ, ಟೆಂಡರ್ ಆಗಿರುತ್ತದೆ. ಅವರು ಒಂದು ಲಕ್ಷ ಆರವತ್ತೈದು ಸಾವಿರದ ಐದನೂರು ರೂಪಾಯಿಗಳ EMD (Earnest Money Deposit) amount ಕೂಡ ಕಟ್ಟಿಸಿಕೊಳ್ಳುತ್ತಾರೆ. ಈ EMD ಹಣವನ್ನು ಕಟ್ಟಿದಾದ ಮೇಲೆ Superintending Engineer, PRED ಯಿಂದ ಟೆಂಡರ್ ಸಹ approval ಆಗುತ್ತದೆ. ಮತ್ತೆ ದಿನಾಂಕ 21.03.2023 ರಂದು ಪರಿಶೀಲನಾ ಸಮಿತಿಗೆ ಸಭೆಯಲ್ಲಿಯೂ ಕೂಡ ಇಟ್ಟು ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಆದರೆ ಈ ಸರ್ಕಾರದ ಸಚಿವರಾಗಿ ಬಂದ ನಂತರ, ಇಷ್ಟೆಲ್ಲಾ ನಡವಳಿಯಾಗಿದ್ದರೂ ಸಹ ನಮಗೆ ಇಲ್ಲಿಯವರೆವಿಗೂ ಯಾವುದೇ ಸೂಚನೆಯನ್ನು ಕೊಟ್ಟಿರುವುದಿಲ್ಲ. ಆ ಶಾಲೆಯಲ್ಲಿ ಓದುವ ಮಕ್ಕಳ ಪರಿಸ್ಥಿತಿ ಅತಂತ್ರವಾಗಿದೆ. ಮಾನ್ಯ ಸಭಾಪತಿಯವರೇ, ತಮಗೂ ಸಹ ಆ ಫೋಟೋವನ್ನು ಕಳುಹಿಸಿಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜುರವರೇ, ನಾನು ಆ ಶಾಲೆಯನ್ನು ನೋಡಿದ್ದೇನೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ತಾವು ಆ ಶಾಲೆಯನ್ನು ನೋಡಿ. ಈ ಶಾಲಾ ಕಟ್ಟಡದಲ್ಲಿ ಮಕ್ಕಳಿಗೆ...

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜುರವರೇ, ತಮಗೆ ನೆನಪಿಲ್ಲ ಅನಿಸುತ್ತದೆ. ನನ್ನನ್ನು ಆ ಶಾಲೆ ನೋಡುವುದಕ್ಕೆ ಕರೆದುಕೊಂಡು ಹೋಗಿದ್ದೀರಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಹೌದು. ತಮ್ಮನ್ನು ಶಾಲೆಗೆ ಕರೆದುಕೊಂಡು ಹೋಗಿದ್ದೇನೆ. ಅವರು ಈ ಇಲಾಖೆಯ ಸಚಿವರು ಹಾಗೂ ನಾನು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ

represent ಮಾಡಿದವನು. ಕಳೆದ ಹದಿನೈದು ದಿವಸಗಳ ಹಿಂದೆ ಸಭೆಗೆ ನನ್ನನ್ನು ಕರೆದಾಗ, ಅವೊತ್ತಿನ ದಿವಸ ನನ್ನ ಆರೋಗ್ಯ ಸರಿಯಿಲ್ಲದೇ ಮಣಿಪಾಲ್ ಆಸ್ಪತ್ರೆಗೆ admit ಆಗಿದೆ. ನಾನು ಮಾನ್ಯ ತಿಪ್ಪೇಸ್ವಾಮಿಯವರಿಗೆ ಮಾಹಿತಿಯನ್ನು ಕೊಟ್ಟಿದ್ದೆ. ನಾನು ಜವಾಬ್ದಾರಿ ಇರುವ ವಿಧಾನ ಪರಿಷತ್ತಿನ ಸದಸ್ಯ. ನನ್ನ ಪ್ರಶ್ನೆಯೇನೆಂದರೆ, ಮಾನ್ಯ ಸಚಿವರಾಗಿ ಬಂದು ಇಲ್ಲಿಯವರೆವಿಗೂ ಒಂದು ವರ್ಷ ಮೂರು ತಿಂಗಳು ಕಳೆದಿದೆ. ಇದರ ಬಗ್ಗೆ ಪತ್ರಗಳ ಮುಖೇನವಾಗಲೀ, ಇದಕ್ಕೆ ಬೇರೆ alternative ವ್ಯವಸ್ಥೆ ಮಾಡುವುದಾಗಲೀ ಅಥವಾ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ನಮ್ಮ ಶಿಕ್ಷಣ ಇಲಾಖೆ ಏನಿದೆ, ಅವರ ಕಡೆಯಾದರೂ ಇದರ ಬಗ್ಗೆ ಹೇಳಿ, ಇದಕ್ಕೊಂದು ವ್ಯವಸ್ಥೆ ಮಾಡಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜುರವರೇ, ನಾನು ಹೇಳುತ್ತೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಅದೆಲ್ಲಾ bogus ಎಂದು ಇವರು ಹೇಳುತ್ತಾರೆ. ಅದು bogus ಆಗಿದ್ದರೆ, ಆ ಕಾರ್ಯದರ್ಶಿಯ ಮೇಲೆ ಏತಕ್ಕೆ ಎಫ್.ಐ.ಆರ್., ಮಾಡಲಿಲ್ಲ?

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜುರವರೇ, ನಾನು ಹೇಳುತ್ತೇನೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಎಫ್.ಐ.ಆರ್., ಅವರ ಮೇಲೆ ಏತಕ್ಕೆ ಮಾಡಲಿಲ್ಲ?

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜುರವರೇ, ಆಯಿತು. ಮಾನ್ಯ ಸಚಿವರಿಂದ ಉತ್ತರವನ್ನು ಕೇಳೋಣ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಯಲುಸೀಮೆ ಮತ್ತು ಮಲೆನಾಡು ಇವೆರಡು ಪ್ರದೇಶಗಳು ನನ್ನ ಮತ ಕ್ಷೇತ್ರಕ್ಕೆ ಬರುತ್ತದೆ. ಹೀಗಾಗಿ, ನಮಗೆ ಐವತ್ತು ಲಕ್ಷ ರೂಪಾಯಿಗಳ limit ಕೊಟ್ಟಿದ್ದಾರೆ. ನಾನು ಐವತ್ತು ಲಕ್ಷ ರೂಪಾಯಿಗಳ ಕ್ರಿಯಾ ಯೋಜನೆ ಮಾಡಿಕೊಟ್ಟಿದ್ದೆ. ಇವತ್ತು ನನ್ನ ಮೂರು ಕಾಮಗಾರಿಗಳು ಎಂದರೆ, ಮೊದಲನೆಯದಾಗಿ, ಗದಗ-ಬೇಟಗೇರಿಯಲ್ಲಿ ನೇಕಾರ್ ಕಾಲೋನಿ ರಸ್ತೆಗಳು ಹಾಳಾಗಿತ್ತು. ಅಲ್ಲಿ ಅನುದಾನ ಕೊಟ್ಟಿದ್ದೆ. ಇನ್ನೊಂದು ಸೊರಟೂರು ಗ್ರಾಮದ ಜನರಿಗೆ ಬಸ್ ನಿಲ್ದಾಣ ಇರಲಿಲ್ಲ. ಸರ್ಕಾರಿ ಬಸ್ ನಿಲ್ದಾಣ ಮಾಡುವುದಕ್ಕೆ ಅನುದಾನ ಕೊಟ್ಟಿದ್ದೆ.

(ಮುಂದು)

(605) 22.07.2024 5.30, ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):**

ಇನ್ನೊಂದು ಎಸ್.ಸಿ., ಎಸ್.ಟಿ., ಕಾಲೋನಿಯಲ್ಲಿ ಒಂದು ಸಮುದಾಯ ಭವನ ಇದೆ, ಒಟ್ಟು 3 ಕಾಮಗಾರಿಗಳನ್ನು ಕೊಟ್ಟಿದ್ದೇನೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯವರು ಈ ಮೂರು ಕಾಮಗಾರಿಗಳನ್ನು ಚಾಲನೆ ಮಾಡಿ ಎಂದು ಆದೇಶ ಕೊಟ್ಟಿದ್ದಾರೆ. ಈಗಾಗಲೇ ಆ ಕಾಮಗಾರಿಗಳು ಮುಗಿದಿವೆ. ಈಗ ನೀವು ಹಣ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ. ಈ ರೀತಿ ಆದಲ್ಲಿ ನಾವೇನು ಮಾಡುವುದು. ಆ ಕಾಮಗಾರಿಗಳಿಗೆ Work Order ಕೊಟ್ಟು ಮಂಡಳಿಯ ಕಾರ್ಯದರ್ಶಿಯವರು, ತಪ್ಪು ಮಾಡಿದ್ದಾರೆಯೇ? ಇದರಲ್ಲಿ ನಮ್ಮದೇನು ತಪ್ಪಿದೆ. ನಮಗೆ ಅವಮಾನ ಅಲ್ಲವೇ? ನಾನೇ ಅಲ್ಲಿಗೆ ಹೋಗಿ ಭೂಮಿ ಪೂಜೆ ಮಾಡಿದ್ದೇನೆ. ನಾನು ಗದಗ-ಬೆಟಗೇರಿಗೆ ಹೋದರೆ ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ತಾವು ಭೂಮಿ ಪೂಜೆ ಮಾಡಿದ್ದೀರಿ, ಆದರೆ ಕೆಲಸ ಮಾಡಿಲ್ಲವೆಂದು ಕೇಳುತ್ತಾರೆ. ಅದನ್ನೂ ಮಂಜೂರು ಮಾಡಿಲ್ಲ. ಅಲ್ಲಿ ಬಸ್ ನಿಲ್ದಾಣ complete ಆಗಿದೆ. ಆ ಬಸ್ ನಿಲ್ದಾಣಕ್ಕೆ ಹಣ ಬಿಡುಗಡೆ ಮಾಡಿಲ್ಲ. ಎಸ್.ಸಿ.,ಎಸ್.ಟಿ ಕಾಲೋನಿಯಲ್ಲಿ ಒಂದು ಸಮುದಾಯ ಭವನದ ಕಾಮಗಾರಿಗೆ ಕೊಟ್ಟಿದ್ದೇನೆ. ಅಲ್ಲಿಯೂ ಕೂಡ ಕೆಲಸ ಮಾಡಿದ್ದಾರೆ. ಈ 3 ಕಾಮಗಾರಿಗಳು ಮುಗಿದಿವೆ. ಈ ರೀತಿ ಏನು ಮಾಡುತ್ತೀರಿ? ನೀವು ಕೂಡ ಒಬ್ಬರು ಸದಸ್ಯರಿದ್ದು ಆ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗದಿದ್ದರೆ ನಿಮಗೆ ಎಷ್ಟು ಅವಮಾನ ಆಗುತ್ತದೆ? ದಯವಿಟ್ಟು ಅವರ ಮೇಲೆ, ಸರ್ಕಾರದ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿರಿ. ಆದರೆ ಯಾವ ಕಾಮಗಾರಿಗಳಿಗೆ work order ಕೊಟ್ಟಿದ್ದರೋ ಆ ಕಾಮಗಾರಿಗಳು ಮುಗಿದಿವೆ. ನೀವು compulsory ಆಗಿ ಹಣ ಬಿಡುಗಡೆ ಮಾಡಬೇಕು. ನಮಗೆ ಆಗುವುದಿಲ್ಲವೆಂದರೆ ಹೇಗೆ? ಅದು ತಪ್ಪಾಗುತ್ತದೆ. ನೀವು action ತೆಗೆದುಕೊಂಡು ಮಾಡುವುದು different issue. ಯಾವ ವರ್ಕ್‌ಗಳಿಗೆ ಆರ್ಡರ್ ಕೊಟ್ಟಿದ್ದಾರೋ ಅವುಗಳನ್ನು ratify ಮಾಡಿ. It is your duty and please do it.

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರ ಮತ್ತು ಶ್ರೀ ಕೆ.ಎಸ್.ನವೀನ್ ನೀವಿಬ್ಬರೂ ಕೂಡ ಮಾನ್ಯ ಸಚಿವರ ಜೊತೆಯಲ್ಲೇ ಇರುತ್ತೀರಿ, ಹಣ ಬಿಡುಗಡೆ ಮಾಡಿಸಬೇಕಲ್ಲವೇ?

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಷ್ಟೇ ಅವರ ಜೊತೆ ಅದನ್ನೇ ಮಾತನಾಡಿಕೊಂಡು ಬಂದೆನು. ಇವತ್ತು ಇದೇ ಪ್ರಶ್ನೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಾಗಿತ್ತು. ನಾನು ಈ ಸದನದ ಮೂಲಕ ಒಂದು ವಿಚಾರವನ್ನು ಮಾನ್ಯ ಸಚಿವರು ಮತ್ತು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಈಗ ಹೆಚ್ಚುವರಿ ಕಾಮಗಾರಿಗಳಿಗೆ ಅವರು ಅಪ್ರೂವಲ್ ಕೊಟ್ಟಿದ್ದಾರೆ. ಅವರ ಅಧಿಕಾರಿಗಳು ಮಾಡಿರತಕ್ಕಂಥ ಮಹಾ

ದೊಡ್ಡ ಪ್ರಮಾದ. ಅಲ್ಲಿಯ ಕಾರ್ಯದರ್ಶಿ, ಹೆಚ್ಚುವರಿ fund available ಇದೆ ಎಂದು ಆತನೇ ಎಲ್ಲರಿಗೂ ಫೋನ್ ಮಾಡಿ ಲೆಟರ್ ತರಿಸಿಕೊಂಡು ಕಾಮಗಾರಿಗಳಿಗೆ ಚಾಲನೆ ಕೊಟ್ಟಿದ್ದಾರೆ. ಈಗ ಮಾನ್ಯ ಶಾಸಕರುಗಳ ಅನುದಾನದಲ್ಲಿ ಅನುದಾನವನ್ನು ಕಟ್ ಮಾಡುತ್ತಿದ್ದಾರೆ. ಉದಾಹರಣೆಗೆ ನನ್ನ ಅವಧಿ ಇನ್ನೂ ಮೂರುವರೆ ವರ್ಷಗಳ ಕಾಲ ಇದೆ. ಆದರೆ ಇತ್ತೀಚೆಗೆ ನಡೆದ ಮಂಡಳಿ ಸಭೆಯಲ್ಲಿ ನಿರ್ಣಯ ಆಗಿರುವ ಪ್ರಕಾರ ನನಗೆ ಮೂರುವರೆ ವರ್ಷಗಳಲ್ಲಿ ಒಂದು ರೂಪಾಯಿ ಕೂಡ ಅದರಲ್ಲಿ ಸಿಗುವುದಿಲ್ಲ. ಏಕೆಂದರೆ ಈ ಹಿಂದೆ ಆಗಿರತಕ್ಕಂಥ ವರ್ಕ್‌ಗಳಿಗೆ adjust ಮಾಡಬೇಕಾಗುತ್ತದೆ. ನಾನು ಒಂದು ಕೋಟಿ ರೂಪಾಯಿಗಳಿಗಿಂತಲೂ ಮೇಲೆ ಯಾವುದಕ್ಕೂ ಪತ್ರವನ್ನೇ ಕೊಟ್ಟಿಲ್ಲ. ಆದರೆ ಹೆಚ್ಚುವರಿಯಾಗಿ ಈ ಎಲ್ಲಾ ವರ್ಕ್‌ಗಳಾಗಿವೆ. ಹಾಗಾಗಿ ಸರ್ಕಾರ ಈಗ ಏನು ಕೊಡುತ್ತಿದೆ ಆ ಹಣವನ್ನು ಹಳೆಯದ್ದಕ್ಕೆ adjust ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾಪತಿಯವರೇ ಇದು ತಪ್ಪು. ಏಕೆಂದರೆ, ಇದನ್ನು ಯಾರೋ ಒಬ್ಬ ಅಧಿಕಾರಿ ಮಾಡಿರತಕ್ಕಂಥದ್ದು. ಮತ್ತೆ ನಾನು ಆ ಅಧಿಕಾರಿ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಸ್ಪಷ್ಟವಾಗಿ ನನ್ನ ಪ್ರಶ್ನೆಯಲ್ಲಿ ಕೇಳಿದ್ದೇನೆ. ಅವರನ್ನು ಮಾತ್ರ ಇಲಾಖೆಗೆ ವಾಪಸ್ಸು ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಅವರು ಯಾವ ಇಲಾಖೆಯಲ್ಲಾದರು ಇರಲಿ, ಆತನ ಮೇಲೆ ಎಫ್.ಐ.ಆರ್., ದಾಖಲಿಸಿ ಅರೆಸ್ಟ್ ಮಾಡಬೇಕು. ಆತ ಏನು ಮಾಡಿದ್ದಾನೆ ಎಂದು ತನಿಖೆ ಆಗಬೇಕು. ಬಯಲು ಸೀಮೆ ಎಂದರೆ ಕಷ್ಟದಲ್ಲಿರತಕ್ಕಂಥ ಜನ ಇದ್ದಾರೆ. ಮಂಡಳಿ ಸಭೆಯು ಅಧ್ಯಕ್ಷರ ಅಧ್ಯಕ್ಷತೆಯಲ್ಲೇ ತುಂಬಾ ಚರ್ಚೆ ಆಯಿತು. ಸುಮಾರು 30 ರಿಂದ 40 ಜನ ಶಾಸಕರು ಬಂದಿದ್ದರು. ಬಹಳ ದೀರ್ಘವಾಗಿ ಚರ್ಚೆ ಆಯಿತು. ಸನ್ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ನಿಯೋಗ ಹೋಗೋಣ ಎಂದು ಚರ್ಚೆಯಾಗಿದೆ. ಹಾಗಾಗಿ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ಸಚಿವರಿಗೆ ಒತ್ತಾಯ ಮಾಡುವುದೇನೆಂದರೆ, ನಮ್ಮ ಅನುದಾನ ಕಟ್ ಮಾಡಿಕೊಂಡು ಯಾರೋ ಅಧಿಕಾರಿ ತನಗೆ ಬೇಕಾದ ರೀತಿಯಲ್ಲಿ ಬಳಸಿಕೊಂಡಿರೆ ನಾವು ನಮ್ಮ ಕ್ಷೇತ್ರದಲ್ಲಿ ಏನೂ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ತಾವು ದಯವಿಟ್ಟು ಅನುದಾನದ ಬಗ್ಗೆ ಮಾನ್ಯ ಸಚಿವರಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2022-23ನೇ ಸಾಲಿನಲ್ಲಿ ಇದೇ ರೀತಿ. . .

**ಸಭಾಪತಿಯವರು:-** ಮಾನ್ಯ ಶರವಣರವರೇ, ಮಾತನಾಡುತ್ತೇನೆ ಎಂದು ಪೀಠದ ಅನುಮತಿ ಕೇಳುವುದೇ ಇಲ್ಲವಲ್ಲ, ಏಕಾಏಕಿ ಎದ್ದು ಮಾತನಾಡುವುದಕ್ಕೆ ಶುರು ಮಾಡಿಬಿಡುತ್ತೀರಲ್ಲ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಈಗ ಇದೇ ರೀತಿ ಡಿ.ಪಿ.ಎಆರ್.ನಿಂದ ನನಗೆ ಫೋನ್ ಮಾಡಿ, ಎಲ್ಲಾ ಮಾನ್ಯ ಶಾಸಕರಿಗೂ ಅನುದಾನ ಕೊಟ್ಟಿದ್ದೇವೆ. ನಿಮ್ಮ ಮಲೆನಾಡು ಪ್ರದೇಶಕ್ಕೂ ಕೂಡ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ನೀವು ಯಾವ ವಿಧಾನಸಭಾ ಕ್ಷೇತ್ರ, ನಮಗೆ estimation ಸರಿಮಾಡಿಕೊಡಿ. ನಾವು Work Order issue ಮಾಡುತ್ತೇವೆಂದು ಹೇಳುತ್ತಾರೆ. ಈ ಬಗ್ಗೆ ನನ್ನ ಜೊತೆ ಸುಮಾರು 10 ಬಾರಿ ಪತ್ರ ವ್ಯವಹಾರವಾಗುತ್ತದೆ. ಒಬ್ಬರು ಅಧಿಕಾರಿ ಚಿತ್ರದುರ್ಗಕ್ಕೆ 10 ಬಾರಿ ನನ್ನ ಪಿ.ಎ.ಗಳನ್ನು ಕರೆಸಿಕೊಂಡು, ಆ 10 ಬಾರಿ ಕೂಡ ನನ್ನ ಪಿ.ಎ., ಹೋದಾಗ ನಾನು ಅಲ್ಲಿದ್ದೇನೆ, ನಾನು ಇಲ್ಲಿದ್ದೇನೆ, busy ಇದ್ದೇನೆ ಮಾಡಿಕೊಡುತ್ತೇನೆ ಎಂದು ಹೇಳಿಕೊಂಡು ಅವರು ಎಲ್ಲಾ ಓಕೆ ಮಾಡಿ ಇನ್ನೇನು ಹಣ ಬಿಡುಗಡೆ ಮಾಡಬೇಕು. Estimation ಮತ್ತು Work Order ಕೂಡ ಆಗುತ್ತದೆ. ಆದರೆ ಹಣ ಬಿಡುಗಡೆ ಮಾಡುವ ಸಂದರ್ಭದಲ್ಲಿ ಚುನಾವಣೆ ಬಂದುಬಿಟ್ಟಿದೆ, ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಾದ ತಕ್ಷಣವೇ ಮಾಡಿಕೊಟ್ಟುಬಿಡುತ್ತೇವೆ ಎಂದು ಹೇಳುತ್ತಾರೆ. ಚುನಾವಣೆ ಆದನಂತರವೂ ಕೂಡ ಮತ್ತೆ ನಾವು ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಆ ಒಂದು ಕೋಟಿ ರೂಪಾಯಿಗೆ ನನ್ನ ಹತ್ತಿರ ಅವರು ನಡೆಸಿರುವ ಪತ್ರ ವ್ಯವಹಾರ ಇದೆ. Clearance ಕೊಟ್ಟಿದ್ದಾರೆ. ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರಾದ ಶ್ರೀ.ಡಿ.ಸುಧಾಕರ್ ರವರ ಮೇಲೆ ನನಗೆ ಗೌರವ ಇದೆ. ಅವರು ಬಂದ ನಂತರ ನೀವು ಮಾನ್ಯ ಸಚಿವರನ್ನೇ ಭೇಟಿ ಮಾಡಬೇಕು, ಮಾನ್ಯ ಸಚಿವರೇ ಅದನ್ನು ತಡೆಹಿಡಿದಿದ್ದಾರೆಂದು ಅಧಿಕಾರಿಗಳೇ ಹೇಳುತ್ತಾರೆ. ಇಲ್ಲಿಯವರೆಗೂ ಹಣ ಬಿಡುಗಡೆ ಮಾಡಿಲ್ಲ. ಅಲ್ಲಿ ಅರ್ಧಂಬರ್ಧ ಕೆಲಸ ಹಾಗೆಯೇ ನಿಂತಿದೆ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಹಣವನ್ನು ತಡೆಹಿಡಿದಿರುವುದೇ ಈ ವಿಚಾರಕ್ಕೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ದಯಮಾಡಿ ತಾವು ನಮ್ಮ ರಕ್ಷಣೆಗೆ ಬರಬೇಕು. ದೊಡ್ಡ ಭ್ರಷ್ಟಾಚಾರ ನಡೆದಿದೆ. ಆ ಹಣವನ್ನೆಲ್ಲಾ ತಡೆಹಿಡಿದಿದ್ದೇವೆ ಎಂದು ಹೇಳುತ್ತಾರೆ. ಯಾರು ಭ್ರಷ್ಟಾಚಾರ ಮಾಡಿರುವುದು. ಯಾರು ತಡೆಹಿಡಿದಿರುವುದು? ಯಾವ ಉದ್ದೇಶಕ್ಕೋಸ್ಕರ ನೀವು Work Order ಮಾಡಿ ಅನುಮೋದನೆಯನ್ನು ಕೊಟ್ಟಿದ್ದಿರಿ? ಇದೆಲ್ಲದಕ್ಕೂ ಕೂಡ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಟೆಂಡರ್ ಆಗಿದ್ದು……

**ಶ್ರೀ ಟಿ.ಎ.ಶರವಣ:-** ಮಾನ್ಯ ಶ್ರೀ ಗೋವಿಂದ ರಾಜು ರವರೇ, ಒಂದು ನಿಮಿಷ. ತಮ್ಮ ಕಷ್ಟವನ್ನು ತಾವು ಹೇಳಿಕೊಂಡಿದ್ದೀರಿ. ನಾನು ನನ್ನ ಕಷ್ಟವನ್ನು ಹೇಳಿಕೊಳ್ಳುತ್ತಿದ್ದೇನೆ. ಈ ಕೆಲಸವನ್ನು ನಾವು ಮಾಡಿಕೊಡುತ್ತೇವೆಂದು ಜನಗಳಿಗೆ ಭರವಸೆ ಕೊಟ್ಟಿರುತ್ತೇವೆ. ಹೇಳಿದ ಕೆಲಸ ಆಗದಿದ್ದರೆ ಜನ ಛೀಮಾರಿ ಹಾಕುತ್ತಿದ್ದಾರೆ. ಆದರೆ ಇವತ್ತಿನ ದಿವಸ ಕೆಲಸ ಕೂಡ ಆಗಿಲ್ಲ. ಅಲ್ಲಿ ಕಾಮಗಾರಿ ಹಾಗೆಯೇ ನಿಂತಿದೆ. ನಮಗೇಕೆ ಕಾಂಗ್ರೆಸ್ ಸರ್ಕಾರ ಈ ರೀತಿ ಶಿಕ್ಷೆ ಕೊಡುತ್ತಿದೆ? ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದನ್ನು ತಡೆಹಿಡಿದಿರುವುದು.

**ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಾಗ ಎಲ್ಲೋ ಹೋಗುತ್ತೇವೆ. ಈ ಕರ್ಮಕಾಂಡವನ್ನು ಕಾಂಗ್ರೆಸ್ ಸರ್ಕಾರ ಮಾಡಿರುವುದಿಲ್ಲ, ಹಿಂದಿನ ಸರ್ಕಾರದಲ್ಲಿ ಇದ್ದವರು ಈ ಕರ್ಮಕಾಂಡ ಮಾಡಿರುವುದು. ನಾನು ಕೂಡ ಪ್ರಶ್ನೆ ಕೇಳಿದ್ದೆನು.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈಗ ಇವರು ಬಂದಿದ್ದಾರೆ, ಅಧಿಕಾರದಲ್ಲಿ ಇದ್ದಾರೆ ಅದನ್ನು ಸರಿಪಡಿಸಲಿ.

**(ಗೊಂದಲ)**

**ಶ್ರೀ ಡಿ.ಸುಧಾಕರ್:-** ಮಾನ್ಯ ಸಭಾಪತಿಯವರೇ. . .

**ಸಭಾಪತಿಯವರು:-** ಮಾನ್ಯ ಡಿ.ಸುಧಾಕರ್ ರವರೇ, ಅವರೆಲ್ಲರ ಸಮಸ್ಯೆ ಒಂದೇ ಇದೆ. ಸಮಸ್ಯೆ ಬಹಳ ಗಂಭೀರವಾಗಿದೆ. ಅವರು ಕಾಮಾರಿಗಳನ್ನೆಲ್ಲಾ ಮಾಡಿಸಿ, implement ಮಾಡುವಾಗ ನೀವು ಮಾನ್ಯ ಸಚಿವರನ್ನು ಭೇಟಿ ಮಾಡಿ ಎಂದರೆ ಅದರ ಅರ್ಥ ಬೇರೆಯೇ ಆಗುತ್ತದೆ. ಅದನ್ನು ತಾವು clear ಮಾಡಿ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವ್ಯವಸ್ಥೆ ಎಲ್ಲಿಗೆ ಬಂದಿದೆ ಎಂದರೆ, ನೀವು ಪತ್ರ ಕೊಟ್ಟುಬಿಡಿ, ನಾವೆಲ್ಲಾ ವ್ಯವಹಾರ ಮುಗಿಸಿಕೊಳ್ಳುತ್ತೇವೆ ಎಂದು ನಮ್ಮ ಹತ್ತಿರ ಪತ್ರ ತೆಗೆದುಕೊಳ್ಳುತ್ತಾರೆ. ಸುಮಾರು 10 ಜನ ಊರಿನ ಪ್ರಮುಖರೆಲ್ಲಾ ಬಂದು ಘೇರಾವ್ ಹಾಕಿದಾಗ ಅನಿವಾರ್ಯವಾದಂತಹ ಸ್ಥಿತಿಯಲ್ಲಿ ನಾವು ಪತ್ರ ಕೊಡುತ್ತೇವೆ. ಆತನ ಹತ್ತಿರ ಆ ಪತ್ರ ಪರಿಶೀಲನೆಗೆ ಹೋದಾಗ ಮೇಲಿಂದ ಮೇಲೆ ಅಲೆದಾಡಿಸುತ್ತಿದ್ದಾರೆ. ಅಲ್ಲಿ ದುಡ್ಡು ಕೂಡ ತೆಗೆದುಕೊಂಡಿದ್ದಾರೆ. ಆದರೆ ಇಲ್ಲಿಯವರೆಗೆ ಕೆಲಸ

ಮಾಡದೇ ಕ್ಷೇತ್ರದಲ್ಲಿ ನಮಗೆ ಮಾನ-ಮರ್ಯಾದೆ ಎಲ್ಲೂ ಇಲ್ಲವೇ ಇಲ್ಲ. ಆದರೆ ಇವತ್ತಿನವರೆಗೂ ಕೂಡ ಉತ್ತರವೇ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೀವು ಪತ್ರವನ್ನು ಕೊಡಿ ಎಂದು ನಮ್ಮ ಸರ್ಕಾರದವರು ಕೇಳಿದ್ದಾರೆಯೇ? **(ಗೊಂದಲ)** ಹಿಂದಿನ ಸರ್ಕಾರ ಇದ್ದಾಗ ಮಾಡಿರುವುದು. ಇದು ನಿಮ್ಮ ಸಮಸ್ಯೆ. ಈಗ ನಮ್ಮ ಸಚಿವರು ಏನು ಮಾಡುತ್ತಾರೆ? **(ಗೊಂದಲ)** ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ನಡೆಯಿತಲ್ಲಾ, ಅದಕ್ಕಿಂತ ಹಿಂದಿನ ಬಿ.ಜೆ.ಪಿ., ಸರ್ಕಾರದಲ್ಲಿ ಈ ಬಯಲು ಸೀಮೆಯಲ್ಲಿ ಬಹಳ ದೊಡ್ಡ ಹಗರಣ ನಡೆದಿದೆ. ಹಿಂದಿನ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈಗ ನಮ್ಮ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ?

**(ಗೊಂದಲ)**

**ಶ್ರೀ ಗೋವಿಂದ ರಾಜು:-** ಈಗ ನೀವು ಕಡಲೆಕಾಯಿ ತಿನ್ನುತ್ತೀರಾ ಮಾಡಿ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದಲ್ಲಿ ಸ್ಕೂಲ್ ಕೊಟ್ಟಿದ್ದಾರೆ. ಆದರೆ ಅಲ್ಲಿ 2 ರೂಮ್‌ಗಳಿಲ್ಲ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈಗ ಅವರು ಬಂದಿದ್ದಾರಲ್ಲಾ, ಮಾಡಲಿ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ . . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಸ್.ರವಿಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಎಸ್.ರವಿಯವರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಶ್ರೀ ಗೋವಿಂದರಾಜು ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಡಿ.ಸುಧಾಕರ್ ರವರೇ, ಉತ್ತರ ಕೊಡಿ.

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಇದು 2023-24 ನೇ ಸಾಲಿನಲ್ಲಿ ಆಗಿರತಕ್ಕಂಥ ಘಟನೆ. ಈಗಾಗಲೇ ನಾವು ಕಳೆದ ತಿಂಗಳಿನಲ್ಲಿ ಈ ಮಂಡಳಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ವಿಧಾನ ಪರಿಷತ್‌ನ ಮಾನ್ಯ ಎಲ್ಲಾ ಸದಸ್ಯರುಗಳ ಜೊತೆ ಸಭೆ ಮಾಡಿದ್ದೇವೆ. ಸುಮಾರು ರೂ.374 ಕೋಟಿಗಳಷ್ಟು ಅಧಿಕವಾಗಿ ಮಂಜೂರಾತಿ ಪತ್ರಗಳನ್ನು ಸರ್ಕಾರದ ಮಂಜೂರಾತಿ ಇಲ್ಲದೇ ಕಾರ್ಯದರ್ಶಿಯವರು Work Order ಕೊಟ್ಟಿದ್ದಾರೆ. ನಾವು ಈಗಾಗಲೇ ಅವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಪೋಲೀಸ್ ಕಂಪ್ಲೇಂಟ್ ಕೂಡ ಕೊಟ್ಟಿದ್ದೇವೆ. ಆತನದ್ದು ಶಿಕ್ಷಣ ಇಲಾಖೆ. ಅವನನ್ನು ಆ ಇಲಾಖೆಗೆ ವಾಪಸ್ಸು ಕಳುಹಿಸಿದ್ದೇವೆ. ಅಲ್ಲಿರತಕ್ಕಂಥ 3 ಜನ ಸಿಬ್ಬಂದಿಗಳನ್ನು ನಾವು ತಕ್ಷಣವೇ ಅಮಾನತ್ತುಗೊಳಿಸಿ, ಕ್ರಮ ಜರುಗಿಸುತ್ತಿದ್ದೇವೆ. ಆದರೆ . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಈ ಕಾಮಗಾರಿಗಳಿಗೆಲ್ಲಾ ಮಾನ್ಯ ಶಾಸಕರು estimate ಮಾಡಿ ಕಳುಹಿಸಿದ್ದಾರಲ್ಲಾ, ಅವುಗಳದ್ದು ಏನಾಗಿದೆ ಹೇಳಿ?

**(ಗೊಂದಲ)**

**ಶ್ರೀ ಡಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾವು ಒಂದು ಕೋಟಿ ರೂಪಾಯಿ ಅನುದಾನ ಕೊಟ್ಟಿದ್ದರೆ ಅವರು ನಾಲ್ಕು ನಾಲ್ಕು ವರ್ಕ್‌ಗಳನ್ನು ಕೊಟ್ಟಿದ್ದಾರೆ. ಈಗ ನಾವು ರೂ.3 ಕೋಟಿಗಳು ಕೊಟ್ಟರೆ additional ದುಡ್ಡು ಇಲ್ಲ. ಎಂ.ಎಲ್.ಎ ಮತ್ತು ಎಂ.ಎಲ್.ಸಿ.,ಯವರೆಲ್ಲಾ, ನಮಗೆ ರೂ.250 ಕೋಟಿಗಳು ಹೆಚ್ಚುವರಿಯಾಗಿ ಬೇಕಾಗುತ್ತದೆ. ಅದಕ್ಕಾಗಿ ಗುರುವಾರದಂದು ಈ ಅಧಿವೇಶನದಲ್ಲೇ ನಾವೆಲ್ಲಾ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಇದನ್ನು ಪರಿಷ್ಕರಣೆ ಮಾಡೋಣವೆಂದು ಅಂದುಕೊಂಡಿದ್ದೇವೆ. ಏಕೆಂದರೆ ಇದು ಇಲ್ಲಿ ಚರ್ಚೆ ಆಗುವುದರಿಂದ ಏನೂ ಉಪಯೋಗ ಆಗುವುದಿಲ್ಲ.

(ಮುಂದು)

(606)22.7.2024/5.40/ಎಂ.ಎಂ-ಬಿ.ಎನ್.ಎಸ್. (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಡಾ: ಎಂ.ಸಿ. ಸುಧಾಕರ (ಉನ್ನತ ಶಿಕ್ಷಣ ಸಚಿವರು):-** ವಿಧಾನ ಪರಿಷತ್ ಮತ್ತು ವಿಧಾನ ಸಭೆ ಸದಸ್ಯರ ಹೆಸರು ಇದೆ ಅದು ಬಿಟ್ಟು (**ಗೊಂದಲ**)

**ಶ್ರೀ ಡಿ. ಸುಧಾಕರ್ (ಯೋಜನೆ ಮತ್ತು ಸಾಂಖ್ಯಿಕ ಸಚಿವರು):-** ಮೂರು ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆ ಆಗಿದೆ (**ಗೊಂದಲ**) ಅದರಲ್ಲಿ ತಪ್ಪಾಗಿದೆ, ಎಲ್ಲರೂ ಸೇರಿ ಸರಿಪಡಿಸಬೇಕಾಗಿದೆ.

**ಡಾ: ಎಂ.ಸಿ. ಸುಧಾಕರ:-** (**ಗೊಂದಲ**) ಕೋಟ್ಯಂತರ ರೂಪಾಯಿಗಳ ದುರ್ಬಳಕೆಯಾಗಿದೆ, ಅದು ಯಾವ ಅಧಿಕಾರಿಗಳ, ಯಾವ ಮಂತ್ರಿಗಳ ಮೂಗಿನ ಅಡಿಯಲ್ಲಿ ಆಯಿತು ಎನ್ನುವುದು ನಾಳೆ ಚರ್ಚೆಯಾಗಬೇಕಾಗುತ್ತದೆ.

(**ಗೊಂದಲ**)

**ಶ್ರೀ ಗೋವಿಂದರಾಜು:-** ನೀವು ಇದನ್ನು ವಿಚಾರಣೆ ಮಾಡಿಸಿ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ (**ಗೊಂದಲ**) ನಮ್ಮ ಪರಿಸ್ಥಿತಿ ಏನು? (**ಗೊಂದಲ**) ಇವರೇನು ಸಾಚಾ ಸತ್ಯಹರಿಶ್ಚಂದ್ರರು. ಮಾನ್ಯ ಸದಸ್ಯರಾದ ಪೂಜಾರ್‌ರವರು ಹೇಳಿದರು, ನಾನು ಆ ಮಾತನ್ನು ಹೇಳಲಿಲ್ಲ. ಇದೊಂದು ಸಮಸ್ಯೆಯಾಗಿದೆ, ಘಟನೆಯಾಗಿದೆ. ನೀವು ಪಾಪ ಎಂದು ಹೇಳಬೇಡಿ.

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ಕುಳಿತುಕೊಳ್ಳಿ (**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಗೋವಿಂದರಾಜು:-** ಅವರು ಮಂತ್ರಿಯಾಗಿ 15 ತಿಂಗಳಾಯಿತು (**ಗೊಂದಲ**) ಅವರು ನಮಗೆ ಮಾಹಿತಿ ಕೊಡಬೇಕಲ್ಲವೇ? ನಾನು ಅವರಿಗೆ ಎಲ್ಲಾ ಪತ್ರಗಳನ್ನೂ ದಾಖಲೆ ಕೊಟ್ಟಿದ್ದೇನೆ. ಕಡೆ ಪಕ್ಷ ಸಹಾನುಭೂತಿಗೆ ಒಂದು ಪತ್ರ ಬರೆಯುವುದು ಬೇಡವೇ?

**ಡಾ: ಎಂ.ಸಿ. ಸುಧಾಕರ:-** ಮಾನ್ಯ ಸಭಾಪತಿಯವರೇ, ನಾವು ಸಹ ಬಯಲು ಸೀಮೆ ಭಾಗದಿಂದ ಬಂದಿರುವಂತಹವರು. ನಮಗೂ ಒಂದು ವರ್ಷ ಅನುದಾನ ಕೊಟ್ಟಿಲ್ಲ. ನಾವೇನು ತಪ್ಪು ಮಾಡಿದ್ದೆವು? ನಾವು ಸಹ ಬಹಳಷ್ಟು (**ಗೊಂದಲ**)

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಖಜಾನೆ ತುಂಬಿ ತುಳುಕುತ್ತಿದೆ ಎನ್ನುತ್ತಾರೆ.

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು:-** ಎಲ್ಲ shaving ಮಾಡಿ ಕಳುಹಿಸಿದಿರಿ.

**(ಗೊಂದಲ)**

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

(**ಗೊಂದಲ**)

**ಶ್ರೀ ಸಿ.ಟಿ. ರವಿ:-** ನೀವು ಈಗ ಮಾಡುತ್ತಿರುವುದು ಅದೇ ಕೆಲಸ

**(ಗೊಂದಲ)**

**ಸಭಾಪತಿಯವರು:-** ಕುಳಿತುಕೊಳ್ಳಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಿ.ಟಿ. ರವಿಯವರೇ, ನಿಮ್ಮ ಸರ್ಕಾರದವರು ಎಲ್ಲವನ್ನೂ . . . . ಮಾಡಿ ಕಳುಹಿಸಿದಿರಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ತುಂಬಿ ತುಳುಕುತ್ತಿದೆ.

**(ಗೊಂದಲ)**

**ಶ್ರೀ ಎಸ್. ರವಿ:-** ಲೂಟಿ ಮಾಡಿದರು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸುಧಾಕರ್‌ರವರೇ, ಮಾನ್ಯ ರವಿಯವರೇ, ಕುಳಿತುಕೊಳ್ಳಿ. ಅವ್ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಸುಧಾಕರ್‌ರವರೇ, ನೀವು ಹೇಳಿದ ಹಾಗೆ ನಾಳೆ ನಾಳಿದ್ದು ಇವರನ್ನೆಲ್ಲಾ ಕರೆದುಕೊಂಡು ಹೋಗಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸಿ ಇದನ್ನೆಲ್ಲಾ ಕ್ಲಿಯರ್ ಮಾಡಿ.

**ಶ್ರೀ ಡಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಆ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:-** ಈಗ ನಿಯಮ 330, ಶ್ರೀ ಪ್ರತಾಪ್‌ಸಿಂಹ ನಾಯಕ್‌ರವರು.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಸಚಿವರ ಉತ್ತರದಲ್ಲಿ ಒಂದನ್ನು ಸ್ಪಷ್ಟೀಕರಣ ಕೇಳುತ್ತೇನೆ.

**ಸಭಾಪತಿಯವರು:-** ಅವಕಾಶ ಕೊಡುವುದಿಲ್ಲ, ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನನ್ನ ವಿಷಯವು ಇದೆ.

**ಸಭಾಪತಿಯವರು:-** ಉತ್ತರ ಬಂದಿಲ್ಲ. ಈಗ ನಿಯಮ 330, ಶ್ರೀ ಪ್ರತಾಪ್‌ಸಿಂಹ ನಾಯಕ್‌ರವರೇ ಪ್ರಾರಂಭ ಮಾಡಿ.

**ಶ್ರೀ ಪ್ರತಾಪ್‌ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಯಾರು ಕೊಡುತ್ತಾರೆ ಎಂಬುದು ಗೊತ್ತಾಗಲಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಪ್ರತಾಪ್‌ಸಿಂಹ ನಾಯಕ್‌ರವರ ವಿಷಯಕ್ಕೆ ಉತ್ತರವನ್ನು ಯಾರು ಕೊಡುತ್ತಾರೆ?

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಕ್ಯಾಬಿನೆಟ್‌ಗೆ ಸಮಯವಾಗುತ್ತಿದೆ.

**ಸಭಾಪತಿಯವರು:-** ಅದಕ್ಕೆ ಇನ್ನೂ ಸಮಯವಿದೆ. ಇದಕ್ಕೆ ಉತ್ತರವನ್ನು ಯಾರು ಕೊಡುತ್ತಾರೆ?

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಉತ್ತರ ಬಂದಿಲ್ಲ. ಲೋಕೋಪಯೋಗಿ ಸಚಿವರು ಬರುತ್ತಾರೆ.

**ಸಭಾಪತಿಯವರು:-** ಅಜೆಂಡಾದಲ್ಲಿ ವಿಷಯ ಇದ್ದಾಗ ಅವರು ಸದನಕ್ಕೆ ಬರಬೇಕಲ್ಲವೇ, ಉತ್ತರ ಕೊಡಬೇಕಲ್ಲವೇ?

**ಶ್ರೀ ಎನ್.ಎಸ್. ಬೋಸರಾಜು:-** ಅವರು ಮತ್ತು ಮಾನ್ಯ ಮಧು ಬಂಗಾರಪ್ಪನವರೆಲ್ಲಾ ಅಸೆಂಬ್ಲಿಯಲ್ಲಿ Calling Attention ನಡೆಯುತ್ತಿದೆ. ಅಲ್ಲಿ ಇದ್ದಾರೆ.

**ಸಭಾಪತಿಯವರು:-** ಇಲ್ಲಿಯೂ ಇದೆಯೆಂದು ಹೇಳಬೇಕಲ್ಲವೇ?

**ಶ್ರೀ ಎನ್.ಎಸ್. ಬೋಸರಾಜು:-** ಅವರು ಬರುತ್ತಾರೆ. ನಾಳೆಗೆ ಬೇಕಾದರೆ ತೆಗೆದುಕೊಳ್ಳಬಹುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅವರನ್ನು ಕರೆಸಿ ಸದನವನ್ನು 10 ನಿಮಿಷ ಮುಂದೂಡುತ್ತೇನೆ. ಇದು ಸರಿಯಲ್ಲ. ಅವರೆಲ್ಲಾ ಎಷ್ಟು ಕಷ್ಟ ಪಟ್ಟು ಹಾಕಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಗೋವಿಂದರಾಜುರವರು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರ ಬಳಿ ಮಾತನಾಡುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ಆ ಕಡೆಗೆ ಸರಿಯಿರಿ. ಮಾನ್ಯ ಸಚಿವರೇ, ನೀವು ಆ ಕಡೆಗೆ ಎದ್ದು ಹೋಗಿ. ಮಾನ್ಯ ಗೋವಿಂದರಾಜುರವರೇ, ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಎಲ್ಲಾ ಸದಸ್ಯರೂ ಉತ್ತರವನ್ನು ಹಂಬಲಿಸಿ ವಿಷಯಗಳನ್ನು ಹಾಕಿರುತ್ತಾರೆ. ಸಚಿವರು ಉತ್ತರ ಕೊಡದೇ ಅಲ್ಲಿದ್ದಾರೆ ಎಂದರೆ ಹೇಗೆ? ಸಚಿವರುಗಳನ್ನು ಹತ್ತು ನಿಮಿಷಗಳಲ್ಲಿ ಕರೆಸಿ ನಾನು ಮುಂದಕ್ಕೆ ಹೋಗುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಹೇಳಿ ಕಳುಹಿಸಿದ್ದೇನೆ.

**ಸಭಾಪತಿಯವರು:-** ಈಗ ಶ್ರೀ ಎಂ.ಎಲ್. ಅನಿಲ್‌ಕುಮಾರ್‌ರವರ ವಿಷಯ.

**ಶ್ರೀ ಎಂ.ಎಲ್. ಅನಿಲ್‌ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ನಿಯಮ 330ರಡಿ ಕಂದಾಯ ಸಚಿವರನ್ನು ಪ್ರಶ್ನೆ ಮಾಡಬೇಕು ಆದರೆ ಸಚಿವರು ಇಲ್ಲ.

**ಸಭಾಪತಿಯವರು:-** ಮಾನ್ಯ ಸರ್ಕಾರದ ಮುಖ್ಯ ಸಚೇತಕರೇ, ಯಾವ ಸಚಿವರಿದ್ದಾರೆ ಅದನ್ನಾದರೂ ತಿಳಿಸಿ. ಈಗ ಉತ್ತರಗಳಿವೆ, ಮಂತ್ರಿಗಳಿಲ್ಲ. ಮಂತ್ರಿಗಳಿಲ್ಲದಿದ್ದರೆ ಏನು ಮಾಡಬೇಕು? ಮಂತ್ರಿಗಳು ಇರಬೇಕಲ್ಲವೇ?

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಫೋನ್ ಮಾಡುತ್ತೇನೆ. ಅಸೆಂಬ್ಲಿಯಲ್ಲಿ ಮಾನ್ಯ ಸಚಿವರಾದ ಮಧು ಬಂಗಾರಪ್ಪನವರು ಉತ್ತರಿಸಬೇಕಾದ ಗಮನ ಸೆಳೆಯುವ ಸೂಚನೆ ಇತ್ತು ಅವರು ಅಲ್ಲಿ ಹತ್ತು ನಿಮಿಷದಲ್ಲಿ ಬರುತ್ತಾರೆ.

**ಸಭಾಪತಿಯವರು:-** ನಾನೀಗ ನಿಯಮ 330ಗೆ ಕರೆದಿದ್ದೇನೆ. ಅವರು ಆಮೇಲೆ ಬರಲಿ. ನಾನು ಮಾನ್ಯ ಸಚಿವರಾದ ಮಧು ಬಂಗಾರಪ್ಪನವರಿಗೆ ಟೈಂ ಕೊಟ್ಟಿದ್ದೇನೆ, ಅವರು ಬರಲಿ.

**ಶ್ರೀ ಸಲೀಂ ಅಹಮದ್:-** ಆ ಸಮಯ ನೋಡಿಕೊಂಡು ಉಳಿದ ಸಚಿವರುಗಳೂ ಬರುತ್ತಾರೆ.

**ಸಭಾಪತಿಯವರು:-** ನಿಯಮ 330ರಡಿ ಮಾನ್ಯ ಅನಿಲ್‌ಕುಮಾರ್‌ರವರು ಪ್ರಸ್ತಾಪಿಸಿದ ವಿಷಯಕ್ಕೆ ಯಾರು ಹೇಳುತ್ತಾರೆ?

**ಶ್ರೀ ಸಲೀಂ ಅಹಮದ್:-** ಫೋನ್ ಮಾಡುತ್ತಿದ್ದಾರೆ ಬರುತ್ತಾರೆ. ಸಮಯವಿದೆಯೆಂದು, Calling Attention ಆದಮೇಲೆ ತೆಗೆದುಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೆವು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನು ಮೇಲೆ ದಯವಿಟ್ಟು ಕಡ್ಡಾಯ ಎನ್ನುವ ಪದವನ್ನು ತೆಗೆದುಬಿಡಿ. ಸಚಿವರು ಯಾವಾಗ ಬೇಕಾದರೂ ಬರಲಿ, ಬಿಡಲಿ.

**ಸಭಾಪತಿಯವರು:-** ನಾನು ಹತ್ತು ನಿಮಿಷ adjourn ಮಾಡುತ್ತೇನೆ. ಯಾವ ಸಚಿವರು ಬರಬೇಕೆಂದು ಹೇಳಿ. ಮಾನ್ಯ ಅನಿಲ್ ಕುಮಾರ್‌ರವರೇ, ನೀವು ಪ್ರಾರಂಭ ಮಾಡಿ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಲ್ಲದೇ ನಾನು ಹೇಗೆ ಪ್ರಾರಂಭ ಮಾಡಲಿ?

**ಶ್ರೀ ಸಲೀಂ ಅಹಮದ್:-** ಆಯಿತು ಪ್ರಾರಂಭ ಮಾಡಿ. ಬರುತ್ತಾರೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಚಾರ. ‘ಪಿ’ ನಂಬರ್ ಬಗ್ಗೆ ರೈತರ ಸಮಸ್ಯೆಗಳಿವೆ. ಸಂಬಂಧಪಟ್ಟ ಸಚಿವರಿದ್ದರೆ ಮಾತನಾಡಬಹುದು. ಇಲ್ಲದಿದ್ದರೆ ಮಾತನಾಡಿದರು ಪ್ರಯೋಜನವಾಗುವುದಿಲ್ಲ.

**ಶ್ರೀ ಸಲೀಂ ಅಹಮದ್:-** ಮಾನ್ಯ ಅನಿಲ್ ಕುಮಾರ್‌ರವರೇ, ನೀವು ಪ್ರಾರಂಭ ಮಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಅನಿಲ್ ಕುಮಾರ್‌ರವರೇ, ನಾವು ಏತಕ್ಕೆ ಹೇಳುತ್ತೇವೆ ಎಂದು ಈಗ ಗೊತ್ತಾಯಿತೇ?

**ಶ್ರೀ ಸಲೀಂ ಅಹಮದ್:-** ಮಾನ್ಯ ಅನಿಲ್ ಕುಮಾರ್‌ರವರೇ, ನೀವು ಪ್ರಾರಂಭ ಮಾಡಿ ಸಚಿವರಿಂದ ಉತ್ತರ ಕೊಡಿಸೋಣ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ‘ಪಿ’ ನಂಬರ್ ಬಗ್ಗೆ ಮಾತನಾಡಲು ಸಂಬಂಧಪಟ್ಟ ಸಚಿವರಿರಬೇಕು.

ಶ್ರೀ ಸಲೀಂ ಅಹಮದ್:- ಆಯಿತು ಪ್ರಾರಂಭ ಮಾಡಿ.

**ಸಭಾಪತಿಯವರು:-** ನಿಮಗೆ ಸಚಿವರೇ ಬರಬೇಕಾ? ಒಂದು ಕೆಲಸ ಮಾಡಿ, ಸದನವನ್ನು ಐದು ನಿಮಿಷ adjourn ಮಾಡುತ್ತೇನೆ, ಸಚಿವರುಗಳನ್ನು ಸಭೆಗೆ ಕರೆಸಿ.

**(ಸದನವು ಸಂಜೆ 5 ಗಂಟೆ 47 ನಿಮಿಷದಲ್ಲಿ 5 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(607) 22.7.2024 6.00 ಪಿಕೆ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**(ಸದನವು ಪುನಃ ಸಂಜೆ 6.05 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಗಳಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠಾಸೀನರಾದರು)**

**ಈ) ವಿಷಯ: 1987ರಿಂದ 1994 ಮತ್ತು 95ನೇ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿರುವ 118 ಶಾಲೆಗಳಿಗೆ ಸೀಮಿತವಾಗಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆದೇಶವಾಗಿದ್ದರೂ ಅವುಗಳಲ್ಲಿ 7 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸದೆ ಇರುವ ಕುರಿತು**

**ಶ್ರೀ ಐವನ್ ಡಿ’ಸೋಜಾ (ವಿಧಾನಸಭಾ ಕ್ಷೇತ್ರ):-** 1987 ರಿಂದ 1994 ಮತ್ತು 95ನೇ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿರುವ 118 ಶಾಲೆಗಳಿಗೆ ಸೀಮಿತವಾಗಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆದೇಶವಾಗಿದ್ದರೂ ಅವುಗಳಲ್ಲಿ 7 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸದೆ ಇರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು):-** ಮಾನ್ಯ ಸಭಾಪತಿಗಳೆ, . . .

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು):-** ಮಾನ್ಯ ಸಭಾಪತಿಗಳೆ, 1987 ರಿಂದ 1994ರ ಸಾಲಿನ ಒಳಗೆ ಪ್ರಾರಂಭವಾದ 118 ಶಾಲೆಗಳ ಪೈಕಿ 7 ಶಾಲೆಗಳನ್ನು ಸ್ಥಳಾಂತರ ಮಾಡಿರುವುದರಿಂದ ಅದು ಅನುದಾನಕ್ಕೆ ಒಳಪಡುವುದಿಲ್ಲ ಮತ್ತು ಅವು ಹೊಸ ಶಾಲೆಗಳೆಂದು ಪರಿಗಣಿಸಲಾಗುತ್ತದೆ ಎನ್ನುವುದು ನಮ್ಮ ಇಲಾಖೆಯ ನಿಯಮದಲ್ಲಿದೆ. ಈ ಕುರಿತು ನಾವು 3-4 ಸಲ ಆರ್ಥಿಕ ಇಲಾಖೆಗೆ ಕಳುಹಿಸಿದ್ದರೂ ಅವರು ರಿಜೆಕ್ಟ್ ಮಾಡಿ ಕಳುಹಿಸಿದ್ದಾರೆ. ಮತ್ತೆ ನಾವು ಇವತ್ತು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇವೆ. ಅವು ಹೊಸ ಶಾಲೆ ಎಂದು ಪರಿಗಣಿಸುತ್ತಿರುವುದರಿಂದ ಸ್ವಲ್ಪ ತೊಂದರೆಯಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಆದರೆ ಅವು ಹೊಸ ಶಾಲೆಗಳಲ್ಲ; ಅವು ಸ್ಥಳಾಂತರಗೊಂಡಿವೆ ಎಂದು ಹೇಳುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ನನಗಿಂತ ಶಿಕ್ಷಕರ ಕ್ಷೇತ್ರದಿಂದ ಬರುವ ತಮಗೆ ಚೆನ್ನಾಗಿ ಗೊತ್ತಿದೆ. 118 ಶಾಲೆಗಳ ಪೈಕಿ 111 ಶಾಲೆಗಳಿಗೆ ಮಾತ್ರ ವಿಶೇಷ ಪ್ರಕರಣ ಎಂದು 2003ರಲ್ಲಿ ಅನುಮತಿ ಕೊಡಲಾಗಿತ್ತು. ಆದರೆ ಸರಳವಾದ ಕಾರಣಗಳಿಗೋಸ್ಕರ 7 ಶಾಲೆಗಳನ್ನು ಬಾಕಿ ಇಟ್ಟಿದ್ದಾರೆ. ನಮ್ಮ ಮಂಗಳೂರು ಧರ್ಮ ಪ್ರಾಂತ್ಯಕ್ಕೆ ಗುಲ್ಬರ್ಗಾ ಬರುತ್ತಿತ್ತು. ಈಗ ಗುಲ್ಬರ್ಗಾದಲ್ಲಿ ಹೊಸ Diocese ಆಯಿತು. ಅದರ ಜನಸಂಖ್ಯೆಗೆ ಅನುಗುಣವಾಗಿ ಆ ಶಾಲೆಯನ್ನು ಆ Diocese ಬಿತ್ತು ಅಷ್ಟೆ. ಇದು ಬಿಟ್ಟು ಸ್ಥಳಾಂತರ ಅಥವಾ ಹಸ್ತಾಂತರ ಅಥವಾ ಶಿಕ್ಷಕರ ಸ್ಥಳಾಂತರ ಇಂಥದ್ದು ಏನೂ ಆಗಲಿಲ್ಲ.

**ಸಭಾಪತಿಯವರು:-** ಇದರಲ್ಲಿ ಎರಡು ವಿಷಯಗಳಿವೆ. ಅದೇ ಊರಿನ ಕೆಲವರು ಹೊಸ ಕಟ್ಟಡಕ್ಕೆ ಹೋಗಿದ್ದಾರೆ. ಜನವಸತಿ ಜಾಸ್ತಿಯಾಗಿತ್ತು ಎನ್ನುವ ಕಾರಣಕ್ಕೆ ಹೀಗೆ ಮಾಡಿರುತ್ತಾರೆ. ಈ 7 ಶಾಲೆಗಳು ಬೇರೆ ಊರಿಗೆ ಸ್ಥಳಾಂತರವಾಗಿರುವುದಲ್ಲ. ಬೇರೆ ಕಡೆಗೆ ಹೋಗಿದ್ದರೆ ಹೊಸತು ಎಂದು ಪರಿಗಣಿಸಬಹುದಾಗಿತ್ತು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಈ ಅಂಶವನ್ನು ಪರಿಗಣಿಸಿ, ಅದನ್ನು ಕ್ಯಾಬಿನೆಟ್‌ಗೆ ಕಳುಹಿಸಿ ಅಪ್ರೂವಲ್ ಮಾಡಿಸಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ದಿನಾಂಕ 29.6.2017ರಲ್ಲಿ, ತಮಗೂ ಗೊತ್ತಿರುವ ಹಾಗೆ, ಮೊದಲು ಕನ್ಸಿಡರ್ ಮಾಡುತ್ತಿರಲಿಲ್ಲ. ಅಂದರೆ, ಅವುಗಳು ಸ್ಥಳಾಂತರವಾಗಿದ್ದರೂ ಅಥವಾ ಹಸ್ತಾಂತರವಾಗಿದ್ದರೂ ಕೂಡ ನಿರಂತರವಾಗಿ ನಡೆಯುತ್ತಿದೆ ಎಂದು ಅನುದಾನಕ್ಕೆ ಒಳಪಡಸುತ್ತಿದ್ದರು. ದಿನಾಂಕ 29.6.2017ರ ಹಿಂದೆ ಯಾವ ಶಾಲೆಗಳು ಇತ್ತೋ ಅವುಗಳು ಹಸ್ತಾಂತರವಾಗಿದ್ದರೂ, ಸ್ಥಳಾಂತರವಾಗಿದ್ದರೂ ಅನುದಾನಕ್ಕೆ ಒಳಪಡಿಸಿದರು. ಆದರೆ, ವಿವಿಧ ಕಾರಣಗಳಿಂದ ಕೆಲವನ್ನು ಅನುದಾನಕ್ಕೆ ಒಳಪಡಿಸಲಿಲ್ಲ.

ಉದಾಹರಣೆಗೆ ಕೃಷ್ಣ ಪ್ರೌಢಶಾಲೆಯಲ್ಲಿ ಎನ್ನುವ ಶಾಲೆಯಲ್ಲಿ ಪ್ರೈಮರಿ ಶಾಲಾ ವಿಭಾಗವು 29.6.2017ರ ಹಿಂದೆ ಇತ್ತು, ಅದನ್ನು ಅನುದಾನಕ್ಕೆ ಒಳಪಡಿಸಿದರು. ಆದರೆ ಪ್ರೌಢಶಾಲೆ ಸದರಿ ದಿನಾಂಕದ ನಂತರ ಪ್ರಾರಂಭವಾಯಿತು, ಅದನ್ನು ಅನುದಾನಕ್ಕೆ ಒಳಪಡಿಸಲಿಲ್ಲ. ನಾನೂ ಇದನ್ನು follow-up ಮಾಡುತ್ತಿದ್ದೇನೆ. ಈ ವಿಚಾರವನ್ನು ಆರ್ಥಿಕ ಇಲಾಖೆಗೆ ಕಳುಹಿಸಿದರೂ ಅವರು ಅದನ್ನು ವಾಪಸ್ಸು ಕಳುಹಿಸುತ್ತಿದ್ದಾರೆ. ದಯಮಾಡಿ ನೀವು ಮನಸ್ಸು ಮಾಡಬೇಕು. ಇಲ್ಲದೇ ಇದ್ದರೆ ನೀವು ಸುತ್ತೋಲೆ ಸಂಖ್ಯೆ: ಇಡಿ 127 ಎಸ್ಇಡಬ್ಲ್ಯೂ 217, ದಿನಾಂಕ 29.6.2017ರ ಆದೇಶವನ್ನು ವಿತ್‌ಡ್ರಾ ಮಾಡಿಕೊಳ್ಳಿ. ಇದನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ one-time settlement ಎಂದು ಮಾಡಿಸಿ. 118 ಶಾಲೆಗಳಿಗೆ ವಿಶೇಷ ಅನುದಾನ ಕೊಡುತ್ತೇವೆ ಎಂದು ಒಪ್ಪಿಕೊಳ್ಳಲಾಗಿದೆ, ಇದು ಮುಖ್ಯಮಂತ್ರಿಗಳಿಂದಲೂ ಅಪ್ರೂವಲ್ ಆಗಿದೆ.

(ಮುಂದು)

(608) 22-7-2024 6.10 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು):-**

ಈ 7 ಶಾಲೆಗಳು ಸಹ 118 ಶಾಲೆಗಳಲ್ಲಿ ಸೇರಿಕೊಂಡಿದೆ. ಹಾಗಾಗಿ, ದಯವಿಟ್ಟು ಮಾನ್ಯ ಸಚಿವರು ಇದನ್ನು ಸಚಿವ ಸಂಪುಟಕ್ಕೆ ತೆಂದುಕೊಂಡು ಹೋಗಿ ಮಾಡಿಸಬೇಕೆಂದು ಕೊರುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಜಿ ಮುಖ್ಯಮಂತ್ರಿಯವರಾದಂತಹ ಶ್ರಿ ಬಂಗಾರಪ್ಪನವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಅವತ್ತಿನ ಕಾಲದಲ್ಲಿ ಹೆಣ್ಣುಮಕ್ಕಳು ಕಲಿಯಬೇಕೆಂದು ಅನುದಾನಿತ ಶಾಲೆಗಳಿಗೆ ಅವರು ಯಾವ ರೀತಿ ಪುರಸ್ಕಾರ ಕೊಟ್ಟರು, ಯಾವ ರೀತಿ ಮಾನ್ಯತೆ ಕೊಟ್ಟರು ಎನ್ನುವುದನ್ನು ನೆನಪು ಮಾಡಿಕೊಳ್ಳಬೇಕು. ಮಾನ್ಯ ಸಚಿವರು ಅಂಥವರ ಮಕ್ಕಳಾಗಿದ್ದಾರೆ. ಇದರಲ್ಲಿ ಏನು ಪ್ರಮಾದ ಆಗಿದೆ? ಅವರು update ಆಗಬೇಕಲ್ಲವೇ? Update ಆಗುವುದಕ್ಕೋಸ್ಕರ ಅವರು ಈ ಜಾಗದಿಂದ ಬೇರೆ ಜಾಗಕ್ಕೆ ಹೋಗಿ ಹೊಸ ಕಟ್ಟಡ ಕಟ್ಟಿದ್ದಾರೆ, ಉತ್ತಮವಾದ ಆಟದ ಮೈದಾನ ಮಾಡಿಕೊಂಡಿದ್ದಾರೆ. ಉತ್ತಮವಾದ ಸೌಕರ್ಯವನ್ನು ಕೊಟ್ಟಿರುವುದೇ ತಪ್ಪಾ? ಮಾನ್ಯ ಸಚಿವರು ಆರ್ಥಿಕ ಇಲಾಖೆಯವರಿಗೆ ಹೇಳಬೇಕು. ಇದನ್ನು rarest of rare case ಎಂದು ತೆಗೆದುಕೊಳ್ಳಬೇಕು. 118 ಶಾಲೆಗಳನ್ನು ಒಂದೇ ಆದೇಶದಲ್ಲಿ ಕೊಟ್ಟಿರುವಂತಹ ಆದೇಶ ಇದೆಯಲ್ಲಾ ಬಹಳ ದೊಡ್ಡ ವಿಚಾರವಾಗಿದೆ. 30 ವರ್ಷ, ಮತ್ತೊಂದು 37 ವರ್ಷ, ಇಂತಹ

ಒಂದು ಆದೇಶ ಕೊಟ್ಟಿರುವಂತಹ ಹಿನ್ನೆಲೆಯಲ್ಲಿ ಅದಕ್ಕೆ ನಾವು ಸಣ್ಣ ಪುರಸ್ಕಾರ ಕೊಟ್ಟರೆ, ಇನ್ನು ಉಳಿದಂತಹ ಶಾಲೆಗಳಿಗೆ ಬೆಳಗ್ಗೆಯೇ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಲಿ. ಮಾನ್ಯ ಸಚಿವರಿಗೆ ಆ ಶಕ್ತಿ ಇದೆ. ದಯವಿಟ್ಟು ಮಾನ್ಯ ಸಚಿವರು ಹೇಳಲಿ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಸಚಿವ ಸಂಪುಟದಲ್ಲೂ ತನ್ನಿ ಎಂದು ಹೇಳಿದ್ದಾರೆ. ಅವರು ಏನು ಮನವಿ ಮಾಡಿದ್ದಾರೆ ಅದರ ಪೂರಕವಾಗಿ ಅವರಿಗೆ ಸಹಕಾರ ಕೊಡುವಂತಹ ರೀತಿಯಲ್ಲಿ ಇಲಾಖೆಯವರ ಜೊತೆ ಮಾತನಾಡಿಕೊಂಡು ಸಚಿವ ಸಂಪುಟದಲ್ಲಿ ತರುವಂತಹ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಡುತ್ತೇನೆಂದು ಹೇಳಲಿ.

**ಸಭಾಪತಿಯವರು:-** ಈಗ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಹಿಂದೆ ನಾವೆಲ್ಲಾ ಎಷ್ಟು ಹೋರಾಟ ಮಾಡಿದ್ದೇವೆ. ಬೇರೆ ಯಾರು ಹೋರಾಟ ಮಾಡಿರಲಿಲ್ಲ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಸ್ಥಳಾಂತರ ವಿಷಯವಿದೆಯಲ್ಲಾ unnecessary ಆಗಿ ಬಹಳ ಸಮಸ್ಯೆ ಉಂಟು ಮಾಡುತ್ತಿದ್ದಾರೆ. ಅವರು ಖರ್ಚು ಮಾಡಿ ಹೊಸ ಕಟ್ಟಡವನ್ನು ಕಟ್ಟಿ ಹೋಗಿರುತ್ತಾರೆ. ಅದಕ್ಕೆ ಅನುಮತಿಯನ್ನು ಕೊಡಿ ಎಂದು ಕೇಳುವುದು ಸರಿಯಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾಡುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಅಭಿನಂದಿಸಬೇಕು.

**೦೪. ನಿಯಮ ೩೩೦ರ ಮೇರೆಗೆ ಚರ್ಚೆ**

**ವಿಷಯ: ರಾಜ್ಯದ ಇತರೆ ಭಾಗಗಳಿಂದ ಕರಾವಳಿಗೆ ಸಂಪರ್ಕ ಕೊಂಡಿಯಾಗಿರುವ ಘಾಟ್ ಪರಿಸರದಲ್ಲಿ ಬರುವ ಹೆದ್ದಾರಿಯಲ್ಲಿ ಹೆಚ್ಚು ಮಳೆಯಿಂದಾಗಿ ರಸ್ತೆ ಕುಸಿತದಿಂದ ಸಂಚಾರ ವ್ಯತ್ಯಯ ಉಂಟಾಗುತ್ತಿರುವುದನ್ನು ತಪ್ಪಿಸಲು ಶಾಶ್ವತ ಮತ್ತು ದೀರ್ಘಕಾಲಿಕ ಉಪಯೋಗದ ಯೋಜನೆಯನ್ನು ಸರ್ಕಾರ ರೂಪಿಸದಿರುವ ಬಗ್ಗೆ.**

--------

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರಾವಳಿ ಭಾಗದ ವಿಶೇಷ ಸಮಸ್ಯೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುತ್ತಿದ್ದೇನೆ. ಕರಾವಳಿ ಪ್ರದೇಶಕ್ಕೆ ರಾಜ್ಯದ ರಾಜಧಾನಿ ಮತ್ತು ಘಾಟ್ ಪ್ರದೇಶದಿಂದ ಸಂಪರ್ಕಿಸಲು ಹೆದ್ದಾರಿ ಮೂಲಕವೇ ನಾವು ಆಗಮಿಸಬೇಕು. ಶಿರಾಡಿ, ಚಾರ್ಮಾಡಿ, ಆಗುಂಬೆ, ಸಂಪಾಜೆ, ಬಿಸಿಲೆ, ಬಾಳೆಬರೆ ಮತ್ತು ನಿಟ್ಟೂರು, ಈ 7 ಘಾಟ್‌ಗಳು ಕರಾವಳಿಯ ಸಂಪರ್ಕದ ಕೊಂಡಿಗಳಾಗಿವೆ. ಯಾವುದಾರೊಂದು ಘಾಟ್‌ನಲ್ಲಿ ಭೂಕುಸಿತದಿಂದಾಗಿ ಏನಾದರೂ ವ್ಯತ್ಯಾಸವಾದರೆ ಇಡೀ ಅಲ್ಲಿಯ ಜೀವನದ ನರನಾಡಿಗಳಂತಿರುವ ಈ ರಸ್ತೆಗಳ ಕಾರಣಕ್ಕೆ ಅಲ್ಲಿ ತೊಂದರೆಗಳನ್ನು ಅನುಭವಿಸುತ್ತಾರೆ. ರಾಜ್ಯಕ್ಕೆ ಪ್ರಮುಖ ಬಂದರುಗಳು, ವ್ಯವಹಾರ ಹಾಗೂ ಪ್ರವಾಸೋದ್ಯಮದ ದೃಷ್ಟಿಯಿಂದಲೂ ಎಲ್ಲಾ ರೀತಿಯಿಂದಲೂ ಪ್ರಮುಖವಾಗಿರುವಂಹ ಈ ರಸ್ತೆ ಮಳೆಗಾಲದಲ್ಲಿ ನಾವು ನೋಡಿದ್ದೇವೆ. ರಸ್ತೆಯ ಕಾಮಗಾರಿಗಳು ಆಗುತ್ತವೆ. ಆದರೆ ಪ್ರತಿ ವರ್ಷ ಎಂದು ಹೇಳುವ ಹಾಗೆ ಭೂಕುಸಿತವಾಗುತ್ತದೆ. ರಸ್ತೆಯಲ್ಲಿ ಸಂಚಾರದ ವ್ಯತ್ಯಯವಾಗುತ್ತದೆ. ಜನಜೀವನ ಅಸ್ತವ್ಯಸ್ತವಾಗುತ್ತದೆ. ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಪಶ್ಚಿಮ ಘಟ್ಟವೆಂದು ಹೇಳಿದರೆ ಅದು ಬಹಳ ಸೂಕ್ಷ್ಮ ಪ್ರದೇಶವಾಗಿದೆ. ಜೀವನ ವೈವಿಧ್ಯಮವಾಗಿರುವಂತಹ ಪ್ರದೇಶ, ಜೊತೆಗೆ ಇಲ್ಲಿ ರಸ್ತೆಗಳನ್ನು ಮಾಡುವುದು ಎಂದರೆ ಒಂದರ್ಥದಲ್ಲಿ ಅದೊಂದು ಸವಾಲು ಆಗಿರುತ್ತದೆ. ಆದರೂ ಕೂಡ ಎಲ್ಲೋ ಒಂದು ಕಡೆ ಸರಿಯಾದ ವೈಜ್ಞಾನಿಕವಾಗಿರುವಂತಹ ಆಲೋಚನೆ ಈ ರಸ್ತೆಗಳ ನಿರ್ಮಾಣದ ಸಂದರ್ಭದಲ್ಲಿ ಮಾಸ್ಟರ್ ಪ್ಲಾನ್ ಮಾಡಿಕೊಳ್ಳಬೇಕಾಗುತ್ತದೆ. ಬೇರೆ ಎಲ್ಲಾ ಕಡೆ ರಸ್ತೆ ಮಾಡುವುದಕ್ಕೂ ಈ ಪಶ್ಚಿಮ ಘಟ್ಟದಲ್ಲಿ ರಸ್ತೆ ಮಾಡುವುದಕ್ಕೂ ವ್ಯತ್ಯಾಸವಿದೆ. ಒಮ್ಮೊಮ್ಮೆ ಹೇಗೆ ಕಾಣಿಸುತ್ತದೆಂದರೆ, ಯಾರೋ ಒಬ್ಬರು ಗುತ್ತಿಗೆದಾರರು ಟೆಂಡರ್‌ನಲ್ಲಿ ತೆಗೆದುಕೊಳ್ಳುತ್ತಾರೆ. ಅಲ್ಲಿಗೆ ಬಂದು ಅಲ್ಲಿಯ ವ್ಯವಸ್ಥೆ, ಮಳೆಯ ರೀತಿ ಅವರಿಗೆ ಅದರ ಅನುಭವವೇ ಇರುವುದಿಲ್ಲ. ಜೆಸಿಬಿ ಗಳನ್ನು ತಂದು ಬಹಳ ದೊಡ್ಡ ಪ್ರಮಾಣದಲ್ಲಿ ಅದನ್ನು ಅಗೆದು ಹಾಕುತ್ತಾರೆ. ಅದು ಮುಂದೆ

ಏನಾದಿತು ಎಂದು ಹೇಳುವಂತಹ ಸ್ವಲ್ಪವಾದರೂ ಮುಜಾಗ್ರತೆಯಾಗಲಿ, ಮುಂದಾಲೋಚನೆಯಾಗಲಿ ಏನು ಇರುವುದಿಲ್ಲ. ಅವರಿಗೆ ಅಲ್ಲಿ ರಸ್ತೆ ಮಾಡಿ ಹೋಗುವಂತಹ ತರಾತುರಿ ಇರುತ್ತದೆ. ಅದರ ಮಧ್ಯ ಇಲ್ಲಿ ಮಳೆಯ ಕಾರಣಕ್ಕಾಗಿ, ಇವರು ಪ್ರಾರಂಭ ಮಾಡುವ ಕೆಲಸಗಳು ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ಎರಡು ವರ್ಷ, ಮೂರು ವರ್ಷ ತೆಗೆದುಕೊಳ್ಳುತ್ತಾರೆ. ಹಾಸನದಿಂದ ಶಿರಾಡಿ ಘಾಟ್ ಮೇಲೆ ಹೋಗುವಂತಹ ರಸ್ತೆ ನಿರ್ಮಾಣ ಕಾಮಗಾರಿಯ ಕೆಲಸ ಪ್ರಾರಂಭವಾಗಿ 8 ವರ್ಷಗಳ ಮೇಲಾಯಿತು. ಇನ್ನು ಸಹ ಹಾಸನದಿಂದ ಸಕಲೇಶಪುರ ರಸ್ತೆ ಕಾಮಗಾರಿ ಪೂರ್ಣಗೊಂಡಿಲ್ಲ. ಅದು ಯಾವಾಗ ಮುಗಿಯುತ್ತದೆಂದು ಪ್ರತಿ ಬಾರಿ ಪ್ರತಿ ಮಳೆಗಾಲ ಬರುವಾಗ ಜನರು ಶಾಪ ಹಾಕುವುದಕ್ಕೆ ಶುರು ಮಾಡುತ್ತಾರೆ.

**ಶ್ರೀ ಸತೀಶ ಜಾರಕಿಹೊಳಿ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರ ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಮಾನ್ಯ ಸದಸ್ಯರಾದ ಪ್ರತಾಪ ಸಿಂಹ ನಾಯಕ್‌ರವರು ಪ್ರಸ್ತಾಪ ಮಾಡಿದ್ದಾರೆ. ಶಿರಾಡಿ, ಚಾರ್ಮಾಡಿ, ಆಗುಂಬೆ, ಸಂಪಾಜೆ, ಬಿಸಿಲೆ, ಬಾಳೆಬರೆ ಹಾಗೂ ನಿಟ್ಟೂರು ಘಾಟ್, ಈ 7 ಘಾಟ್‌ಗಳು ಕರಾವಳಿಯ ಸಂಪರ್ಕ ಕೊಂಡಿಗಳಾಗಿವೆ. ಇವುಗಳು ಸುಮಾರು 4 ರಾಷ್ಟ್ರೀಯ ಹೆದ್ದಾರಿಗಳ ರಸ್ತೆಗಳಾಗಿವೆ. ಇದು ಮುಖ್ಯವಾಗಿ ಅವರು ಮಾಡಬೇಕಾಗಿರುವಂಥದ್ದು. ಅವರು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ನಾವು ಅವರಿಗೆ ಸಲಹೆಗಳನ್ನು ಕೊಡಬಹುದೇ ಹೊರತು, ನಾವು ನೇರವಾಗಿ ಅಲ್ಲೇನು ಮಾಡುವುದಕ್ಕೆ ಸಾಧ್ಯವಿಲ್ಲ. ಬಹುಶಃ ಒಂದೆರಡು ರಸ್ತೆಗಳು ನಮಗೆ ಬರಬಹುದು. ಇದರ ಬಗ್ಗೆ ಸುದೀರ್ಘವಾಗಿ ಅವರ ಜೊತೆ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಈ ಸಲ ಹೆಚ್ಚು ಮಳೆ ಬರುತ್ತಿರುವುದರಿಂದ ಹೆಚ್ಚು ಅನಾಹುತಗಳು ಸಂಭವಿಸುತ್ತಿವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದು ಬಹಳ ಅವಶ್ಯಕತೆ ಇದೆ. ಕಾರವಾರ, ಅಂಕೋಲಾ, ಶಿರೂರು ಹತ್ತಿರ ಬಹಳ ದೊಡ್ಡ ಅನಾಹುತವಾಗಿದೆ. ಮಾನ್ಯ ಸದಸ್ಯರಿಗೆ ಅದೇ ಮಾದರಿಯಲ್ಲಿ ಇಲ್ಲಿಯೂ ಆಗಬಹುದೆನ್ನುವ ಆತಂಕವಿದೆ. ಇದರ ಬಗ್ಗೆ ಬಹಳ ಸುದೀರ್ಘವಾಗಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಕೇಂದ್ರ ಸಾರಿಗೆ ಸಚಿವರ ಜೊತೆ ಚರ್ಚೆ ಮಾಡಿದಾಗ ಮಾತ್ರ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು. ಅದಕ್ಕಾಗಿ ತಾವು ಸಲಹೆಯನ್ನು ನೀಡಿದರೆ ನಾನು ನಮ್ಮ ಇಲಾಖೆಯ ಜೊತೆ ಚರ್ಚೆ ಮಾಡಿ ಪರಿಹಾರ ಹುಡುಕುವಂತಹ ಪ್ರಯತ್ನ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪ ಸಿಂಹ ನಾಯಕ್‌ರವರು ಒಳ್ಳೆಯ ಪ್ರಶ್ನೆಯನ್ನು ನಿಯಮ 330ರ ಅಡಿಯಲ್ಲಿ ತಂದಿದ್ದಾರೆ. ಕಳೆದ ಒಂದು ತಿಂಗಳಿನಿಂದ ಘಾಟ್‌ಗಳಲ್ಲಿ ಹೋಗುವುದಕ್ಕೆ ಆಗುತ್ತಿಲ್ಲ. 15 ದಿವಸಗಳಿಂದ ಘಾಟ್‌ಗಳನ್ನು ಬಂದ್ ಮಾಡಿದ್ದಾರೆ. ಬಸ್‌ಗಳು ರಾತ್ರಿ ಮೈಸೂರಿಗೆ ಹೋಗಿ, ಮೈಸೂರಿನಿಂದ ಮಡಿಕೇರಿಗೆ ಹೋಗಿ, ಆ ಮಾರ್ಗದಲ್ಲಿ ಬರಬೇಕು. ಅದು ಬಂದ್ ಮಾಡಿದ್ದಾರೆ. ಈಗ ಚಾರ್ಮಾಡಿ ಘಾಟ್ ಅಥವಾ ಶಿರಾಡಿ ಘಾಟ್ tunnel road ಅನ್ನು ಮಾಡುತ್ತೇನೆಂದು ಬಹಳ ಸಮಯಗಳಿಂದ ಮಾತುಕತೆಗಳಾಗುತ್ತಿತ್ತು. ಅದು ಅನುಷ್ಠಾನವಾಗಲಿಲ್ಲ. ವರ್ಷ ಪೂರ್ತಿ ಇದೇ ಕಥೆಗಳಾಗಿವೆ. ಗುಡ್ಡೆ ಜರಿತವಾಗುವುದು, ರಸ್ತೆ ಜರಿತವಾಗುವುದು, ತಿಂಗಳುಗಟ್ಟಲೆ ರಸ್ತೆಗಳನ್ನು ಬಂದ್ ಮಾಡುವಂಥದ್ದು. ಮಂಗಳೂರಿಗೆ ಹೋಗಬೇಕೆಂದರೆ ಪ್ರಮುಖವಾಗಿ ಶಿರಾಡಿ ಘಾಟ್‌ನಿಂದ ಹೋಗಬೇಕು ಅಥವಾ ಚಾರ್ಮಾಡಿ ಘಾಟ್‌ನಿಂದ ಹೋಗಬೇಕು. ಈ ಎರಡು ಘಾಟ್‌ಗಳು ಬಂದ್ ಆದರೆ ಜನರ ಸಂಚಾರವೇ ಸ್ಥಗಿತವಾಗುವಂತಹ ಪ್ರಸಂಗ ಬರುತ್ತದೆ. ಮೊನ್ನೆ ನಮ್ಮ ಕೆಳಮನೆಯ ಸಭಾಧ್ಯಕ್ಷರು ಎಲ್ಲಾ ಮುಖ್ಯ ಕಾರ್ಯದರ್ಶಿಗಳನ್ನು ಕರೆದು ಜನರ

ಸಂಕಷ್ಟವನ್ನು ನೋಡಿ ಅಲ್ಲಿ ಸಮನ್ವಯತೆಯನ್ನು ಮಾಡಿ, ಯಾವುದಾದರೊಂದು ರಸ್ತೆಯಲ್ಲಿ ಅವರಿಗೆ ಮಂಗಳೂರಿಗೆ ತಲುಪುವ ಹಾಗೆ ಮಾಡಿ ಅಥವಾ ಉಡುಪಿಯನ್ನು ತಲುಪುವ ಹಾಗೆ ಮಾಡಿ ಎಂದು ಹೇಳಿದ್ದಾರೆ. ಹಾಗಾಗಿ ಮಾನ್ಯ ಸಚಿವರೇ, ಇದು ಒಂದು long pending issue ಇದೆ. ಬಹಳ ವರ್ಷಗಳಿಂದ ಈ ರೀತಿಯ ಸಮಸ್ಯೆಗಳಿಗೆ ಜನರು ಈಡಾಗುತ್ತಿದ್ದಾರೆ. ಮಾನ್ಯ ಸಚಿವರು ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಯಾವುದಾದರೂ ರೀತಿಯಲ್ಲಿ ಇದಕ್ಕೊಂದು ಪರಿಹಾರವನ್ನು ಕಂಡುಹಿಡಿಯಬೇಕು. ಶ್ರೀ ಆಸ್ಕರ್ ಫರ್ನಾಂಡಿಸ್‌ರವರು ಕೇಂದ್ರ ಭೂ ಸಾರಿಗೆ ಸಚಿವರಾಗಿದ್ದಾಗ ಶಿರಾಡಿ ಘಾಟ್ 22 ಕಿ.ಮೀ. ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಿದರು. ಈಗ ಅದು ಪ್ರಯೋಜನವಿಲ್ಲದಿರುವಂತಹ ಪರಿಸ್ಥಿತಿಯಾಗಿದೆ. ಮಾನ್ಯ ಸಚಿವರು ಘಾಟ್‌ನ್ನೇ ಬಂದ್ ಮಾಡಿದ್ದಾರೆ. ರಾತ್ರಿ 6 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ಯಾವುದೇ ವಾಹನ ಸಂಚಾರಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ. ತಮ್ಮ ಹತ್ತಿರ ನಾನು ವಿನಂತಿ ಮಾಡುತ್ತೇನೆ, ತಾವು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿ ಅಥವಾ ಅವರನ್ನು ಕರೆದು ಮಾತನಾಡಿ. ರಾತ್ರಿ ಸಮಯ ವಾಹನ ಸಂಚಾರವಿಲ್ಲ ಎಂದು ಹೇಳಿದರೆ ಏನರ್ಥ? ಅಗತ್ಯವಿದ್ದರೆ ಏನು ಮಾಡಬೇಕು? ಹಾಗಾಗಿ ಇದರ ಬಗ್ಗೆ ಪರಿಹಾರ ಕಂಡುಹಿಡಿಯಬೇಕೆಂದು ನಾನು ತಮಗೆ ವಿನಂತಿ ಮಾಡುತ್ತಿದ್ದೇನೆ.

(ಮುಂದು)

(609) 22/07/2024 6:20/ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ(ಮುಂದು):-**

ಟನಲ್ ಮಾಡುವುದರ ಬಗ್ಗೆಯೂ ಸಹ ನಾವು ಕೇಳಿದ್ದೇವೆ. ಆದರೆ ಈ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಎನ್ನುವುದು ತಿಳಿದಿಲ್ಲ. ಈ ಬಗ್ಗೆ ನಾವು ಬಹಳಷ್ಟು ವರ್ಷಗಳಿಂದ ಮಾತನಾಡುತ್ತಿದ್ದೇವೆ. ಜಪಾನ್ ಮಾದರಿಯಲ್ಲಿ ಮಾಡುವುದಾಗಿ ಹೇಳಿದ್ದರು; ಆದರೆ ಇದನ್ನು ಇನ್ನೂ ಅನುಷ್ಠಾನಗೊಳಿಸಿಲ್ಲ. ಸರ್ಕಾರವು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಶ್ರೀ ಪ್ರತಾಪ ಸಿಂಹ ನಾಯಕ್ ರವರು ಬಹಳ ಗಂಭೀರವಾದ ವಿಷಯದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ತಮಗೆ ತಿಳಿದಿರುವಂತೆ, ಬೆಂಗಳೂರು ನಗರದ ನಂತರ ದಕ್ಷಿಣ ಜಿಲ್ಲೆಯು ಅತೀ ಹೆಚ್ಚಿನ ಆರ್ಥಿಕ ಕ್ಷೇತ್ರದಲ್ಲಿ ಪ್ರಬಲವಾಗಿರುವ ಜಿಲ್ಲೆಯಾಗಿದೆ. ಆರ್ಥಿಕ ಚಟುವಟಿಕೆಗಳು ನಡೆಯಬೇಕಾದರೆ, ಅದಕ್ಕೆ ಮೂಲಭೂತ ಸೌಕರ್ಯಗಳು ಬಹಳ ಪ್ರಮುಖವಾಗಿ ಅವಶ್ಯಕವಾಗಿರುತ್ತವೆ. ಶ್ರೀ ಐವನ್ ಡಿ'ಸೋಜಾ ರವರು ಪ್ರಸ್ತಾಪಿಸಿದಂತೆ, ದಿವಂಗತ ಆಸ್ಕರ್

ಫರ್ನಾಂಡಿಸ್‌ರವರು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಸುಮಾರು ನೂರು ಕೋಟಿ ರೂಪಾಯಿಗಳ ಯೋಜನೆಯನ್ನು ಶಿರಾಡಿ ಘಾಟ್‌ಗಾಗಿ ನೀಡಿದ್ದರು. ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಿದರು. ಸುಮಾರು ವರ್ಷಗಳು ಕಳೆದರೂ ಸಹ ಶಿರಾಡಿ ಘಾಟ್ ಯಾವ ರೀತಿಯಾಗಿ ಅಭಿವೃದ್ಧಿಯಾಗುತ್ತದೆ ಅಥವಾ ಉದ್ಧಾರವಾಗುತ್ತದೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಸದಸ್ಯರು ಪ್ರಸ್ತಾಪಿಸಿದಂತೆ, ಇದು ಮುಖ್ಯ ಸಂಪರ್ಕ ಕೇಂದ್ರವಾಗಿತ್ತು. ಅಲ್ಲಿನ ಚಾರ್ಮುಡಿ ಘಾಟ್ ಬಹಳ ಕಿರಿದಾದ ಘಟ್ಟಪ್ರದೇಶವಾಗಿದೆ. ಈ ರಸ್ತೆಯನ್ನು ಹೊರತುಪಡಿಸಿ, ನಾವು ಮಡಿಕೇರಿ-ಸಂಪಾಜೆ ರಸ್ತೆಯ ಮೇಲೆ ಹೋಗಬೇಕಾಗುತ್ತದೆ. ಮಳೆ ಬಂದಾಗ ಅಲ್ಲಿನ ರಸ್ತೆ ಎಲ್ಲಾ ಕುಸಿದು ಬಿದ್ದು ಎಲ್ಲವೂ ಸ್ಥಗಿತಗೊಂಡಿದೆ. ಈ ಮೊದಲು ರಸ್ತೆಯ ಮುಖಾಂತರ ಸುಮಾರು ನಾಲ್ಕೂವರೆ ಐದು ಗಂಟೆಗಳಲ್ಲಿ ಮಂಗಳೂರನ್ನು ತಲುಪುತ್ತಿದ್ದೆವು. ಆದರೆ ಈಗ ರಸ್ತೆ ಪ್ರಯಾಣ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆಗ ನಾವು ಚಾರ್ಮುಡಿ ಅಥವಾ ಆಗುಂಬೆ ಮುಖಾಂತರ ಪ್ರಯಾಣಿಸಬೇಕು. ಆಗುಂಬೆ ರಸ್ತೆಯೂ ಬಹಳ ಕಿರಿದಾಗ ಹಾಗೂ ಪಾರಂಪಾರಿಕವಾದ ಘಟ್ಟ ಪ್ರದೇಶವಾಗಿದೆ. ಇಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಅವೈಜ್ಞಾನಿಕವಾದ ರೀತಿಯಲ್ಲಿ ರಸ್ತೆಗಳನ್ನು ನಿರ್ಮಿಸಿದ್ದಾರೆ. ಅದು ಶಿರಾಡಿ ಮತ್ತು ಚಾರ್ಮುಡಿ ಘಾಟ್‌ಗಳಬರಹುದು ಅಥವಾ ಸಂಪಾಜೆ ಇರಬಹುದು. ಈ ವಿಚಾರದಲ್ಲಿ ಸರ್ಕಾರವು ಬಹಳ ಗಂಭೀರವಾಗಿ ಆಲೋಚನೆ ಮಾಡಿ, ಇದನ್ನು ಯಾವ ರೀತಿಯಾಗಿ ಸುಧಾರಣೆ ಮಾಡುವುದಕ್ಕಾಗುತ್ತದೆ ಎಂದು ಯೋಚನೆ ಮಾಡಿದಾಗ ಮಾತ್ರ ಅನುಕೂಲವಾಗುತ್ತದೆ. ಈಗಾಗಲೇ ಹೇಳಿದಂತೆ, ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿಯೇ ಅತೀ ಹೆಚ್ಚಿನ ಜಿ.ಎಸ್.ಟಿ. ಪಾವತಿಸುವ ಜಿಲ್ಲೆಗಳ ಪೈಕಿ ಎರಡನೇ ಸ್ಥಾನದಲ್ಲಿದೆ. ಹೀಗಾಗಿ ಅಲ್ಲಿನ ರಸ್ತೆ ಅಭಿವೃದ್ಧಿಯ ಕಾರ್ಯ ಚಟುವಟಿಕೆಗಳು ಇನ್ನೂ ತ್ವರಿತವಾಗಿ ಆಗಬೇಕಾದರೆ, ಸರ್ಕಾರವು ಇದರ ಬಗ್ಗೆ ಗಮನವನ್ನು ಹರಿಸಬೇಕು ಎಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಚಾರವು ತಮಗೆಲ್ಲಾ ತಿಳಿದಿದ್ದೇ ಇದೆ; ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಒಂದು ಬಾರಿ ಶಿರಾಡಿ ಘಾಟ್ ರಸ್ತೆ ಬ್ಲಾಕ್ ಆದರೆ, ಚಾರ್ಮುಡಿ ಘಾಟ್ ರಸ್ತೆ ಬಹಳ ಪೂರ್ತಿಯಾಗಿ ಬಿಝಿಯಾಗಿ ಬಿಡುತ್ತದೆ. ಕೆಲವೊಮ್ಮೆ ಅಲ್ಲಿ 8-10 ಗಂಟೆಗಳ ಕಾಲ ಬ್ಲಾಕ್ ಆಗಿ ನಿಲ್ಲುವ ಪರಿಸ್ಥಿತಿಯುಂಟಾಗುತ್ತದೆ. ನಾವೂ ಸಹ ಈ ಸಮಸ್ಯೆಯನ್ನು ಅನುಭವಿಸಿದ್ದೇವೆ. ಹೀಗಾಗಿ ಶಿರಾಡಿ ಘಾಟ್ ರಸ್ತೆಗೆ ಎಷ್ಟು ಮಹತ್ವವನ್ನು ನೀಡಲಾಗುತ್ತದೆಯೋ ಅಷ್ಟೇ ಮಹತ್ವವನ್ನು ಚಾರ್ಮುಡಿ ಘಾಟ್ ಹಾಗೂ ಆಗುಂಬೆ ರಸ್ತೆಗಳಿಗೂ ಸಹ ನೀಡಬೇಕಾಗುತ್ತದೆ. ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಗೆ ಉಡುಪಿ ಮತ್ತು ಮಂಗಳೂರು ನಗರಗಳಿಗೆ ಸಂಪರ್ಕವನ್ನು ಕಲ್ಪಿಸುವ ಮೂರು ಹೆದ್ದಾರಿಗಳು ಬಹಳ ಮಹತ್ವದ್ದಾಗಿವೆ. ಸಾವಿರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.

ನೆರೆಯ ಕೇರಳ ರಾಜ್ಯದಿಂದ ಕೊಲ್ಲೂರು ದೇವಸ್ಥಾನಕ್ಕೆ ಜನರು ಬರುತ್ತಾರೆ. ಆ ಭಾಗದ ಧರ್ಮಸ್ಥಳ ಹಾಗೂ ಅನ್ನಪೂರ್ಣೇಶ್ವರಿ ದೇವಸ್ಥಾಗಳಗೂ ಸಹ ಭಕ್ತರು ಭೇಟಿ ನೀಡುತ್ತಾರೆ. ಬಹಳಷ್ಟು ಪವಿತ್ರವಾದ ದೇವಸ್ಥಾನಗಳು ಈ ಭಾಗದಲ್ಲಿಯೇ ಇವೆ. ಹೀಗಾಗಿ ಲೋಕೋಪಯೋಗಿ ಸಚಿವರು ಈ ಬಗ್ಗೆ ಬಹಳಷ್ಟು ಗಮನವನ್ನು ಹರಿಸಬೇಕು. Short Term Maintenance Scheme ಯೋಜನೆಗಳಡಿ ಸರ್ಕಾರವು ಕೆಲಸಗಳನ್ನು ಮಾಡುತ್ತಿದೆ. ದೇವರ ಆಣೆಯಾಗಿ ಹೇಳುತ್ತೇನೆ ಇದು ಒಂದು ಪೈಸೆಯಷ್ಟೂ ಉಪಯೋಗವಾಗುತ್ತಿಲ್ಲ. 2024-25 ನೇ ಸಾಲಿನಲ್ಲಿ ಇದಕ್ಕಾಗಿ 18 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. 2023-24 ನೇ ಸಾಲಿನಲ್ಲಿ ಸುಮಾರು 39 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮೀಸಲಿಡಲಾಗಿದೆ. ನಾನು ಹೆಚ್ಚು ಕಡಿಮೆ ದಿನ ಬಿಟ್ಟು ದಿನಗಳಂದು ಆ ಪ್ರದೇಶದಲ್ಲಿಯೇ ತಿರುಗಾಡುತ್ತಿರುತ್ತೇನೆ. ನಾನು ನೋಡಿದ ಹಾಗೆ, ಅಲ್ಲಿ ಒಂದು ತಡೆಗೋಡೆಯನ್ನು ನಿರ್ಮಿಸುತ್ತಾರೆ; ಮತ್ತೊಂದು ಬಾರಿ ಅಲ್ಲಿಗೆ ಹೋಗಿ ನೋಡಿದಾಗ ಅದು ಇರುವುದೇ ಇಲ್ಲ. ಇಷ್ಟರ ಮಟ್ಟಿಗೆ ಅಲ್ಲಿ ಬಹಳ ಅವೈಜ್ಞಾನಿಕವಾಗಿ ಮತ್ತು ಕಳಪೆ ಕಾಮಗಾರಿಗಳನ್ನು ಮಾಡಿರುವುದನ್ನು ನಾನು ಎಲ್ಲಿಯೂ ಸಹ ನೋಡಿಲ್ಲ. ಇಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾದರೆ, ಸರಿಯಾದ ರೂಪು-ರೇಷೆಗಳನ್ನು ಮೊದಲು ತಯಾರು ಮಾಡಿ, ಕಾಮಗಾರಿಗಳನ್ನು ಮಾಡಿದರೆ ಮಾತ್ರವೇ ಅಭಿವೃದ್ಧಿ ಸಾಧ್ಯವಾಗುತ್ತದೆ. ಅಲ್ಲಿನ ಅಣ್ಣಪ್ಪ ದೇವಸ್ಥಾನದಿಂದ ಮುಂದೆ ಹೋದರೆ, ಅಲ್ಲಿ ದೊಡ್ಡ ಬಂಡೆಯೊಂದು ಇದೆ. ಅದರ ಬಳಿ ಕೇವಲ ಒಂದು ವಾಹನ ಮಾತ್ರವೇ ಚಲಿಸುತ್ತದೆ. ಮತ್ತೊಂದು ಕಡೆಯಿಂದ ಇನ್ನೊಂದು ವಾಹನ ಅಲ್ಲಿಗೆ ಬಂದರೆ, ಅದು ಸಾಗುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಬಹಳ ನುರಿತ ಕೆಲಸಗಾರರ ಅವಶ್ಯಕತೆ ಇದೆ. ಇಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿ ಕಾಮಗಾರಿಗಳನ್ನು ಮಾಡಿದರೆ ಮಾತ್ರವೇ, ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಲಕ್ಷಾಂತರ ಜನರಿಗೆ ಈ ರಸ್ತೆಯಿಂದ ಬಹಳವಾಗಿ ಅನುಕೂಲವಾಗುತ್ತದೆ. ಈ ಹಿಂದೆ ನಾನು ಚಿಕ್ಕಮಗಳೂರಿನಿಂದ ಧರ್ಮಸ್ಥಳಕ್ಕೆ ಸುಮಾರು ಒಂದು ಗಂಟೆ ಐದು-ಹತ್ತು ನಿಮಿಷಗಳಲ್ಲಿ ತಲುಪುತ್ತಿದ್ದೆನು. ಆದರೆ, ಇವತ್ತಿನ ದಿವಸ ಎರಡು-ಎರಡೂವರೆ ಗಂಟೆಗಳಾದರೂ ಪ್ರಯಾಣ ಪೂರ್ಣಗೊಳ್ಳುತ್ತಿಲ್ಲ. ಇಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ದಯಮಾಡಿ ಸಚಿವರು ಇದರ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು. ಒಂದು ವೇಳೆ, ಈ ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದಾಗಿದ್ದರೆ, ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಿ, ಯಾವ ರೀತಿಯಲ್ಲಿ ಕಾಮಗಾರಿಗಳನ್ನು ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲಿ ಪ್ರಸ್ತಾಪಿಸಿರುವ ಘಾಟ್ ರಸ್ತೆಗಳೆಲ್ಲವೂ ಮಹತ್ವದ್ದಾಗಿವೆ. ಶಿರಾಡಿ, ಚಾರ್ಮುಡಿ ಮತ್ತು ಆಗುಂಬೆ ಘಾಟ್ ಈ ಮೂರು

ರಸ್ತೆಗಳು ಬಹಳ ಮಹತ್ವದ ಸಂಪರ್ಕವನ್ನು ಹೊಂದಿವೆ. ಹೇಗಾದರೂ ಮಾಡಿ, ಈ ರಸ್ತೆಯನ್ನು ಸರ್ಕಾರವು ಅಭಿವೃದ್ಧಿಪಡಿಸಬೇಕು. ಬಹಳ ವರ್ಷಗಳಿಂದಲೂ ಇದು ಬಾಕಿ ಉಳಿದಿದೆ. ಈ ವರ್ಷ ಆಗುಂಬೆ ಘಾಟ್‌ನಲ್ಲಿ ಸುರಂಗ ಮಾರ್ಗದ ಕಾಮಗಾರಿ ಬಂತು ಎಂದು ಯಾರೋ ಹೇಳುತ್ತಿದ್ದರು.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಂಗಳೂರಿನಲ್ಲಿ ಬಂದರು ಇದೆ. ನಮ್ಮ ರಾಜ್ಯದಲ್ಲಿಯೇ ದೊಡ್ಡ ಬಂದರು ಇದಾಗಿದೆ. ನಮ್ಮ ಯಾವುದೇ ಸರಕುಗಳು ಹೋಗಬೇಕೆಂದರೆ, ಅವುಗಳು ಈ ಘಾಟ್ ರಸ್ತೆಗಳ ಮುಖಾಂತರವೇ ಸಾಗಬೇಕು. ಹೆಚ್ಚಿನ ವ್ಯಾಪಾರಸ್ಥರು ನೆರೆಯ ತಮಿಳುನಾಡಿನ ರಾಜ್ಯದ ಚೆನ್ನೈ ನಗರದ ಬಂದರಿಗೆ ಹೋಗುತ್ತಿದ್ದಾರೆ. ಇತ್ತೀಚೆಗೆ ನಾನು ಕೈಗಾರಿಕಾ ಸಚಿವರೊಂದಿಗೆ ಜಪಾನ್ ಮತ್ತು ಸೋಲ್ ನಗರಗಳಿಗೆ ಭೇಟಿ ನೀಡಿದಾಗ ಅವರುಗಳು "ಮಂಗಳೂರು ಬಂದರಿಗೆ ಹೋಗುವುದಕ್ಕೆ ರಸ್ತೆಗಳು ಸರಿಯಾಗಿ ಇರುವುದಿಲ್ಲ; ಹೀಗಾಗಿ ನಾವು ಚೆನ್ನೈನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇವೆ" ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಿದರು. ಇದರಿಂದಾಗಿ ನಮ್ಮ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ನಮಗೆ ಬರಬೇಕಾದ ಆದಾಯವು ನೆರೆಯ ತಮಿಳುನಾಡಿನ ಪಾಲಾಗುತ್ತಿದೆ. ಹೀಗಾಗಿ ಸಚಿವರು ಈ ವಿಚಾರದಲ್ಲಿ ಬಹಳ ಸ್ಪಷ್ಟವಾದ ಗಮನವನ್ನು ಹರಿಸಬೇಕೆಂದು ಕೋರುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅದರ ಪರಿಣಾಮವಾಗಿ ವಿಮಾನಯಾನದ ವೆಚ್ಚವೂ ಸಹ ವೃದ್ಧಿಯಾಗುತ್ತಿದೆ.

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಸಭಾಪತಿಯವರೆ, ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕಾದಾಗ, ಸರಕುಗಳನ್ನು ತೆಗೆದುಕೊಂಡು ಹೋಗಲು ಬೇಕಾದ ವ್ಯವಸ್ಥೆಯ ಬಗ್ಗೆ ಮುಂಚಿತವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಘಾಟ್‌ಗಳಲ್ಲಿನ ರಸ್ತೆಗಳು ಕುಸಿಯುತ್ತಿರುವುದರಿಂದ ಇದರ ಬಗ್ಗೆ ಸರ್ಕಾರವು ಗಮನಹರಿಸಬೇಕು. ಟೆಂಡರ್ ಕರೆದಾಗ, ನಿಗದಿತ ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಕೋಟ್ ಮಾಡುತ್ತಾರೆ. ಆಗ ಗುಣಮಟ್ಟದಲ್ಲಿ ರಾಜೀ ಮಾಡಿಕೊಳ್ಳುತ್ತಾರೆ. ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅಲ್ಲಿನ ಏಳೆಂಟು ರಸ್ತೆಗಳನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂದು ನಾನು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ವಿಮಾನಯಾನ ಮಾಡುವುದಿಲ್ಲ; ಬಸ್ಸಿನಲ್ಲಿಯೇ ಸಂಚರಿಸುತ್ತೇನೆ. ನಾನು ಬಸ್ಸಿನಲ್ಲಿ ಪ್ರಯಾಣಿಸುವಾಗ ಬಸ್ಸಿನಲ್ಲಿ ಹೋಗುತ್ತಿದ್ದೇನೆಯೋ, ಸಮುದ್ರದಲ್ಲಿ ಹೋಗುತ್ತಿದ್ದೇನೆಯೋ ಎನ್ನುವ ರೀತಿಯಲ್ಲಿ ಅಲ್ಲಿ ಬಸ್ಸುಗಳು ಸಂಚರಿಸುತ್ತಿವೆ. ಸ್ವಂತ ವಾಹನವನ್ನು

ಹೊಂದಿರುವವರು ಖಂಡಿತವಾಗಿಯೂ ಸಹ ಈ ರಸ್ತೆಯಲ್ಲಿ ತಮ್ಮ ವಾಹನವನ್ನು ಕೊಂಡೊಯ್ಯುವುದಿಲ್ಲ. ಏಕೆಂದರೆ, ಕಷ್ಟಪಟ್ಟು ದುಡಿದ ಹಣದಲ್ಲಿ ಖರೀದಿಸಿದ ಕಾರನ್ನು ಈ ರಸ್ತೆಯಲ್ಲಿ ಯಾರೂ ಸಹ ಕೊಂಡೊಯ್ಯುವುದಿಲ್ಲ. ಸುಲಭದ ಹಣದಲ್ಲಿ ಗಳಿಸಿದ ವಾಹನವಾಗಿದ್ದರೆ ಪ್ರಾಯಶಃ ತೆಗೆದುಕೊಂಡು ಹೋಗಬಹುದು ಏನೋ. ಈ ವಿಷಯವನ್ನು ಸರ್ಕಾರವು ಬಹಳ ಗಂಬೀರವಾಗಿ ಪರಿಗಣಿಸಬೇಕು. ವರ್ಷದಿಂದ ವರ್ಷಕ್ಕೆ ವಾಹನಗಳು ಜಾಸ್ತಿಯಾಗುತ್ತಿವೆಯೇ ವಿನಃ ಕಡಿಮೆಯಾಗುತ್ತಿಲ್ಲ. ಚಾರ್ಮುಡಿ ಘಾಟಿಗೆ ಹೋಗಿ ಒಂದು ಕ್ಷಣ ನಿಂತು ಅಲ್ಲಿನ ಭೂಮಿ, ಪಶ್ಚಿಮ ಘಟ್ಟದ ಸೌಂದರ್ಯವನ್ನು ಯಾರಾದರೂ ನೋಡಿದರೆ...., ನಾವು ಎಲ್ಲೆಲ್ಲಿಗೋ ಪ್ರವಾಸಕ್ಕೆಂದು ಹೋಗುತ್ತೇವೆ. ಒಮ್ಮೆ ಚಾರ್ಮುಡಿ ಘಾಟಿಗೆ ಹೋಗಿ ಅಲ್ಲಿನ ಸೌಂದರ್ಯವನ್ನು ನೋಡಿದರೆ, ಬೇರೆ ಎಲ್ಲಿಯೂ ಹೋಗಬೇಕಾಗಿಲ್ಲ. ಸ್ವಿಟ್ಜರ್ಲೆಂಡ್‌ಗೂ ಸಹ ಹೋಗಬೇಕಾಗಿಲ್ಲ. ಕಡಿಮೆ ವೆಚ್ಚದಲ್ಲಿಯೇ ನಮ್ಮ ಭಾಗಕ್ಕೆ ಬನ್ನಿ ಎಂದು ಹೇಳುವಷ್ಟರ ಮಟ್ಟಿನ ಸೌಂದರ್ಯ ಅಲ್ಲಿದೆ. ಆದರೆ, ಅದನ್ನು ಉಳಿಸಿಕೊಳ್ಳಬೇಕು. ಇದರ ಜೊತೆಗೆ ಜನರ ಅಗತ್ಯತೆಗೆ ತಕ್ಕಂತೆ ವ್ಯವಸ್ಥೆಗಳಾಗಬೇಕು. ರಾಷ್ಟ್ರೀಯ ಹೆದ್ದಾರಿಗಳು ಇವರಿಗೆ ಇಂತಿಷ್ಟು ಎಂದು ಹೇಳಿದ ತಕ್ಷಣ ಅದರ ನಿರ್ಮಾಣ ಅಷ್ಟು ಸುಲಭದ ವಿಷಯವಲ್ಲ. ಈ ಬಗ್ಗೆ ಒಮ್ಮೆ ಆಲೋಚನೆ ಮಾಡಬೇಕು. ವೈಜ್ಞಾನಿಕವಾಗಿ ಇಷ್ಟೊಂದು ಬೆಳವಣಿಯಾಗುತ್ತಿರುವ ಈಗಿನ ಸಂದರ್ಭದಲ್ಲಿ ಇದಕ್ಕೆ ಹೊಸ ತಂತ್ರಜ್ಞಾನವನ್ನು ಬಳಸಬೇಕು. ಪಶ್ಚಿಮ ಘಟ್ಟಗಳಿಗೆ ಶಾಶ್ವತವಾದ ಫಲಿತಾಂಶವನ್ನು ನೀಡುವ ತಂತ್ರಜ್ಞಾನ ಯಾವುದು ಎಂಬುದನ್ನು ಅರಿಯಬೇಕು. ನಾನು ಅಲ್ಲಿ ನೋಡಿದ ಹಾಗೆ, ಜರ್ಮನ್ ತಂತ್ರಜ್ಞಾನ ಎಂದು ಹೇಳಿ ಅಲ್ಲಿನ ಗೋಡೆಗೆ ಸಿಮೆಂಟ್ ಅನ್ನು ಬಳಿದ ಹಾಗೆ ಬಳಿದು, ಅದಕ್ಕೆ ಬಣ್ಣ ಹಾಕಿದಂತೆ ಹಾಕಿದರು. ಬಿಟುಮೆನ್ ತಂತ್ರಜ್ಞಾನ ಎಂದು ಹೇಳಿ ಅದನ್ನು ಒಂದು ವರ್ಷದವರೆಗೆ ಹಾಕಿದರು. ಈ ಬಗ್ಗೆ ಅಲ್ಲಿ ಫಲಕವನ್ನು ಅಳವಡಿಸಿದ್ದರು. ಬಿಟುಮೆನ್ ತಂತ್ರಜ್ಞಾನವನ್ನು ಹಾಕಿರುವುದರಿಂದ ಇದು ಹೆಚ್ಚು ಕಾಲ ಬಾಳಿಕೆ ಬರುತ್ತದೆ ಎಂದು ಹೇಳಿದ್ದರು. ಒಂದು ಮಳೆಯಾದ ತಕ್ಷಣ ಅಲ್ಲಿ ಬಾವಿಯೊಂದು ಸೃಷ್ಟಿಯಾಯಿತು. ನಾವು ಅಲ್ಲಿ ಬಾವಿಯನ್ನು ಹುಡುಕುವ ಅವಶ್ಯಕತೆ ಇಲ್ಲ. ಅಲ್ಲಿ ಕಾಣುವ ರೀತಿಯಲ್ಲಿಯೇ ರಸ್ತೆಯಲ್ಲಿಯೇ ಬಾವಿಗಳು ಇರುತ್ತವೆ. ಈ ವಿಷಯದಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ, ಈ ವಿಚಾರದಲ್ಲಿ ಸರ್ಕಾರವು ಗಂಭೀರವಾಗಿ ಆಲೋಚನೆ ಮಾಡಬೇಕು. ಇಲ್ಲಿನ ವಾಸ್ತವಾಂಶಗಳ ಬಗ್ಗೆ ಕೇಂದ್ರಕ್ಕೆ ತಿಳಿಸಬೇಕು. ಏಕೆಂದರೆ, ಇಲ್ಲಿನ ಪರಿಸ್ಥಿತಿಯ ಬಗ್ಗೆ ಅವರಿಗೆ ಕನಸು ಬೀಳುವುದಿಲ್ಲ; ಅದರ ಬಗ್ಗೆ ನಾವು ಹೇಳಬೇಕಾಗುತ್ತದೆ. ಈ ರೀತಿಯ ಪ್ರದೇಶಗಳ ಬಗ್ಗೆ ಏನಾದರೂ ವಿಶೇಷ ಆಲೋಚನೆಗಳನ್ನು ಮಾಡಬೇಕಾಗುತ್ತದೆ. ಹೊಸ ರೀತಿಯದ್ದನ್ನು ಪ್ರಯತ್ನಿಸಬೇಕು. ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿ ಮತ್ತು ಇತರೆಯವರು ಪ್ರತಿ ಬಾರಿ ಭೇಟಿ ನೀಡಿದಾಗಲೂ

"ನೀವು ಎಲ್ಲಾ ಕ್ಲಿಯರೆನ್ಸ್ ಮಾಡಿಕೊಡಿ, ನಾವು ಟನಲ್ ಮಾಡುತ್ತೇವೆ" ಎಂದು ಹೇಳುತ್ತಿರುತ್ತಾರೆ. ನಮ್ಮ ಅನುದಾನ ಸಿದ್ಧವಿದೆ ಎಂದು ತಿಳಿಸುತ್ತಾರೆ. ಮುಂದಿನ ವರ್ಷದಲ್ಲಿ ಎಷ್ಟು ಅನುದಾನದ ಅವಶ್ಯಕತೆ ಇದೆಯೋ ಹೇಳಿ, ಅದು ಸಾವಿರ ಕೋಟಿ ರೂಪಾಯಿಗಳಾಗಿರಬಹುದು, ಅದನ್ನು ನಾವು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಾರೆ. ಪ್ರಸ್ತುತ ಅಲ್ಲಿ ಕೆಲಸ ಆಗುತ್ತಿದೆ ಇಲ್ಲವೆಂದು ನಾನು ಹೇಳುತ್ತಿಲ್ಲ.

(ಮುಂದು)

(610)22-07-2024/6-30/bkp-md (ಸಭಾಪತಿಯವರು ಉಪಸ್ಥಿತಿ)

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ಮುಂದು..)**

ಆದರೆ, ಎಲ್ಲೋ ಒಂದು ಕಡೆ ಈ ಪಶ್ಚಿಮಘಟ್ಟದ ಬಗ್ಗೆ ಹೇಳುವುದಾದರೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಬಿ.ಕೆ. ಹರಿಪ್ರಸಾದ್‌ರವರು, ಶ್ರೀ ಎಸ್.ಎಲ್. ಭೋಜೇಗೌಡರು ಸೇರಿದಂತೆ ಇತರರೆಲ್ಲರೂ ಹೇಳಿರುವ ರೀತಿಯಲ್ಲಿ ಪ್ರವಾಸೋದ್ಯಮ, ತೀರ್ಥಯಾತ್ರೆಯಿಂದ ಆರ್ಥಿಕವಾಗಿ ಎಲ್ಲಾ ದೃಷ್ಟಿಯಿಂದಲೂ ನಮ್ಮ ರಾಜ್ಯಕ್ಕೆ ಹೆಚ್ಚು ಆದಾಯ ಕೊಡುವಂತಹ ಮತ್ತು ಹೆಚ್ಚು ಜಿ.ಎಸ್.ಟಿ.ಯನ್ನು ಕೊಡುವಂತಹದ್ದರಲ್ಲಿ ಎರಡನೇ ಸ್ಥಾನದಲ್ಲಿರುವ ಕ್ಷೇತ್ರವಾಗಿದೆ. ಐ.ಟಿ.ಯಲ್ಲೂ ಕೂಡ ಬೆಂಗಳೂರಿನ ನಂತರ ಮಂಗಳೂರು ಬರುತ್ತದೆ ಎಂದು ಹೇಳುತ್ತಾರೆ. ಇವರು ಹೇಳಿದಂತೆ ಶಿರಾಡಿಯಲ್ಲಿ ಹೋಗುವ ಬಸ್ಸುಗಳು ಚಾರ್ಮುಡಿ ಘಾಟ್‌ನಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅದು ಕಿರಿದಾಗಿದೆ. ಈ ಹಿನ್ನೆಲೆಯಲ್ಲಿ ಒಂದು ಗಂಭೀರ ವಾದಂತಹ ಚರ್ಚೆಯನ್ನು ಇದರ ಬಗ್ಗೆ ಮಾಡಬೇಕಾದ ಅವಶ್ಯಕತೆ ಇದೆ. ಮತ್ತು ಇದರ ಬಗ್ಗೆ ವಿಶೇಷ ಗಮನವನ್ನು ಕೊಟ್ಟು ಇದಕ್ಕೆ ಶಾಶ್ವತವಾದ ಪರಿಹಾರವನ್ನು ಒದಗಿಸಬೇಕು. ಪ್ರತಿವರ್ಷ 500 ಕೋಟಿ ರೂಪಾಯಿಗಳು 1000 ಕೋಟಿ ರೂಪಾಯಿಗಳೆಂದು ಏನು ತಾವು ಕೊಟ್ಟಿದ್ದೀರಿ, ಅದರಿಂದ ಒಂದೊಂದು ಸಣ್ಣ ರಿಪೇರಿಯನ್ನು ಮಾಡಿದರೆ ಅದಕ್ಕೆ ಅರ್ಥ ಬರುವುದಿಲ್ಲ. ಮತ್ತೆ ಪ್ರತಿ ಬಾರಿಯೂ ರಿಪೇರಿ ಕೆಲಸ ಅದೇ ಮಾರ್ಗದಲ್ಲಿ ಆಗಿರುತ್ತದೆ. ಈಗ ಹೊಸ ಒಂದು ರೀತಿಯಲ್ಲಿ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಈಗ ಅಂತೂ drainage system ಕಾಯಂ ರೀತಿಯಲ್ಲಿ ಆಗಬೇಕೆಂದು ಹೇಳುವ

ರೀತಿಯಲ್ಲಿ ಮಾಡುತ್ತಿದ್ದಾರೆ. Drainage system ಮಾತ್ರ ಆಗಿದೆ. ಆ ರಸ್ತೆಯಲ್ಲಿ ಹೇಗೆ ಹೋಗುವುದು ಎಂದು ಜನ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಈ ದೃಷ್ಟಿಯಲ್ಲಿ ವಿಶೇಷ ಗಮನವನ್ನು ಕೊಟ್ಟು ಅತ್ಯಂತ ಸೂಕ್ಷ್ಮ ಪ್ರದೇಶವೂ ಆಗಿರುವುದರಿಂದಾಗಿ ಇದರ ಬಗ್ಗೆ ಒಂದು ಅಭಿವೃದ್ಧಿಯ ಮಾಸ್ಟರ್ ಪ್ಲಾನ್ ತಯಾರಿಸಿ ಈ 7 ಘಾಟ್‌ಗಳ ರಸ್ತೆಗಳ ಬಗ್ಗೆ ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆ ಎಂದು ಹೇಳುವಂತಹ ಒಟ್ಟು ಮುಂದಿನ 50-100 ವರ್ಷದವರೆಗಿನ ಯೋಜನೆಯನ್ನು ಇಟ್ಟುಕೊಂಡು ಮಾಡಬೇಕು. ತಾತ್ಕಾಲಿಕವಾಗಿ ಮಾಡುವುದಲ್ಲ. ಈ ದೃಷ್ಟಿಯಲ್ಲಿ ಮಾಡಬೇಕೆಂದು ತಮ್ಮ ಮೂಲಕ ನಾನು ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಸತೀಶ್ ಜಾರಕಿಹೋಳಿ(ಲೋಕೋಪಯೋಗಿ ಸಚಿವರು):-**ಮಾನ್ಯ ಸಭಾಪತಿಯವರೆ, ಈಗಾಗಲೇ ಹೇಳಿದ ಹಾಗೆ ಈ ಬಾರಿ ಹೆಚ್ಚು ಮಳೆಯಾಗಿರುವುದರಿಂದ ಈ ಸಮಸ್ಯೆ ಉಂಟಾಗಿದೆ. ಈ 7 ರಸ್ತೆಗಳಲ್ಲಿ 5 ರಸ್ತೆಗಳು ರಾಷ್ಟ್ರೀಯ ಹೆದ್ದಾರಿಗೆ ಸೇರಿದಂತಹ ರಸ್ತೆಗಳಾಗಿವೆ. ನಾನು ಹೇಳಿದ ಹಾಗೆ ಈಗಾಗಲೇ ಇದರ ಬಗ್ಗೆ ಅವರಿಗೆ ಸಲಹೆಗಳನ್ನು ಕೊಡಬಹುದೇ ಹೊರತಾಗಿ ನೇರವಾಗಿ ಕೆಲಸ ಮಾಡಲಿಕ್ಕೆ ನಮಗೆ ಅಧಿಕಾರವಿಲ್ಲ. ಅದರೂ ಕೂಡ ಮುಖ್ಯಮಂತ್ರಿಗಳ ಹಂತದಲ್ಲಿ ಒಂದು ಉನ್ನತ ಮಟ್ಟದ ಸಭೆಯನ್ನು ಮಾಡುವ ಬಹಳ ಅವಶ್ಯಕತೆ ಇದೆ. ಅದನ್ನು ಮಾಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ಜೊತೆಗೆ ಸನ್ಮಾನ್ಯ ಸದಸ್ಯರು ಮತ್ತು ಬೇರೆಯವರು ಸಹಿತ ಮಂಗಳೂರಿನಲ್ಲಿ ಒಂದು ನ್ಯಾಷನಲ್ ಹೈವೇ ಅಧಿಕಾರಿಗಳನ್ನು ಅಂದರೆ, ಅವರು ಪರಿಣಿತರು ಇರಬಹುದು, ಅವರ ಜೊತೆಯಲ್ಲಿ ಒಂದು ಸಭೆಯನ್ನು ಅಲ್ಲಿಯೇ ಮಾಡಿದಾಗ ಈ ಕೆಲಸ ಏತಕ್ಕೆ ವಿಳಂಬವಾಗುತ್ತಿದೆ ಎನ್ನುವ ಬಗ್ಗೆ ಅವರಿಂದ ಕೇಳಿದರೆ ಎಲ್ಲವೂ ಗೊತ್ತಾಗುತ್ತದೆ. 8 ವರ್ಷಗಳಿಂದ ಶಿರಾಡಿಘಾಟ್ ರಸ್ತೆ ನೆನೆಗುದಿಗೆ ಬಿದ್ದಿದೆ. ಇದಕ್ಕೆ ಬೇರೆ ಬೇರೆ ಸಮಸ್ಯೆಗಳು ಕೂಡ ಇವೆ. ನಮ್ಮದು ಸಮಸ್ಯೆ ಇದೆ, ಅವರದ್ದು ಸಮಸ್ಯೆ ಇದೆ. ಅರಣ್ಯ ಸಮಸ್ಯೆ ಇದೆ permission ಸಮಸ್ಯೆ ಇದೆ. ಬಹಳ ಸಮಸ್ಯೆಗಳು ಇದರಲ್ಲಿ ಹೊಂದಿಗೂಂಡಿವೆ. ಈ ಬಗ್ಗೆ ನಾನು ಮಂಗಳೂರಿನಲ್ಲಿ ಒಂದು ಸಭೆಯನ್ನು ಮಾಡಿಸುತ್ತೇನೆ. ಇದಕ್ಕೆ ಎಲ್ಲರಿಗೂ ಆಹ್ವಾನ ಮಾಡುತ್ತೇವೆ. ಒಂದು ಬಾರಿ one to one discussion ಆದರೆ ಸ್ವಲ್ಪ ಸಮಸ್ಯೆ ಪರಿಹಾರವಾಗುತ್ತದೆ. ಅಲ್ಲಿ ತಾವು ಸಹ ಸಲಹೆಗಳನ್ನು ಕೊಡಬಹುದು. ನಾನೂ ಕೂಡ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ. ನಿನ್ನೆ ಕೂಡ ಕಾರವಾರದಲ್ಲಿ ಹೋದಾಗ ಅಲ್ಲಿನ

ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಮುಂದೆ ತೊಂದರೆಯಾಗದಂತೆ ಈ ಬಗ್ಗೆ ಕ್ರಮವನ್ನು ವಹಿಸುತ್ತೇವೆ. ಈ ಬಗ್ಗೆ ಮಾನ್ಯ ಶಾಸಕರು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳುವಂತಹ ಪ್ರಯತ್ನ ಮಾಡುತ್ತೇವೆ.

**೦೯. ಗಮನ ಸೆಳೆಯುವ ಸೂಚನೆಗಳು**

**ಉ) ವಿಷಯ:- ರಾಜ್ಯದಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ರಾಜ್ಯ ಪಠ್ಯ ಕ್ರಮದಲ್ಲಿ ಅನುಮತಿ ಪಡೆದು ಕೇಂದ್ರ ಪಠ್ಯಕ್ರಮದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವ ಶಾಲೆಗಳನ್ನು ಅನಧಿಕೃತ ಶಾಲೆಗಳೆಂದು ಘೋಷಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವ ಕುರಿತು.**

-----

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳು ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಕೇಂದ್ರ ಪಠ್ಯಕ್ರಮದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವ ಶಾಲೆಗಳನ್ನು ಅನಧಿಕೃತ ಶಾಲೆಗಳೆಂದು ಘೋಷಿಸಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):** ಮಾನ್ಯ ಸಭಾಪತಿಯವರೆ,

**(ಮಾನ್ಯ ಸಚಿವರ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಸುಮಾರು ವಿಷಯಗಳನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ವಿಶೇಷವಾಗಿ Central Syllabus and State Syllabus ಬಗ್ಗೆ ಅವರು ಏನು ಗಮನವನ್ನು ಸೆಳೆದಿದ್ದಾರೆ. ಹಿಂದೆ ಎಲ್ಲಾ ೩ ವರ್ಷದ NOC (No Objection Certificate) ತೆಗೆದುಕೊಳ್ಳಬೇಕೆನ್ನುವ ನಿಯಮ ಇತ್ತು. ಆದರೆ, ಈ ಬಾರಿ ಜನವರಿಯಲ್ಲಿ ನಾವು ಒಂದು ನಿಯಮವನ್ನು ತೆಗೆದುಕೊಂಡು ಬಂದಿದ್ದೇವೆ. ಅದಕ್ಕೆ NOC ತೆಗೆದುಕೊಳ್ಳುವುದು ಬೇಡ. ನಮ್ಮ ಹತ್ತಿರ NOC ತೆಗೆದುಕೊಂಡ ತಕ್ಷಣ ನೀವು ಏನು CBSE (Central Board of Secondary Education) and ICSE (Indian Certificate of Secondary Education) Syllabus ಪಾಠವನ್ನು ಭೋಧನೆ ಮಾಡತಕ್ಕದ್ದು. ಏಕೆಂದರೆ ಹಿಂದಿನ ಸಾಕಷ್ಟು ಸಮಸ್ಯೆಗಳಿವೆ. ನಾವು ಕೂಡ ಅವರ ಜೊತೆಗೆ ವೈಯಕ್ತಿಕವಾಗಿ ಚರ್ಚೆ ಮಾಡಿದಾಗ ಕೆಲವು ವಿಷಯಗಳೆಲ್ಲವನ್ನು ಹೇಳಿದ್ದೀರಿ. ಕೆಲವು ಸಮಸ್ಯೆಗಳು ಇನ್ನೂ ಪೆಂಡಿಂಗ್ ಇವೆ. ಇಲ್ಲವೆಂದು ಹೇಳುತ್ತಿಲ್ಲ. ಈಗ ಆದಷ್ಟು ಬೇಗ ಈ CBSE and ICSE ರವರಿಗೆ ಏನು ತೊಂದರೆ ಆಗುತ್ತಿತ್ತು, ಈಗ ನಮ್ಮ ಹತ್ತಿರ ಒಂದು NOC ತೆಗೆದುಕೊಂಡರೆ ನೀವು ಅಧಿಕೃತವಾಗಿ ಶಾಲೆಗಳನ್ನು ಶುರು ಮಾಡುವಂತಹ ಕೆಲಸವನ್ನು ಮಾಡಬಹುದು. Basically ಮಕ್ಕಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಮಾಡಲಾಗಿದೆ. ನಾನು ಮುಂದಿನ ದಿನಗಳಲ್ಲಿ ತಮ್ಮ ಜೊತೆಗೂ ಕೂಡ ಮಾತನಾಡುತ್ತೇನೆ. ಏಕೆಂದರೆ, ನಿಮ್ಮ ಸಹಾಯ-ಸಹಕಾರವೂ ಬೇಕಾಗುತ್ತದೆ. ಸಾಕಷ್ಟು ನೀವು ಮಾಡಿದ್ದೀರಿ. ಇದೆಲ್ಲವನ್ನು ಅದೇ ಕಾರಣದಿಂದ ತಂದಿರುವುದಾಗಿದೆ. ಮುಂದಿನ ದಿನಗಳಲ್ಲಿ ಅದರ ಬಗ್ಗೆ ಸ್ವಲ್ಪ ವಿಚಾರ ಮಾಡಿ ಮಕ್ಕಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಂತೆ ನಿರ್ಧಾರಗಳನ್ನು ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಸಮಸ್ಯೆಗಳು ತುಂಬಾ ಆಗಿವೆ. ಏನೆಂದರೆ, ಏನು ಅನಧಿಕೃತ ಶಾಲೆಗಳು ಎಂದು ಏನು ಹೇಳುತ್ತೇವೆ, ಸಮಸ್ಯೆಗಳು ಒಂದರಲ್ಲೇ ಇಲ್ಲ. ICSE and CBSE ಗೆ ಏನು ಹೋಗುತ್ತಾರೆ, ಅದನ್ನು ನೀವು ಈಗ sort out ಮಾಡಿದ್ದೀರಿ, ಈಗ ೩ ವರ್ಷಗಳಾದರೆ ಮಾತ್ರ ನಾವು NOC ಕೊಡುವುದು ಎಂದು ಮಾಡಿದ್ದರು. ಈ ಬಗ್ಗೆ ಕೆಲವರು ಕೋರ್ಟಿಗೆ ಹೋದರು. ಕೋರ್ಟಿನಿಂದ ತಡೆಯಾಜ್ಞೆ ತಂದರು. ಈಗ NOC ಕೊಟ್ಟ ತಕ್ಷಣ ಕೊಡುವಂತಹ ಕೆಲಸ ಮಾಡುತ್ತೇವೆ. ಇನ್ನೂ ಕೂಡ ನೇರವಾಗಿ ಕೊಡುತ್ತಿಲ್ಲ.

**ಶ್ರೀ ಎಸ್.ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಜನವರಿಯಿಂದ ಪ್ರಾರಂಭ ಮಾಡಿದ್ದೇವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಈ ೩ ವರ್ಷದ ಹಿಂದೆ ಏನಿತ್ತು ಎಂದರೆ, ಅದನ್ನು ಮಾಡಿ ೩ ವರ್ಷಗಳಾಗಬೇಕು, ರಾಜ್ಯ ಪಠ್ಯಕ್ರಮವನ್ನು ೩ ವರ್ಷಗಳ ಕಾಲ ನಡೆಸಿ, ನಂತರ ಬೇರೆಯದಕ್ಕೆ ಹೋಗಬೇಕೆಂದು ಮಾಡಿಬಿಟ್ಟಿದ್ದರು ಅದನ್ನು ಮಕ್ಕಳಿಗೆಲ್ಲಾ bridge course ನಲ್ಲಿ ಮಾಡಲಿಕ್ಕೆ

ಆಗುವುದಿಲ್ಲವೆಂದು ಹೇಳಿದ ಮೇಲೆ ನೀವು ಅದನ್ನು ಸರಳೀಕರಣ ಮಾಡಿ ಈಗ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೀರಿ. ಆದರೆ, ಇಲ್ಲಿ ಏನಾಗುತ್ತಿದೆ ಎಂದರೆ ಸುಮಾರು ಸಮಸ್ಯೆಗಳು ಇವೆ. ನಾನು ಎಲ್ಲವನ್ನು ಓದಲಿಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸಭೆಯನ್ನು ಮಾಡುತ್ತೇನೆಂದು ಸಚಿವರು ಹೇಳಿದ್ದಾರೆ. ಆದರೆ, ಇಲ್ಲಿ ಅನಧಿಕೃತ ಶಾಲೆಗಳು ಎಂದರೆ ಸ್ಥಳಾಂತರಗೊಂಡಿರುವಂತಹ ಶಾಲೆಗಳು 'ಸ್ಥಳಾಂತರ' ಎಂದರೆ ನಿಮಗೆ ಗೊತ್ತಿದೆ. ಶಾಲಾ ಅನುಮತಿ ಪಡೆದು ಕಟ್ಟಡದಿಂದ ಪಕ್ಕದಲ್ಲಿ ಹೊಂದಿಕೊಂಡಿರುವ ಕಟ್ಟಡ. ಅದಕ್ಕೆ ಅನುಮತಿ ಇದೆ. ಪಕ್ಕದಲ್ಲಿಯೂ ಮಾಡುತ್ತಿದ್ದೇನೆ. ಅವರು ಏನು ಹೇಳುತ್ತಾರೆಂದರೆ ನೀನು ಇಲ್ಲಿ ಮಾಡಿದ್ದೀಯಾ ಇದನ್ನು ನಡೆಸು, ಪಕ್ಕದಲ್ಲಿನ ಕಟ್ಟಡದಲ್ಲಿ ನೀನು ನಡೆಸಬೇಡ ಎನ್ನುವುದು ಅನಧಿಕೃತ. ಈರೀತಿಯ ಸಮಸ್ಯೆ ಅಕ್ಕಪಕ್ಕದಲ್ಲಿ ಎದುರುಗಡೆ 5,10,15,20,25 ಮೀಟರ್ ದೂರದಲ್ಲಿ ಶಾಲೆ ನಡೆಸುವುದಕ್ಕೆ ಅನುಮತಿಯನ್ನು ಮೊದಲು ಕೊಟ್ಟಿದ್ದು, ಅದರಂತೆ ಶಾಲೆಗಳನ್ನು ನಡೆಸಿದ್ದಾರೆ. ಒಂದು ಕಡೆ ಅನುಮತಿಯನ್ನು ತೆಗೆದುಕೊಂಡು ಪಕ್ಕದಲ್ಲಿ, ಎದುರುಗಡೆ ಶಾಲೆಗಳನ್ನು ನಡೆಸಿದರು. ಈಗ ಅದನ್ನು ಬಂದ್ ಮಾಡಿ ಎಂದು ಹೇಳುತ್ತಿದ್ದಾರೆ. Ground level ನಲ್ಲಿ ಏನೇನು ಸಮಸ್ಯೆಯಾಗಿದೆ, ಎಂದರೆ, ಅದೇ ರಸ್ತೆಯ 100 -200 ಮೀಟರ್ ದೂರದಲ್ಲಿ ಸ್ಥಳಾಂತರಗೊಂಡಿರುವ ಶಾಲೆಗಳಿದ್ದು, ಅಲ್ಲಿ ಶಾಲೆಗಳು ನಡೆಯುತ್ತಿದ್ದವು. ಈಗ ಆ ಶಾಲೆಗಳ ಕಟ್ಟಡ ಬಿದ್ದು ಹೋಗಿದೆ, ಮತ್ತೊಂದು ಆಯಿತು, ಮೂವತ್ತು ವರ್ಷಗಳಿಗೆ lease ಕೊಟ್ಟಿದ್ದು ಅದು ಮುಗಿದು ಹೋಯಿತು. ಬಾಡಿಗೆಯಲ್ಲಿದ್ದರು, ಅದನ್ನು ನಿಲ್ಲಿಸಿಬಿಟ್ಟರು. ವಿವಿಧ ಕಾರಣಗಳಿಂದ 100-200 ಮೀಟರ್‌ಗಳಲ್ಲಿ ಬೇರೆ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದ ಶಾಲೆಗಳನ್ನೂ ಅನಧಿಕೃತ ಎಂದು ಹೇಳುತ್ತಿದ್ದಾರೆ. ಇಲ್ಲಿ ಏನಾಗಿದೆ, ನಾನು ಜಾಸ್ತಿ ಓದಲಿಕ್ಕೆ ಹೋಗುವುದಿಲ್ಲ, ತಾವು ಸಭೆಯನ್ನು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಜೊತೆಗೆ ಕ್ಯಾಬಿನೆಟ್ ಮೀಟಿಂಗ್ ಇದೆ ಎಂದು ಹೇಳಿದ್ದಾರೆ. ಆದರೆ, ಒಂದು ವಿಷಯ ಏನೆಂದರೆ, ವಿವಿಧ ಕಾರಣಗಳಿಂದ ಸಾವಿರಾರು ವಿದ್ಯಾರ್ಥಿಗಳು ಇದರಲ್ಲಿ ಇದ್ದಾರೆ. 100-200 ವಿದ್ಯಾರ್ಥಿಗಳಲ್ಲ. ಇವರು ಸುಮ್ಮನೆ ಈ ಶಾಲೆಗಳನ್ನು ಮುಚ್ಚುತ್ತೇವೆ, ಮುಚ್ಚುತ್ತೇವೆಂದು ಹೇಳಿ, ಇವರು ನೋಟಿಸ್ ಕೊಡುವುದು, ಬಿಇಓ ಮತ್ತು ಡಿಡಿಪಿಐ.ಗಳು ಈ ಶಾಲೆಗಳಿಗೆ ಹೋಗುವುದು ಮಾಡುತ್ತಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ ನೀವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರೆಗೂ ಯಾವುದೇ ಶಾಲೆಗಳಿಗೆ ಅಧಿಕಾರಿಗಳು ಕೂಡ ಹೋಗುವುದು ಬೇಡ. ನೀವು ಮೊದಲು ತೀರ್ಮಾನ ತೆಗೆದುಕೊಳ್ಳಿ. ನಾವು ಹೇಳುವುದೇನೆಂದರೆ, ನಿಜವಾಗಿಯೂ ಕೂಡ ಅನಧಿಕೃತ ಇದೆಯೇ ಮಾಡಿ. ಸಮಸ್ಯೆ ಇಲ್ಲ. ಆದರೆ, ನೀವು ಈಗಾಗಲೇ ಅನುಮತಿಯನ್ನು ಕೊಟ್ಟು ಏನು ಶಾಲೆಗಳು ನಡೆಯುತ್ತಿವೆ, ಇಲ್ಲಿ ಅನುಮತಿಯನ್ನು ಕೊಟ್ಟಿದ್ದೀರಿ. ಇಲ್ಲಿ existence ನಲ್ಲಿ ಇಲ್ಲ, ಇನ್ನೊಂದು ಕಡೆ ಪಕ್ಕದಲ್ಲಿ ನಡೆಯುತ್ತಿದೆ. ನೀವು ಈಗಾಗಲೇ ಅದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಅದು 20-30 ವರ್ಷಗಳಿಂದ ನಡೆದುಕೊಂಡು ಬಂದಿವೆ,

ಅವುಗಳನ್ನೆಲ್ಲಾ ಈಗ ಅನಧಿಕೃತ ಶಾಲೆಗಳೆಂದು ಮಾಡಲಿಕ್ಕೆ ಹೊರಟಿದ್ದಾರೆ. ಅಲ್ಲೆಲ್ಲಾ ಸಾವಿರಾರು ಮಕ್ಕಳು ಓದುತ್ತಿದ್ದಾರೆ.

**ಸಭಾಪತಿಯವರು:-** ಸಚಿವರು ಈ ಬಗ್ಗೆ ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಾರೆ. ಅಲ್ಲಿಯವರೆಗೆ ನಾವು ಯಾವುದೇ ತೀರ್ಮಾನ ತೆಗೆದುಕೊಳ್ಳುವಂತಿಲ್ಲವೆಂದು ಹೇಳಿದ್ದಾರೆ.

(ಮುಂದು)

(611) 22.07.2024 06.40 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ಸಭೆ ಕರೆದು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಅಲ್ಲಿಯವರೆಗೆ ಯಾವುದೇ ಕ್ರಮವಾಗಬಾರದು.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಆನ್‌ಲೈನ್ ವ್ಯವಸ್ಥೆಯನ್ನು ತಂದಿರುವ ಉದ್ದೇಶವೇ ಈ harassment ಅನ್ನು ಕಡಿಮೆ ಮಾಡಬೇಕೆಂಬುದಾಗಿದೆ. Except for Fire and PWD, ಇದು ನನ್ನ ಹಂತದಲ್ಲಿ ಬರುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಚಿವರೆ, ಅದು ನಿಮ್ಮ ಹಂತಕ್ಕೆ ಬರುತ್ತದೆ. ಸುಪ್ರೀಂ ಕೋರ್ಟ್ ಆದೇಶ ಏನು ಬಂದಿತ್ತೋ ಅದರ ಮೇಲೆ ಹೈಕೋರ್ಟ್ ಆದೇಶ ಆಗಿದೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, 10 ವರ್ಷದವರೆಗೂ ಪರ್ಮಿಷನ್ ಕೊಡಬೇಕು ಎಂದು ಮಾಡಿದ್ದೇವೆ. Fire and PWD ಯಲ್ಲಿ ಸುರಕ್ಷತೆಯ ವಿಚಾರಗಳು ಬರುವುದರಿಂದ ಇವುಗಳ ಬಗ್ಗೆ ನಾನು ನಿಮ್ಮ ಜೊತೆಯಲ್ಲಿ ಚರ್ಚಿಸಿ, ಯಾವ ರೀತಿಯಲ್ಲಿ ಸಡಿಲಗೊಳಿಸಿದರೆ ಮಕ್ಕಳಿಗೆ ತೊಂದರೆಯಾಗುವುದಿಲ್ಲ ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು. Ongoing ಮಾಡುತ್ತಿದ್ದೇವೆ. ಆದಷ್ಟು ಬೇಗ ಮಾಡುತ್ತೇವೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರು ಮಾತನಾಡಲು ಎದ್ದು ನಿಂತರು)**

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ, ಸಾಕು.. ಎಷ್ಟು ಮಾತನಾಡುತ್ತೀರಿ? ಮಾನ್ಯ ಸಚಿವರೆ, ಆ ಸಭೆಗೆ ಮಾನ್ಯ ಭೋಜೇಗೌಡರನ್ನು ಕರೆಯಿರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೆ, ಸರ್ಕಾರಿ ಶಾಲೆಗಳಿಗೆ ಇಲ್ಲದಿದ್ದು, ಏಕೆ ಅವರಿಗೆ ತೊಂದರೆ ಕೊಡುತ್ತೀರಿ? ಹೈಕೋರ್ಟ್ ಆದೇಶ ಇದೆ, ದಯಮಾಡಿ 10 ವರ್ಷ ಮಾಡಿ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಭೋಜೇಗೌಡರನ್ನು ಕರೆಯಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಭೋಜೇಗೌಡರನ್ನು ಸಭೆಗೆ ಕರೆದೇ ಕರೆಯುತ್ತಾರೆ.

**ಸಭಾಪತಿಯವರು:-** ಸಭೆಗೆ ಕರೆಯಿರಿ ಎಂದು ಹೇಳಿದರೂ ಪುನಃ ಎದ್ದು ನಿಂತು ಮಾತನಾಡುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ಕೋರ್ಟ್ ಆದೇಶವಿದೆ, ಎಲ್ಲವೂ ಇದೆ.

**ಸಭಾಪತಿಯವರು:-** ಮಾನ್ಯ ಸಚಿವರು ಸಭೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ನೀವೇ ಗೈಡ್ ಮಾಡುವಿರಂತೆ. ಈಗ ಕುಳಿತುಕೊಳ್ಳಿ.

**ಊ) ವಿಷಯ:- ರಾಜ್ಯದ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿಯಿಂದ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಉಚ್ಚ ನ್ಯಾಯಾಲಯ ತೀರ್ಪು ನೀಡಿದರೂ ಸಹ ಸರ್ಕಾರ ಅನುಮತಿಸದಿರುವುದರಿಂದ ಉಂಟಾಗಿರುವ ದುಷ್ಪರಿಣಾಮಗಳ ಕುರಿತು.**

***

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿಯಿಂದ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಉಚ್ಚ ನ್ಯಾಯಾಲಯ ತೀರ್ಪು ನೀಡಿದರೂ ಸಹ ಸರ್ಕಾರ ಅನುಮತಿಸದಿರುವುದರಿಂದ ಉಂಟಾಗಿರುವ ದುಷ್ಪರಿಣಾಮಗಳ ಕುರಿತು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ...

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಷಯದಲ್ಲಿ ನಾವು ಮೇಲ್ಮನವಿ ಹೋಗಿದ್ದೇವೆ. ಮಾನ್ಯ ಸಂಕನೂರ ಅವರಿಗೆ ನಾನು ಕಳೆದ ಬಾರಿ ಕೂಡ ಹೇಳಿದ್ದೆನು. ಐದು ವರ್ಷಗಳಿಗೆ ಅನುದಾನಿತ ಶಾಲೆಗಳಲ್ಲಿ teachers' recruitment ಪ್ರಾರಂಭಿಸಬೇಕೆಂದು ಮಾಡಿದ್ದೇವೆ. 2015ರಿಂದ ಇದುವರೆವಿಗೂ...

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, 2015ರವರೆಗೆ ಅನುಮತಿ ಕೊಟ್ಟಿದ್ದಾರೆ. 2015ರ ನಂತರ ನಿವೃತ್ತಿಯಿಂದ ತೆರವಾಗಿರುವುದನ್ನು ಭರ್ತಿ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದಾರೆ. 2020ರವರೆಗೆ ಅನುಮತಿ ಕೊಡುತ್ತೇವೆ ಎಂದು ಘೋಷಣೆ ಮಾಡಿಬಿಡಿ. ನಾವು ಸುಮ್ಮನೆ ಕುಳಿತು ಬಿಡುತ್ತೇವೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಂಕನೂರ ಅವರೆ, ನಾನು 2020ರವರೆಗೆ ಅನುಮತಿಯನ್ನು ಪಡೆದುಕೊಳ್ಳಬೇಕೆಂದು ಆರ್ಥಿಕ ಇಲಾಖೆಗೆ ಕಳುಹಿಸಿದ್ದು, ಅದು positive ಆಗಿ ಬರುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಚಿವರೆ, ಕಳೆದ ಸದನದಲ್ಲಿ ಕೂಡ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದಿರಿ. ಆಗಲೂ ಹೀಗೆಯೇ ಹೇಳಿ ನನ್ನ ಬಾಯಿ ಮುಚ್ಚಿಸಿದಿರಿ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಂಕನೂರ ಅವರೆ, ಮಾನ್ಯ ಮುಖ್ಯಮಂತ್ರಿಯವರು ಕೂಡ ಮೌಖಿಕವಾಗಿ ಹೇಳಿದ್ದಾರೆ. ನನಗೂ ಕೂಡ ಅವಶ್ಯಕತೆ ಇದೆ. ಏಕೆಂದರೆ ಇಲಾಖೆ ನಡೆಸುವಲ್ಲಿ ಬಹಳ ಕಷ್ಟ ಇದೆ. ಶಿಕ್ಷಕರು ಇಲ್ಲದೆ ಮಕ್ಕಳ ಸಂಖ್ಯೆ ಹಾಗೂ ಗುಣಮಟ್ಟ ಕಡಿಮೆಯಾಗಿದೆ.

ಮಾನ್ಯ ಸಭಾಪತಿಯವರೆ, ಒಂಭತ್ತು ವರ್ಷದಿಂದ ಯಾರೂ ತೆಗೆದುಕೊಂಡಿಲ್ಲ. ಕಳೆದ ಒಂದು ವರ್ಷದಿಂದ ನಾವು ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದು, ಈಗಾಗಲೇ ಅವರನ್ನು ಟೀಚಿಂಗ್‌ಗೆ ಕಳುಹಿಸಿದ್ದೇವೆ. ಇದು ಕೂಡ ಐದು ವರ್ಷಕ್ಕೆ ಆಗುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಳ್ಳಿ. ಆದಷ್ಟು ಬೇಗ ನಾವು ಮಾಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಇದು ಗಂಭೀರವಾದಂತಹ ವಿಷಯ. ಎರಡು-ಮೂರು ಬಾರಿ ಇದೇ ವಿಷಯವನ್ನು ಸದನದೊಳಗೆ ಚರ್ಚೆ ಮಾಡಿದಾಗಲೂ ಇದೇ ಉತ್ತರ ಬರುತ್ತಿದೆ. ಹೈಕೋರ್ಟ್ ಸರ್ಕಾರಕ್ಕೆ ಹೇಳಿದೆ. ನಿವೃತ್ತಿಯಾದಂತಹ ಹುದ್ದೆಗಳನ್ನು ಭರ್ತಿ ಮಾಡಲೇಬೇಕು. ಯಾವುದೂ ವಿಳಂಬ ಮಾಡುವ ಹಾಗಿಲ್ಲ. ಅದನ್ನು negative ಮಾಡುವ ಹಾಗಿಲ್ಲ. ಮಾನ್ಯ ಸಚಿವರೆ, ಈ ರೀತಿ direction ಕೊಟ್ಟರೂ ಕೂಡ ನ್ಯಾಯಾಲಯದ ತೀರ್ಪಿಗೆ ಗೌರವ ಕೊಡುತ್ತಿದ್ದೀರಾ? ಈ ತೀರ್ಪು ಕೊಟ್ಟ ಮೇಲೆ ಮೇಲ್ಮನವಿ ಮಾಡುತ್ತೇವೆ ಎಂದರೆ ಏನಿದು? ಶಾಲೆಯನ್ನು ಮುಚ್ಚಬೇಕೆನ್ನುತ್ತೀರಾ? ಸ್ಪಷ್ಟ ಪಡಿಸಿ. ಇದರಿಂದಾದ ದುಷ್ಪರಿಣಾಮ ಏನು? ಮೊನ್ನೆ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಎಷ್ಟಾಗಿದೆ? ರಾಜ್ಯದ ಇತಿಹಾಸದಲ್ಲಿಯೇ ಅಷ್ಟು ಕಡಿಮೆಯಾಗಿರಲಿಲ್ಲ. ಶೇ.20 ಗ್ರೇಸ್ ಅಂಕ ಕೊಟ್ಟು ಶೇ.73 ಫಲಿತಾಂಶಕ್ಕೆ ತಂದಿದ್ದಾರೆ. ಮುಖ್ಯಮಂತ್ರಿಗಳು ಇದರ ಬಗ್ಗೆ ಸಭೆ ಮಾಡಿ ಏನು ಮಾತನಾಡಿದ್ದಾರೆ ಎಂಬುದನ್ನು ನಾನು ಮೊದಲೇ ಹೇಳಿದ್ದೇನೆ. ಮೇಲಿನಿಂದ ಅನುಮತಿ ಕೊಡಲಿಲ್ಲವೆಂದರೆ ಗುಣಮಟ್ಟದ ಮೇಲೆ ಪರಿಣಾಮವಾಗುತ್ತದೆ. ಇದು ಬಹಳ ಗಂಭೀರವಾದ ವಿಷಯ. ಹೈಕೋರ್ಟ್ ತೀರ್ಪು ಕೊಟ್ಟಿದೆ. ಅದನ್ನು ಗೌರವಿಸಿ ನೀವು ಅನುಮತಿ ಕೊಡಬೇಕು. ನಾವು ಹೊಸ ಹುದ್ದೆಯನ್ನು ಕೇಳುತ್ತಿಲ್ಲ. ನಿವೃತ್ತಿಯಾದಂತಹ ಹುದ್ದೆಗೆ ಬಜೆಟ್ ಪ್ರಾವಿಷನ್ ಇರುತ್ತದೆ ಎಂದು ಎಂದು ಹೈಕೋರ್ಟ್ ತೀರ್ಪಿನಲ್ಲಿ ಹೇಳಲಾಗಿದೆ. ನೀವು ವಿಳಂಬ ಮಾಡುವುದಕ್ಕೆ ಬರುವುದಿಲ್ಲ. ಎಸ್‌ಎಸ್‌ಎಲ್‌ಸಿ ರಿಸಲ್ಟ್ ಮೇಲಾದ ಪರಿಣಾಮದ ಉದಾಹರಣೆ ಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯ ಕೆರೋಡಿ ದುರ್ಗಾದೇವಿ ಪಿ.ಯು.ಕಾಲೇಜಿನಲ್ಲಿ 8 ಜನ ಶಿಕ್ಷಕರು, 4 ಜನ non-teaching staff ಎಲ್ಲರೂ ನಿವೃತ್ತರಾಗಿದ್ದಾರೆ. ಒಬ್ಬರೂ ಇಲ್ಲ. ಅದೇ ರೀತಿ ಮಲ್ಲಿಕಾರ್ಜುನ ಪಿ.ಯು.ಕಾಲೇಜು, ಸಿದ್ದರ್ ಇದು ಗುಡ್ಡಗಾಡು ಪ್ರದೇಶವಾಗಿದ್ದು, ಅಲ್ಲಿಯೂ ಕೂಡ ಎಲ್ಲರೂ ನಿವೃತ್ತರಾಗಿದ್ದಾರೆ. ನಮ್ಮ ಭಾಗದ ಗದಗ್ ಜಿಲ್ಲೆಯಲ್ಲಿ ಶ್ರೀ ಶರಣಬಸವೇಶ್ವರ ಕಾಲೇಜು, ಕಲಕೇರಿ ಇದು ಮಾಜಿ ಸಚಿವರ ಶಾಲೆಯಾಗಿದ್ದು, ಇಲ್ಲಿಯೂ ಎಲ್ಲರೂ ನಿವೃತ್ತರಾಗಿದ್ದಾರೆ. ಜಮಖಂಡಿಯಲ್ಲಿ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆ ಇಲ್ಲಿ ಒಬ್ಬರು ಉಳಿದಿದ್ದಾರೆ. ಇದು ಕೆಲವು ಉದಾಹರಣೆಗಳು. ರಾಜ್ಯದ ಬಹಳಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲರೂ ನಿವೃತ್ತರಾಗಿದ್ದಾರೆ. ಕೆಲವು ಕಡೆ ಏಕೋಪಾಧ್ಯಾಯ ಶಾಲೆಗಳಿವೆ. ಇಂತಹ ಶಾಲೆಗಳನ್ನು ಹೇಗೆ ನಡೆಸಬೇಕು? ಇವು ಗ್ರಾಮಾಂತರ ಪ್ರದೇಶದೊಳಗೆ ಇವೆ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಓದಲಿಕ್ಕೆ ಅವಕಾಶ ಮಾಡಿಕೊಡುತ್ತೀರೋ ಇಲ್ಲವೋ? ಕಳೆದ ಬಾರಿಯೂ ನಿಮ್ಮನ್ನು ನಂಬಿಕೊಂಡು ನಾವು ಸುಮ್ಮನೆ ಕುಳಿತುಕೊಂಡೆವು. ಶಾಲೆಯನ್ನು ಮುಚ್ಚಬೇಕೆನ್ನುವ ಕಾರಣದಿಂದ ನೀವು ಮೇಲ್ಮನವಿ ಹೋಗಿದ್ದೀರಾ? ನಿಮ್ಮ ವಕೀಲರು ಏನು ಹೇಳಿದ್ದಾರೆ? ಒಂದು ವೇಳೆ ಈ ರೀತಿ judgment ಕೊಟ್ಟರೆ ಮ್ಯಾನೇಜ್‌ಮೆಂಟ್ ಅವರು ಏನು ಬೇಕಾದರೂ ಮಾಡುತ್ತಾರೆ. ಅವರಿಗೆ floodgate open ಮಾಡಿದಂತಾಗುತ್ತದೆ. ವಕೀಲರು argue ಮಾಡಿದ್ದಾರೆ. ಇವು floodgate open ಮಾಡಿದಂತಾಗುತ್ತದೆಯೇ? These are sanctioned posts. ತಾವು ದಯವಿಟ್ಟು ಘೋಷಣೆ ಮಾಡಬೇಕು. ಇಲ್ಲವಾದರೆ ನಾನು ಧರಣಿಗಿಳಿಯುತ್ತೇನೆ. ಇದು ಬಹಳ ಗಂಭೀರವಾದ ವಿಷಯ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಲ್ಯಾಣ ಕರ್ನಾಟಕ ಭಾಗಕ್ಕಿಂತಲೂ ಮುಂಬೈ ಕರ್ನಾಟಕ ಭಾಗದಲ್ಲಿ ಅನುದಾನಿತ ಶಾಲೆ ಕಾಲೇಜುಗಳು ಬಹಳ ದೊಡ್ಡ ಪ್ರಮಾಣದಲ್ಲಿವೆ.

ಅನೇಕ ಕಡೆ ಇವರಿಗೆ ಮ್ಯಾನೇಜ್‌ಮೆಂಟ್‌ನಿಂದ ಯಾವುದೇ ರೀತಿಯ ಸಪೋರ್ಟ್ ಇಲ್ಲ. ಅಂತಹ ಪರಿಸ್ಥಿತಿಯಲ್ಲಿ ಸಂಖ್ಯೆಗೆ ಅನುಗುಣವಾಗಿ ಲೆಕ್ಚರರ್ಸ್ ಅಥವಾ ಹೈಸ್ಕೂಲ್ ಟೀಚರ್ಸ್ ಇಲ್ಲವೇ ಇಲ್ಲ. ಎಲ್ಲಿಂದ ತರುತ್ತಾರೆ? ಹಳ್ಳಿಗಳಲ್ಲಿ ಯಾರೂ ಫೀಸ್ ಕಟ್ಟುವುದಿಲ್ಲ. ಏನೋ ಕಷ್ಟದಿಂದ ಎಲ್ಲೆಲ್ಲಿಂದಲೋ ವಿದ್ಯಾರ್ಥಿಗಳನ್ನು ಕರೆತಂದು ಪಾಠ ಕಲಿಸುತ್ತಾರೆ. ಹೀಗಿದ್ದಾಗ ಆ ಟೀಚರ್ಸ್ ಸಂಬಳ ಯಾರು ಕೊಡಬೇಕು? ಹಿಂದೆ ಯಾವ ಸರ್ಕಾರದಲ್ಲಿಯೂ ಕೂಡ 9 ವರ್ಷ gap ಇರಲಿಲ್ಲ. ಬೇಕಾದರೆ ನೀವೇ ನೋಡಿ. 3-4 ವರ್ಷ ಬಿಟ್ಟಿದ್ದಾರೆ. ಅದಾದ ಮೇಲೆ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳುವಂತಹ ಒಂದು ವ್ಯವಸ್ಥೆ ಇದೆ. ಮೊದಲು ಹಾಗಿರಲಿಲ್ಲ. ಯಾವಾಗ ಖಾಲಿಯಾಗುತ್ತಿತ್ತೋ ಆಗಲೇ ಅನುಮತಿ ಕೊಡುತ್ತಿದ್ದರು. ಇಷ್ಟು ವಿಳಂಬ ಇರಲಿಲ್ಲ. ಇತ್ತೀಚೆಗೆ ಇದು ಪ್ರಾರಂಭವಾಗಿದೆ. 2-3 ವರ್ಷ ಬಿಟ್ಟಿದ್ದಾರೆಂದರೆ ಒಪ್ಪೋಣ. ಆದರೆ ದಿನಾಂಕ 31.12.2015ರ ನಂತರ ಖಾಲಿಯಾದ ಎಲ್ಲಾ ಹುದ್ದೆಗಳನ್ನು ಇಲ್ಲಿಯವರೆಗೆ ತುಂಬುವುದಿಲ್ಲ ಎಂದರೆ ಇದರ ಒಂದು ಕಷ್ಟವನ್ನು ಎಲ್ಲರೂ ಅನುಭವಿಸಬೇಕಾಗಿದೆ. ದಯವಿಟ್ಟು ಇದರಲ್ಲಿ ಇನ್ನೂ ಪರೀಕ್ಷೆ ಮಾಡಬೇಡಿ. 2015ರವರೆಗೆ ನೀಡಲಾಗಿರುವ ಅನುಮತಿಯಲ್ಲಿ ಶೇ.25-30 ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಅದು ಭರ್ತಿಯಾಗಲಿ. ಆಮೇಲೆ ಮಾಡೋಣ ಎಂದು ಹೇಳುತ್ತೀರಿ. Because of various reasons ಅದು ಎಂದೂ ಭರ್ತಿಯಾಗುವುದಿಲ್ಲ. ಅದು dispute ಇರಬಹುದು ಅಥವಾ ಮತ್ತೇನಾದರೂ ಇರಬಹುದು. ಇದು ನೀವು ಕೊಟ್ಟರೂ ಶೇ.100 ಪೂರ್ಣವಾಗುವುದಿಲ್ಲ. ಅದಕ್ಕೆ ದಯವಿಟ್ಟು ಏನೂ ಲೆಕ್ಕ ಹಾಕದೆ ತಕ್ಷಣ ಕೊಟ್ಟುಬಿಡಿ. ಇದರ ಬಗ್ಗೆ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ, ಮತ್ತೆ ಚರ್ಚೆ ಮಾಡುತ್ತೇನೆ ಇದು ಯಾವುದೂ ಬೇಡ. ಹತ್ತಾರು ಬಾರಿ ಈ ವಿಚಾರವನ್ನು ತಾವು ಇದೇ ರೀತಿ ಹೇಳಿದ್ದೀರಿ. ದಯವಿಟ್ಟು ಅದರ ಬಗ್ಗೆ ಯಾವುದೇ ಚೌಕಾಶಿ ಬೇಡ. ದಯವಿಟ್ಟು ಅನುಮತಿ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು, ನಾಳೆಯೇ ಆರ್ಡರ್ ಅನ್ನು ಹೊರಡಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೆ, ನಮ್ಮ ಅಧಿಕಾರಿಗಳೇ ನ್ಯಾಯಾಲಯದಲ್ಲಿ ಈ ಕೇಸ್ ಅನ್ನು ಹ್ಯಾಂಡಲ್ ಮಾಡಬೇಕೆಂಬುದು ನಿಮಗೆ ತಿಳಿದಿದೆ. ಪುನಃ ಹೈಕೋರ್ಟ್ verdict ಬಂದ ಮೇಲೆ ಇದೇ ಅಧಿಕಾರಿಗಳು ನಿಮಗೆ ಪ್ರಿಪರೇಷನ್ ಮಾಡಿಕೊಟ್ಟು appeal ಹೋಗುವಂತೆ ಮಾಡಿರುವುದು. ಏನು ಕಾರಣ ಇಟ್ಟುಕೊಂಡು ನೀವು appeal ಹೋಗುತ್ತೀರಿ? Sanctioned post ಮತ್ತು retired post ಅನ್ನು ತುಂಬಿ, ಆ ಶಾಲೆಗಳಿಗೆ ಉತ್ತಮವಾದ ಶಿಕ್ಷಕರನ್ನು ಕೊಟ್ಟು, ನಂತರ ಅವರಿಂದ quality of education ಅನ್ನು ಕೇಳಬೇಕು. Quality of education ಒಂದು ಕಡೆ ಕೇಳುತ್ತೀರಿ. ದಿವಂಗತ

ಎಸ್.ಬಂಗಾರಪ್ಪನವರು ಮಾಡಿದ್ದಂತಹ ಆರೇಳು ಅನುದಾನಿತ ಶಾಲೆಗಳು ನಿಮ್ಮದೇ ಇವೆ. ನಿಮಗೆ ಶಕ್ತಿ ಇದೆ. ಅಲ್ಲಿನ ಶಿಕ್ಷಕರಿಗೆ ಸಂಬಳ ಕೊಟ್ಟು ನೀವು ಶಾಲೆಯನ್ನು ನಡೆಸುತ್ತಿದ್ದೀರಿ. ನನಗೆ ಆ ವಿಷಯ ಗೊತ್ತಿದೆ. ಆದರೆ ಎಲ್ಲರೂ ಹಾಗೆ ಮಾಡುವುದಕ್ಕಾಗುತ್ತದೆಯೇ? ಇದೆಲ್ಲಾ ಪೂರ್ತಿ affect ಆಗುತ್ತಿರುವುದು ಯಾರಿಗೆ? ಗ್ರಾಮೀಣ ಪ್ರದೇಶದ ಶಾಲೆಗಳಿಗೆ ಮಾತ್ರ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಇನ್ನು ಈ ಅಧಿಕಾರಿಗಳೇನು appeal ಮಾಡುತ್ತಾರೆ? It is just to kill the time. ಮುಂದೊಂದು ದಿನ ಈ ಶಾಲೆಗಳನ್ನು ಬಂದ್ ಮಾಡಬೇಕು. ನಿವೃತ್ತಿ ಹೊಂದಿದವರ ಮತ್ತು ಮರಣ ಹೊಂದಿದವರ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ ಹೇಗೆ? ಡಿ ಗುಂಪು ನೌಕರರನ್ನು ನಾನು ಕೇಳುವುದೇ ಇಲ್ಲ. ಶಿಕ್ಷಕರನ್ನು ಕೊಡಿ. ಅವರು ಬಿಲ್ಡಿಂಗ್ ಕಟ್ಟಿದ್ದು, ಖಾಲಿ ಮಾಡಿಕೊಂಡು ಹೋಗಲಿ ಎಂಬ ಕಾರಣಕ್ಕೆ ಈ ರೀತಿ ಮಾಡುತ್ತಿದ್ದಾರೆಯೇ? ನಾನು ಒಂದು ಮಾತನ್ನು ನೇರವಾಗಿ ಹೇಳುತ್ತೇನೆ. ಈ ಅನುದಾನಿತ ಶಾಲೆಗಳು ನೂರಕ್ಕೆ ನೂರು ಯಾವತ್ತು ಮುಚ್ಚುತ್ತವೆಯೋ ಆಗ ನಮ್ಮ ಅಧಿಕಾರಿಗಳು ಬಹಳ ಖುಷಿ ಪಡುತ್ತಾರೆ. ರಾಜ್ಯದಲ್ಲಿರುವ ಅಂತಹ ಶಾಲೆಗಳನ್ನು ಮುಚ್ಚಿಸಬೇಕೆಂದು ಅವರು ಕಾಯುತ್ತಿದ್ದಾರೆ. ಒಂದು ಕಾಲದಲ್ಲಿ ಯಾವ ಉದ್ದೇಶವನ್ನಿಟ್ಟುಕೊಂಡು ನಮ್ಮ ಹಿರಿಯರು ಆ ಶಾಲೆಗಳನ್ನು ಸ್ಥಾಪನೆ ಮಾಡಿದರೋ ಆ ಉದ್ದೇಶವನ್ನು fulfil ಮಾಡಲಿಕ್ಕೆ ಆಗಲಿಲ್ಲವೆಂದರೆ ನಮಗೆ ನಾಚಿಕೆಯಾಗುತ್ತದೆ. ದಯವಿಟ್ಟು appeal ಹೋಗಬೇಡಿ. ಈ ಕೆಲಸವನ್ನು ಮಾಡಿಕೊಡಿ ಎಂದು ವಿನಂತಿಸುತ್ತೇನೆ.

(ಮುಂದು)

(612) 22-07-2024 (6.50) ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಒಂದು clarification ಇದೆ. ಮಾನ್ಯ ಸಚಿವರು ಪ್ರಯತ್ನ ಮಾಡಿ 5 ವರ್ಷಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಈ ಹಿಂದೆ ನಾವು ಪ್ರಯತ್ನ ಮಾಡಿದ್ದೆವು. 5 ವರ್ಷಕ್ಕೆ ಕೊಡಬೇಕೆಂದು ತಾವೆಲ್ಲರೂ ಸಹ ಪ್ರಯತ್ನ ಮಾಡಿದ್ದೀರಿ. ಕನಿಷ್ಟ 25ನೇ ಇಸವಿಯವರೆವಿಗೂ ಮಾಡಿ ಎಂದು ಹೇಳಿದ್ದೇವೆ. ಇದರ ಜೊತೆಗೆ ಮಾನ್ಯ ಸಚಿವರು ಸಹ ಮಾಡುತ್ತೇವೆಂದು ಹೇಳಿದ್ದಾರೆ. ಕೆಲವು ಕಡೆ workload ಇಲ್ಲದೇ, teachers ಎಲ್ಲರೂ ಹೊರಗಡೆ ಬರುತ್ತಿದ್ದಾರೆ. ಅವರಿಗೆ ದಯವಿಟ್ಟು ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿ ಕೊಡಿ. ಈ ಹಿಂದೆ ನೇರವಾಗಿ ಹಾಕುತ್ತಿದ್ದರು. ಈ ಹಿಂದೆ ಎಲ್ಲಿ workload ಇರುವುದಿಲ್ಲವೋ, ಅಂತಹ ಕಡೆಯಿಂದ ಅವರನ್ನು ತೆಗೆದು workload ಇರುವ ಕಡೆಗೆ ಕಾರ್ಯ ನಿರ್ವಹಿಸಲು ಅವಕಾಶ ಮಾಡಿ ಕೊಡುತ್ತಿದ್ದರು. ಅದನ್ನು counselling

ಮೂಲಕ ಮಾಡಿ ಕೊಡುತ್ತಿದ್ದರು. ಒಂದು ವೇಳೆ ಆ ಸಂಸ್ಥೆ ತೆಗೆದುಕೊಂಡಿಲ್ಲವೆಂದರೆ, ಆ ಹುದ್ದೆಯನ್ನು ಅನುದಾನರಹಿತ ಎಂದು treat ಮಾಡುತ್ತಿದ್ದರು. ಆಗ ಆ ಭಯಕ್ಕೆ ತೆಗೆದುಕೊಳ್ಳುತ್ತಿದ್ದರು. ಈಗ ಇವರು ನೇರವಾಗಿ ಕೊಡುತ್ತಿಲ್ಲ. NOC (No Objection Certificate) ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಆ NOC ಅನ್ನು ತೆಗೆದುಕೊಳ್ಳುವುದಕ್ಕೆ ಹೋದರೆ, ಅದೇ ಬೇರೆ ರೀತಿಯಾದಂತಹ ವ್ಯವಹಾರ ಆಗುತ್ತದೆ. NOC ಅನ್ನು ಕೊಡುವುದಿಲ್ಲ. ಅದಕ್ಕೆ ದಯವಿಟ್ಟು, ಎಲ್ಲೆಲ್ಲಿ ಹೆಚ್ಚುವರಿಯಾಗಿ ಶಿಕ್ಷಕರು ಇದ್ದಾರೆ, ಶಾಲೆಗಳು ಮುಚ್ಚುತ್ತವೆ, ಆ ಶಿಕ್ಷಕರನ್ನು workload ಇರುವಂತಹ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿ ಕೊಡಿ. ಮುಂದೆ 2025ನೇ ಸಾಲಿನವರೆಗೂ ಕೊಟ್ಟರೂ ಸಹ, ಎಲ್ಲೆಲ್ಲಿ workload ಇದೆ, ಅಂತಹ ಕಡೆಗೆ ನೀವು ಆದ್ಯತೆ ಕೊಡಬೇಕು. ದಯವಿಟ್ಟು 2025ನೇ ಸಾಲಿನವರೆಗೂ ಸಹ ಇದನ್ನು ಮುಂದುವರೆಸಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ,.

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮಾನ್ಯ ಎಸ್.ವ್ಹಿ.ಸಂಕನೂರರವರಿಗೂ ಗೊತ್ತಿದೆ. ಅವರ ಜೊತೆಗೆ ಸಾಕಷ್ಟು ಬಾರಿ ಮಾತನಾಡಿದ್ದೇನೆ. ಅವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದು ನನ್ನ ಮನವಿ ಕೂಡ. ನಾನು ಇದನ್ನು 9 ವರ್ಷದಿಂದ ತೆಗೆದುಕೊಂಡಿಲ್ಲ. ನಾನು ಇದನ್ನು ಬಹಳ ತ್ವರಿತ ರೀತಿಯಲ್ಲಿ ತೆಗೆದುಕೊಂಡು; ಅವರು ಅನಿವಾರ್ಯವಾಗಿ ವಿಶ್ವಾಸವನ್ನು ಇಟ್ಟುಕೊಳ್ಳಬೇಕಾಗುತ್ತದೆ. ತಾವುಗಳು ಬಾವಿಗೆ ಬಂದ ತಕ್ಷಣ ನಾಳೆ ಕೊಟ್ಟುಬಿಡುತ್ತೇನೆ ಎನ್ನುವುದಲ್ಲ, 9 ವರ್ಷಕ್ಕೆ ಇರುವುದನ್ನು 5 ವರ್ಷಕ್ಕೆ ಮಾಡುತ್ತಿದ್ದೇನೆ ಎಂಬುದು ಅವರಿಗೂ ಚೆನ್ನಾಗಿ ಗೊತ್ತಿದೆ. ಸರ್ಕಾರಿ ನೌಕರರದ್ದು first order ಅನ್ನು ಅವರ ಕೈಯಲ್ಲಿ ಧಾರವಾಡದಲ್ಲಿ ಕೊಡಿಸಿದ್ದೇನೆ. ಅದು ಅವರಿಗೆ ನೆನಪು ಇದೆ. I was very happy. ಏಕೆಂದರೆ, ಅವರ ಸರ್ಕಾರ ಇದ್ದಾಗ, ಆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದರು. ಅದನ್ನು ನನ್ನ ಕೈಯಲ್ಲಿ ಕೊಡುವಂತಹ ಅವಕಾಶಗಳನ್ನು ಅವರ ಎದುರುಗಡೆ ಧಾರವಾಡಕ್ಕೆ ಬಂದು ಮಾಡಿದ್ದೇನೆ. ನನಗೆ ಕಾಳಜಿ ಇರುವುದಿಲ್ಲವೇ; ನಮ್ಮದ್ದು 10 ಶಾಲೆಗಳು ಇವೆ. ನಮ್ಮ ತಂದೆ ಶ್ರೀ ಬಂಗಾರಪ್ಪನವರು ಏಕೆ ಮಾಡಿದ್ದಾರೆಂದು ನನಗೆ ಚೆನ್ನಾಗಿ ಗೊತ್ತಿದೆ. ಆ ಶಾಲೆಗಳನ್ನು ಯಾವುದೋ ನಗರದಲ್ಲಿ ಮಾಡಿಲ್ಲ. ಬರಿ ನನ್ನ ಕ್ಷೇತ್ರದಲ್ಲಿ ಮಾಡಿಲ್ಲ. ಕಾರವಾರದಲ್ಲಿ ಮಾಡಿದ್ದಾರೆ. ಬಹಳಷ್ಟು ಗ್ರಾಮೀಣ ಭಾಗದಲ್ಲಿ ಮಾಡಿದ್ದಾರೆ. ನನ್ನ ಶಾಲೆಯಲ್ಲಿಯೂ ಸಹ ಮಕ್ಕಳ ಸಂಖ್ಯೆ ಕಡಿಮೆಯಾಗುವಂತಹದ್ದು ನನಗೂ ಸಹ ಅದರ ಹೊಡೆತ ಬೀಳುತ್ತಿದೆ. ಅದಕ್ಕೆ ಮಾನ್ಯ ಸದಸ್ಯರು ಧರಣಿ

ಮಾಡುವುದು ಬೇಡ. ಅವರು ನನ್ನ ಮೇಲೆ ವಿಶ್ವಾಸ ಇಟ್ಟುಕೊಳ್ಳಲಿ. ಕಳೆದ ಬಾರಿ ಅಧಿವೇಶನಕ್ಕೆ ನಾನು ಹೊಸದಾಗಿ ಬಂದಿದ್ದೆ. ನಾನು ಆ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳುವಂತಹದ್ದು ಇತ್ತು. ಆದಾಗ್ಯೂ ಇನ್ನು ಕೆಲವೊಂದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಇಷ್ಟು ಹೊತ್ತು ಹೇಳಿರುವುದರಲ್ಲಿ ಅರ್ಧಕ್ಕರ್ಧ ನಾನು ಯಾವಾಗ ಆ ಸಮಸ್ಯೆಯನ್ನು ಪರಿಹರಿಸುತ್ತೇನೆಂದು; ಹಿಂದಿನ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಅದು ತಮಗೂ ಗೊತ್ತಿದೆ. ಮಾನ್ಯ ಸದಸ್ಯರುಗಳು ಪದೇ ಪದೇ ನಮ್ಮ ಜೊತೆಗೆ ಅಲ್ಲದೇ, ಅಧಿಕಾರಿಗಳ ಜೊತೆಗೂ ಸಹ ಚರ್ಚೆಯನ್ನು ಮಾಡುತ್ತಿರುತ್ತಾರೆ. ಅನುದಾನಿತ ಶಾಲೆ, ಒಳ್ಳೆಯ ಸರ್ಕಾರಿ ಶಾಲೆ ತರಹ ಇದೆ. ಅದೇರೀತಿಯಲ್ಲಿ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದು ನಮ್ಮ ಬೇರೆ ಅಂಗ. ಏಕೆಂದರೆ, ಅನುದಾನಿತ ಶಾಲೆ ಎಂದು ಹೇಳಿದರೆ, ನಮಗೆ ಬಹಳ ಸರ್ಕಾರದ ಒಂದು ಶಕ್ತಿಯುತವಾಗಿರುವಂತಹ ನಮ್ಮ ಮಕ್ಕಳಿಗೆ ಸೇವೆ ಮಾಡುವಂತಹ ಶಾಲೆಗಳು. ಏಕೆಂದರೆ, ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳನ್ನು ಮಾಡದಿರುವಂತಹ ಸಂದರ್ಭದಲ್ಲಿ ನಮ್ಮ ಮಕ್ಕಳಿಗೆ ವಿದ್ಯಭ್ಯಾಸವನ್ನು ಅನುದಾನಿತ ಶಾಲೆಗಳು ಕೊಡುವುದು. ಅದು ನಮಗೆ ಗೊತ್ತಿದೆ. ೯ ವರ್ಷವನ್ನು, ಅದು ಬಹಳ ಕಷ್ಟ. ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಅರ್ಥ ಮಾಡಿಕೊಳ್ಳಬೇಕು. ೯ ವರ್ಷವನ್ನು ನಾನು ಒಂದೇ ವರ್ಷಕ್ಕೆ ತೆಗೆದುಕೊಂಡು ಬರುವಂತಹ ವ್ಯವಸ್ಥೆಯನ್ನು ಮಾಡುತ್ತೇನೆಂದರೆ, ಬೇಡ ವಿಶ್ವಾಸ ಇಟ್ಟುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು ಸಹ ಇದನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಿದ್ದಾರೆ. ನಾನು ಇಲಾಖೆಯವರ ಜೊತೆಗೆ ಅಲ್ಲದೇ, ಇಲ್ಲವೆಂದರೆ, ನಾನು ಅಷ್ಟು easy ಆಗಿ sudden ಆಗಿ ಒಪ್ಪಿಕೊಳ್ಳುವುದಿಲ್ಲ ಏಕೆಂದರೆ, ನನಗೆ ಏನಾದರೂ doubt ಇದ್ದರೆ, ಒಪ್ಪಿಕೊಳ್ಳುವುದಿಲ್ಲ. ನನಗೆ ವಿಶ್ವಾಸ ಇದೆ. ಮಾನ್ಯ ಸದಸ್ಯರು ವಿಶ್ವಾಸ ಇಟ್ಟುಕೊಳ್ಳಲಿ. ನಾಳೆಯೇ ಮಾಡಬೇಕೆಂದರೆ, ಆಗುವುದಿಲ್ಲ. ಅದನ್ನು rules ಪ್ರಕಾರ ಮಾಡುವಂತಹದ್ದಾಗಿದೆ. ಅದಕ್ಕೆ ವಿಶ್ವಾಸ ಇಟ್ಟುಕೊಳ್ಳಿ. ೨೦೨೦ರವರೆಗೂ permission ಅನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಕಳೆದ ಸದನದಲ್ಲಿಯೂ ಇದೇ ತರಹ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದರು. ನಾನು ಮತ್ತೆ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಇದನ್ನು ಒಂದು ತಿಂಗಳಲ್ಲಿ ಮಾಡುತ್ತಾರೋ ಅಥವಾ ಎರಡು ತಿಂಗಳಲ್ಲಿ ಮಾಡುತ್ತಾರೋ ಗೊತ್ತಿಲ್ಲ. ನಾವು ಮಾನ್ಯ ಸಚಿವರ ಜೊತೆಗೆ ಹೋಗಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಕೈಮುಗಿದು ಕೇಳುತ್ತೇವೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬರುವುದು ಬೇಡ. ಮಾನ್ಯ ಸದಸ್ಯರ ಪರವಾಗಿ ನಾನು ಮಾಡಿಸುತ್ತೇನೆ

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿದೆ. ಮಾನ್ಯ ಸಚಿವರಿಗೆ ಬೇಕಾದರೆ ಪಟ್ಟಿ ಕೊಡುತ್ತೇನೆ. ಎಲ್ಲರೂ ನಿವೃತ್ತಿ ಹೊಂದಿದ್ದಾರೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಹೌದು. ನನಗೆ ಗೊತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಆ ಶಾಲೆಗಳನ್ನು ಮಠ ಮಾನ್ಯಗಳು ಭೀಕ್ಷೆ ತಂದು ಕಟ್ಟಿದ್ದಾರೆ. ಇವು close ಆದರೆ, ಪರಿಸ್ಥಿತಿ ಏನು?

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ನಾನು months together ತೆಗೆದುಕೊಳ್ಳುವುದಿಲ್ಲ. ಬೇಗನೆ ಮಾಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ವಿಶ್ವಾಸ ಇಟ್ಟುಕೊಳ್ಳಬೇಕು ಇದು ನನ್ನ ಮನವಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸ್ಪಷ್ಟವಾಗಿ ಮಾಡುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಹಾಗೂ ಶ್ರೀ ಶಶೀಲ್ ಜಿ.ನಮೋಷಿರವರು ಒಟ್ಟಿಗೆ ಎದ್ದು ನಿಂತು ಮಾತನಾಡತೊಡಗಿದರು)

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ತಿಂಗಳ ಒಳಗೆ ಎಂದು ಹೇಳಿದ್ದಾರೆ. ಹಾಗಾಗಿ. ಮಾನ್ಯ ಸಚಿವರ ಮಾಡುತ್ತಾರೆಂಬ ವಿಶ್ವಾಸವನ್ನು ಇಟ್ಟುಕೊಂಡು ನಾವು ಧರಣಿ ಮಾಡುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರೇ, ಒಂದು ನಿಮಿಷ.,

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಆ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ದಯವಿಟ್ಟು ಅದನ್ನು ಮಾಡಿ ನಡೆಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರೇ, ಆಯಿತು. ಈಗ ಸದನವನ್ನು ದಿನಾಂಕ 23ನೇ ಜುಲೈ 2024ರ ಮಂಗಳವಾರ ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 55 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 23ನೇ ಜುಲೈ ಮಾಹೆ 2024 ರ ಮಂಗಳವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

><><><